● www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ಅಪಾಯಕಾರಿ ಪ್ರಯೋಗವೆನಿಸಿದರೂ ಸಂಶೋಧನೆಗಾಗಿ ಕೋವಿಡ್ ವೈರಸ್ಸನ್ನೇ ಚುಚ್ಚಿಸಿಕೊಂಡವರಿದ್ದಾರೆ!

ಆಳ-ಅಗಲ ಪ್ರಧಾನಿ ಮೋದಿ ವಿದೇಶಿ ಪ್ರವಾಸದ ವೇಳೆ ದೇಶದಲ್ಲಿ ಆಗಿದ್ದೇನು...

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
63,416 ▲	18,817 ▲	₹60,480 (ಬೆಂಗಳೂರು) ▲	₹71,700 (ಬೆಂಗಳೂರು) ▲	82.02 ▲

ಬಿಜೆಪಿ ಸರ್ಕಾರದ ವಿರುದ್ಧ ಗುಡುಗಿದ್ದ ಕಾಂಗ್ರೆಸ್ ● ಕೃತಿಗೆ ಇಳಿಯದ ಆವೇಶ

40% ಲಂಚ: ಮಾತಿಗೆ ಸೀಮಿತ

● ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಈ ಹಿಂದಿನ ಬಿಜೆಪಿ ಸರ್ಕಾರದ ಮೇಲಿದ್ದ ಶೇಕಡ 40ರಷ್ಟು ಲಂಚದ ಆರೋಪದ ಕುರಿತು ತನಿಖೆ ನಡೆಸುವ ದಿಸೆಯಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಒಂದು ತಿಂಗಳಾದರೂ ಯಾವುದೇ ಕ್ರಮ ಕೈಗೊಂಡಿಲ್ಲ.

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರು ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ವಿರುದ್ಧ ಶೇ 40ರಷ್ಟು ಲಂಚದ ಆರೋಪವನ್ನು 2021ರ ಜುಲೈನಲ್ಲಿ ಮಾಡಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೂರು ರವಾನಿಸಿ, ಕ್ರಮಕ್ಕೆ ಆಗ್ರಹಿಸಿದ್ದರು. 2021ರ ನವೆಂಬರ್‌ನಿಂದ ಈ ಆರೋಪ ಹೆಚ್ಚು ಸದ್ದು ಮಾಡಿತ್ತು. ಅಂದಿನಿಂದ 2023ರ ಮೇ ತಿಂಗಳಲ್ಲಿ ವಿಧಾನಸಭಾ ಚುನಾವಣೆ ಮುಗಿಯುವವರೆಗೂ ಆರೋಪವನ್ನು ಕಾಂಗ್ರೆಸ್ ಜೀವಂತವಾಗಿರಿಸಿತ್ತು. ಅಧಿಕಾರಕ್ಕೆ ಏರುತ್ತಿದ್ದಂತೆಯೇ, ಹಿಂದಿನ ಸರ್ಕಾರದ ಅಕ್ರಮಗಳ ಕುರಿತು ತನಿಖೆಯ ಪ್ರಸ್ತಾವಗಳನ್ನು ಸಚಿವರು ಮುಂದಿಡುತ್ತಿದ್ದಾರೆಯೇ ವಿನಃ ಅದು ಕೃತಿಗೆ ಇಳಿದಿಲ್ಲ.

‘ಕಾಮಗಾರಿಗಳ ಮಂಜೂರಾತಿ, ಅನುದಾನ ಬಿಡುಗಡೆಯಿಂದ ಬಿಲ್ ಪಾವತಿಯವರೆಗೆ ವಿವಿಧ ಹಂತಗಳಲ್ಲಿ ಶೇ 40ಕ್ಕಿಂತಲೂ ಹೆಚ್ಚು ಮೊತ್ತ ಸಚಿವರು, ಶಾಸಕರು, ಸಂಸದರು ಮತ್ತು ಅಧಿಕಾರಿಗಳ ಜೇಬು ಸೇರುತ್ತಿದೆ’ ಎಂದು ಗುತ್ತಿಗೆದಾರರ ಸಂಘ ಆರೋಪಿಸಿತ್ತು. ಅದಕ್ಕೆ ದನಿಗೂಡಿಸಿದ್ದ ಕಾಂಗ್ರೆಸ್ ನಾಯಕರು, ಈ ವಿಚಾರದಲ್ಲಿ ನಿರಂತರವಾಗಿ ಆರೋಪ ಮಾಡುತ್ತಾ ಬಿಜೆಪಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ ಈ ಆರೋಪದ ಕುರಿತು ತನಿಖೆ ನಡೆಸಿ, ತಪ್ಪಿತಸ್ಥರನ್ನು ಜೈಲಿಗೆ ಕಳುಹಿಸುವ ಘೋಷಣೆಯನ್ನೂ ಮಾಡಿದ್ದರು.

2018ರ ವಿಧಾನಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿ ಅವರು ಆಗಿನ ಸಿದ್ದರಾಮಯ್ಯ ಸರ್ಕಾರವನ್ನು ‘ಹತ್ತು ಪರ್ಸೆಂಟ್ (ಸೀದಾ ರೂಪಯ್ಯಾ) ಸರ್ಕಾರ’ ಎಂದು ಜರೆದಿದ್ದರು. ಅದಕ್ಕೆ ಪ್ರತಿಯಾಗಿ 2023ರ ಚುನಾವಣೆಯಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವನ್ನು ‘40 ಪರ್ಸೆಂಟ್ ಸರ್ಕಾರ’ ಎಂದು ಕರೆದಿದ್ದ ಕಾಂಗ್ರೆಸ್, ಭ್ರಷ್ಟಾಚಾರದ ಆರೋಪವನ್ನೇ ಚುನಾವಣೆಯ ಪ್ರಮುಖ ಅಸ್ತ್ರವನ್ನಾಗಿ ಮಾಡಿಕೊಂಡಿತ್ತು.

ತನಿಖೆಯೇ ನಡೆದಿಲ್ಲ: ಕೆಂಪಣ್ಣ ಅವರು ಆರೋಪ ಮಾಡಿದ ಬಳಿಕ ಗುತ್ತಿಗೆದಾರರ ಜತೆ ಸಭೆ ನಡೆಸಿದ್ದ ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬೃಹತ್ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪರಿಶೀಲನೆಗೆ ನಿವೃತ್ತ ನ್ಯಾಯಮೂರ್ತಿ ರತ್ನಕಲಾ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ನೇಮಿಸಿದ್ದರು.

11ನೇ ಪುಟ ನೋಡಿ

‘ಬಿಲ್ ತಡೆ ಹಿಡಿಯುವುದಕ್ಕೆ ಸೀಮಿತ’

‘ಬಿಜೆಪಿ ಸರ್ಕಾರದ ಅವಧಿಯಲ್ಲಿ ಶೇ 40ರಷ್ಟು ಲಂಚದ ಆರೋಪದ ಕುರಿತು ಈಗಿನ ಕಾಂಗ್ರೆಸ್ ಸರ್ಕಾರ ಯಾವ ಕ್ರಮವನ್ನೂ ಜರುಗಿಸಿಲ್ಲ. ಹಿಂದಿನ ಸರ್ಕಾರ ಮಂಜೂರಾತಿ ನೀಡಿದ್ದ ಕಾಮಗಾರಿಗಳು ಮತ್ತು ಪೂರ್ಣಗೊಂಡ ಕಾಮಗಾರಿಗಳ ಬಿಲ್ ತಡೆ ಹಿಡಿಯುವುದಕ್ಕೆ ಈ ಸರ್ಕಾರದ ಕ್ರಮ ಸೀಮಿತವಾಗಿದೆ’ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅಸಮಾಧಾನ ವ್ಯಕ್ತಪಡಿಸಿದರು.

‘ಹಿಂದಿನ ಸರ್ಕಾರದ ಅವಧಿಯಲ್ಲಿ ವಿವಿಧ ಇಲಾಖೆಗಳ ಆಯಕಟ್ಟಿನ ಸ್ಥಾನದಲ್ಲಿ ಕುಳಿತು ಕಮಿಷನ್ ವಸೂಲಿ ಮಾಡಿದ್ದ ಅಧಿಕಾರಿಗಳು ಈಗಲೂ ಅದೇ ಹುದ್ದೆಗಳಲ್ಲಿ ಮುಂದುವರಿದಿದ್ದಾರೆ. ಅವರಲ್ಲಿ ಕೆಲವರು ಮತ್ತೆ ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿರುವ ದೂರುಗಳಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ಈ ವಿಚಾರವನ್ನು ತಂದಿದ್ದೇನೆ’ ಎಂದು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಎಲ್ಲ ಅವ್ಯವಹಾರಗಳ ತನಿಖೆ’

‘ಹಿಂದಿನ ಬಿಜೆಪಿ ಸರ್ಕಾರದ ಎಲ್ಲ ಅವ್ಯವಹಾರಗಳ ತನಿಖೆ ನಡೆಸಲಾಗುವುದು. ಶೇ 40 ಕಮಿಷನ್, ಕೋವಿಡ್ ಸಂದರ್ಭದಲ್ಲಿ ಸಾಮಗ್ರಿಗಳ ಖರೀದಿ ಅವ್ಯವಹಾರ, ನೀರಾವರಿ ಅವ್ಯವಹಾರ, ಬಿಟ್ ಕಾಯಿನ್, ಚಾಮರಾಜನಗರದಲ್ಲಿ ಆಮ್ಲಜನಕದ ಕೊರತೆಯಿಂದ ರೋಗಿಗಳು ಮೃತಪಟ್ಟಿರುವ ಕುರಿತು ತನಿಖೆ ನಡೆಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಸನದಲ್ಲಿ ಹೇಳಿದರು.

‘ಪಿಎಸ್‌ಐ ನೇಮಕಾತಿ ಹಗರಣದ ತನಿಖೆ ನಡೆಯುತ್ತಿದ್ದು, ಇನ್ನಷ್ಟು ಚುರುಕುಗೊಳಿಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಲಾಗುವುದು’ ಎಂದರು.

ಹಿಂದೆ ಕಾಂಗ್ರೆಸ್ ಮಾಡಿದ್ದೇನು?

- ಪೇ ಸಿಎಂ ಪೋಸ್ಟರ್ ಅಭಿಯಾನ
- ಶೇ 40ರ ಲಂಚದ ಆರೋಪ ಬಿಂಬಿಸುವ ದರಪಟ್ಟಿ ಬಿಡುಗಡೆ
- ನ್ಯಾಯಾಂಗ ತನಿಖೆಗೆ ಆಗ್ರಹಿಸಿ ವಿಧಾನಮಂಡಲದಲ್ಲಿ ಧರಣಿ
- ಮುಖ್ಯಮಂತ್ರಿ ಮನೆಗೆ ಮುತ್ತಿಗೆಗೆ ಯತ್ನ

ಪ್ರೀತಿಸಿದ ಮಗಳ ಮರ್ಯಾದೆಗೇಡು ಹತ್ಯೆ

ಪ್ರಜಾವಾಣಿ ವಾರ್ತೆ

ಕೀರ್ತಿ

ಗಂಗಾಧರ್

ಬಂಗಾರಪೇಟೆ (ಕೋಲಾರ): ತಾಲ್ಲೂಕಿನ ಬೋಡಗುರ್ಕಿ ಗ್ರಾಮದಲ್ಲಿ ಮಂಗಳವಾರ ಮರ್ಯಾದೆಗೇಡು ಹತ್ಯೆ ನಡೆದಿದೆ. ಪರಿಶಿಷ್ಟ ಜಾತಿಯ ಯುವಕನನ್ನು ಪ್ರೀತಿಸಿದ ಕಾರಣಕ್ಕೆ ಮಗಳನ್ನು ಆಕೆಯ ತಂದೆಯೇ ಹತ್ಯೆ ಮಾಡಿದ್ದಾನೆ. ಪ್ರಿಯತಮೆಯ ಸಾವಿನ ಸುದ್ದಿ ತಿಳಿದು ಆಘಾತಕ್ಕೆ ಒಳಗಾದ ಯುವಕ ತಾನೂ ಚಲಿಸುವ ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಆರೋಪಿಸಿದ್ದಾರೆ.

ಬೋಡಗುರ್ಕಿ ಗ್ರಾಮದ ಪರಿಶಿಷ್ಟ ಜಾತಿಯ ಗಂಗಾಧರ್ (23) ಮತ್ತು ಗೊಲ್ಲ ಸಮುದಾಯದ ಕೀರ್ತಿ (20) ಪರಸ್ಪರ ಪ್ರೀತಿಸುತ್ತಿದ್ದರು. ಇದು ಗೊತ್ತಾಗಿ ಕೀರ್ತಿಯ ತಂದೆ ಕೃಷ್ಣಮೂರ್ತಿ ಮಂಗಳವಾರ ಬೆಳಿಗ್ಗೆ ಮಗಳನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ್ದಾನೆ. ಈ ವಿಷಯ ತಿಳಿದ ಯುವಕ ಮೈಸೂರು–ಚೆನ್ನೈ ಎಕ್ಸ್‌ಪ್ರೆಸ್ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಯುವತಿಯ ತಂದೆಯನ್ನು ಪೊಲೀಸರು ಬಂಧಿಸಿದ್ದು, ಕಾಮಸಮುದ್ರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಜಿಎಫ್ ಕಾಲೇಜಿನಲ್ಲಿ ದ್ವಿತೀಯ ವರ್ಷದ ಪದವಿ ಓದುತ್ತಿದ್ದ ಕೀರ್ತಿ ಮತ್ತು ಯುವಕನ ಮನೆ ಒಂದೇ ಕಡೆ ಇವೆ. ಪಿಯುಸಿ ಅನುತ್ತೀರ್ಣನಾಗಿದ್ದ ಗಂಗಾಧರ್ ಗಾರೆ ಕೆಲಸ ಮಾಡುತ್ತಿದ್ದರು. ಪ್ರೀತಿಸುತ್ತಿದ್ದ ಇಬ್ಬರೂ ಮದುವೆಯಾಗಲು ತೀರ್ಮಾನಿಸಿದ್ದರು.

‘ಪ್ರೀತಿಸಿದ ಯುವಕನನ್ನೇ ಮದುವೆ ಆಗುವುದಾಗಿ ಕೀರ್ತಿ ಹಟ ಹಿಡಿದಿದ್ದರು. ಈ ಸಂಬಂಧ ಯುವತಿಯ ಮನೆಯಲ್ಲಿ ಸೋಮವಾರ ರಾತ್ರಿ ಜಗಳ ನಡೆದಿತ್ತು. ಮಂಗಳವಾರ ಬೆಳಿಗ್ಗೆ ಕೃಷ್ಣಮೂರ್ತಿ ಮಗಳನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ್ದಾನೆ’ ಎಂದು ಕೆಜಿಎಫ್ ಪೊಲೀಸ್ ವರಿಷ್ಠಾಧಿಕಾರಿ ಧರಣಿದೇವಿ ಮಾಲಗತ್ತಿ ‘ಪ್ರಜಾವಾಣಿ’ಗೆ ತಿಳಿಸಿದರು.

ಪರಿಷ್ಕೃತ ‘ಜಾತಿಗಣತಿ’ ಸಲ್ಲಿಕೆ?

ಜಾತಿಗಣತಿಯ ದತ್ತಾಂಶ ಪಡೆದು ಹೊಸ ವರದಿಗೆ ಚಿಂತನೆ

● ರಾಜೇಶ್ ರೈ ಚಟ್ಲ

ಜಯಪ್ರಕಾಶ್ ಹೆಗ್ಡೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗಕ್ಕೆ ಎಚ್. ಕಾಂತರಾಜು ಮುಖ್ಯಸ್ಥರಾಗಿದ್ದ ಅವಧಿಯಲ್ಲಿ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ದತ್ತಾಂಶಗಳನ್ನು ತೆಗೆದುಕೊಂಡು ಹೊಸ ವರದಿ ಸಿದ್ಧಪಡಿಸಲು ಕೆ. ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗ ಗಂಭೀರ ಚಿಂತನೆ ನಡೆಸಿದೆ.

ಕಾಂತರಾಜು ನೇತೃತ್ವದ ಆಯೋಗ ಸಿದ್ಧಪಡಿಸಿರುವ ವರದಿಯನ್ನು ಯಥಾಸ್ಥಿತಿಯಲ್ಲಿ ಸಲ್ಲಿಸಲು ಕಾನೂನಿನ ತೊಡಕಿದೆ. ಹಾಗೆಂದು, ಆ ವರದಿಯಲ್ಲಿರುವ ದತ್ತಾಂಶಗಳನ್ನು ಮಾತ್ರ ಸರ್ಕಾರಕ್ಕೆ ಸಲ್ಲಿಸಲು ಅವಕಾಶ ಇಲ್ಲ. ಯಾಕೆಂದರೆ, ದತ್ತಾಂಶದ ಜೊತೆಗೆ ಅದನ್ನು ವಿಶ್ಲೇಷಿಸಿ ಕೈಗೊಳ್ಳಬೇಕಾದ ಕ್ರಮಗಳ ಕುರಿತ ಶಿಫಾರಸುಗಳನ್ನೂ ಸಲ್ಲಿಸಬೇಕಿದೆ. ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿರುವ ಹಾಲಿ ಆಯೋಗ, ಸರ್ಕಾರದಿಂದ ಬರುವ ಉತ್ತರದಂತೆ ಮುಂದಿನ ಕ್ರಮ ತೆಗೆದುಕೊಳ್ಳಲು ನಿರ್ಧರಿಸಿದೆ.

ಈ ಬಗ್ಗೆ ‘ಪ್ರಜಾವಾಣಿ’ ಜೊತೆ ಮಾತನಾಡಿದ ಜಯಪ್ರಕಾಶ್ ಹೆಗ್ಡೆ, ‘ಸಮೀಕ್ಷೆ ವರದಿಯನ್ನು ಸಲ್ಲಿಸಲು ನಾವು ಸಿದ್ಧರಿದ್ದೇವೆ. ಆದರೆ, ಆಯೋಗದ ಸದಸ್ಯ ಕಾರ್ಯದರ್ಶಿ ವರದಿಗೆ ಸಹಿ ಹಾಕುವ ಮೂಲಕ ಅಧಿಕೃತಗೊಳಿಸಬೇಕು ಎಂದು ಕಾನೂನಿನಲ್ಲಿದೆ. ಆದರೆ, ಹಿಂದಿದ್ದ ಆಯೋಗ ಸಿದ್ಧಪಡಿಸಿದ್ದ ವರದಿಗೆ ಅಂದಿನ ಸದಸ್ಯ ಕಾರ್ಯದರ್ಶಿ ಸಹಿ ಹಾಕಿಲ್ಲ’ ಎಂದರು.

‘ಹಾಗೆಂದು, ಹಿಂದಿನ ಆಯೋಗದಲ್ಲಿ ಸದಸ್ಯ ಕಾರ್ಯದರ್ಶಿ ಆಗಿದ್ದವರು ಈಗ ಸಹಿ ಹಾಕಲು ಅವಕಾಶ ಇಲ್ಲ. ಏಕೆಂದರೆ, ಈಗ ಅದರಲ್ಲಿ ಬದಲಾವಣೆಯಾಗಿದೆ. ಹೀಗಾಗಿ ನಾನು ಅವರಿಗೆ (ಹಿಂದಿನ ಸದಸ್ಯ ಕಾರ್ಯದರ್ಶಿ) ಪತ್ರ ಬರೆದಿದ್ದೆ. ಈ ಬಗ್ಗೆ ವಿವರಣೆ ನೀಡುವಂತೆ ದೂರವಾಣಿ ಮೂಲಕವೂ ಮಾತನಾಡಿದ್ದೆ. ಆದರೆ, ಅವರು ವಿವರಣೆ ನೀಡಿಲ್ಲ. ಆದುದರಿಂದ ಈ ವಿಚಾರದಲ್ಲಿ ಸ್ಪಷ್ಟನೆ ನೀಡಬೇಕೆಂದು ಸರ್ಕಾರಕ್ಕೆ ಪತ್ರ ಬರೆದಿದ್ದೇನೆ’ ಎಂದರು.

11ನೇ ಪುಟ ನೋಡಿ

ತಾಂತ್ರಿಕ ಸಮಸ್ಯೆ ಬಗೆಹರಿಸಲು ಚರ್ಚೆ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಸ್ವೀಕರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ನೂತನ ಕಾಂಗ್ರೆಸ್ ಸರ್ಕಾರ ಈಗಾಗಲೇ ನಿರ್ಧರಿಸಿದೆ. ಆದರೆ, ಎಚ್. ಕಾಂತರಾಜು ಆಯೋಗದ ಅವಧಿಯಲ್ಲಿ ಸಿದ್ಧಪಡಿಸಿದ್ದ ವರದಿಗೆ ಸಂಬಂಧಿಸಿದಂತೆ ಏನೇನು ಮಾಡಬಹುದೆಂದು ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ, ಸದಸ್ಯ ಕಾರ್ಯದರ್ಶಿ ಕೆ.ಎ. ದಯಾನಂದ್, ಆಯೋಗದ ಸದಸ್ಯ ಕಾರ್ಯದರ್ಶಿ ಜಿ. ಜಗದೀಶ್ ಜೊತೆ ಚರ್ಚೆ ನಡೆಸಿದ್ದಾರೆ. ವರದಿಯನ್ನು ಯಥಾಸ್ಥಿತಿಯಲ್ಲಿ ಸಲ್ಲಿಸಲು ಎದುರಾಗಿರುವ ತಾಂತ್ರಿಕ ಸಮಸ್ಯೆ ಮತ್ತು ಬಗೆಹರಿಸಲು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಸಭೆ ನಡೆಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಭೋಪಾಲ್‌ನಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸುತ್ತಾ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು ಪಿಟಿಐ ಚಿತ್ರ

ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮೋದಿ ಪ್ರತಿಪಾದನೆ

ಏಕರೂಪ ಸಂಹಿತೆ ಬೇಕಿದೆ

ಭೋಪಾಲ್ (ಪಿಟಿಐ): ‘ಮನೆಯಲ್ಲಿ ಒಬ್ಬರಿಗೆ ಒಂದು, ಇನ್ನೊಬ್ಬರಿಗೆ ಇನ್ನೊಂದು ಕಾನೂನು ಇದ್ದರೆ ಕುಟುಂಬವನ್ನು ನಿಭಾಯಿಸುವುದು ಕಷ್ಟ. ಅಂತೆಯೇ ಎರಡು ಕಾನೂನುಗಳಿದ್ದರೆ ರಾಷ್ಟ್ರವನ್ನು ಮುನ್ನಡೆಸಲು ಸಾಧ್ಯವೇ’ ಎಂಬ ಪ್ರಶ್ನೆಯನ್ನು ಪ್ರಧಾನಿ ನರೇಂದ್ರ ಮೋದಿ ಮುಂದಿಟ್ಟಿದ್ದಾರೆ. ಈ ಮೂಲಕ, ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಯ ಇಂಗಿತ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಎಲ್ಲರಿಗೂ ಸಮಾನ ಹಕ್ಕುಗಳನ್ನು ಕಲ್ಪಿಸಬೇಕು’ ಎಂಬ ಸಾಂವಿಧಾನಿಕ ಆದರ್ಶವನ್ನು ಉಲ್ಲೇಖಿಸಿದರು.

ಮಧ್ಯಪ್ರದೇಶ ವಿಧಾನಸಭೆಗೆ ಈ ವರ್ಷಾಂತ್ಯದಲ್ಲಿ ನಡೆಯಲಿರುವ ಚುನಾವಣೆಯನ್ನು ಕೇಂದ್ರವಾಗಿಟ್ಟುಕೊಂಡು ತಮ್ಮ ಭಾಷಣದುದ್ದಕ್ಕೂ ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳ ವಿರುದ್ಧ ಅವರು ವಾಗ್ದಾಳಿ ನಡೆಸಿದರು.

ಸುಪ್ರೀಂ ಕೋರ್ಟ್ ಕೂಡ ಏಕರೂಪ ನಾಗರಿಕ ಸಂಹಿತೆಯ ಅಗತ್ಯವನ್ನು ಪ್ರತಿಪಾದಿಸಿದೆ. ಆದರೆ, ದೇಶದಲ್ಲಿ ಮತಬ್ಯಾಂಕ್ ಮನಃಸ್ಥಿತಿ ಹೊಂದಿರುವವರು ಇದಕ್ಕೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ ಎಂದರು.

‘ಮುಸ್ಲಿಂ ಸಮುದಾಯವನ್ನು ದಾರಿ ತಪ್ಪಿಸಲು ಮತ್ತು ಪ್ರಚೋದಿಸಲು ಯುಸಿಸಿಯನ್ನು ಬಳಸಿಕೊಳ್ಳಲಾಗುತ್ತಿದೆ. ಯಾವ ಪಕ್ಷಗಳು ನಮ್ಮನ್ನು ಅನುಕೂಲಸಿಂಧು ರಾಜಕಾರಣಕ್ಕೆ ಬಳಸಿಕೊಂಡಿವೆ ಎಂಬುದು ದೇಶದ ಮುಸ್ಲಿಮರಿಗೂ ಗೊತ್ತಿದೆ’ ಎಂದು ಹೇಳಿದರು.

7ನೇ ಪುಟ ನೋಡಿ

ಮೋದಿ ದೇಶದ ಬಡತನ, ಬೆಲೆ ಏರಿಕೆ, ನಿರುದ್ಯೋಗದ ಬಗ್ಗೆ ಮೊದಲು ಮಾತನಾಡಬೇಕಿದೆ. ಯುಸಿಸಿ ನೆಪದಲ್ಲಿ ಜನರ ಗಮನ ಬೇರೆಡೆ ಸೆಳೆಯಲು ಯತ್ನಿಸುತ್ತಿದ್ದಾರೆ

ಕೆ.ಸಿ. ವೇಣುಗೋಪಾಲ್
ಪ್ರಧಾನ ಕಾರ್ಯದರ್ಶಿ, ಎಐಸಿಸಿ

ಏಕರೂಪ ಸಂಹಿತೆ ಹೆಸರಿನಲ್ಲಿ ದೇಶದ ವೈವಿಧ್ಯ ಕಾಪಾಡಲು ಸಾಧ್ಯವೇ? ಹಾಗಿದ್ದರೆ ಮೋದಿ ಹಿಂದೂಗಳ ಅವಿಭಕ್ತ ಕುಟುಂಬ ಪದ್ಧತಿ ರದ್ದುಗೊಳಿಸುತ್ತಾರೆಯೇ?

ಅಸಾದುದ್ದೀನ್ ಒವೈಸಿ
ಮುಖ್ಯಸ್ಥ, ಎಐಎಂಐಎಂ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸ್ಥಾಪನೆ : 2000

RBI Licence No. UBD/KAN/0010P Dated 14-06-2000

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

ನಂ. 1, 1ನೇ ಮುಖ್ಯ ರಸ್ತೆ , 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು - 560 034. ದೂರವಾಣಿ : 080-25526266/25526288/25526299

2022 - 23ನೇ ಸಾಲಿನ ಲಾಭ - ನಷ್ಟದ ತಃಖ್ತೆ

2021-22 ರೂ.	ವೆಚ್ಚ	2022-23 ರೂ.	2021-22 ರೂ.	ಆದಾಯ	2022-23 ರೂ.
13,35,49,435.00	ಠೇವಣಿ ಮೇಲಿನ ಬಡ್ಡಿ ಪಾವತಿ	12,99,72,792.00	15,52,05,710.13	ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ	13,58,44,878.79
2,21,28,233.00	ಸಿಬ್ಬಂದಿ ಸಂಬಳ, ಪಿ. ಎಫ್ ಮತ್ತು ಭತ್ಯೆಗಳು	2,27,65,778.00	11,29,34,096.08	ಹೂಡಿಕೆಗಳ ಮೇಲಿನ ಬಡ್ಡಿ	13,71,99,376.27
55,64,725.00	ಬಾಡಿಗೆ, ತೆರಿಗೆ, ವಿಮೆ , ವಿದ್ಯುತ್ ಇತ್ಯಾದಿ	57,66,876.00	11,62,931.32	ಕಮೀಷನ್, ವಿನಿಮಯ ಇತ್ಯಾದಿ	9,65,413.15
10,000.00	ಕಾನೂನು ಮತ್ತು ವಸೂಲಾತಿ ವೆಚ್ಚ	-	54,21,610.00	ಇತರೆ ಆದಾಯ	21,06,350.00
3,78,030.00	ಅಂಚೆ, ತಂತಿ ಮತ್ತು ದೂರವಾಣಿ ವೆಚ್ಚ	3,28,733.50	–	ಅವಕಾಶ ವಾಪಸಾತಿ	73,91,000.00
12,49,120.00	ಲೆಕ್ಕಪರಿಶೋಧಕರ ಶುಲ್ಕ	12,00,635.00			
16,67,885.00	ಸವಕಳಿ ಹಾಗೂ ರಿಪೇರಿ ವೆಚ್ಚ	15,50,007.50			
5,79,440.00	ಮುದ್ರಣ , ಸ್ಟೇಷನರಿ ಮತ್ತು ಜಾಹೀರಾತು	6,40,426.00			
71,60,748.53	ಇತರೆ ಖರ್ಚುಗಳು	99,71,587.21			
84,21,000.00	ಅವಕಾಶಗಳು	–			
2,49,94,003.00	ಆದಾಯ ತೆರಿಗೆ ಪಾವತಿ	2,86,08,947.00			
6,90,21,728.00	ನಿವ್ವಳ ಲಾಭ	8,27,01,236.00			
27,47,24,347.53	ಜುಮ್ಲಾ	28,35,07,018.21	27,47,24,347.53	ಜುಮ್ಲಾ	28,35,07,018.21

ದಿನಾಂಕ : 31-3-2023 ರಲ್ಲಿದ್ದಂತೆ ಆಸ್ತಿ - ಜವಾಬ್ದಾರಿ ತಃಖ್ತೆ

2021-22 ರೂ.	ಜವಾಬ್ದಾರಿಗಳು	2022-23 ರೂ.	2021-22 ರೂ.	ಆಸ್ತಿಗಳು	2022-23 ರೂ.
12,42,16,700.00	ಪಾವತಿಯಾದ ಷೇರು ಬಂಡವಾಳ	12,68,90,700.00	1,25,58,647.00	ನಗದು ಶಿಲ್ಕು	1,88,01,512.00
87,60,66,159.29	ಕಾಯ್ದಿಟ್ಟ ಹಾಗೂ ಇತರೆ ನಿಧಿಗಳು	91,77,96,820.29	25,63,27,740.96	ಬ್ಯಾಂಕುಗಳಲ್ಲಿ ಶಿಲ್ಕು	29,67,15,908.51
232,36,03,120.87	ಠೇವಣಿಗಳು ಮತ್ತು ಇತರೆ ಖಾತೆಗಳು	271,57,35,757.84	166,05,84,874.00	ಹೂಡಿಕೆಗಳು	225,38,27,514.00
1,55,18,034.00	ಬರಬೇಕಾಗಿರುವ ಬಿಲ್ಲುಗಳ ಮೊತ್ತ	16,68,945.00	141,80,91,813.41	ಸಾಲ ಮತ್ತು ಮುಂಗಡಗಳು	122,33,58,635.83
1,45,18,588.00	ಸುಸ್ತಿ ಬಡ್ಡಿ ಕಾಯ್ದಿರಿಸಿದ್ದು	56,07,324.00	1,45,18,588.00	ಸುಸ್ತಿ ಸಾಲದ ಬಡ್ಡಿ ಬರಬೇಕಾದದ್ದು	56,07,324.00
47,86,197.00	ಠೇವಣಿಗಳ ಮೇಲೆ ಕೊಡಬೇಕಾದ ಬಡ್ಡಿಗಳು	45,45,786.00	2,20,89,924.00	ಹೂಡಿಕೆಗಳ ಬಡ್ಡಿ ಬರಬೇಕಾದದ್ದು	2,48,10,083.00
2,96,18,964.00	ಇತರೆ ಜವಾಬ್ದಾರಿಗಳು	2,73,81,805.00	1,55,18,034.00	ಬರಬೇಕಾದ ಬಿಲ್ಲುಗಳ ಮೊತ್ತ	16,68,945.00
6,90,21,728.00	ನಿವ್ವಳ ಲಾಭ	8,27,01,236.00	4,16,94,220.00	ಸ್ಥಿರಾಸ್ತಿಗಳು- ನಿವೇಶನ	4,16,94,220.00
51,16,465.00	ಅನ್‌ಕ್ಲೈಮಡ್ ಡಿ.ಇ.ಎ.ಎಫ್‌ನಲ್ಲಿ ಇರಿಸಿದ್ದು	53,30,655.00	66,97,395.00	ಚರಾಸ್ತಿಗಳು	59,71,867.00
10,000.00	ಬ್ಯಾಂಕ್ ಗ್ಯಾರಂಟಿ (ಕಾಂಟ್ರಾ)	10,000.00	92,68,254.79	ಇತರೆ ಆಸ್ತಿಗಳು	98,72,364.79
			51,16,465.00	ಅನ್‌ಕ್ಲೈಮಡ್ ಡಿಇಎಎಫ್‌ನಲ್ಲಿ ಇರಿಸಿದ್ದು	53,30,655.00
			10,000.00	ಬ್ಯಾಂಕ್ ಗ್ಯಾರಂಟಿ (ಕಾಂಟ್ರಾ)	10,000.00
346,24,75,956.16	ಜುಮ್ಲಾ	388,76,69,029.13	346,24,75,956.16	ಜುಮ್ಲಾ	388,76,69,029.13

Disclosure in financial statements – 'Notes to Accounts'

1. Regulatory Capital

a) Composition of Regulatory Capital (Amount in ₹ crore)

Sr.No.	Particulars	31.03.2023	31.03.2022
i)	Paid up share capital and reserves (net of deductions, if any)	12.69	12.42
ii)	Other Tier 1 capital	64.74	61.76
iii)	Tier 1 capital (i + ii)	77.43	74.18
iv)	Tier 2 capital	6.32	5.14
v)	Total capital (Tier 1+Tier 2)	83.75	79.32
vi)	Total Risk Weighted Assets (RWAs)	154.07	148.05
vii)	Paid-up share capital and reserves as percentage of RWAs	8.24%	8.39%
viii)	Tier 1 Ratio (Tier 1 capital as a percentage of RWAs)	50.26%	50.11%
ix)	Tier 2 Ratio (Tier 2 capital as a percentage of RWAs)	4.10%	3.47%
x)	Capital to Risk Weighted Assets Ratio (CRAR) (Total Capital as a percentage of RWAs)	54.36%	53.58%
	Amount of Tier 2 capital raised during the year of which: a) Perpetual Cumulative Preference Shares, b) Redeemable Non-Cumulative Preference Share. c) …….		

2. Asset Liability Management : a) Maturity pattern of certain items of assets and liabilities (Amount in ₹ crore)

	Day 1	2 to 7 days	8 to 14 days	15 to 30 days	31 days to 2 months	Over 2 months to 3 months	Over 3 months to 6 months	Over 6 months and up to 1 year	Over 1 year to 3 years	Over 3 years to 5 years	Over 5 years	Total
Deposits	12.31	0.09	0.01	1.87	10.24	10.63	24.81	51.05	154.31	3.87	2.38	271.57
Advances	0.31	0.00	0.00	0.06	0.00	0.10	0.06	16.79	3.86	7.00	94.16	122.34
Investments	0.00	20.00	4.94	4.99	5.91	2.00	44.87	16.50	28.91	46.13	51.13	225.38
Borrowings	-	-	-	-	-	-	-	-	-	-	-	-

3. Investments :

a) Composition of Investment Portfolio : (Amount in ₹ crore)

Investment- Govt. Securities	31.03.2023	31.03.2022
Held to Maturity	63.99	52.50
Available for Sale	109.90	82.51
Total Investments	173.89	135.01
Less: Provision for depreciation and NPI	-	-
Net Investments	**173.89**	**135.01**

b) Movement of Provisions for Depreciation and Investment Fluctuation Reserve (Amount in ₹ crore)

Particulars	31.03.2023	31.03.2022
i) Movement of provisions held towards depreciation on investments		
a) Opening balance	0.04	0.04
b) Add: Provisions made during the year	-	-
c) Less: Write off/ write back of excess provision during the year	-	-
d) Closing balance	0.04	0.04
ii) Movement of Investment Fluctuation Reserve		
a) Opening balance	3.29	2.20
b) Add: Amount transferred during the year	1.11	1.09
c) Less: Drawdown	-	-
d) Closing balance	4.40	3.29
iii) Closing balance in IFR as a percentage of closing balance of investments in AFS and HFT/Current category	3.38%	3.99%

c) Sale and transfers to/from HTM category: The one-time transfer of securities to/from HTM category with the approval of Board of Directors undertaken by banks at the beginning of the accounting year. **–NIL-**

d) Non- SLR Investment portfolio : Non-Performing Non- SLR Investment as on 31.03.2023 and 31.03.2022 (Amount in ₹ crore)

Sr. No.	Investment- Govt. Securities	31.03.2023	31.03.2022
a)	PSUs		
b)	FIs	20.00	Nil
c)	Banks		
d)	Private Corporates	-	-
	Total	**20.00**	**Nil**

3) Asset Quality:

a) Classification of advances and provisions held (Amount in ₹ crore)

	Total Standard Advances	Non-Performing				Total
		Sub-standard	Doubtful	Loss	Total NPA	
Gross Standard Advances and NPAs						
Opening Balance	134.86	3.26	3.69	-	6.95	141.81
Add: Additions during the year	8.99	0.70	1.68	-	2.38	11.37
Less: Reductions during the year*	25.12	2.62	3.10	-	5.72	30.84
Closing balance	**118.73**	**1.34**	**2.27**	**-**	**3.61**	**122.34**
Recoveries (excluding recoveries from upgraded accour	25.12	2.62	3.10	-	5.72	30.84
Provisions (excluding Floating Provisions)						
Opening balance of provisions held	2.56	0.13	10.75	-	10.88	13.44
Add: Fresh provisions made during the year	-	-	1.01	-	1.01	1.01
Less: Excess provision reversed/ Write-off loans	0.74	-	-	-	-	0.74
Closing balance of provisions held	1.82	0.13	11.75	-	11.88	13.71
Net NPAs						
Opening Balance	-	-	-	-	-	0.00
Add: Fresh additions during the year	-	-	-	-	-	-
Less: Reductions during the year	-	-	-	-	-	-
Closing Balance	-	-	-	-	-	0.00

Ratios (in per cent)	31.03.2023	31.03.2022
Gross NPA to Gross Advances	2.95%	4.90%
Net NPA to Net Advances	0%	0%
Provision coverage ratio	329.09%	156.60%

b) Sector-wise Advances and Gross NPAs (Amount in ₹ crore)

Sr. No	Sector*	31-03-2023			31-03-2022		
		O/s Total Advances	Gross NPAs	% of Gross NPAs to Total Advances	O/s Total Advances	Gross NPAs	% of Gross NPAs to Total Advances
i)	**Priority Sector**						
a)	Agriculture and allied activities	8.28	-	0.00	5.02	-	0.00
b)	Advances to industries sector eligible as priority sector lending	53.56	2.25	1.84	63.00	5.78	4.08
c)	Services	3.49	-	0.00	4.27	0.02	0.01
d)	Personal loans	0.02	0.01	0.01	0.03	0.01	0.01
	Subtotal (i)	**65.35**	**2.26**	**1.85**	**72.32**	**5.81**	**4.10**
ii)	**Non-priority Sector**						
a)	Agriculture and allied activities	-	-	-	-	-	-
b)	Industry	-	-	-	-	-	-
c)	Services	56.99	1.34	1.10	69.49	1.14	0.80
d)	Personal loans	-	-	-	-	-	-
	Sub-total (ii)	**56.99**	**1.34**	**1.10**	**69.49**	**1.14**	**0.80**
	Total (I + ii)	**122.34**	**3.60**	**2.95**	**141.81**	**6.95**	**4.90**

i) Details of accounts subjected to restructuring (Amount in ₹ crore)

Standard	31.03.2023		31.03.2022	
	No. of Borrowers	Gross Amount	No. of Borrowers	Gross Amount
Micro, Small and Medium Enterprises (MSME)	5	2.28	7	9.11
Retail (excluding agriculture and MSME)	5	2.23	5	2.29
Total	**10**	**4.51**	**12**	**11.40**
Provision Held		**0.47**		**1.21**

C. Divergence in asset classification and provisioning (Amount in ₹ crore)

Sr.	Particulars	Amount
1.	Gross NPAs as on March 31,2022*as reported by the bank	6.95
2.	Gross NPAs as on March 31, 2022 as assessed by Reserve Bank of India	6.95
3.	Divergence in Gross NPAs (2-1)	Nil
4.	Net NPAs as on March 31, 2022 as reported by the bank	Zero
5.	Net NPAs as on March 31, 2022 as assessed by Reserve Bank of India	Zero
6.	Divergence in Net NPAs (5-4)	Nil
7.	Provisions for NPAs as on March 31, 2022 as reported by the bank	10.88
8.	Provisions for NPAs as on March 31, 2022 as assessed by Reserve of India	10.88
9.	Divergence in provisioning (8-7)	Nil
10	Reported Profit before Provisions and Contingencies for the year ended March31, 2022	9.34
11.	Reported Net Profit after Tax (PAT) for the year ended March 31,2022	6.90
12.	Adjusted (notional) Net Profit after Tax (PAT) for the year ended March 31, 2022 after considering the divergence in provisioning	6.90

d) Fraud Accounts : Banks shall make disclose details on the number and amount of frauds as well as the provisioning thereon **–NIL-**

I) Disclosure under Resolution Framework for COVID-19 related Stress: Format for disclosures to be made starting March 31, 2023 (Amount in ₹ crore)

Type of borrower	Exposure to accounts classified as Standard consequent to implementation of resolution plan– Position as at the end of the previous year (A)	of (A), aggregate debt that slipped into NPA during the year	Of (A) amount paid by the borrowers during the year	Exposure to accounts classified as standard consequent to implementation of resolution plan-Position as at the end of this year
Personal Loans	11.40	-	6.89	4.51
Corporate persons*	-	-	-	-
Of which MSMEs	-	-	-	-
Others	-	-	-	-
Total	11.40	-	6.89	4.51

4. Exposure to real estate sector (Amount in ₹ crore)

Category	31.03.2023	31.03.2022
a) Residential Mortgages– Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits.	18.99	20.21
b) Commercial Real Estate–Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development and construction, etc.).Exposure would also include non-fund based(NFB) limits;	19.85	31.59
Total Exposure to Real Estate Sector	38.84	51.80
Total unsecured advances of the bank	0.02	0.03

5. Concentration of deposits, advances and NPAs

a) Concentration of deposits: (Amount in ₹ crore)

Particulars	31.03.2023	31.03.2022
Total deposits of the twenty largest depositors	39.42	23.89
Percentage of deposits of twenty largest depositors to total deposits of the bank	14.52%	10.28%

b) Concentration of advances (Amount in ₹ crore)

Particulars	31.03.2023	31.03.2022
Total advances to the twenty largest borrowers	59.13	66.52
Percentage of advances to twenty largest borrowers to total advances of the bank	48.33%	46.91%

c) Concentration of NPAs (Amount in ₹ crore)

Particulars	31.03.2023	31.03.2022
Total Exposure to the top twenty NPA accounts	3.60	6.95
Percentage of exposures to the twenty largest NPA exposure to total Gross NPAs.	100%	100%

6. Transfers to Depositor Education and Awareness Fund (DEA Fund) (Amount in ₹ Lakh)

Particulars	31.03.2023	31.03.2022
Opening balance of amounts transferred to DEA Fund	51.16	50.94
Add: Amounts transferred to DEA Fund during the year	2.24	0.22
Less: Amounts reimbursed by DEA Fund towards claims	0.09	-
Closing balance of amounts transferred to DEA Fund	53.31	51.16

7. Disclosure of complaints received by Bank from Customers (OBOs) : - NIL -

8. Disclosure of penalties imposed by the Reserve Bank of India: - NIL-

9. Other Disclosure:

a) Business ratios: (Amount in ₹ crore)

Particular	31.03.2023	31.03.2022
Interest Income as a percentage to Working Funds	7.41	7.82
Non-interest income as a percentage to Working Funds	0.28	0.19
Cost of Deposits	5.12	5.71
Net Interest Margin	4.19	4.20
Operating Profit as a percentage to Working Funds	2.13	2.01
Return on Assets	2.42	2.01
Business (deposits plus advances) per employee	24.62	23.39
Profit per employee	0.52	0.43

b) Bank assurance business : The details of fees / brokerage earned in respect of insurance broking, agency and bank assurance business undertaken by them shall be disclosed for both the current year and previous year. **-NIL-**

c) Disclosures regarding Priority Sector Lending Certificates (PSLCs): The amount of PSLCs (category-wise) sold and purchased during the year shall be disclosed. (Amount in ₹ crore)

PSLCs Purchased	31.03.2023	31.03.2022
PSLC- General	75.00	Nil
PSLC- Micro Enterprises	10.00	Nil
PSLCs Sold	Nil	Nil

d) Provision and contingencies: (Amount in ₹ Lakh)

	Provision debited to Profit and Loss Account	31.03.2023	31.03.2022
i)	Provisions for NPI	Nil	Nil
ii)	Provision towards NPA	1188.82	1088.39
iii)	Provision made towards Income Tax	286.00	249.94
iv)	Other Provisions a) Depreciation on Investment	443.66	333.19
b)	Provision towards Standard Asset	135.33	135.33
c)	Provision for Resolution of Stressed Assets	46.97	120.88
d)	Deferred Tax	0.08	(-)7.03

e) Payment of DICGC Insurance Premium (Amount in ₹ Lakh)

	Provision debited to Profit and Loss Account	31.03.2023	31.03.2022
i)	Payment of DICGC Insurance Premium	31.72	31.45
ii)	Arrears in payment of DICGC premium	Nil	Nil

f) Disclosure of facilities granted to directors and their relatives: - NIL -

(ಶಿವಣ್ಣ.ಕೆ.ಬಿ.)	(ವೆಂಕಟೇಶ್ ಅಯ್ಯರ್.ಪಿ.ವಿ.)	(ನಾರಾಯಣ್.ಎಸ್. ಭಟ್)	(ಎಂ. ಮುನಿರೆಡ್ಡಿ)
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು	ನಿರ್ದೇಶಕರು	ಉಪಾಧ್ಯಕ್ಷರು	ಅಧ್ಯಕ್ಷರು

-: ದೃಢೀಕರಣ :-

ನಾವು ಮೇಲ್ಕಂಡ **ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ, ಬೆಂಗಳೂರು** – 34 ಇದರ 2022–23ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇವೆ. ನಮ್ಮ ಅತ್ಯುತ್ತಮ ಜ್ಞಾನ ಹಾಗೂ ನಂಬಿಕೆಯಂತೆ ಮತ್ತು ಲೆಕ್ಕಪರಿಶೋಧನೆಗೆ ದೊರೆತ ಮಾಹಿತಿ ಹಾಗೂ ವಿವರಣೆಗಳನ್ನು ಪರಿಶೀಲಿಸಿರುತ್ತೇವೆ ಹಾಗೂ ಅವು ತೃಪ್ತಿಕರವೆಂದು ಕಂಡುಬಂದಿರುತ್ತವೆ. ನಮ್ಮ ಅಭಿಪ್ರಾಯದಂತೆ ದೊರೆತ ಮಾಹಿತಿ ವಿವರಣೆಗಳಂತೆ ಹಾಗೂ ಲಗತ್ತಿಸಿರುವ ನಮ್ಮ ಲೆಕ್ಕ ಪರಿಶೋಧನಾ ವರದಿಯಲ್ಲಿ ವಿವರಿಸಿರುವ ವಿವರಗಳಗೊಳಪಟ್ಟ **ದಿನಾಂಕ: 31–3–2023ಕ್ಕೆ** ಇದ್ದಂತೆ ಬ್ಯಾಂಕಿನ ಆರ್ಥಿಕ ಪರಿಸ್ಥಿತಿಯ ನೈಜ ಹಾಗೂ ಸಮಂಜಸ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆಂದು ಅಭಿಪ್ರಾಯಪಡುತ್ತೇವೆ.

ಮೆ|| ಬಾಬು ಅಂಡ್ ಬದತ್
ಸನ್ನದು ಲೆಕ್ಕಪರಿಶೋಧಕರು
(ಕೆ. ಚಂದ್ರ ಬಾಬು)
ಪಾಲುದಾರರು
ಸದಸ್ಯತ್ವ ಸಂಖ್ಯೆ 29130 UDIN: 23029130BGVNWY6545

SHAMANUR EDUCATION TRUST (R)
SMT. PUSHPA SHAMANUR MAHALINGAPPA P U SCIENCE COLLEGE, DAVANGERE / SPSM NEET & IIT ACADEMY
Become a Doctor
LEKHANA NEET 2023 SCORE - 658 / 720
ALL INDIA RANKS - 2023
AIR 133 AIR 266 AIR 907 AIR 910
400+ MARKS IN NEET - 2023 CAN AVAIL FREE* COACHING
Admissions Open 2023
1 YEAR NEET LONGTERM
REPEATERS COURSE
STUDENTS WHO SCORED 450+ MARKS IN NEET 2023 CAN AVAIL FREE* COACHING WITH FOOD AND HOSTEL
72592 22250, 8970067700, 89700 71100. | 1ST MAIN, SWAMI VIVEKANANDA BADAVANE, NEAR BAPUJI ENGINEERING COLLEGE, DAVANGERE

ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಆಗ್ರಹ

ಕಾಂಗ್ರೆಸ್‌ನ ಆರನೇ ಗ್ಯಾರಂಟಿ ಈಡೇರಿಕೆಗಾಗಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಸಿಕ ₹ 15 ಸಾವಿರ ಹಾಗೂ ಸಹಾಯಕಿಯರಿಗೆ ಮಾಸಿಕ ₹ 10 ಸಾವಿರ ಗೌರವಧನ ನೀಡುವುದಾಗಿ ಹೇಳಿದ್ದ ಕಾಂಗ್ರೆಸ್‌ನ 6ನೇ ಗ್ಯಾರಂಟಿಯನ್ನು ಕೂಡಲೇ ಈಡೇರಿಸಬೇಕು' ಎಂದು ಒತ್ತಾಯಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ರಾಜ್ಯದ ಹಲವು ಜಿಲ್ಲೆಗಳ ಪ್ರತಿನಿಧಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ಬಹುಮತದೊಂದಿಗೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯನ್ನು ಈಡೇರಿಸಿ ನಂಬಿಕೆ ಉಳಿಸಿಕೊಳ್ಳಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

'ಅಂಗನವಾಡಿ ಕೆಲಸಗಳನ್ನು ಹೊರತುಪಡಿಸಿ, ಬೇರೆ ಕೆಲಸಗಳಿಗೆ ಕಾರ್ಯಕರ್ತೆಯರು ಹಾಗೂ ಸಹಾಯಕಿಯರನ್ನು ಬಳಸಿಕೊಳ್ಳಬಾರದು. ನಮಗೆ ನೀಡಿರುವ ಮೊಬೈಲ್‌ಗಳು ಹಾಳಾಗಿದ್ದು, ಅವುಗಳನ್ನು ಹಿಂಪಡೆದು ಹೊಸ ಮೊಬೈಲ್ ಅಥವಾ ಮಿನಿ ಟ್ಯಾಬ್‌ಗಳನ್ನು ನೀಡಬೇಕು. ಮೊಟ್ಟೆ ಖರೀದಿ ಜವಾಬ್ದಾರಿಯನ್ನು ಬಾಲ ವಿಕಾಸ ಸಮಿತಿಗೆ ವಹಿಸಬೇಕು' ಎಂದು ಅವರು ಆಗ್ರಹಿಸಿದರು.

'ನಿವೃತ್ತರಿಗೆ ₹ 3 ಲಕ್ಷ ಇಡುಗಂಟು ಜಾರಿಗೊಳಿಸಬೇಕು. ತಿಂಗಳಿಗೆ ₹ 5 ಸಾವಿರ ಪಿಂಚಣಿ ನೀಡಬೇಕು. ನಮ್ಮೆಲ್ಲ ಬೇಡಿಕೆಗಳನ್ನು ತ್ವರಿತವಾಗಿ ಈಡೇರಿಸಬೇಕು. ಇಲ್ಲದಿದ್ದರೆ, ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು' ಎಂದು ಪ್ರತಿಭಟನಕಾರರು ಎಚ್ಚರಿಸಿದರು.

ಮನವಿ: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ಅವರನ್ನು ಭೇಟಿಯಾದ ಪ್ರತಿಭಟನಕಾರರು ಮನವಿ ಪತ್ರ ಸಲ್ಲಿಸಿದರು.

'ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾ ಯಕಿಯರ ಬೇಡಿಕೆಗಳನ್ನು ಶೀಘ್ರವೇ ಈಡೇರಿಸಲಾಗುವುದು' ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಭರವಸೆ ನೀಡಿದರು.

ಮಂಗಳವಾರ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು, ತಮಗೆ ನೀಡಿದ್ದ ಮೊಬೈಲ್‌ಗಳನ್ನು ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

ರಾಜ್ಯಸಭೆ: 10 ಸ್ಥಾನ ಭರ್ತಿಗೆ ಜುಲೈ 24ಕ್ಕೆ ಚುನಾವಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿದೇಶಾಂಗ ಸಚಿವ ಎಸ್. ಜೈಶಂಕರ್ ಸೇರಿದಂತೆ ರಾಜ್ಯಸಭೆಯ 10 ಸದಸ್ಯರು ಜುಲೈ, ಆಗಸ್ಟ್‌ನಲ್ಲಿ ನಿವೃತ್ತಿಯಾಗುತ್ತಿದ್ದು, ಆ ಸ್ಥಾನಗಳಿಗೆ ಜುಲೈ 24ರಂದು ಚುನಾವಣೆ ನಡೆಯಲಿದೆ ಎಂದು ಕೇಂದ್ರ ಚುನಾವಣಾ ಆಯೋಗ ಮಂಗಳವಾರ ತಿಳಿಸಿದೆ.

ಗೋವಾದಿಂದ ಒಬ್ಬರು, ಗುಜರಾತ್‌ನಿಂದ ಮೂವರು, ಪಶ್ಚಿಮ ಬಂಗಾಳದಿಂದ ಆರು ಸದಸ್ಯರ ಆಯ್ಕೆಗೆ ಚುನಾವಣೆ ನಡೆಯಲಿದೆ.

ಗುಜರಾತ್‌ನಿಂದ ಆಯ್ಕೆಯಾಗಿದ್ದ ಬಿಜೆಪಿಯ ಜೈಶಂಕರ್, ದಿನೇಶ್‌ಚಂದ್ರ ಜೆಮಲ್‌ಭಾಯ್ ಅನವದೀಯ, ಲೋಖಂಡವಾಲಾ ಜುಗಲ್ ಸಿನ್ಹಾ ಮಾಥೂರ್‌ಜಿ ಹಾಗೂ ಪಶ್ಚಿಮ ಬಂಗಾಳದಿಂದ ಆಯ್ಕೆಯಾಗಿದ್ದ ತೃಣಮೂಲ ಕಾಂಗ್ರೆಸ್‌ನ ಡೆರೆಕ್ ಒ ಬ್ರಿಯಾನ್, ಡೊಲಾ ಸೆನ್, ಪ್ರದೀಪ್ ಭಟ್ಟಾಚಾರ್ಯ, ಸುಶ್ಮಿತಾ ದೇವ್, ಸುಖೇಂದು ಶೇಖರ್ ರೇ, ಶಾಂತಾ ಛೆಟ್ರಿ ಅವರ ಅವಧಿ ಆ.18ಕ್ಕೆ ಮುಗಿಯಲಿದೆ.

ಪಿಎಸ್‌ಐ ನೇಮಕ: ಮರುಪರೀಕ್ಷೆ ಬಗ್ಗೆ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಪರೀಕ್ಷಾ ಅಕ್ರಮದ ದೋಷಾರೋಪ ಪಟ್ಟಿಯಲ್ಲಿ ಹೆಸರಿರುವ ಅಭ್ಯರ್ಥಿಗಳನ್ನು ಹೊರತುಪಡಿಸಿ ಆಯ್ಕೆ ಪಟ್ಟಿಯಲ್ಲಿನ ಉಳಿದ ಅಭ್ಯರ್ಥಿಗಳಿಗಷ್ಟೇ ಪುನಃ ಪರೀಕ್ಷೆ ನಡೆಸುವ ಸಾಧ್ಯತೆಯ ರಾಜ್ಯ ಸರ್ಕಾರ ಪರಿಶೀಲನೆ ನಡೆಸುತ್ತಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ಕಳಂಕಿತ ಮತ್ತು ಕಳಂಕರಹಿತ ಅಭ್ಯರ್ಥಿಗಳನ್ನು ಪ್ರತ್ಯೇಕಿಸಿ, ನೇಮಕಾತಿ ಆದೇಶ ನೀಡಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಆಯ್ಕೆಯಾಗಿದ್ದ 100ಕ್ಕೂ ಹೆಚ್ಚು ಅಭ್ಯರ್ಥಿಗಳು ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಜಿ. ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯ ಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, 'ಹೈಕೋರ್ಟ್ ಸೂಚನೆಯಂತೆ ದೋಷಾರೋಪ ಪಟ್ಟಿಯಲ್ಲಿ ಹೆಸರಿರದ ಅಭ್ಯರ್ಥಿಗಳಿಗಷ್ಟೇ ಮರು ಪರೀಕ್ಷೆ ನಡೆಸುವ ಸಾಧ್ಯತೆಯ ಬಗ್ಗೆ ಸರ್ಕಾರ ಪರಿಶೀಲನೆ ನಡೆಸುತ್ತಿದೆ. ಈ ಕುರಿತ ನಿರ್ಧಾರ ತಿಳಿಸಲು ಇನ್ನಷ್ಟು ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಜುಲೈ 5ರವರೆಗೆ ಕಾಲಾವಕಾಶ ನೀಡಿ ವಿಚಾರಣೆ ಮುಂದೂಡಿತು.

120 ಮೊಬೈಲ್ ಕದ್ದಿದ್ದ ಮೂವರ ಸೆರೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಮೊಬೈಲ್‌ಗಳನ್ನು ಕದ್ದು ನಗರದಲ್ಲಿ ಮಾರಲು ಬಂದಿದ್ದ ಮೂವರು ಆರೋಪಿಗಳನ್ನು ಮಡಿವಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ಸಂತೋಷ್ (32), ಅಭಿಲಾಷ್ (26) ಹಾಗೂ ಶ್ರೀನಿವಾಸ್ (28) ಬಂಧಿತರು. ಇವರಿಂದ ₹ 25 ಲಕ್ಷ ಮೌಲ್ಯದ 120 ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸಾರ್ವಜನಿಕರ ಮೊಬೈಲ್‌ಗಳನ್ನು ಕದಿಯುತ್ತಿದ್ದ ಆರೋಪಿಗಳು ಅವುಗಳನ್ನು ನಗರಕ್ಕೆ ತಂದು ಮಾರಾಟ ಮಾಡಿ, ಅದರಿಂದ ಬಂದ ಹಣವನ್ನು ಹಂಚಿಕೊಂಡು ಐಷಾರಾಮಿ ಜೀವನ ನಡೆಸುತ್ತಿದ್ದರು. ಆರೋಪಿಗಳ ಬಗ್ಗೆ ಇತ್ತೀಚೆಗೆ ಮಾಹಿತಿ ಲಭ್ಯವಾಗಿತ್ತು. ಕಾರ್ಯಾಚರಣೆ ನಡೆಸಿ ಮೂವರನ್ನೂ ಬಂಧಿಸಲಾಗಿದೆ ಎಂದರು.

ಕೆಎಂಎಫ್ ಎಂ.ಡಿ ವರ್ಗ

ಬೆಂಗಳೂರು: ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿ-(ಕೆಎಂಎಫ್) ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಯಾವುದೇ ಹುದ್ದೆ ತೋರಿಸಿಲ್ಲ. ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ಕೆಎಎಸ್ ಅಧಿಕಾರಿ ಎಂ.ಕೆ. ಜಗದೀಶ್ ಅವರನ್ನು ನೇಮಿಸಲಾಗಿದೆ.

33 ಲ್ಯಾಪ್‌ಟಾಪ್, 40 ಮೊಬೈಲ್ ಜಪ್ತಿ: ಬಂಧನ

ಬೆಂಗಳೂರು: ನಗರದ ಹಲವು ಮನೆಗಳು ಹಾಗೂ ಪೇಯಿಂಗ್ ಗೆಸ್ಟ್‌ಗಳ (ಪಿ.ಜಿ) ಕೊಠಡಿಗಳಿಗೆ ನುಗ್ಗಿ 33 ಲ್ಯಾಪ್‌ಟ್ಯಾಪ್ ಹಾಗೂ 40 ಮೊಬೈಲ್ ಕಳ್ಳತನ ಮಾಡಿದ ಆರೋಪದಡಿ ಎಂ.ಎ ಪದವೀಧರ ಸೇರಿ ಮೂವರನ್ನು ಮೈಕೊಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ತಮಿಳ್ ಸೆಲ್ವನ್ (28), ಲಕ್ಷ್ಮಣ (33) ಹಾಗೂ ಕಾರ್ತಿಕ್ (19) ಬಂಧಿತರು. ಆರೋಪಿ ಸೆಲ್ವನ್, ಎಂ.ಎ ಪದವೀಧರ. ಸೂಕ್ತ ಕೆಲಸ ಸಿಗದಿದ್ದರಿಂದ, ಕಳ್ಳತನಕ್ಕೆ ಇಳಿದಿದ್ದ. ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಬಾಗಿಲು ತೆರೆದಿರುತ್ತಿದ್ದ ಮನೆಗಳು ಹಾಗೂ ಪಿ.ಜಿ ಕೊಠಡಿಗಳನ್ನು ಗುರುತಿಸುತ್ತಿದ್ದರು. ಯಾರೂ ಇಲ್ಲದ್ದನ್ನು ಖಚಿತಪಡಿಸಿಕೊಂಡು, ಒಳಗೆ ನುಗ್ಗಿ ಕಳ್ಳತನ ಮಾಡುತ್ತಿದ್ದರು. ಕಳ್ಳತನ ಸಂಬಂಧ ಇತ್ತೀಚೆಗೆ ಪ್ರಕರಣವೊಂದು ದಾಖಲಾಗಿತ್ತು. ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಕಾಣೆಯಾಗಿದ್ದಾರೆ

ಸಮರಾಜ್
ವಯಸ್ಸು: 53
ಎತ್ತರ: 5.2',
ಬಣ್ಣ: ಕಪ್ಪುಬಣ್ಣ,
ಸಾಧಾರಣ ಮೈಕಟ್ಟು
ಇವರು ಬುದ್ಧಿಮಾಂದ್ಯರಾಗಿದ್ದು, ಹಸಿರು ಬಣ್ಣದ ಶರ್ಟ್, ಧರಿಸಿದ್ದು, ತಮಿಳು, ಕನ್ನಡ ಮಾತನಾಡುತ್ತಾರೆ
ಸಮರಾಜ್ ದಿನಾಂಕ: 26.6.2023 ರಂದು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆ ಹತ್ತಿರ ಕಾಣೆಯಾಗಿದ್ದಾರೆ ಇವರ ಬಗ್ಗೆ ಮಾಹಿತಿ ಸಿಕ್ಕರೆ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ ಅಥವಾ ಕೆಳಗಿನ ಮೊಬೈಲ್‌ಗೆ ಕರೆ ಮಾಡಿ:
7010303503, 9952619861

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಸುಧಾ ಓದಿರಿ

LOAN AVAILABLE
Against mortgage of immovable property
RATE OF INTEREST 10% to 12%
Long Term & Easy Instalment Facilities.
SYNDICATE FINANCE
428, Rawal Bldg. No. 1, 1st Floor Lamington Road, Mumbai-400 004
Ph: (022) 3565 7754 / 2386 3781 (022) 4012 9088 / 2388 0634
Contact: 11 am to 5 pm
E-mail: info@syndicatefinance.in | www.syndicatefinance.in

ಭೂಮಿಕಾ ಕ್ಲಬ್
presented by
SINCE 1939
P. C. CHANDRA JEWELLERS
A jewel of jewels
DH DECCAN HERALD | ಪ್ರಜಾವಾಣಿ
ಮಹಿಳೆಯರಿಗೆಂದೇ ಸ್ಥಾಪಿತಗೊಂಡ ವಿಶಿಷ್ಟವಾದ ವೇದಿಕೆ.
ಸೊಬಗಿನ ಮೆರುಗು ಹೆಚ್ಚಿಸಿಕೊಳ್ಳಿ
ವಿಶೇಷವಾದ ಆಫ್‌ಲೈನ್ ಕಾರ್ಯಕ್ರಮದಲ್ಲಿ ಭಾಗಿಯಾಗಿ, ಸ್ವಾವಲಂಬಿ ಹಾಗೂ ಸ್ವತಂತ್ರ ಬದುಕಿಗೆ ಹೊಸ ಅರ್ಥ ನೀಡಿ.
ಆಭರಣಗಳ ವಿನ್ಯಾಸ, ಫ್ಯಾಷನ್ ಶೋ, ನೃತ್ಯ ಪ್ರದರ್ಶನ ಸೇರಿದಂತೆ ಇನ್ನೂ ಮುಂತಾದ ಚಟುವಟಿಕೆಗಳಲ್ಲಿ ಭಾಗವಹಿಸಿ, ನಿಮ್ಮ ಜೀವನಶೈಲಿಯನ್ನು ಉತ್ಕೃಷ್ಟಗೊಳಿಸಿಕೊಳ್ಳುವ ಮೂಲಕ, ವಿನೂತನ ಕಲಿಕೆಯೆಡೆಗೆ ಹೆಜ್ಜೆ ಇಡಿ.
ಕಾರ್ಯಕ್ರಮದ ಮುಖ್ಯಾಂಶಗಳು
ಆಭರಣ ವಿನ್ಯಾಸದ ಸೆಷನ್ ಶೈನಿ ಅಲೆಕ್ಸಾಂಡರ್ ಅವರಿಂದ
ಆಭರಣಗಳ ಫ್ಯಾಷನ್ ಶೋ IFM ಅವರಿಂದ
ನೃತ್ಯ ಪ್ರದರ್ಶನ ತಾರಕ್ ಡಾನ್ಸ್ ಅಕಾಡೆಮಿ ಅವರಿಂದ
ಉದ್ಘಾಟನೆ
ಚೈತ್ರ ಜೆ. ಆಚಾರ್ ನಟಿ ಮತ್ತು ಗಾಯಕಿ
1 ಜುಲೈ 2023 2.30 PM ರಿಂದ
ಕೋರಮಂಗಲ ಕ್ಲಬ್, 6 ನೇ ಅಡ್ಡ ರಸ್ತೆ, 6 ನೇ ಬ್ಲಾಕ್, ಕೋರಮಂಗಲ, ಬೆಂಗಳೂರು
ಆಟಗಳು | ಹೈ - ಟೀ | ನೆಟ್ವರ್ಕಿಂಗ್ | ಎಲ್ಲರಿಗೂ ಉಡುಗೊರೆ ಗೆಲ್ಲುವ ಸದಾವಕಾಶ
Kaapi Partner Hatti Kaapi
Fashion Show Partner IFM Indian Film Makers
ನೋಂದಾಯಿತರಿಗೆ ಮಾತ್ರ ಪ್ರವೇಶ
ಈಗಲೇ ನೋಂದಾಯಿಸಿಕೊಳ್ಳಿ
bit.ly/bhumikaclubjuly1
*T&C Apply

ಹತ್ತಿರದ ಹೀರೊ ಶೋರೂಮ್ ನಲ್ಲಿ ನಿಮ್ಮ ಟೆಸ್ಟ್ ರೈಡ್ ಬುಕ್ ಮಾಡಿ.
ಕಡಿಮೆ ಡೌನ್ ಪೇಮೆಂಟ್ ಆರಂಭವಾಗುತ್ತದೆ ₹1/-*
ಬಡ್ಡಿದರ 6.99%*
WORLD'S NO.1 22 YEARS IN A ROW MOTORCYCLE & SCOOTER COMPANY
INDIA'S FIRST 5 YEAR WARRANTY *Conditions apply
Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. I CIN: L35911DL1984PLC017354 | For further information, contact your nearest Hero MotoCorp authorised outlet or CALL TOLL-FREE 1800 266 0018 or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. "Highest sales for any 2 Wheeler Corporate Entity in the world for Calendar Year 2022 - Data source: DNA Consult & Advisory's report Assessment of Global Two Wheelers Market (CY22)". ^^Based on offers from empaneled dealers on Wheels of Trust platform. Available at select dealerships. *Finance scheme is at the sole discretion of financiers & subject to its respective terms & conditions. For more details please visit your nearest authorised Hero outlet. ^Starting price. *Terms and Conditions apply.
Exchange Powered By Wheels of Trust^^ SCAN FOR BEST RESALE VALUE
Authorised Dealers: Bengaluru: Hosur Road: RT Krishna Hero, Ph: 9289923177, Jigani: Rt Krishna Hero, Ph: 8762860999, Byatarayanapura: Bimal Hero, Ph: 9289922863, RT Nagar: Bimal Hero, Ph: 9535327710, Doddaballapur: Bimal Hero, Ph: 9742202125, Rajaji Nagar: Max Hero, Ph: 9289923023, Banaswadi: Bhagath Hero, Ph: 9289922738, Hoskote: Bhagath Hero, Ph: 8884600051, K R Puram: Bhagath Hero, Ph: 7829488706, Lalbagh Road: Prakash Hero, Ph: 9289922117, Peenya: Sai Hero, Ph: 9289922830, Banashankari: Sai Hero, Ph: 9289922476, JP Nagar: Sai Hero, Ph: 9900236280, Marathalli: Vaayuratha Hero, Ph: 9289923811, Magadi Road: Poorna Hero, Ph: 9289923212, Kamakshipalya: Poorna Motors, Ph: 9606922534, Tumkur: Sai Hero, Ph: 9289922986, B.H.Road: Sai Hero, Ph: 7022752841, Tiptur: Sai Hero, Ph: 9164840456, Kunigal: Sai Hero, Ph: 7022752858, Shimoga: Mythri Hero, Ph: 9289922635, Sree Karthik Hero, Ph: 9289922509, Chickmagalur: Nayana Hero, Ph: 9289922120, Sagar: Prajwal Hero, Ph: 9289922399, Udupi: Shakti Hero, Ph: 9821696225, Mangalore: Tribhuvan Hero, Ph: 9289923203, West Coast Hero, Ph: 9289922606, Chitradurga: Mahesh Hero, Ph: 9289922126, Davanagere: Rutvi Hero, Ph: 9289923174, Prakasha Hero, Ph: 9289922501, Mysore: Dyuthi Mysore Hero (B.M.Hospital), Ph: 9289922475, Shah Mysore Hero (Nazarbad City), Ph: 9289922518, Nanjangud: Dyuthi Hero, Ph: 9742885252, Hassan: Venkateshwara Hero, Ph: 9289922121, Chamarajnagar: Yepiyes Hero, Ph: 9289922828, Mandya: Dayanand Hero, Ph: 9289922123, Belgaum: Nagshanti Hero, Ph: 9289922502, Nagshanti, 2 Unit, Ph: 9289923173, Chikodi: Shree Renuka Motors, Ph: 9289922884, Gokak: Chinmay Hero, Ph: 9289922673, Yadgir: Sri Venkatesh Hero, Ph: 9289922875, Bidar: Kailash Hero, Ph: 9289922124, Basava Kalyana: Akash Hero, Ph: 9449337211, Gulbarga: Sri Venkatesh Hero, Ph: 9289922118, Bellary: Annapoorna Hero, Ph: 9289922125, Koppal: Vijaya Hero, Ph: 9289922985, Sindhanur: Anand Hero, Ph: 9289922943, Hospet: Annapooorna Automotives, Ph: 9289923165, Raichur: Sri Venkkateshwara Hero, Ph: 9289922944, Haveri: Bahaddur Desai Hero, Ph: 9289922977, Sirsi: Shakti Hero, Ph: 9289922391, Hubli: Chadha Hero, Ph: 9289922119, Gadag: Chadha Hero, Ph: 8050041033, Bellad Hero, Ph: 9289922565, Dharwad: Bellad Hero, Ph: 9686204480, Bagalkot: Chinmay Hero, Ph: 9289923049, Mudhol: Kumar Hero, Ph: 9289922633, Bijapur: Vijay Hero, Ph: 9289922122, Sindagi: Jogur Motors, Ph: 9289922964.

ಕಂಪನಿಗಳ ಸದಸ್ಯರ ಆಸ್ತಿ ಮುಟ್ಟುಗೋಲು • ಸಂತ್ರಸ್ತರಿಗೆ ಹಣ ವಾಪಸು ಕೊಡಿಸಲು ಅವಕಾಶ

ರಿಯಲ್ ಎಸ್ಟೇಟ್: 'ಬಡ್ಸ್– ಕೆಪಿಐಡಿ' ಪ್ರಯೋಗ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಫ್ಲ್ಯಾಟ್, ನಿವೇಶನ ಹೆಸರಿನಲ್ಲಿ ಜನರನ್ನು ವಂಚಿಸುವ ರಿಯಲ್ ಎಸ್ಟೇಟ್ ಕಂಪನಿಗಳು ಹಾಗೂ ಉದ್ಯಮಿಗಳ ವಿರುದ್ಧ 'ಬಡ್ಸ್' ಮತ್ತು 'ಕೆಪಿಐಡಿ' ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳುತ್ತಿರುವ ಪೊಲೀಸರು, ತ್ವರಿತ ತನಿಖೆ ನಡೆಸಿ ಆರೋಪಿಗಳ ಆಸ್ತಿ ಮುಟ್ಟುಗೋಲಿಗೆ ಕಾನೂನು ಪ್ರಕ್ರಿಯೆ ಚುರುಕುಗೊಳಿಸಿದ್ದಾರೆ.

ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ, ಕಲಬುರಗಿ, ದಾವಣಗೆರೆ ಸೇರಿದಂತೆ ಹಲವು ನಗರಗಳಲ್ಲಿ ರಿಯಲ್ ಎಸ್ಟೇಟ್ ಉದ್ಯಮ ದೊಡ್ಡಮಟ್ಟದಲ್ಲಿ ನಡೆಯುತ್ತಿದೆ. ನಿವೇಶನ ಹಾಗೂ ಫ್ಲ್ಯಾಟ್ ಮಾಲೀಕರಾಗುವ ಆಸೆಯಿಂದ ಜನರು ಹಣ ಹೂಡಿಕೆ ಮಾಡುತ್ತಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಕೆಲ ರಿಯಲ್ ಎಸ್ಟೇಟ್ ಕಂಪನಿಗಳು ಹಾಗೂ ಏಜೆಂಟರು, ನಾನಾ ಕೊಡುಗೆಗಳ ಆಮಿಷವೊಡ್ಡಿ ಜನರಿಂದ ಅಕ್ರಮವಾಗಿ ಹಣ ಪಡೆದು ವಂಚಿಸುತ್ತಿದ್ದಾರೆ.

ರಿಯಲ್ ಎಸ್ಟೇಟ್ ವಂಚನೆಗೆ ಸಂಬಂಧಿಸಿದಂತೆ ದಿನವೂ ಪೊಲೀಸ್ ಠಾಣೆಗಳಿಗೆ ಹಾಗೂ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ದೂರುಗಳು ಬರುತ್ತಿವೆ. ಇಂಥ ದೂರುಗಳಿದ್ದಾಗ, ಈ ಹಿಂದೆ ಐಪಿಸಿ ಸೆಕ್ಷನ್ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗುತ್ತಿತ್ತು. ಬಹುತೇಕ ಆರೋಪಿಗಳಿಗೆ ಸುಲಭವಾಗಿ ಜಾಮೀನು ಸಿಗುತ್ತಿತ್ತು. ಸಂತ್ರಸ್ತರಿಗೆ ಹಣ ವಾಪಸು ಕೊಡಿಸುವುದು ಸವಾಲಾಗಿತ್ತು.

ಹೂಡಿಕೆ ಹೆಸರಿನಲ್ಲಿ ಆಗುತ್ತಿರುವ ರಿಯಲ್ ಎಸ್ಟೇಟ್ ವಂಚನೆ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ 'ಕೆಪಿಐಡಿ' ಹಾಗೂ 'ಬಡ್ಸ್' ಅಸ್ತ್ರವನ್ನು ಸಮರ್ಥವಾಗಿ ಪ್ರಯೋಗಿಸಲು ಪೊಲೀಸರು ಮುಂದಾಗಿದ್ದಾರೆ.

ನಿವೇಶನ ಮಾರಾಟದ ಹೆಸರಿನಲ್ಲಿ ನಟ, ನಿರ್ದೇಶಕ ಮಾಸ್ಟರ್ ಆನಂದ್ ಅವರಿಂದ ₹ 18.50 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಪ್ರಕರಣದಲ್ಲೂ ಬಡ್ಸ್ ಕಾಯ್ದೆ ಪ್ರಯೋಗಿಸಲಾಗಿದೆ.

'ಇಂಥ ವಂಚನೆ ಪ್ರಕರಣದ ಸಂತ್ರಸ್ತರಿಗೆ ನ್ಯಾಯ ಒದಗಿಸಲು ಹೆಚ್ಚಿನ ಒತ್ತು ನೀಡಲಾಗಿದೆ. ಠೇವಣಿದಾರರ ಹಿತಾಸಕ್ತಿ ಕಾಯುವ ಉದ್ದೇಶದಿಂದ ಜಾರಿ ಮಾಡಲಾಗಿರುವ ಬಡ್ಸ್ ಹಾಗೂ ಕೆಪಿಐಡಿ ಕಾಯ್ದೆಗಳ ಜಾರಿ ಬಗ್ಗೆ ಪೊಲೀಸರಿಗೆ ತಿಳಿವಳಿಕೆ ಮೂಡಿಸಲಾಗಿದೆ. ಜಿಲ್ಲಾವಾರು ಕಾನೂನು ತಜ್ಞರಿಂದ ತರಬೇತಿ ಶಿಬಿರಗಳನ್ನು ನಡೆಸಿ ಕಾಯ್ದೆ ಪ್ರಯೋಗಕ್ಕೆ ಸೂಚಿಸಲಾಗಿದೆ' ಎಂದು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ರಿಯಲ್ ಎಸ್ಟೇಟ್ ಕಂಪನಿಗಳು, ಏಜೆಂಟರು ಹಾಗೂ ಇತರರಿಂದ ಹೂಡಿಕೆ ಹೆಸರಿನಲ್ಲಿ ವಂಚನೆಯಾದರೆ ಜನರು ಠಾಣೆಗೆ ದೂರು ನೀಡಬಹುದು. ದೂರಿನ ಅಂಶಗಳನ್ನು ಪರಿಶೀಲಿಸಿ ಪೊಲೀಸರು ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಿದ್ದಾರೆ' ಎಂದು ಹೇಳಿದರು.

ಹಣ ವಾಪಸು ಕೊಡಿಸಲು ಅವಕಾಶ: 'ಎರಡೂ ಕಾಯ್ದೆಗಳು, ಸಂತ್ರಸ್ತ ಠೇವಣಿದಾರರಿಗೆ ಹೆಚ್ಚು ಅನುಕೂಲವಾಗಿವೆ. ವಂಚನೆ ಮಾಡಿದ ಕಂಪನಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು, ಅದರ ಮಾರಾಟದಿಂದ ಬಂದ ಹಣದಲ್ಲಿ ಸಂತ್ರಸ್ತರಿಗೆ ಪರಿಹಾರ ಒದಗಿಸಲು ಕಾಯ್ದೆಗಳಲ್ಲಿ ಅವಕಾಶವಿದೆ' ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎಸ್. ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

'ಸಾರ್ವಜನಿಕರು ಎಚ್ಚರಿಕೆಯಿಂದ ವ್ಯವಹರಿಸಬೇಕು. ನೋಂದಣಿ ಆಗದಿರುವ ಹಾಗೂ ಆಮಿಷವೊಡ್ಡುವ ಸಂಸ್ಥೆಗಳಲ್ಲಿ ಯಾವುದೇ ಹಣ ಹೂಡಿಕೆ ಮಾಡಬಾರದು. ಅಂಥ ಸಂಸ್ಥೆಗಳು ಕಂಡುಬಂದಲ್ಲಿ ಸಂಬಂಧಪಟ್ಟ ಠಾಣೆಗೆ ದೂರು ನೀಡಬೇಕು' ಎಂದರು.

'ವಿಶೇಷ ನ್ಯಾಯಾಲಯ ಸ್ಥಾಪನೆ'

'ಬಡ್ಸ್ ಹಾಗೂ ಕೆಪಿಐಡಿ ಕಾಯ್ದೆಯಡಿ ದಾಖಲಾದ ಪ್ರಕರಣಗಳ ವಿಚಾರಣೆ ಬೆಂಗಳೂರಿನಲ್ಲಿ ನಾಲ್ಕು ವಿಶೇಷ ನ್ಯಾಯಾಲಯಗಳಲ್ಲಿ ನಡೆಯುತ್ತಿವೆ. ಎರಡೂ ಕಾಯ್ದೆಗಳ ವಿಚಾರಣೆಗೆ ಪ್ರತ್ಯೇಕ ವಿಶೇಷ ನ್ಯಾಯಾಲಯ ಸ್ಥಾಪಿಸಲು ಸರ್ಕಾರ ಈಗಾಗಲೇ ಅಧಿಸೂಚನೆ ಹೊರಡಿಸಿದೆ' ಎಂದು ಬಿ.ಎಸ್. ಪಾಟೀಲ ತಿಳಿಸಿದರು.

'ರಾಜ್ಯದ ಯಾವುದೇ ಭಾಗದಲ್ಲಿ ಪ್ರಕರಣ ದಾಖಲಾದರೆ, ಬೆಂಗಳೂರು ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಲಿದೆ. ನ್ಯಾಯಾಲಯದ ಅನುಮತಿಯಂತೆ ಸಕ್ಷಮ ಪ್ರಾಧಿಕಾರದ ಮೂಲಕ ಆರೋಪಿಗಳ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಕಾಯ್ದೆಯಲ್ಲಿ ಅವಕಾಶವಿದೆ' ಎಂದರು.

ಕಾಯ್ದೆ–ಶಿಕ್ಷೆ

- ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ–2014(ಕೆಪಿಐಡಿ): ಗರಿಷ್ಠ 6 ವರ್ಷಗಳ ಶಿಕ್ಷೆ ಮತ್ತು ಗರಿಷ್ಠ 5 ಲಕ್ಷದವರೆಗೆ ದಂಡ
- ಅನಿಯಂತ್ರಿತ ಉಳಿತಾಯ ಯೋಜನೆಗಳ ನಿಷೇಧ (ಬಿಯುಡಿಎಸ್) ಕಾಯ್ದೆ 2019(ಬಡ್ಸ್): ಗರಿಷ್ಠ 7 ವರ್ಷ ಶಿಕ್ಷೆ ಮತ್ತು ಗರಿಷ್ಠ 5 ಲಕ್ಷದವರೆಗೆ ದಂಡ

ಪ್ರಜಾವಾಣಿ ವಿಶೇಷ

ಸುದ್ದಿ 2 ನಿಮಿಷ

ಎರಡು ಕಡೆ ಎನ್‌ಐಎ ಶೋಧ

ಬೆಳ್ತಂಗಡಿ/ಮಡಿಕೇರಿ: ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅಧಿಕಾರಿಗಳ ತಂಡವು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ಹಾಗೂ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನಲ್ಲಿ ಸೋಮವಾರ ರಾತ್ರಿ ಶೋಧ ಕಾರ್ಯಾಚರಣೆ ನಡೆಸಿದೆ.

ಬೆಳ್ತಂಗಡಿಯ ಪಡಂಗಡಿ ಗ್ರಾಮದ ಪೊಯ್ಯಗುಡ್ಡೆ ನಿವಾಸಿಯಾಗಿರುವ ಕಾರು ಚಾಲಕ ನೌಷಾದ್ ಅವರ ಮನೆಯಲ್ಲಿ ಪರಿಶೀಲನೆ ನಡೆಸಿದ ಅಧಿಕಾರಿಗಳು ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ದಾಳಿ ವೇಳೆ ನೌಷಾದ್ ಮನೆಯಲ್ಲಿರಲಿಲ್ಲ ಎಂದು ಗೊತ್ತಾಗಿದೆ.

'ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ತನಿಖೆಯ ಮುಂದುವರಿದ ಭಾಗವಾಗಿ ಪಡಂಗಡಿಯಲ್ಲಿ ಶೋಧ ನಡೆಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಆದರೆ, ಎನ್‌ಐಎ ಇನ್ನೂ ಅಧಿಕೃತ ಮಾಹಿತಿ ನೀಡಿಲ್ಲ.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನಲ್ಲಿ ಎನ್‌ಐಎ ಅಧಿಕಾರಿಗಳು ಎರಡು ಕಡೆ ಶೋಧ ನಡೆಸಿದ್ದಾರೆ. ಈಚೆಗೆ ಬಂಧಿತರಾಗಿದ್ದ ಪಿಎಫ್‌ಐನ ಕೆಲವರು ನೀಡಿದ ಮಾಹಿತಿ ಮೇರೆಗೆ ಎನ್‌ಐಎ 'ಇಬ್ಬರ ಮನೆಗಳಲ್ಲಿ ತಪಾಸಣೆ ನಡೆಸಿತು. ಇಬ್ಬರು ಪಿಎಫ್‌ಐ ಪದಾಧಿಕಾರಿಗಳ ಮನೆಯಲ್ಲಿ ಮೊಬೈಲ್ ಫೋನ್‌ಗಳು ಹಾಗೂ ದಾಖಲಾತಿಗಳನ್ನು ವಶಕ್ಕೆ ತೆಗೆದುಕೊಂಡಿದೆ' ಎಂದು ಮೂಲಗಳು ತಿಳಿಸಿವೆ.

ಈ ಬಗ್ಗೆ ಪ್ರತಿಕ್ರಿಯಿಸಲು ಕೊಡಗು ಎಸ್ಪಿ ಕೆ.ರಾಮರಾಜನ್ ನಿರಾಕರಿಸಿದರು.

ಕೋಚಿಮುಲ್ ವಿಭಜನೆ ಇಲ್ಲ

ಚಿಕ್ಕಬಳ್ಳಾಪುರ: ಕೋಲಾರ–ಚಿಕ್ಕಬಳ್ಳಾಪುರ ಹಾಲು ಒಕ್ಕೂಟ (ಕೋಚಿಮುಲ್) ವಿಭಜನೆಯ ನಿರ್ಧಾರವನ್ನು ರಾಜ್ಯ ಸರ್ಕಾರ ವಾಪಸ್ ಪಡೆದಿದೆ. ಇದರಿಂದಾಗಿ ಚಿಕ್ಕಬಳ್ಳಾಪುರ ಹಾಲು ಒಕ್ಕೂಟ (ಚಿಮುಲ್) ರಚನೆಗೆ ತಡೆ ಬಿದ್ದಿದೆ.

ಬಿಜೆಪಿ ಸರ್ಕಾರವು ಕೋಚಿಮುಲ್ ವಿಭಜಿಸಿ ಚಿಮುಲ್ ರಚನೆಗೆ ಮುಂದಾಗಿತ್ತು. ಇದರ ವಿರುದ್ಧ ಕೋಚಿಮುಲ್ ನಿರ್ದೇಶಕರಾದ ಭರಣಿ ವೆಂಕಟೇಶ್, ಅಶ್ವತ್ಥನಾರಾಯಣ ಬಾಬು ನ್ಯಾಯಾಲಯದ ಮೊರೆ ಹೋಗಿದ್ದರು.

'ಚಿಕ್ಕಬಳ್ಳಾಪುರದ ಡೇರಿಯಲ್ಲಿ ಹಾಲಿನ ಪ್ಯಾಕೆಟ್ ತಯಾರಿಕೆ ಘಟಕವಿಲ್ಲ. ಹೊಸ ಒಕ್ಕೂಟ ಕಾರ್ಯಾಚರಣೆಗೆ ಜಾಗದ ಕೊರತೆಯೂ ಇದೆ. ಇದರಿಂದ ನಷ್ಟವಾಗುತ್ತದೆ' ಎಂದು ರಾಜ್ಯ ಸರ್ಕಾರವು ನ್ಯಾಯಾಲಯಕ್ಕೆ ತಿಳಿಸಿ ಒಕ್ಕೂಟ ವಿಭಜನೆಯ ಆದೇಶ ವಾಪಸ್ ಪಡೆದಿದೆ.

ಕೋಚಿಮುಲ್ ವಿಭಜನೆ ವಿವಾದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ರಾಜಕೀಯ ಜಿದ್ದಾಜಿದ್ದಿಗೆ ಕಾರಣವಾಗಿತ್ತು.

ಸರ್ಕಾರಿ ವೈದ್ಯರ ಖಾಸಗಿ ಕ್ಲಿನಿಕ್‌ಗೆ ಅನುಮತಿ: ಪುನರ್ ಪರಿಶೀಲನೆ

ಪ್ರಜಾವಾಣಿ ವಾರ್ತೆ

ದಿನೇಶ್ ಗುಂಡೂರಾವ್

ಮೈಸೂರು: 'ಸರ್ಕಾರಿ ವೈದ್ಯರು ಖಾಸಗಿಯಾಗಿ ಕ್ಲಿನಿಕ್ ನಡೆಸಲು ಅವಕಾಶ ನೀಡಿರುವುದನ್ನು ಪುನರ್ ಪರಿಶೀಲಿಸುತ್ತೇವೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಇಲ್ಲಿ ಮಂಗಳವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಈ ಹಿಂದೆ ಆರೋಗ್ಯ ಇಲಾಖೆಯಲ್ಲಿ ವೈದ್ಯರ ಕೊರತೆ ಇತ್ತು. ಆದ್ದರಿಂದ ಸಾರ್ವಜನಿಕರಿಗೆ ಸೇವೆ ಸಿಗಲೆಂಬ ಕಾರಣಕ್ಕೆ ವೈದ್ಯರು ಕ್ಲಿನಿಕ್ ನಡೆಸಲು ಸರ್ಕಾರವೇ ಅವಕಾಶ ಮಾಡಿಕೊಟ್ಟಿತ್ತು. ಸರ್ಕಾರಿ ವೈದ್ಯಾಧಿಕಾರಿಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಮಾತ್ರ ಸೇವೆ ಮಾಡಬೇಕು. ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವವರು ಮಾತ್ರ ಕ್ಲಿನಿಕ್ ನಡೆಸಲು ಈಗ ಅವಕಾಶ ಇದೆ. ಅದರಿಂದ ಆಗುತ್ತಿರುವ ಸಮಸ್ಯೆಗಳನ್ನು ಗಮನಿಸಿ ಪುನರ್ ಪರಿಶೀಲನೆಗೆ ಮುಂದಾಗಿದ್ದೇವೆ' ಎಂದು ತಿಳಿಸಿದರು.

'ಆರೋಗ್ಯ ಇಲಾಖೆಯಲ್ಲಿನ ಅರೆಕಾಲಿಕ ವೈದ್ಯರು ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಕೆಲಸ ಮಾಡುವುದಕ್ಕೆ ನಿರ್ಬಂಧ ಹೇರಲು ಚಿಂತನೆ ನಡೆಸಲಾಗಿದೆ' ಎಂದರು.

ಚಾಮರಾಜನಗರದ ಆಕ್ಸಿಜನ್ ದುರಂತದ ಬಗ್ಗೆ ಪ್ರತಿಕ್ರಿಯಿಸಿ, 'ಯಾವ ಅಂಶಗಳ ಆಧಾರದ ಮೇಲೆ ಮರು ತನಿಖೆಯಾಗಬೇಕು ಎಂಬ ಚಾರ್ಜ್‌ಫ್ರೇಮ್ ಸಿದ್ಧಪಡಿಸಲು ಉದ್ದೇಶಿಸಿದ್ದೇವೆ' ಎಂದರು.

'ನಮ್ಮ ಕ್ಲಿನಿಕ್'– ಸಮಯ ಬದಲಿಗೆ ಸೂಚನೆ: ಆರೋಗ್ಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಸಚಿವರು, 'ರಾಜ್ಯದಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ನಮ್ಮ ಕ್ಲಿನಿಕ್‌ಗಳನ್ನು ಇನ್ನು ಮುಂದೆ ಮಧ್ಯಾಹ್ನ 12ರಿಂದ ರಾತ್ರಿ 8ರವರೆಗೆ ತೆರೆಯಲು ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಿದರು.

'ಸದ್ಯ ಈ ಕ್ಲಿನಿಕ್‌ಗಳು ಬೆಳಿಗ್ಗೆ 9ರಿಂದ ಸಂಜೆ 4ವರೆಗೆ ಕಾರ್ಯನಿರ್ವಹಿಸುತ್ತಿವೆ. ನಗರ ಪ್ರದೇಶಗಳಲ್ಲಿ ದುಡಿಯುವ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಹೀಗಾಗಿ ಕನಿಷ್ಠ ನಗರಗಳಲ್ಲಾದರೂ ಸಂಜೆ ಹೊತ್ತು ಈ ಕ್ಲಿನಿಕ್ ತೆರೆಯಬೇಕು' ಎಂದು ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್‌ಗೆ ನಿರ್ದೇಶನ ನೀಡಿದರು.

ಕರಾವಳಿಯಲ್ಲಿ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡು, ಉತ್ತರ ಒಳನಾಡಿನ ಕೆಲವೆಡೆ ಸಾಧಾರಣ, ಕರಾವಳಿಯಲ್ಲಿ ಮಂಗಳವಾರ ಬಿರುಸಿನ ಮಳೆಯಾಗಿದೆ.

ಉಡುಪಿ ಜಿಲ್ಲೆಯ ಬ್ರಹ್ಮಾವರದ ಹನೇಹಳ್ಳಿ, ಕುಂದಾಪುರ ತಾಲ್ಲೂಕಿನ ಉಪ್ಪಿನಕುದ್ರು, ಕುಂಭಾಶಿ, ಗುಲ್ವಾಡಿಯಲ್ಲಿ ಭಾಗಶಃ ಮನೆಗಳು ಕುಸಿದಿವೆ. ಮಂಗಳೂರಿನಲ್ಲಿ ಎರಡು ಗಂಟೆಗಳ ಕಾಲಾ ಧಾರಾಕಾರ ಮಳೆ ಸುರಿದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಕೋಟೆಕಾರ್‌ನಲ್ಲಿ 9.1, ಹರೇಕಳ 8.3, ಕಿನ್ಯಾ 7.1, ಪಜೀರು 6.8, ಬಡಗಬೆಳ್ಳೂರಲ್ಲಿ 6.4 ಸೆಂ.ಮೀಟರ್ ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಭಟ್ಕಳದಲ್ಲಿ ಹಲವು ತಾಸುಗಳವರೆಗೆ ನಿರಂತರ ಮಳೆ ಸುರಿದಿದೆ. ಕುಮಟಾ, ಅಂಕೋಲಾ, ಹೊನ್ನಾವರ ಭಾಗದಲ್ಲಿ ಸಾಧಾರಣ ಮಳೆ ಆಗಿದೆ. ಮಡಿಕೇರಿ ನಗರದಲ್ಲಿ ಸಂಜೆಯ ನಂತರ ಧಾರಾಕಾರ ಮಳೆಯಾಗಿದೆ. ಬೀದರ್ ಜಿಲ್ಲೆಯ ಬಸವಕಲ್ಯಾಣ, ಹುಲಸೂರ, ಭಾಲ್ಕಿ ಹಾಗೂ ಔರಾದ್ ತಾಲ್ಲೂಕುಗಳಲ್ಲಿ ಗುಡುಗು ಸಹಿತ ಮಳೆಯಾಗಿದೆ.

ಕಾರವಾರದಲ್ಲಿ ಸುರಿದ ಮಳೆಯಲ್ಲೇ ವಾಹನ ಸವಾರರು ಸಂಚರಿಸಿದರು

ಉತ್ತರ ಕನ್ನಡಕ್ಕೆ 'ಯೆಲ್ಲೊ ಅಲರ್ಟ್'

ಬೆಂಗಳೂರು: ಕರಾವಳಿಯಲ್ಲಿ ಮಳೆ ಮುಂದುವರಿಯಲಿದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಿ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ. ಈ ಜಿಲ್ಲೆಗೆ ಜುಲೈ 1ರ ತನಕ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಮೀನುಗಾರರು ಮೀನುಗಾರಿಕೆ ನಡೆಸಲು ಸಮುದ್ರಕ್ಕೆ ಇಳಿಯದಂತೆ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಸೂಚಿಸಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಕಳೆದ 24 ಗಂಟೆಯಲ್ಲಿ ಬೀದರ್‌ನ ಬಸವಕಲ್ಯಾಣದಲ್ಲಿ 5, ದಕ್ಷಿಣ ಕನ್ನಡ ಮಂಗಳೂರು, ಉಡುಪಿಯ ಕೋಟ, ಕುಂದಾಪುರ, ಉತ್ತರ ಕನ್ನಡದ ಅಂಕೋಲ, ಕ್ಯಾಸಲ್ ರಾಕ್ ಹಾಗೂ ಚಿಕ್ಕಮಗಳೂರಿನ ಕೊಟ್ಟಿಗೆಹಾರದಲ್ಲಿ ತಲಾ 3 ಸೆಂ.ಮೀ ಮಳೆ ಸುರಿದಿದೆ.

'ಕೆಐಎಡಿಬಿ ಪ್ರಕರಣ: ಸಮಗ್ರ ವರದಿ ಕೊಡಿ'

ಬೆಂಗಳೂರು: 'ಕರ್ನಾಟಕ ಪ್ರದೇಶ ಕೈಗಾರಿಕಾಭಿವೃದ್ಧಿ ಮಂಡಳಿಯಿಂದ (ಕೆಐಎಡಿಬಿ) ಹಂಚಿಕೆಯಾಗಿರುವ ನಿವೇಶನಗಳಿಗೆ ಸಂಬಂಧಿಸಿದ ಕೋರ್ಟ್ ಪ್ರಕರಣಗಳ ಸಮಗ್ರ ಮಾಹಿತಿಯನ್ನು ಜುಲೈ 17ರ ವೇಳೆಗೆ ಸಲ್ಲಿಸಬೇಕು' ಎಂದು ಇಲಾಖೆಯ ಅಧಿಕಾರಿಗಳಿಗೆ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಸೂಚನೆ ನೀಡಿದ್ದಾರೆ.

ಇಲಾಖೆಯ ಅಧಿಕಾರಿಗಳ ಜೊತೆ ಮಂಗಳವಾರ ಸಭೆ ನಡೆಸಿದ ಅವರು, 'ಕೆಐಎಡಿಬಿ ನಿವೇಶನ ಹಂಚಿಕೆ ಸಂಬಂಧ ಕಳೆದ 4-5 ವರ್ಷಗಳಲ್ಲಿ 1,748 ಮೊಕದ್ದಮೆ ದಾಖಲಾಗಿವೆ. ಈ ಪೈಕಿ 921 ಪ್ರಕರಣಗಳ ವಿಚಾರಣೆ ನಡೆಯುತ್ತಿದೆ. 762 ಪ್ರಕರಣಗಳಲ್ಲಿ ಸರ್ಕಾರದ ಪರ ಆದೇಶ ಬಂದಿದೆ. ಆದರೆ, ಸರ್ಕಾರದ ಹಿತಾಸಕ್ತಿ ಇರುವ ಕೆಲವು ಪ್ರಕರಣಗಳಲ್ಲಿ ಮೇಲ್ಮನವಿಯನ್ನೇ ಸಲ್ಲಿಸಿಲ್ಲ' ಎಂದರು.

'ಎಲ್ಲ ಪ್ರಕರಣಗಳನ್ನು ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಕಾನೂನು ಇಲಾಖೆಯ ಗಮನಕ್ಕೆ ತಂದು, ಸಲಹೆ ಪಡೆಯಬೇಕು. ಜೊತೆಗೆ ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯವನ್ನೂ ಪಡೆಯಬೇಕು' ಎಂದರು.

ಮುತಾಲಿಕ್ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: 'ಗೋಹತ್ಯೆ ಮಾಡಿದವರ ಕೈ ಕಡಿಯಬೇಕು ಎಂದು ಪ್ರಚೋದನಾಕಾರಿ ಭಾಷಣ ಮಾಡಿದ್ದಾರೆ' ಎಂಬ ಆರೋಪದ ಮೇಲೆ ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಆರು ವರ್ಷಗಳ ಹಿಂದೆ ವಿಜಯಪುರ ಜಿಲ್ಲೆಯ ಬಬಲೇಶ್ವರ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ಈ ಪ್ರಕರಣ ದಾಖಲಾಗಿತ್ತು.

ಪ್ರಕರಣ ರದ್ದು ಕೋರಿ ಪ್ರಮೋದ್ ಮುತಾಲಿಕ್ ಸಲ್ಲಿಸಿದ್ದ ಅರ್ಜಿಯನ್ನು ಕಲಬುರಗಿ ಹೈಕೋರ್ಟ್ ಪೀಠದಲ್ಲಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಅರಕಲಗೂಡು

ಕೋರ್ಟ್ ನೋಟೀಸು

ಅರಕಲಗೂಡಿನ ಸೀನಿಯರ್ ಸಿವಿಲ್ ಜಡ್ಜ್ ಮತ್ತು ಕಾರ್ಮಿಕ ನಷ್ಟ ಪರಿಹಾರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಮಿಸ್ ಅರ್ಜಿ ನಂ. 22/2022 (ಇ.ಸಿ.ಎ.14/2014) **ಅರ್ಜಿದಾರರು:** 1] ಎಕ್ಸಿಕ್ಯೂಟಿವ್ ಇಂಜಿನಿಯರ್, ಹೆಚ್.ಆರ್.ಬಿ. ಹೆಚ್.ಎಲ್.ಸಿ. ಡಿವಿಜನ್ ಹಾಲಿ ಕಾವೇರಿ ನೀರಾವರಿ ನಿಗಮ ನಿಯಮಿತ ಗೊರೂರು, ಮತ್ತು ಇನ್ನೊಬ್ಬರು. **ವಿರುದ್ಧ ಎದುರುದಾರರು:** 1] ಹರೀಶ ಬಿನ್ ಚಿಕ್ಕಶೆಟ್ಟಿ, ಸುಮಾರು 34 ವರ್ಷ, ಬೆಟ್ಟದಹಳ್ಳಿ ಗ್ರಾಮ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ, ಮತ್ತು ಇತರರು. **ರೆಸ್ಪಾಂಡೆಂಟರುಗಳು:** 2] ಹೇಮಾವತಿ ಬಿನ್ ಲೇಟ್ ಪಟ್ಟಾಭಿರಾಮುಲು, ಸುಮಾರು 68 ವರ್ಷ, 3] ಪದ್ಮನಾಭ ಬಿನ್ ಲೇಟ್ ಪಟ್ಟಾಭಿರಾಮುಲು, ಸುಮಾರು 46 ವರ್ಷ 4] ಸತೀಶ ಬಿನ್ ಲೇಟ್ ಪಟ್ಟಾಭಿರಾಮುಲು ಸುಮಾರು 44 ವರ್ಷ. 5] ಡಾ.ಶಾಂತಿ ಬಿನ್ ಲೇಟ್ ಪಟ್ಟಾಭಿರಾಮುಲು ಸುಮಾರು 41 ವರ್ಷ, 2 ರಿಂದ 5 ರವರ ವಾಸ ಆಶಾಪುರ್ ರಸ್ತೆ, ಗಂಗಾನಗರ, ರಾಯಚೂರು ಟೌನ್, ರಾಯಚೂರು ಜಿಲ್ಲೆ. **ಕೋರ್ಟ್ ನೋಟೀಸು** ಮೇಲ್ಕಂಡ ಅರ್ಜಿದಾರರು, ತಮ್ಮ ವಿರುದ್ಧ 1ನೇ ಎದುರುದಾರರು ಮೇಲ್ಕಂಡ ನ್ಯಾಯಾಲಯದಲ್ಲಿ E.C.A. No. 14/2014 ರಲ್ಲಿ ದಿನಾಂಕ 13/3/2020 ರಲ್ಲಿ ತೀರ್ಪನ್ನು ಪಡೆದಿದ್ದು, ಈ ಮೇರೆಗೆ ಸದರಿ ತೀರ್ಪನ್ನು ರದ್ದುಗೊಳಿಸಿ ತಮಗೆ 1ನೇ ಎದುರುದಾರರು ಹೂಡಿದ್ದ ಸದರಿ E.C.A. No. 14/2014 ರಲ್ಲಿ ತಮ್ಮ ತಕರಾರನ್ನು ಸಲ್ಲಿಸಿ ಕೇಸನ್ನು ನಡೆಸಲು ಅನುಮತಿಯನ್ನು ನೀಡಬೇಕೆಂದು ಕೋರಿ ಮೇಲ್ಕಂಡ ಮಿಸ್ ಅರ್ಜಿಯನ್ನು ಸಲ್ಲಿಸಿದ್ದು, ಈ ಮೇರೆಗೆ ಸದರಿ ಪ್ರಕರಣದಲ್ಲಿ ಮೇಲ್ಕಂಡ ನೀವುಗಳು ಪಕ್ಷಕಾರರಾಗಿದ್ದು, ನಿಮ್ಮಗಳಿಗೆ ನ್ಯಾಯಾಲಯದಿಂದ ಅನೇಕ ಬಾರಿ ನೋಟೀಸನ್ನು ಕಳುಹಿಸಿದ್ದರೂ ಸಹ ಜಾರಿಯಾಗದ ಕಾರಣ ನೋಂದಾಯಿತ ಅಂಚೆ ದ್ವಾರದ ಮೂಲಕ ನೋಟೀಸನ್ನು ಕಳುಹಿಸಿದ್ದು ಸದರಿ ನೋಟೀಸು ಸಹ ಜಾರಿಯಾಗದೆ ವಾಪಸ್ಸು ಬಂದಿರುವ ಕಾರಣ ನಿಮ್ಮಗಳಿಗೆ ನೋಟೀಸನ್ನು ದಿನ ಪತ್ರಿಕೆಯಲ್ಲಿ ಪ್ರಕಟಿಸುವುದರ ಮೂಲಕ ಜಾರಿ ಮಾಡಲು ಪ್ರಕಟಿಸಿರುತ್ತೆ ಸದರಿ ಮೇಲ್ಕಂಡ ಕೇಸು ದಿನಾಂಕ: 24/07/2023 ರಂದು ಇರುತ್ತದೆ ಆದ ಕಾರಣ ಈ ಮೂಲಕ ಮೇಲ್ಕಂಡ ನಿಮ್ಮಗಳಿಗೆ ತಿಳಿಯಪಡಿಸುವುದು ಏನೆಂದರೆ ಮೇಲ್ಕಂಡ ನೀವುಗಳು ನಿಮ್ಮ ತಕರಾರು ಏನಾದರು ಇದ್ದಲ್ಲಿ ಮೇಲ್ಕಂಡ ದಿನಾಂಕದಂದು ಪೂರ್ವಾಹ್ನ 11 ಗಂಟೆಗೆ ಸರಿಯಾಗಿ ನೀವುಗಳೆಆಗಲಿ ಅಥವಾ ನಿಮ್ಮಗಳ ಪರ ವಕೀಲರಾಗಲೀ ಕೋರ್ಟಿಗೆ ಹಾಜರಾಗಿ ನಿಮ್ಮಗಳ ತಕರಾರು ಸಲ್ಲಿಸುವುದು, ತಪ್ಪಿದಲ್ಲಿ ನಿಮ್ಮಗಳ ತಕರಾರು ಇಲ್ಲವೆಂದು ಪರಿಗಣಿಸಿ ಮುಂದಿನ ನಡವಳಿಕೆಗಳನ್ನು ನಡೆಸಲಾಗುವುದೆಂದು ತಿಳಿಯುವುದು. **ಷೆಡ್ಯೂಲ್:** E.C.A. No. 14/2014 ರಲ್ಲಿ ದಿನಾಂಕ:13/3/2020 ರಂದು ಆಗಿರುವ ತೀರ್ಪನ್ನು ರದ್ದುಗೊಳಿಸುವಂತೆ ಕೋರಿ ಈ ಮಿಸ್ ಪಿಟಿಷನ್ ಸಲ್ಲಿಸಿರುತ್ತದೆ. ನ್ಯಾಯಾಲಯದ ಮೊಹರಿನೊಂದಿಗೆ ಮತ್ತು ನನ್ನ ದಸ್ತಕತ್ತಿನೊಂದಿಗೆ 24/06/2023 ತಾರೀಖಿನಂದು ನೀಡಲಾಗಿದೆ. ಸಹಿ/–ವಕೀಲರು ಅರ್ಜಿದಾರರ ಪರ, ಅರಕಲಗೂಡು, ದಿನಾಂಕ: 24/06/2023

ನ್ಯಾಯಾಲಯದ ಆದೇಶದ ಮೇರೆ

ಸಹಿ/–

ಶಿರಸ್ತೇದಾರ್, ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಅರಕಲಗೂಡು.

ವಾಸಾಸಂಇ/ಹಿಸನಿ/ಹಾಸನ/100/ಕೆಎಸ್‌ಎಂಸಿಎ/100/2023–24

ಬಿಟ್ ಕಾಯಿನ್: ಎಸ್‌ಐಟಿ ರಚನೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ' ಎನ್ನಲಾದ ಬಹುಕೋಟಿ ಬಿಟ್ ಕಾಯಿನ್ ಪ್ರಕರಣದ ತನಿಖೆಗೆ ಪರಿಣಿತ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲು ತೆರೆಮರೆಯಲ್ಲಿ ಸಿದ್ಧತೆ ಆರಂಭವಾಗಿದೆ.

'ಕಾಟನ್‌ಪೇಟೆ ಠಾಣೆಯಲ್ಲಿ ದಾಖಲಾಗಿರುವ ಬಿಟ್ ಕಾಯಿನ್ ಪ್ರಕರಣದ ಮರು ತನಿಖೆ ನಡೆಸಿ' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್, ಈಗಾಗಲೇ ಸಿಐಡಿ ಡಿಜಿಪಿ ಎಂ.ಎ. ಸಲೀಂ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಅಲೋಕ್ ಮೋಹನ್ ಅವರಿಗೆ ಪತ್ರ ಬರೆದಿದ್ದಾರೆ.

'ಪತ್ರ ಆಧರಿಸಿ ಗೃಹ ಇಲಾಖೆಗೆ ಪ್ರಸ್ತಾವ ಸಲ್ಲಿಸಲು ಡಿಜಿ– ಐಜಿಪಿ, ಸಿದ್ಧತೆ ನಡೆಸುತ್ತಿದ್ದಾರೆ. ಪ್ರಸ್ತಾವ ಸಲ್ಲಿಕೆಯಾದ ನಂತರ ಗೃಹ ಇಲಾಖೆಯಿಂದ ಎಸ್‌ಐಟಿ ರಚನೆಗೆ ಆದೇಶ ಹೊರಬೀಳಲಿದೆ. ಎಸ್‌ಐಟಿಗೆ ಯಾವೆಲ್ಲ ಅಧಿಕಾರಿಗಳು ಸೂಕ್ತ? ಎಂಬುದರ ಬಗ್ಗೆ ಹಿರಿಯ ಅಧಿಕಾರಿಗಳು ಈಗಾಗಲೇ ಚಿಂತನೆ ಆರಂಭಿಸಿದ್ದಾರೆ.

ಆರೋಪ– ಪ್ರತ್ಯಾರೋಪ: ಬಿಟ್ ಕಾಯಿನ್ ಪ್ರಕರಣದ ಬಗ್ಗೆ ಸಿಸಿಬಿ ಹಾಗೂ ಸಿಐಡಿ ಎರಡೂ ಕಡೆ ದೂರುಗಳು ದಾಖಲಾಗಿದ್ದವು. 'ಸೂಕ್ತ ತನಿಖೆ ಮಾಡಿಲ್ಲ' ಎಂಬುದಾಗಿ ಸಿಐಡಿ, ಸಿಸಿಬಿ ಮೇಲೆ ಆರೋಪ ಹೊರಿಸಿತ್ತು. ಅದಕ್ಕೆ ಪ್ರತಿಕ್ರಿಯಿಸಿದ ಸಿಸಿಬಿ, 'ಎಲ್ಲವೂ ಕಾನೂನಿನಡಿ ನಡೆದಿದೆ' ಎಂದಿತ್ತು. ಪ್ರಕರಣದಲ್ಲಿ ಆರೋಪ–ಪ್ರತ್ಯಾರೋಪ ಇಂದಿಗೂ ಮುಂದುವರಿದಿದೆ.

ಇದರ ಬೆನ್ನಲ್ಲೇ ನಗರದ ಹಿಂದಿನ ಕಮಿಷನರ್ ಕಮಲ್ ಪಂತ್ ಸಹ ಡಿಜಿ–ಐಜಿಪಿಗೆ ಪತ್ರ ಬರೆದಿರುವುದಾಗಿ ಗೊತ್ತಾಗಿದೆ.

'ನನ್ನ ಅಧಿಕಾರ ಅವಧಿಯಲ್ಲಿ ಸಿಸಿಬಿ ಉತ್ತಮವಾಗಿ ಕೆಲಸ ಮಾಡಿದೆ. ಬಿಟ್ ಕಾಯಿನ್ ಪ್ರಕರಣದ ತನಿಖೆಯೂ ಪಾರದರ್ಶಕವಾಗಿ ನಡೆದಿದೆ. ಸಿಸಿಬಿ ಹಾಗೂ ಸಿಐಡಿ ಎರಡೂ ಕಡೆ ಬಿಟ್ ಕಾಯಿನ್ ಸಂಬಂಧ ಪ್ರಕರಣಗಳು ದಾಖಲಾಗಿವೆ. ಆದರೆ, ವೃತ್ತಿ ವೈಷಮ್ಯದಿಂದಾಗಿ ಕೆಲ ಆರೋಪಗಳನ್ನು ಮಾಡಲಾಗುತ್ತಿದೆ. ತನಿಖೆ ಮಾಡುವುದಾದರೆ, ಸ್ವತಂತ್ರ ತನಿಖಾ ತಂಡದಿಂದ ಮಾಡಿಸಿ' ಎಂದು ಪತ್ರದಲ್ಲಿ ತಿಳಿಸಿರುವುದಾಗಿ ಮೂಲಗಳು ಹೇಳಿವೆ.

'ಮೊಹಬ್ಬತ್ ಕಿ ದುಕಾನ್' ವಿಡಿಯೊ ಹಂಚಿಕೊಂಡ ಕಾಂಗ್ರೆಸ್

ನವದೆಹಲಿ (ಪಿಟಿಐ): ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಒಗ್ಗಟ್ಟಾಗಲು ಬಿಜೆಪಿ ವಿರೋಧಿ ಪಕ್ಷಗಳು ಸರಣಿ ಸಭೆಗಳನ್ನು ನಡೆಸುತ್ತಿವೆ. ಇನ್ನೊಂದೆಡೆ, ಕಾಂಗ್ರೆಸ್ ಪಕ್ಷವು ಮಂಗಳವಾರ 'ಮೊಹಬ್ಬತ್ ಕಿ ದುಕಾನ್' ಹೆಸರಿನ ಆ್ಯನಿಮೇಷನ್ ವಿಡಿಯೊವೊಂದನ್ನು ತನ್ನ ಟ್ವಿಟರ್ ಖಾತೆಯಲ್ಲಿ ಹಂಚಿಕೊಳ್ಳುವ ಮೂಲಕ ಚುನಾವಣಾ ಪ್ರಚಾರವನ್ನು ರಂಗೇರಿಸುವ ಸೂಚನೆ ನೀಡಿದೆ.

'ನಫ್ರತ್ ಕಾ ಬಜಾರ್' (ದ್ವೇಷದ ಮಾರುಕಟ್ಟೆ) ಎಂಬ ಫಲಕವನ್ನು ರಾಹುಲ್ ಗಾಂಧಿ ಅವರು ತೆಗೆದು ಹಾಕಿ 'ಮೊಹಬ್ಬತ್ ಕಿ ದುಕಾನ್' (ಪ್ರೀತಿಯ ಅಂಗಡಿ) ಎಂಬ ಫಲಕವನ್ನು ಅಳವಡಿಸುವ ದೃಶ್ಯಗಳು ಈ ವಿಡಿಯೊದಲ್ಲಿವೆ.

ಆದರೆ, ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆ ಕುರಿತು ಈ ವಿಡಿಯೊದಲ್ಲಿ ಎಲ್ಲಿಯೂ ಪ್ರಸ್ತಾಪ ಇಲ್ಲ.

ನಿರ್ದೇಶಕ ಸಿ.ವಿ.ಶಿವಶಂಕರ್ ನಿಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕನ್ನಡ ಚಿತ್ರರಂಗದ ನಿರ್ದೇಶಕ, ಗೀತಸಾಹಿತಿ ಸಿ.ವಿ. ಶಿವಶಂಕರ್(90) ಅವರು ಮಂಗಳವಾರ ಮಧ್ಯಾಹ್ನ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ. ಬುಧವಾರ ಬೆಳಿಗ್ಗೆ ಅಂತ್ಯಕ್ರಿಯೆ ನಡೆಯಲಿದೆ.

ತುಮಕೂರಿನ ಗುಬ್ಬಿ ತಾಲ್ಲೂಕಿ ಚಿಟ್ಟನಹಳ್ಳಿಯಲ್ಲಿ ಜನಿಸಿದ ಇವರು ಬಾಲ್ಯದಲ್ಲೇ ನಾಟಕದ ಆಸಕ್ತಿ ಹುಟ್ಟಿಸಿಕೊಂಡವರು. ರಂಗಭೂಮಿಗೆ ಪ್ರವೇಶಿಸಿ, 1954ರಲ್ಲಿ ವರನಟ ಡಾ.ರಾಜ್‌ಕುಮಾರ್ ಅವರ ಜೊತೆಗೇ ಚಿತ್ರರಂಗಕ್ಕೆ ಹೆಜ್ಜೆ ಇಟ್ಟವರು ಶಿವಶಂಕರ್. ರಾಜ್‌ಕುಮಾರ್ ಅವರ ಜೊತೆ ರಂಗಭೂಮಿಯಿಂದಲೇ ಇವರ ಒಡನಾಟವಿತ್ತು. ಹುಣಸೂರು ಕೃಷ್ಣಮೂರ್ತಿ ಅವರು ನಿರ್ದೇಶಿಸಿದ್ದ ಶ್ರೀಕೃಷ್ಣಗಾರುಡಿ ಸಿನಿಮಾದಲ್ಲಿ ರಾಜ್‌ಕುಮಾರ್ ಅವರ ಜೊತೆ ತೆರೆಹಂಚಿಕೊಂಡು, 'ಘಟಾಸುರ' ಎಂಬ ಪಾತ್ರದ ಮುಖಾಂತರ ಸಿನಿಮಾ ಪಯಣವನ್ನು ಶಿವಶಂಕರ್ ಆರಂಭಿಸಿದ್ದರು.

'ಸ್ಕೂಲ್ ಮಾಸ್ಟರ್', 'ರತ್ನಗಿರಿ ರಹಸ್ಯ', 'ಶ್ರೀ ಕೃಷ್ಣಗಾರುಡಿ', 'ಧರ್ಮವಿಜಯ', 'ಭಕ್ತವಿಜಯ', 'ರತ್ನಮಂಜರಿ', 'ವೀರಸಂಕಲ್ಪ', 'ಆಶಾಸುಂದರಿ' ಹೀಗೆ ಹಲವು ಚಿತ್ರಗಳಲ್ಲಿ ಇವರು ಪಾತ್ರನಿರ್ವಹಿಸಿದ್ದಾರೆ. ಜೊತೆಗೆ ಹಲವು ಸಿನಿಮಾ ಗೀತೆಗಳಿಗೆ ಸಾಹಿತ್ಯ ರಚನೆ ಮಾಡಿದ್ದಾರೆ. ತಾಯಿಯ ಮಡಿಲಲ್ಲಿ ಚಿತ್ರದ 'ಕನ್ನಡದ ರವಿ ಮೂಡಿ ಬಂದ..', 'ಸಿರಿವಂತನಾದರೂ ಕನ್ನಡನಾಡಲ್ಲೆ ಮೆರೆವೆ..', 'ಬೆಳೆದಿದೆ ನೋಡ ಬೆಂಗಳೂರು ನಗರ..' ಇವು ಅವರು ಬರೆದ ಕೆಲ ಖ್ಯಾತ ಹಾಡುಗಳು.

ಹಿರಿಯ ನಿರ್ದೇಶಕರ ಬಳಿ ಸಹನಿರ್ದೇಶಕನಾಗಿ ದುಡಿದಿದ್ದ ಶಿವಶಂಕರ್ ಅವರು 'ಮನೆ ಕಟ್ಟಿ ನೋಡು' ಚಿತ್ರವನ್ನು ನಿರ್ದೇಶಿಸಿ, ನಿರ್ಮಾಣ ಮಾಡಿದ್ದರು. 'ಪದವೀಧರ', 'ನಮ್ಮ ಊರು', 'ಮಹಡಿಯ ಮನೆ', 'ಹೊಯ್ಸಳ', 'ಮಹಾತಪಸ್ವಿ', 'ವೀರಮಹಾದೇವ', 'ಕನ್ನಡ ಕುವರ' ಮುಂತಾದ ಚಿತ್ರಗಳನ್ನು ಇವರು ನಿರ್ದೇಶಿಸಿದ್ದಾರೆ. 1991ರಲ್ಲಿ ಕರ್ನಾಟಕ ರಾಜ್ಯಪ್ರಶಸ್ತಿ ಹಾಗೂ 1994ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಇವರಿಗೆ ಸಂದಿವೆ.

ಕರ್ನಾಟಕ ಸರ್ಕಾರ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿಭಾಗ ವಿಜಯಪುರ

ಕಾರ್ಯಪಾಲಕ ಅಭಿಯಂತರರ ಕಛೇರಿ, ಬಡಿಕಮಾನ ರಸ್ತೆ ವಿಜಯಪುರ – 586101

ದೂರವಾಣಿ ಸಂ: 08352–253641, 251641, ಇ–ಮೇಲ್: kuwsdbeebjp@yahoo.com

ಅಲ್ಪಾವಧಿ ಕೋಟೆಷನ್ ಪ್ರಕಟಣೆ

ಈ ಕೆಳಗೆ ನಮೂದಿಸಿರುವ ಕಾಮಗಾರಿ ನಿರ್ವಹಿಸಲು ಆಸಕ್ತಿ ಹೊಂದಿದ ಅರ್ಹ ಅನುಭವಿ ಸಂವೇದಕರು/ ನೊಂದಾಯಿತ ಸಂಸ್ಥೆಗಳು (ರಿಜಿಸ್ಟರ್ ಫರ್ಮ) ರವರಿಂದ ಮೊಹರಾದ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವದು. ಸದರಿ ಸಂಸ್ಥೆ/ ಸಂವೇದಕರು ಅಗತ್ಯ ಮಾನವ ಸಂಪನ್ಮೂಲ ಕಾಮಗಾರಿಗಳನ್ನು ಈ ಮುಂಚೆ ತೃಪ್ತಿಕರವಾಗಿ ನಿರ್ವಹಿಸಿದ ಅನುಭವ ಹೊಂದಿರಬೇಕು.

ಸಂಖ್ಯೆ:ಕಜಮ–ವಿಜಯ/ಕಾಅ/ತಾಂ.ಶಾ/ಕ.ಆ/2023–24/886 ದಿನಾಂಕ: 23.06.2023

1) ಸನ್ 2023–24 ನೇ ಸಾಲಿನ ಕಛೇರಿಯ ಅಯವ್ಯದ ಅಡಿಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರು ಕನನೀಸ ಮತ್ತು ಒಚ ಮಂಡಳಿ ಉಪ–ವಿಭಾಗ ಬಸವನ ಬಾಗೇವಾಡಿ ಕಛೇರಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪದವಿಧರ ಇಂಜಿನೀಯರರ ಜುಲೈದಿಂದ ಡಿಸೆಂಬರ–2023 ನೇ ತಿಂಗಳ ವರೆಗಿನ **ವೇತನ ಮೊತ್ತ ರೂ. 4,20,000/–. ಇ.ಎಂ.ಡಿ ಮೊತ್ತ ರೂ. 10,500/–(ಡಿ.ಡಿ ರೂಪದಲ್ಲಿ ಮಾತ್ರ). ಖಾಲಿ ಟೆಂಡರ್ ಫಾರ್ಮ ಮೊತ್ತ ರೂ. 2000/–(ಡಿ.ಡಿ. ರೂಪದಲ್ಲಿ ಮಾತ್ರ). ಕೆಲಸದ ಅವಧಿ. 6 ತಿಂಗಳು.**

ಸಂಖ್ಯೆ:ಕಜಮ–ವಿಜಯ/ಕಾಅ/ತಾಂ.ಶಾ/ಕ.ಆ/2023–24/887 ದಿನಾಂಕ: 23.06.2023

1) ಸನ್ 2023–24 ನೇ ಸಾಲಿನ ಕಛೇರಿಯ ಅಯವ್ಯದ ಅಡಿಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರು ಕನನೀಸ ಮತ್ತು ಒಚ ಮಂಡಳಿ ಉಪ–ವಿಭಾಗ ಬಸವನ ಬಾಗೇವಾಡಿ ಕಛೇರಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್ ಮತ್ತು ವಾಹನ ಚಾಲಕರ ಜುಲೈದಿಂದ ಡಿಸೆಂಬರ–2023 ನೇ ತಿಂಗಳ ವರೆಗಿನ **ವೇತನ ಮೊತ್ತ ರೂ. 2,93,529/–. ಇ.ಎಂ.ಡಿ ಮೊತ್ತ ರೂ. 7,400/–(ಡಿ.ಡಿ ರೂಪದಲ್ಲಿ ಮಾತ್ರ). ಖಾಲಿ ಟೆಂಡರ್ ಫಾರ್ಮ ಮೊತ್ತ ರೂ. 2000/–(ಡಿ.ಡಿ. ರೂಪದಲ್ಲಿ ಮಾತ್ರ). ಕೆಲಸದ ಅವಧಿ. 6 ತಿಂಗಳು.**

1) ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 26.06.2023 ರಿಂದ 30.06.2023** ರಂದು ಸಾಯಂಕಾಲ 5.30 ಗಂಟೆಯ ವರೆಗೆ.
2) ಖಾಲಿ ಟೆಂಡರ್‌ಗಳನ್ನು ಒದಗಿಸುವ **ದಿನಾಂಕ: 01.07.2023 ರಿಂದ 03.07.2023** ರಂದು ಸಾಯಂಕಾಲ 5.30 ಗಂಟೆಯವರೆಗೆ.
3) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 04.07.2023** ಸಾಯಂಕಾಲ 4.00 ಗಂಟೆಯವರೆಗೆ.
4) ಭರ್ತಿ ಮಾಡಿದ ಟೆಂಡರ್‌ನ್ನು ತೆರೆಯುವ **ದಿನಾಂಕ: 04.07.2023** ಸಾಯಂಕಾಲ 4.30 ರ ನಂತರ ಅಥವಾ ಬೇರೆ ದಿನಾಂಕ ನಿಗದಿಪಡಿಸಿದಂತೆ.

ಷರತ್ತುಗಳು: 1) ಭಾಗವಹಿಸಿದ ಸಂವೇದಕರು ಅಥವಾ ನೋಂದಾಯಿತ ಸಂಸ್ಥೆಯವರು ಅಗತ್ಯ ಮಾನವ ಸಂಪನ್ಮೂಲ ಕಾಮಗಾರಿಗಳನ್ನು ಸರಕಾರಿ/ಸರಕಾರಿ ಸ್ವಾಮ್ಯದ ಇಲಾಖೆಗಳಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿದ ಬಗ್ಗೆ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು. 2) ಜಿ.ಎಸ್.ಟಿಯನ್ನು ಟೆಂಡರ್ ಮೊತ್ತಕ್ಕೆ ಪ್ರತ್ಯೇಕವಾಗಿ ನೀಡಲಾಗುವುದು / ಸರ್ಕಾರದ ಪ್ರಸ್ತುತ ನಿಯಮಾವಳಿಗಳ ಪ್ರಕಾರ ಕ್ರಮಕೈಗೊಳ್ಳಲಾಗುವುದು. 3) ಭಾಗವಹಿಸುವ ಸಂವೇದಕರು/ಗುತ್ತಿಗೆದಾರರು ಮಾನ್ಯವಿರುವ ನೋಂದಣಿ ಪ್ರಮಾಣ ಪತ್ರವನ್ನು ಟೆಂಟರ್ ಬುಕಲೆಟ್‌ನೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕು. 4) ಯಾವುದೇ ಕಾರಣ ನೀಡದೇಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ

ಸಹಿ/– ಕಾರ್ಯಪಾಲಕ ಅಭಿಯಂತರು,
ಕ.ನ.ನೀ.ಸ ಮತ್ತು ಒ.ಚ. ಮಂಡಳಿ, ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/46/ಕೆಎಸ್‌ಎಂಸಿಎ/2023–24

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

MESCOM

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಾರ್ಪೊರೇಟ್ ಕಚೇರಿ, "ಮೆಸ್ಕಾಂ ಭವನ", ಬಿಜೈ, ಮಂಗಳೂರು–575004

ದೂರವಾಣಿ: 0824–2885795 CIN: U40109 KA 2002 SGC 030425

ಕ್ರಮ ಸಂಖ್ಯೆ: MESCOM/PROC/PURC/126/2022-PROC ದಿನಾಂಕ: 27.06.2023

ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್ಮೆಂಟ್ ವಿಧಾನದಲ್ಲಿ ಮಾತ್ರ)

ಮ.ವಿ.ಸ.ಕಂ ಯು ಈ ಕೆಳಗಿನ ಸಾಮಾಗ್ರಿಯ ಖರೀದಿಗಾಗಿ ಅಲ್ಪಾವಧಿ ಟೆಂಡರನ್ನು ಆಹ್ವಾನಿಸುತ್ತದೆ.

ಟೆಂಡರು ಸಂಖ್ಯೆ	ಖರೀದಿಸಲು ಉದ್ದೇಶಿಸಿರುವ ಸಾಮಾಗ್ರಿಯ ವಿವರ	ಪ್ರಮಾಣ
MESCOM/2023-24/ IND0001	ತಾಂತ್ರಿಕ ಗೊತ್ತುಪಾಡುಗಳನ್ವಯ ಸಮ ವಸ್ತ್ರಗಳು	29,696.10 ಮೀಟರ್
MESCOM/2023-24/ IND0002	ತಾಂತ್ರಿಕ ಗೊತ್ತುಪಾಡುಗಳನ್ವಯ ಸೇಫ್ಟಿ ಶೂಗಳು	4,200 ಜೊತೆಗಳು

ಆಸಕ್ತ ಅರ್ಹ ಬಿಡ್ಡುದಾರರು ದಿನಾಂಕ **28.06.2023** ಅಥವಾ ನಂತರ ವೆಬ್‌ಸೈಟ್ **https://kppp.karnataka.gov.in/** ಗೆ ಲಾಗಾನ್ ಮಾಡಬಹುದು

ಸಹಿ/–ಅಧೀಕ್ಷಕ ಇಂಜಿನಿಯರ್(ವಿ)(ಖರೀದಿ) ಮ.ವಿ.ಸ.ಕಂ.ನಿ., ಮಂಗಳೂರು

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ **1912**ಕ್ಕೆ ಕರೆ ಮಾಡಿ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಪ್ರಧಾನ ಮುಖ್ಯ ಅಭಿಯಂತರರ ಕಚೇರಿ, 2ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ ಬೆಂಗಳೂರು–09.

ಸಂಖ್ಯೆ:ಬೆಂಜಮಂ/ಪ್ರಮುಅ/ಅಮುಅ(ತ್ಯಾನೀನಿ–ಯೋ–ಪ್ರೋ)/ಉಮುಅ(ತ್ಯಾನೀನಿ–ಪ್ರಾ.ಶಿಪ)/ತಾಂಸ–2/903/2023–24 ದಿನಾಂಕ: 27–06–2023

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಹೆಬ್ಬಾಳ ವ್ಯಾಲಿ ಎಸ್‌ಟಿಪಿ ಅಡಿಯಲ್ಲಿ ರಾಜಾಕೆನಲ್‌ನ 40 ಎಂಎಲ್ ಡಿ ಎಸ್‌ಟಿಪಿಯ ಘಟ್ಟ 1ನೇ ಮತ್ತು ಘಟ್ಟ 2 ಹಾಗೂ ಯಲಹಂಕದ 10 ಎಂಎಲ್‌ಡಿ ಟಿಟಿಪಿ ಮತ್ತು ಅರ್ಕಾವತಿ ವ್ಯಾಲಿಯ ಎಸ್‌ಟಿಪಿ ಅಡಿಯಲ್ಲಿನ ಚಿಕ್ಕಬಾಣಾವಾರದ 5 ಎಂಎಲ್‌ಡಿ ಎಸ್‌ಟಿಪಿ ಮತ್ತು ನಾಗಸಂದ್ರದ 20 ಎಂಎಲ್‌ಡಿ ಎಸ್‌ಟಿಪಿ ಘಟ್ಟ 1 (3 ಐಎಸ್ ಪಿಎಸ್) ಮತ್ತು ಘಟ್ಟ 2 ರಲ್ಲಿನ ಎಸ್‌ಟಿಪಿಗಳನ್ನು ಬಿಎನ್‌ಆರ್ ರಿಮೂವಲ್ ವ್ಯವಸ್ಥೆಯೊಂದಿಗೆ ಎಸ್‌ಟಿಪಿಗಳ ಉನ್ನತೀಕರಣ ಕಾಮಗಾರಿಗಾಗಿ ಯೋಜನೆ ಉಸ್ತುವಾರಿ ಸಲಹೆ ಸೇವೆಗಳನ್ನು ಒದಗಿಸುವುದು. (2ನೇ ಕರೆ)

ಟೆಂಡರ್‌ಗೆ ಇಟ್ಟ ಮೊತ್ತ: ರೂ.213.80 ಲಕ್ಷಗಳು. ಇಎಂಡಿ: ರೂ.3,21,000/–.

ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ವೇಳೆ: 05–07–2023ರ ಬೆಳಿಗ್ಗೆ 10:30 ಗಂಟೆಯವರೆಗೆ. ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 06–07–2023ರ ಬೆಳಿಗ್ಗೆ 10:30 ಗಂಟೆಗೆ. ಟೆಂಡರ್ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://www.kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಪ್ರಧಾನ ಮುಖ್ಯ ಅಭಿಯಂತರರು.

DIPR/CP/AAPL/RO386/23-24

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಮಹಾತ್ಮ ಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ, ಬೆಂಗಳೂರು – 560022. ದೂರವಾಣಿ ಸಂಖ್ಯೆ: 080–23472850/23371695

ಇ–ಮೇಲ್: apmcbangalore22@gmail.com

ಸಂಖ್ಯೆ:ಕೃಉಮಾಸ(ಬೆಂ)/ಭದ್ರತೆ/ಸ್ವಚ್ಛತೆ/946–949/2023–24 ದಿನಾಂಕ: 22–06–2023

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

2023–24ನೇ ಸಾಲಿಗೆ ಬೆಂಗಳೂರು ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ, ದಾಸನಪುರ ಉಪ ಮಾರುಕಟ್ಟೆ ಹಾಗೂ ಇತರೆಡೆಗಳಲ್ಲಿ ಭದ್ರತೆ / ಸ್ವಚ್ಛತಾ / ವಿದ್ಯುತ್ ನಿರ್ವಹಣಾ ಕಾರ್ಯಕ್ಕಾಗಿ ಅರ್ಹ ಹಾಗೂ ಅನುಭವ ಹೊಂದಿದ ಮತ್ತು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಸಂಸ್ಥೆ / ಏಜೆನ್ಸಿಯವರಿಂದ ಕನಿಷ್ಠ ವೇತನ ಕಾಯ್ದೆಯನ್ವಯ ಈ ಕೆಳಕಂಡಂತೆ ನಮೂದಿಸಿರುವ ಸೇವೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸುವ ಅರ್ಹ ಸಂಸ್ಥೆ / ಏಜೆನ್ಸಿಯವರು ವೆಬ್‌ಸೈಟ್: **http://eproc.karnataka.gov.in** ನಲ್ಲಿ ಪ್ರಕಟಿಸಿದಂತೆ ಹಾಗೂ ಇನ್ನುಳಿದ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆದು ಖಚಿತಪಡಿಸಿಕೊಂಡು ಭಾಗವಹಿಸಬಹುದಾಗಿದೆ. **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 13–07–2023**.

ಕ್ರ. ಸಂ.	ನಿರ್ವಹಣಾ ವಿವರಣೆ	ವಿವಿಧ ಹುದ್ದೆಗಳ ಒಟ್ಟು ಸಂಖ್ಯೆ	ಇ.ಎಂ.ಡಿ (ರೂ.ಲಕ್ಷಗಳಲ್ಲಿ)
1	ಯಶವಂತಪುರ ಮುಖ್ಯ ಮಾರುಕಟ್ಟೆ, ಯಲಹಂಕ ರೈತರ ಸಂತೆಯಲ್ಲಿ ಪ್ರತಿದಿನ ಸ್ವಚ್ಛತಾ ಕಾರ್ಯ ನಿರ್ವಹಿಸಲು ಸ್ವಚ್ಛತಾ ಟೆಂಡರ್.	35	5.00
2	ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ಎ, ಬಿ, ಸಿ ಮತ್ತು ಡಿ ಬ್ಲಾಕ್‌ಗಳಲ್ಲಿ ಪ್ರತಿದಿನ ಸ್ವಚ್ಛತಾ ಕಾರ್ಯ ನಿರ್ವಹಿಸಲು ಸ್ವಚ್ಛತಾ ಟೆಂಡರ್.	8	1.00
3	ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ, ಯಲಹಂಕ ರೈತರ ಸಂತೆ ಹಾಗೂ ನಂದಿನಿ ಬಡಾವಣೆಯಲ್ಲಿ ಪ್ರತಿದಿನ ಭದ್ರತಾ ಕಾರ್ಯ ನಿರ್ವಹಿಸಲು ಭದ್ರತಾ ಟೆಂಡರ್.	92	10.00
4	ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ಎ, ಬಿ, ಸಿ ಮತ್ತು ಡಿ ಬ್ಲಾಕ್‌ಗಳಲ್ಲಿ ಭದ್ರತಾ ಕಾರ್ಯ ನಿರ್ವಹಿಸಲು ಭದ್ರತಾ ಟೆಂಡರ್.	20	2.50
5	ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣ ಹಾಗೂ ಇತರೆಡೆಗಳಲ್ಲಿ ವಿದ್ಯುತ್ ನಿರ್ವಹಣಾ ಟೆಂಡರ್.	4	0.50
6	ಯಶವಂತಪುರ ಉಪ ಮಾರುಕಟ್ಟೆ ಪ್ರಾಂಗಣ ಮತ್ತು ಇತರೆಡೆಗಳಲ್ಲಿ ವಿದ್ಯುತ್ ನಿರ್ವಹಣಾ ಟೆಂಡರ್.	9	0.50

ಸಹಿ/– ಕಾರ್ಯದರ್ಶಿ
ಕೃಉಮಾಸ, ಬೆಂಗಳೂರು

ವಾಸಾಸಂಇ/ವಾ.ಪ್ರ/389/ಅಡ್ವರ್ಟೋ/2023–24

ಗುರುಮಠಕಲ್: 54 ಜನರಿಗೆ ವಾಂತಿ–ಭೇದಿ

ಪ್ರಜಾವಾಣಿ ವಾರ್ತೆ

ಗುರುಮಠಕಲ್ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಇಮ್ಲಾಪುರ ಗ್ರಾಮದಲ್ಲಿ 54 ಜನರಿಗೆ ವಾಂತಿ– ಭೇದಿ ಕಾಣಿಸಿಕೊಂಡಿದೆ. ಗ್ರಾಮದ ಶಾಲಾ ಕಟ್ಟಡದಲ್ಲಿ ಮಂಗಳವಾರ ತಾತ್ಕಾಲಿಕ ಚಿಕಿತ್ಸಾ ಕೇಂದ್ರ ತೆರೆಯಲಾಗಿದೆ.

ಸೋಮವಾರ ಸಂಜೆ ನಾಲ್ಕು ಜನರಲ್ಲಿ ವಾಂತಿ– ಭೇದಿ ಕಾಣಿಸಿಕೊಂಡಿತ್ತು. ರಾತ್ರಿ ವೇಳೆಗೆ ಇನ್ನಷ್ಟು ಜನ ಅಸ್ವಸ್ಥರಾಗಿದ್ದಾರೆ. ಮಂಗಳವಾರ ಮಧ್ಯಾಹ್ನದ ವೇಳೆಗೆ 50ಕ್ಕೂ ಹೆಚ್ಚು ಜನರಲ್ಲಿ ವಾಂತಿ– ಭೇದಿ ಕಾಣಿಸಿಕೊಂಡಿತು ಎಂದು ಗ್ರಾಮಸ್ಥರು ತಿಳಿಸಿದರು.

ತಾತ್ಕಾಲಿಕ ಚಿಕಿತ್ಸಾ ಕೇಂದ್ರದಲ್ಲಿ 10, ಗುರುಮಠಕಲ್‌ನ ಸಿಎಚ್‌ಸಿ 13, ಖಾಸಗಿ ಆಸ್ಪತ್ರೆಗಳಲ್ಲಿ 12, ಯಾದಗಿರಿ ಖಾಸಗಿ ಆಸ್ಪತ್ರೆಯಲ್ಲಿ 2, ರಾಯಚೂರಿನ ರಿಮ್ಸ್‌ನಲ್ಲಿ ಒಬ್ಬರು ಸೇರಿ ಮಂಗಳವಾರ ಮಧ್ಯಾಹ್ನದ ವೇಳೆಗೆ 54 ಜನರಲ್ಲಿ ವಾಂತಿ–ಭೇದಿ ಕಾಣಿಸಿಕೊಂಡಿದೆ. ಒಟ್ಟು 23 ಜನರು ಗುಣಮುಖರಾಗಿದ್ದಾರೆ ಎಂದು ಆರೋಗ್ಯ ಇಲಾಖೆ ಸಿಬ್ಬಂದಿ ತಿಳಿಸಿದರು.

ಜಿ.ಪಂ. ಉಪ ಕಾರ್ಯದರ್ಶಿ ಭೇಟಿ: ಗ್ರಾಮಕ್ಕೆ ಮಂಗಳವಾರ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಅಮರೇಶ ನಾಯ್ಕ್ ಭೇಟಿ ನೀಡಿ ಪರಿಶೀಲಿಸಿದರು. ಗ್ರಾಮದಲ್ಲಿನ ಪೈಪ್‌ಲೈನ್, ನೀರು ಸರಬರಾಜು ಮಾಡುವ ಕೊಳವೆಬಾವಿ, ನೀರಿನ ಟ್ಯಾಂಕ್‌ಗಳನ್ನು ಪರಿಶೀಲಿಸಿದರು.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಪರಿಶೀಲನೆ ಬಳಿಕ ಎಡಿಜಿಪಿ ಸೂಚನೆ

ಪೊಲೀಸ್ ಸಮವಸ್ತ್ರದಲ್ಲಿ ಹೆದ್ದಾರಿ ಗಸ್ತು

ಪ್ರಜಾವಾಣಿ ವಾರ್ತೆ

ರಾಮನಗರ: 'ಹೆದ್ದಾರಿಯಲ್ಲಿ ಪೊಲೀಸರು ಸಮವಸ್ತ್ರದಲ್ಲಿ ಕಾಣಿಸುತ್ತಿಲ್ಲ. ಸಿಬ್ಬಂದಿ ಕಂಡರೆ ವಾಹನ ಸವಾರರಿಗೆ ಒಂದು ರೀತಿಯ ಭಯವಿರುತ್ತದೆ. ಕೂಡಲೇ ವಾಹನದ ವೇಗ ತಗ್ಗಿಸಿ, ಸಂಚಾರ ನಿಯಮ ಪಾಲಿಸುತ್ತಾರೆ. ಹಾಗಾಗಿ, ಕೂಡಲೇ ಪೊಲೀಸರು ಹೆದ್ದಾರಿಯಲ್ಲಿ ಗಸ್ತು ಆರಂಭಿಸಬೇಕು' ಎಂದು ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಅವರು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಇತ್ತೀಚೆಗೆ ಅಪಘಾತ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಮಂಗಳವಾರ ಹೆದ್ದಾರಿ ಪರಿಶೀಲಿಸಿ ಬಳಿಕ ಅಧಿಕಾರಿಗಳಿಗೆ ಈ ನಿರ್ದೇಶನ ನೀಡಿದರು.

ಹೆದ್ದಾರಿಯಲ್ಲಿ ಕಳೆದ ಒಂಬತ್ತು ತಿಂಗಳಲ್ಲಿ ಸಂಭವಿಸಿದ ಅಪಘಾತಗಳಲ್ಲಿ 158 ಜನ ಮೃತಪಟ್ಟ ಕುರಿತು 'ಪ್ರಜಾವಾಣಿ' ಜೂನ್ 23ರಂದು ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದಿತ್ತು.

'ಬೆಂಗಳೂರಿನಿಂದ ಬೆಳಗಾವಿವರೆಗಿನ ಹೆದ್ದಾರಿಯಲ್ಲಿ ಒಬ್ಬ ಸಿಬ್ಬಂದಿ ಸಹ ಸಮವಸ್ತ್ರದಲ್ಲಿ ಕಾಣಿಸುವುದಿಲ್ಲ. ಪೊಲೀಸರು ಕೇವಲ ರಿಫ್ಲೆಕ್ಟ್ ಜಾಕೆಟ್ ಹಾಕಿಕೊಂಡು ರಸ್ತೆಯಲ್ಲಿದ್ದರೆ ಸಾಕು. ಅಪಘಾತಗಳ ಸಂಖ್ಯೆಯೂ ಇಳಿಮುಖವಾಗುತ್ತದೆ. ದಾವಣಗೆರೆಯಲ್ಲಿ ನಾನು ಎಸ್.ಪಿ ಆಗಿದ್ದಾಗ ಹೆದ್ದಾರಿಯಲ್ಲಿ ಗಸ್ತು ಮಾಡಿಯೇ ಶೇ 40ರಷ್ಟು ಅಪಘಾತ ತಗ್ಗಿಸಿದ್ದೆ' ಎಂದರು.

ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತದ ಸ್ಥಳಗಳಿಗೆ ಮಂಗಳವಾರ ಭೇಟಿ ನೀಡಿದ ಎಡಿಜಿಪಿ ಅಲೋಕ್ ಕುಮಾರ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ರಾಹುಲ್ ಅವರಿಂದ ಮಾಹಿತಿ ಪಡೆದರು. ಐಜಿಪಿ ಡಾ. ಬಿ.ಆರ್. ರವಿಕಾಂತೇಗೌಡ, ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಇದ್ದಾರೆ

> **ಹೆದ್ದಾರಿ ನಿರ್ವಹಣೆ, ಅಪಘಾತ ತಡೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ತಿಳಿಸಿದ್ದೇವೆ. ಪಾಲನೆ ಮಾಡದಿದ್ದರೆ ಅಗತ್ಯ ಕ್ರಮ ಕೈಗೊಳ್ಳಬೇಕಾಗುತ್ತದೆ**
> **ಅಲೋಕ್ ಕುಮಾರ್,** ಎಡಿಜಿಪಿ

> **ಎಡಿಜಿಪಿ ಅವರು ಹೆದ್ದಾರಿ ನಿರ್ವಹಣೆ ಕುರಿತು ನೀಡಿರುವ ಸೂಚನೆಗಳನ್ನು ಮೇಲಧಿಕಾರಿಗಳ ಗಮನಕ್ಕೆ ತಂದು ಅಪಘಾತ ತಡೆಗೆ ಕ್ರಮ ಕೈಗೊಳ್ಳಲಾಗುವುದು**
> **ರಾಹುಲ್,** ಯೋಜನಾ ನಿರ್ದೇಶಕ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

ಕುಂಬಳಗೋಡಿನಿಂದ ಚನ್ನಪಟ್ಟಣ ತಾಲ್ಲೂಕಿನ ನಿಡಘಟ್ಟವರೆಗೆ ಹೆದ್ದಾರಿಯಲ್ಲಿಯ 18 ಅಪಘಾತ ಸ್ಥಳ ಪರಿಶೀಲಿಸಿದ ಅವರು, ಸ್ಥಳೀಯ ಪೊಲೀಸರಿಂದ ಅಪಘಾತ ಮಾಹಿತಿ ಪಡೆದರು. ಕೆಲವೆಡೆ ಸಾರ್ವಜನಿಕರ ದೂರು ಆಲಿಸಿ, ಹೆದ್ದಾರಿ ಗಸ್ತಿಗೆ ನಿಯೋಜಿಸಿರುವ ವಾಹನಗಳನ್ನು ವೀಕ್ಷಿಸಿದರು.

ಕೇಂದ್ರ ವಲಯದ ಐಜಿಪಿ ಡಾ. ಬಿ.ಆರ್. ರವಿಕಾಂತೇಗೌಡ, ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ, ಎಎಸ್‌ಪಿ ಟಿ.ವಿ. ಸುರೇಶ್ ಜೊತೆಗಿದ್ದರು.

ಚಾಲನಾ ಪರವಾನಗಿ ಮುಟ್ಟುಗೋಲು?

'ಐದೂವರೆ ತಿಂಗಳಲ್ಲಿ ಹೆದ್ದಾರಿಯಲ್ಲಿ 122 ಜನ ಸತ್ತಿರುವುದು ಆಘಾತಕಾರಿ. ಅತಿ ವೇಗವೇ ಅಪಘಾತಕ್ಕೆ ಕಾರಣವಾಗಿದೆ. ಅತಿ ವೇಗದ ಚಾಲನೆ ಮಾಡುವವರ ಮತ್ತು ಮದ್ಯ ಸೇವಿಸಿ ವಾಹನ ಚಾಲನೆ ಮಾಡುವವರ ಚಾಲನಾ ಪರವಾನಗಿ ಮುಟ್ಟುಗೋಲು ಹಾಕಿಕೊಳ್ಳುವ ಕುರಿತು ಚಿಂತನೆ ನಡೆಸಲಾಗಿದೆ. ವೇಗ ಅಳೆಯಲು ಸ್ಪೀಡ್ ರೇಡಾರ್ ಹಾಕಲಾಗುವುದು' ಎಂದು ಅಲೋಕ್ ಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

'ಹೆದ್ದಾರಿಯಲ್ಲಿ ಅಪಘಾತ ಸ್ಥಳಗಳು, ಅಂಕುಡೊಂಕು ಮಾರ್ಗ, ಪ್ರವೇಶ ಮತ್ತು ನಿರ್ಗಮನ ದಾರಿ ಹಾಗೂ ಸಾರ್ವಜನಿಕರಿಗೆ ರಸ್ತೆ ದಾಟಲು ಇರುವ ವ್ಯವಸ್ಥೆ ಪರಿಶೀಲಿಸಿದ್ದೇನೆ. ಅಗತ್ಯ ಇರುವೆಡೆ ಸೂಚನಾ ಫಲಕ ಅಳವಡಿಕೆ, ಹೆದ್ದಾರಿ ಗಸ್ತು, ಆಂಬುಲೆನ್ಸ್ ವ್ಯವಸ್ಥೆ ಹಾಗೂ ಜನ ರಸ್ತೆ ದಾಟಲು ಅಂಡರ್‌ಪಾಸ್ ಮತ್ತು ಸ್ಕೈವಾಕ್ ನಿರ್ಮಿಸುವಂತೆ ಪ್ರಾಧಿಕಾರದ ಅಧಿಕಾರಿಗೆ ಸೂಚಿಸಿದ್ದೇನೆ' ಎಂದರು.

ಸಭಾಂಗಣ ಉದ್ಘಾಟನೆ 30ಕ್ಕೆ

ಬೆಂಗಳೂರು: ಕನಕಪುರ ರಸ್ತೆಯ ಸೋಮನಹಳ್ಳಿಯ ನೆಟ್ಟಿಗೆರೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಎಸ್.ವಿ. ನಾರಾಯಣಸ್ವಾಮಿ ರಾವ್ ಸ್ಮಾರಕ ಸಭಾಂಗಣವನ್ನು ಜೂನ್ 30ರಂದು ಉದ್ಘಾಟನೆ ಮಾಡಲಾಗುವುದು ಎಂದು ರಾಮಸೇವಾ ಮಂಡಲಿ ಟ್ರಸ್ಟ್ ತಿಳಿಸಿದೆ.

ಸಂಗೀತ ಕಾರ್ಯಕ್ರಮಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಈ ಸಭಾಂಗಣವನ್ನು ಎರಡು ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗಿದೆ.

ಉದ್ಘಾಟನಾ ಕಾರ್ಯಕ್ರಮದಲ್ಲಿ ಟಿ. ನಾಗರಾಜು ಅವರು ದಿವಗಂತ 'ಎಸ್.ವಿ. ನಾರಾಯಣಸ್ವಾಮಿ ರಾವ್' ಅವರ ಬಗ್ಗೆ ಬರೆದಿರುವ 'ನಿಸ್ವಾರ್ಥ ಬದುಕಿನ ಶ್ರೀರಾಮಭಕ್ತ' ಪುಸ್ತಕವನ್ನು ಬಿಡುಗಡೆ ಮಾಡಲಾಗುವುದು ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಸಚಿವರಾದ ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ಮಾಜಿ ಸಂಸದ ಕೆ.ಸಿ. ರಾಮಮೂರ್ತಿ ಮತ್ತು ಶಾಸಕ ಎಸ್.ಟಿ. ಸೋಮಶೇಖರ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಭಯೋತ್ಪಾದನೆ ನಿಗ್ರಹ: ಪಾಕ್ ಆಕ್ಷೇಪ ತಳ್ಳಿಹಾಕಿದ ಅಮೆರಿಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡನ್ ಭೇಟಿ ಬಳಿಕ ಇತ್ತೀಚೆಗೆ, ಭಯೋತ್ಪಾದನೆ ಕೃತ್ಯಗಳನ್ನು ಹತ್ತಿಕ್ಕುವ ಕುರಿತಂತೆ ನೀಡಿದ್ದ ಜಂಟಿ ಹೇಳಿಕೆಗೆ ಪಾಕಿಸ್ತಾನ ಸರ್ಕಾರ ವ್ಯಕ್ತಪಡಿಸಿದ್ದ ಆಕ್ಷೇಪವನ್ನು ಅಮೆರಿಕ ತಳ್ಳಿ ಹಾಕಿದೆ.

ಗಡಿಯಾಚೆಗೆ ಭಯೋತ್ಪಾದನೆ ಕೃತ್ಯಗಳಿಗೆ ಉತ್ತೇಜನ ನೀಡುವುದನ್ನು ನಿಲ್ಲಿಸಬೇಕು ಹಾಗೂ ತನ್ನ ನೆಲದಲ್ಲಿರುವ ಎಲ್ಲ ಭಯೋತ್ಪಾದಕ ಸಂಘಟನೆಗಳನ್ನು ಶಾಶ್ವತವಾಗಿ ನಿಷ್ಕ್ರಿಯಗೊಳಿಸಬೇಕು ಎಂದೂ ಪಾಕಿಸ್ತಾನಕ್ಕೆ ಸಲಹೆ ಮಾಡಿದೆ.

ಅಮೆರಿಕದ ವಿದೇಶಾಂಗ ಇಲಾಖೆಯ ವಕ್ತಾರ ಮ್ಯಾಥ್ಯೂ ಮಿಲ್ಲರ್ ಅವರು, 'ಭಯೋತ್ಪಾದಕ ಸಂಘಟನೆಗಳಿಂದ ಈ ವಲಯದಲ್ಲಿ ಇರುವ ಬೆದರಿಕೆ ತಡೆಗೆ ಪಾಕಿಸ್ತಾನದ ಜೊತೆಗೂಡಿ ಕೆಲಸ ಮಾಡಲು ಬೈಡನ್ ಸರ್ಕಾರ ಬದ್ಧವಾಗಿದೆ' ಎಂದರು.

'ಇದೇ ಸಂದರ್ಭದಲ್ಲಿ ತನ್ನ ನೆಲದಲ್ಲಿ ಸಕ್ರಿಯವಾಗಿರುವ ಲಷ್ಕರ್ ಎ ತಯಬಾ, ಜೈಷ್ ಎ ಮೊಹಮ್ಮದ್ ಮತ್ತು ಇತರ ಉಗ್ರ ಸಂಘಟನೆಗಳನ್ನು ಶಾಶ್ವತವಾಗಿ ನಿಷ್ಕ್ರಿಯಗೊಳಿಸಲು ಪಾಕಿಸ್ತಾನ ಸರ್ಕಾರವು ಕೈಗೊಂಡಿರುವ ಕ್ರಮಗಳಿಗೂ ಪ್ರಾಮುಖ್ಯತೆ ನೀಡಲಿದೆ. ಈ ಸಂಬಂಧ ಅಮೆರಿಕವು ಪಾಕಿಸ್ತಾನದ ಜೊತೆಗೆ ನಿರಂತರವಾಗಿ ಚರ್ಚಿಸಲಿದೆ' ಎಂದೂ ಹೇಳಿದರು.

ಜಂಟಿ ಹೇಳಿಕೆ ಬಿಡುಗಡೆ ಮಾಡಿದ ಹಿಂದೆಯೇ ಪಾಕಿಸ್ತಾನದ ಸರ್ಕಾರವು, 'ಅಮೆರಿಕದ ಉಪ ರಾಯಭಾರಿಯನ್ನು ಕರೆಸಿ ತನ್ನ ಆಕ್ಷೇಪವನ್ನು ದಾಖಲಿಸಿತ್ತು. ಜಂಟಿ ಹೇಳಿಕೆ ಅನಪೇಕ್ಷಿತವಾಗಿದ್ದು, ಏಕಪಕ್ಷೀಯವಾಗಿದೆ' ಎಂದು ಅಭಿಪ್ರಾಯಪಟ್ಟಿತು.

ರಾಜರಾಜೇಶ್ವರಿನಗರದಲ್ಲಿ ಆರಂಭಿಸಿರುವ 'ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್'ನ ಹೊಸ ಷೋ ರೂಂ ಅನ್ನು ಚಿತ್ರನಟಿ ರಚಿತಾ ರಾಮ್ ಮಂಗಳವಾರ ಉದ್ಘಾಟಿಸಿದರು. ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಓ ಅಷರ್, ಕರ್ನಾಟಕದ ಪ್ರಾದೇಶಿಕ ಮುಖ್ಯಸ್ಥರಾದ ಫಿಲ್ಲೋರ್ ಬಾಬು ಇದ್ದರು.

ನೌಕರರ ಸಂಘದ ವಿರುದ್ಧ ಆರೋಪ: ವಿಚಾರಣೆಗೆ ಸೂಚನೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ಸಂಘದ ವಿರುದ್ಧ ಕೆಲವರು ಮಾಡಿರುವ ಆರೋಪಗಳ ಕುರಿತು ವಿಚಾರಣೆ ನಡೆಸಿ, ವರದಿ ನೀಡುವಂತೆ ಸಹಕಾರ ಸಂಘಗಳ ಉಪ ನಿಬಂಧಕರಿಗೆ ಸಹಕಾರ ಇಲಾಖೆ ಸೂಚಿಸಿದೆ.

ನೌಕರರ ಸಂಘ ಪ್ರತಿ ವರ್ಷ ಸರ್ಕಾರದಿಂದ ಅನುದಾನ ಪಡೆಯುತ್ತಿದೆ. ಆದರೆ, ಗಳಿಸಿದ ಲಾಭಕ್ಕೆ ಆದಾಯ ತೆರಿಗೆ ಸಲ್ಲಿಸಿಲ್ಲ. ಹಣ ದುರುಪಯೋಗ, ನಿಯಮ ಉಲ್ಲಂಘಿಸಿ ಹಲವು ಚಟುವಟಿಕೆಗಳನ್ನು ನಡೆಸಿದೆ. ಸಂಘದ ಅಧ್ಯಕ್ಷರು, ಪದಾಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕೈಗಾರಿಕಾ ಮತ್ತು ವಾಣಿಜ್ಯ ಸಚಿವಾಲಯದ ಅಧೀನ ಕಾರ್ಯದರ್ಶಿ ಶಾಂತಾರಾಮ್, ಸಚಿವಾಲಯದ ಶಾಖಾಧಿಕಾರಿ ಗುರುಸ್ವಾಮಿ, ರಾಯಚೂರಿನ ಜಾನುವಾರು ಅಭಿವೃದ್ಧಿ ಅಧಿಕಾರಿ ಎಂ.ಮಹಬೂಬ್ ಬಾಷಾ, ಭೂಮಾಪನ ಇಲಾಖೆಯ ಶಿವರುದ್ರಯ್ಯ, ರಾಮನಗರ ಜಿಲ್ಲೆ ಅವ್ವೇಹಳ್ಳಿ ಪದವಿ ಪೂರ್ವ ಕಾಲೇಜು ಉಪನ್ಯಾಸಕ ನಿಂಗೇಗೌಡ ಅವರು ಸಹಕಾರ ಇಲಾಖೆಗೆ ದೂರು ನೀಡಿದ್ದರು.

'ವೀರ ಬರ್ಬರೀಕ' ಯಕ್ಷಗಾನ ಪ್ರದರ್ಶನ ನಾಳೆ

ಬೆಂಗಳೂರು: ಮಹಾಭಾರತ ಕಥೆಯನ್ನಾಧರಿಸಿದ ಗುಂಡು ಸೀತಾರಾಮ್ ರಚನೆಯ 'ವೀರ ಬರ್ಬರೀಕ' ಯಕ್ಷಗಾನ ಪ್ರದರ್ಶನವು ಜೂನ್ 29ರಂದು ಸಂಜೆ 5.30ಕ್ಕೆ ಗುಬ್ಬಲಾಳದ ಶನೈಶ್ವರ ದೇವಾಲಯದ ಜನರಂಜಿನಿ ಸಭಾಂಗಣದಲ್ಲಿ ಪ್ರದರ್ಶನವಾಗಲಿದೆ.

ಈ ಯಕ್ಷಗಾನವನ್ನು ಭರತ್ ಪರ್ಕಳ ಅವರು ನಿರ್ದೇಶಿಸಿದ್ದು, ಕಲಾಕದಂಬ ಕಲಾಕೇಂದ್ರದ ವಿದ್ಯಾರ್ಥಿಗಳು ಅಭಿನಯಿಸಿದ್ದಾರೆ. ಹಿಮ್ಮೇಳದಲ್ಲಿ ಭಾಗವತರಾಗಿ ಸುಬ್ರಾಯ ಹೆಬ್ಬಾರ್, ಮದ್ದಳೆಯಲ್ಲಿ ಸಂಪತ್ ಆಚಾರ್, ಚಂಡೆಯಲ್ಲಿ ಶ್ರೀನಿವಾಸ್ ಪ್ರಭು ಭಾಗವಹಿಸುವರು.

ರಾಜರಾಜೇಶ್ವರಿನಗರದಲ್ಲಿ ಮಲಬಾರ್ ಹೊಸ ಷೋ ರೂಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿನಗರದಲ್ಲಿ 'ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್'ನ ಹೊಸ ಷೋ ರೂಂ ಆರಂಭವಾಗಿದೆ.

ಚಿನ್ನ ಮತ್ತು ವಜ್ರದ ವ್ಯಾಪಾರ ಸಮೂಹಗಳಲ್ಲಿ ಅತಿ ದೊಡ್ಡದಾಗಿರುವ 'ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್'ನ ಹೊಸ ಷೋ ರೂಂ ವಿಶ್ವದರ್ಜೆಯ ಆಭರಣಗಳನ್ನು ಹೊಂದಿದೆ. ರಾಜ್ಯದಲ್ಲಿ 32ನೇ ಮತ್ತು ಬೆಂಗಳೂರಿನಲ್ಲಿ 15 ಷೋ ರೂಂ ಆಗಿದೆ.

ರಾಜರಾಜೇಶ್ವರಿ ನಗರದ ಜವಾಹರಲಾಲ್ ನೆಹರೂ ರಸ್ತೆಯ ಗಣೇಶ ದೇವಸ್ಥಾನದ ಹತ್ತಿರ ಆರಂಭಿಸಿರುವ ಈ ಹೊಸ ಷೋ ರೂಂ ಅನ್ನು ಚಿತ್ರನಟಿ ರಚಿತಾ ರಾಮ್ ಉದ್ಘಾಟಿಸಿದರು. ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಓ ಅಷರ್, ಕರ್ನಾಟಕದ ಪ್ರಾದೇಶಿಕ ಮುಖ್ಯಸ್ಥರಾದ ಫಿಲ್ಲೋರ್ ಬಾಬು ಇದ್ದರು.

ಆಷಾಢ ಮಾಸದ ಅಂಗವಾಗಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನಿಂದ ಜುಲೈ 19ರವರೆಗೆ ಗ್ರಾಹಕರಿಗೆ ಪ್ರತಿ ಆಭರಣಗಳ ಖರೀದಿಯೊಂದಿಗೆ ಉಚಿತ ಬೆಳ್ಳಿಯ ನಾಣ್ಯ ನೀಡಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ನಾಣ್ಯಗಳ ಪ್ರದರ್ಶನ ಮತ್ತು ಉಪನ್ಯಾಸ: ಉದ್ಘಾಟನೆ: ಆರ್. ಉಪೇಂದ್ರ ಶೆಟ್ಟಿ, ಉಪನ್ಯಾಸ: ಎಚ್. ಕೆ. ರಾಮಾರಾವ್, ಆಯೋಜನೆ ಮತ್ತು ಸ್ಥಳ: ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್, ಗುರುನಾರಾಯಣಪುರ, ರಾಮೋಹಳ್ಳಿ, ತಾವರೆಕೆರೆ, ಬೆಳಿಗ್ಗೆ 10

ಕರ್ನಾಟಕದ ಕಸ್ತೂರಿಬಾ **'ಯಶೋಧರಮ್ಮ ದಾಸಪ್ಪ ಸಮಾಜರತ್ನ' ಪ್ರಶಸ್ತಿ ಪ್ರದಾನ:** ಬಿ.ಟಿ. ಲಲಿತಾ ನಾಯಕ್, ಪ್ರಶಸ್ತಿ ಪುರಸ್ಕೃತರು: ಕರೆಮ್ಮ ಜಿ. ನಾಯಕ, ಅಧ್ಯಕ್ಷತೆ: ಪುಸ್ತಕಮನೆ ಹರಿಹರಪ್ರಿಯ, ಅತಿಥಿ: ಶಿವಾನಂದ ಬ. ಸಂಗಾಪೂರ, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಬೆಳಿಗ್ಗೆ 10.45

ಕರೆಮ್ಮ ಜಿ. ನಾಯಕ

'ಐಕ್ಯೂಎಸಿ ಉಪಕ್ರಮದ ಬಗ್ಗೆ ಮಾರ್ಗದರ್ಶನ, ಸಮಾಲೋಚನೆ ಕೌಶಲ್ಯಗಳ ಕುರಿತು ಕಾರ್ಯಾಗಾರ: ಸ್ವರ್ಣಲತಾ ಐಯ್ಯರ್, ಅಧ್ಯಕ್ಷತೆ: ಉಪೇಂದ್ರ ಶೆಟ್ಟಿ, ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್, ಗುರು ನಾರಾಯಣಪುರ, ರಾಮೋಹಳ್ಳಿ, ತಾವರೆಕೆರೆ, ಬೆಳಿಗ್ಗೆ 11

ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ–12: 'ನಾಡೋಜ ಕಯ್ಯಾರ ಕಿಞ್ಞಣ್ಣ ರೈ' ಅವರ ಕುರಿತು ಉಪನ್ಯಾಸ: ಇಂದಿರಾ ಹೆಗ್ಡೆ, ಅಧ್ಯಕ್ಷತೆ: ರಾ.ನಂ. ಚಂದ್ರಶೇಖರ, ಆಶಯ ನುಡಿ: ವ.ಚ. ಚನ್ನೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ. ಶ್ರೀ, ಪ್ರತಿಮೆ ಎದುರು, ಬಸವನಗುಡಿ, ನ್ಯಾಷನಲ್ ಹೈಸ್ಕೂಲ್ ವೃತ್ತ, ಬೆಳಿಗ್ಗೆ 11

ರಾ.ನಂ. ಚಂದ್ರಶೇಖರ

ನಗರ್ತ ಮಹಿಳಾ ಸಂಘದ ರಜತ ಮಹೋತ್ಸವ: ಸಾನ್ನಿಧ್ಯ: ಮಲಯ ಶಾಂತಮುನಿ ದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಎಸ್. ಜಿ. ಸುಶೀಲಮ್ಮ, ಸ್ಮರಣ ಸಂಚಿಕೆ ಬಿಡುಗಡೆ: ರಾಮಲಿಂಗಾ ರೆಡ್ಡಿ, ಇಂದಿರಾ ಶಿವಣ್ಣ ಅವರ 'ಶಿವಾಚಾರ ನಗರ್ತ ಪರಿಷ್ಕೃತ', ನಗರ್ತ ಮಹಿಳಾ ಸಾಧಕಿಯರು' ಪುಸ್ತಕಗಳ ಬಿಡುಗಡೆ: ಸಿ. ಸೋಮಶೇಖರ್, ಅತಿಥಿ: ಎಸ್. ಪ್ರಕಾಶ್, ಅಧ್ಯಕ್ಷತೆ: ಅಂಬಿಕಾ ಚಂದ್ರಶೇಖರ್, ಆಯೋಜನೆ: ನಗರ್ತ ಮಹಿಳಾ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 11



ರಾಮಲಿಂಗಾ ರೆಡ್ಡಿ

'ಗೋ ಹತ್ಯೆ ನಿಷೇಧ ಕಾನೂನು ಉಳಿಯಲಿ ಗೋವಿನ ಸಂತತಿ ಬೆಳೆಯಲಿ' ವಿಚಾರಗೋಷ್ಠಿ: ಶೈಲೇಶ್ ಹೊಳ್ಳ, 'ಅನ್ನಭಾಗ್ಯಕ್ಕೆ ರಾಜ್ಯದ ರೈತರಿಂದಲೇ ಭತ್ತ, ರಾಗಿ, ಜೋಳ ಸಿರಿಧಾನ್ಯ ಖರೀದಿಸಲಿ': ಪ್ರಕಾಶ್ ಕಮ್ಮರಡಿ, ಅಧ್ಯಕ್ಷತೆ: ಕುರುಬೂರು ಶಾಂತಕುಮಾರ್, ಆಯೋಜನೆ: ಸಂಯುಕ್ತ ಕಿಸಾನ್ ಮೋರ್ಚಾ, ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11ರಿಂದ



ಡಾ.ಪ್ರಕಾಶ್ ಕಮ್ಮರಡಿ

ಕೆ.ಎನ್. ವಿಜಯಲಕ್ಷ್ಮಿ ನಾಟಕೋತ್ಸವದ ಉದ್ಘಾಟನೆ: ಕೃಷ್ಣಾ ಮನವಲ್ಲಿ, ಅತಿಥಿಗಳು: ಡಿ. ಡಾಮಿನಿಕ್, ಕವನ ಕೆ.ಎನ್., 'ಬ್ಲಡ್ ವೆಡ್ಡಿಂಗ್' ನಾಟಕ ಪ್ರದರ್ಶನ: ರಂಗ ಶಾಲ ತಂಡ, ನಿರ್ದೇಶನ: ಉದಯ್ ಸೋಸಲೆ, ಆಯೋಜನೆ: ಸಂಸ ಥಿಯೇಟರ್, ಸ್ಥಳ: ನಯನ ರಂಗ ಮಂದಿರ, ಜೆ.ಸಿ. ರಸ್ತೆ, ಸಂಜೆ 6.30

ನೀತಿ ಮರುಪರಿಶೀಲನೆಗೆ ಹೈಕೋರ್ಟ್ ಸಲಹೆ

ಶಾಲೆಗಳಲ್ಲಿ ಕಠಿಣ ಶಿಸ್ತು ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯಾರ್ಥಿಗಳ ಮೇಲೆ ಶಾಲೆಗಳು ಕಠಿಣವಾದ ಶಿಸ್ತು ಕ್ರಮ ಜರುಗಿಸುವುದು ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುವ ಕಾರಣ ಇಂತಹ ನೀತಿಯನ್ನು ಮರು ಪರಿಶೀಲಿಸಬೇಕು' ಎಂದು ಹೈಕೋರ್ಟ್ ಶಾಲೆಗಳಿಗೆ ಸಲಹೆ ನೀಡಿದೆ.

ತಮ್ಮ ವಿರುದ್ಧದ ಪ್ರಕರಣ ರದ್ದು-ಪಡಿಸುವಂತೆ ಕೋರಿ ಕೊಡಗಿನ ಶಾಲಾ ಸಿಬ್ಬಂದಿ ಗೌರಮ್ಮ, ದತ್ತ ಕರುಂಬಯ್ಯ ಮತ್ತು ಚೇತನಾ ಬೋಪಣ್ಣ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಈ ಪ್ರಕರಣದಲ್ಲಿ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮೇಲ್ನೋಟಕ್ಕೆ ಇದು ಐಪಿಸಿ ಕಲಂ 107 ಮತ್ತು ಕಲಂ 305ರ ಅಡಿಯಲ್ಲೂ ಒಳಗೊಳ್ಳುತ್ತದೆ. ಹಾಗಾಗಿ, ವಿದ್ಯಾರ್ಥಿ ಪ್ರಾಣ ಕಳೆದುಕೊಳ್ಳುವಂತಹ ಸ್ಥಿತಿ ತಲುಪಲು ಶಾಲೆಯ ಸಿಬ್ಬಂದಿ ಪ್ರಚೋದನೆ ನೀಡಿದ್ದಾರೆಯೊ ಇಲ್ಲವೇ ಎಂಬುದು ವಿಚಾರಣೆಯಲ್ಲಿ ಸಾಬೀತಾಗಲಿ' ಎಂದು ನ್ಯಾಯಪೀಠ ಹೇಳಿದೆ.

'ಬಾಲಕ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ 15 ನಿಮಿಷಗಳವರೆಗೆ ಶಾಲೆಯ ಜತೆ ಸಂಪರ್ಕದಲ್ಲಿದ್ದ. ಮೇಲ್ನೋಟಕ್ಕೆ ಪ್ರಕರಣದಲ್ಲಿ ಸತ್ಯಾಂಶವಿದೆ ಎನಿಸುತ್ತಿದೆ. ಶಾಲೆ ತನ್ನ ತಪ್ಪನ್ನು ಮುಚ್ಚಿಹಾಕಿ-ಕೊಳ್ಳಲು ವಿದ್ಯಾರ್ಥಿಯ ಮೇಲೆ ಆರೋಪ ಹೊರಿಸುತ್ತಿದೆ. ಆದ್ದರಿಂದ, ಮುಂದಿನ ವಿಚಾರಣೆ ನಡೆದು ಸತ್ಯಾಂಶ ಹೊರಬರಬೇಕಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ಶಾಲೆಗೆ ಮದ್ಯ ತಂದಿದ್ದ ಎಂಬ ಆರೋಪದಡಿ ಕೊಡಗಿನ 9ನೇ ತರಗತಿಯ ವಿದ್ಯಾರ್ಥಿಯನ್ನು ಶಾಲಾ ಆಡಳಿತ ಮಂಡಳಿ ಅಮಾನತುಗೊಳಿಸಿತ್ತು. ಪರೀಕ್ಷೆಗೆ ಕೂರಿಸದೇ ಮನೆಯಿಂದಲೇ ಪರೀಕ್ಷೆ ಬರೆಸುವ ಭರವಸೆ ನೀಡಿತ್ತು. ಆದರೆ ಆನ್‌ಲೈನ್ ಲಿಂಕ್ ಕಳಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದ.

ಘಟನೆಗೆ ಸಂಬಂಧಿಸಿದಂತೆ ಶಾಲಾ ಸಿಬ್ಬಂದಿ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ್ದ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದ್ದರು. ಆದರೆ 'ಬಿ' ರಿಪೋರ್ಟ್ ಅನ್ನು ನ್ಯಾಯಾಲಯ ತಿರಸ್ಕರಿಸಿತ್ತು. ಶಾಲೆಯ ನಿರ್ದೇಶಕರು, ಪ್ರಾಂಶುಪಾಲರು ಮತ್ತು ವಾರ್ಡನ್ ವಿರುದ್ಧ ವಿಚಾರಣೆ ಮುಂದುವರಿಸಿತ್ತು.

ಫೇಸ್‌ಬುಕ್ ಖಾತೆ ಹ್ಯಾಕಿಂಗ್ ಜಾಲ: ಹೈಕೋರ್ಟ್ ಶಂಕೆ

ಬೆಂಗಳೂರು: 'ಫೇಸ್‌ಬುಕ್ ಖಾತೆಗಳನ್ನು ಹ್ಯಾಕ್ ಮಾಡಿ ಅವಹೇಳನಕಾರಿ ಮತ್ತು ನಿಂದನಾತ್ಮಕ ಬರಹಗಳನ್ನು ಬಿತ್ತರಿಸುವ ಪ್ರಕರಣಗಳ ಹಿಂದೆ ದೊಡ್ಡ ಜಾಲವೇ ಕೆಲಸ ಮಾಡುತ್ತಿರುವಂತಿದೆ' ಎಂದು ಹೈಕೋರ್ಟ್ ಬಲವಾದ ಶಂಕೆ ವ್ಯಕ್ತಪಡಿಸಿದೆ.

'ಧರ್ಮನಿಂದನೆ ಆರೋಪದಡಿ ಸೌದಿ ಅರೇಬಿಯಾದಲ್ಲಿ ಶಿಕ್ಷೆಗೆ ಗುರಿಯಾಗಿರುವ ಮಂಗಳೂರಿನ ನಿವಾಸಿ ಜನಾರ್ದನ ಸಾಲಿಯಾನ ಶೈಲೇಶ್ ಕುಮಾರ್ ಪ್ರಕರಣಕ್ಕೆ ಸಂಬಂಧಿಸಿದಂತೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಈತನಕ ಕೈಗೊಂಡಿರುವ ಕ್ರಮಗಳ ಕುರಿತಂತೆ ವರದಿ ಸಲ್ಲಿಸಬೇಕು' ಎಂದು ನಿರ್ದೇಶನ ನೀಡಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ನಕಲಿ ಫೇಸ್‌ಬುಕ್ ಖಾತೆ ತೆರೆದು ಅಭಿಪ್ರಾಯ, ಟೀಕೆ–ಟಿಪ್ಪಣಿ ಬಿತ್ತರಿಸುವಂತಹ ಆರೋಪಗಳ ಬಗ್ಗೆ ಸೈಬರ್ ಪೊಲೀಸರು ಹೆಚ್ಚಿನ ನಿಗಾ ವಹಿಸಿ ಅಪರಾಧಿಗಳನ್ನು ಪತ್ತೆ ಹಚ್ಚಬೇಕು' ಎಂದು ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿತು.

ಮಂಗಳೂರಿನ ಬಿಕರ್ನಕಟ್ಟೆ ನಿವಾಸಿಯಾದ ಜನಾರ್ದನ ಸಾಲಿಯಾನ ಶೈಲೇಶ್ ಕುಮಾರ ಪತ್ನಿ ಕವಿತಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಪೀಠವು ಮಂಗಳವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಪರ ವಕೀಲ ಮಧುಕರ ದೇಶಪಾಂಡೆ, 'ಪ್ರಕರಣಕ್ಕೆ ಸಂಬಂಧಿಸಿದಂತೆ ಸೌದಿ ಅರೇಬಿಯಾದ ವಿದೇಶಾಂಗ ಇಲಾಖೆಯೊಂದಿಗೆ ವಿಸ್ತೃತ ಪತ್ರ ವ್ಯವಹಾರ ನಡೆಸಲಾಗಿದೆ' ಎಂದರು.

ಇದಕ್ಕೆ ನ್ಯಾಯಪೀಠವು, 'ಕೇವಲ ಪತ್ರ ವ್ಯವಹಾರ ನಡೆಸಿದರೆ ಸಾಲದು. ನಮ್ಮ ಪೊಲೀಸರು ಸ್ಕಾಟ್ಲೆಂಡ್ ಮತ್ತು ಮೊಸಾದ್ ಪೊಲೀಸರ ಚಾಣಾಕ್ಷತೆ ಹಾಗೂ ಕೌಶಲವನ್ನು ಪ್ರದರ್ಶಿಸಬೇಕು. ನಮ್ಮ ದೇಶದ ಪ್ರಜೆಯೊಬ್ಬ ವಿದೇಶದಲ್ಲಿ ಅಪಾಯದಲ್ಲಿ ಸಿಲುಕಿದ್ದಾನೆ ಎಂದಾಗ ರಾಜ್ಯದ ಅತ್ಯುನ್ನತ ಕೋರ್ಟ್ ಎನಿಸಿದ ಹೈಕೋರ್ಟ್ ಆ ಕುರಿತು ಕಾಳಜಿ ವಹಿಸಿದೆ ಎಂಬುದು ವಿದೇಶೀಯರ ಗಮನಕ್ಕೂ ಬರಬೇಕು. ಜನಾರ್ದನ ಅವರ ಜೀವಕ್ಕೆ ಯಾವುದೇ ಅಪಾಯವಾಗದಂತೆ ನೋಡಿಕೊಳ್ಳಲು ಅಲ್ಲಿನ ಸರ್ಕಾರಕ್ಕೆ ಮನವಿ ಮಾಡಿ' ಎಂದು ಕೇಂದ್ರಕ್ಕೆ ನಿರ್ದೇಶಿಸಿತು.

ರಾಜ್ಯ ಸರ್ಕಾರದ ಪರ ವಕೀಲೆ ಶ್ವೇತಾ ಕೃಷ್ಣಪ್ಪ, 'ಫೇಸ್‌ಬುಕ್ ಖಾತೆ ಹ್ಯಾಕ್ ಆಗಿರುವುದರ ಬಗ್ಗೆ ಬೆಂಗಳೂರಿನ ಸೈಬರ್ ಅಪರಾಧ ವಿಭಾಗದ ಪೊಲೀಸರು ತನಿಖೆ ಮುಂದುವರಿಸಿದ್ದಾರೆ' ಎಂದು ವಿವರ ನೀಡಿದರು.

ಪ್ರಕರಣವನ್ನು ಜುಲೈ 17ಕ್ಕೆ ಮುಂದೂಡಲಾಗಿದೆ.

ವೃತ್ತಿ ದುರ್ನಡತೆ: ಇಬ್ಬರು ವಕೀಲರ ಸನ್ನದು ರದ್ದು

ಬೆಂಗಳೂರು: ವೃತ್ತಿ ದುರ್ನಡತೆ ತೋರಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಕೀಲರ ಪರಿಷತ್ (ಕೆಎಸ್‌ಬಿಸಿ) ಇಬ್ಬರು ವಕೀಲರ ಸನ್ನದು ರದ್ದುಗೊಳಿಸಿದೆ.

'ಮಂಗಳೂರಿನ ವಕೀಲ ಡಿ.ಪದ್ಮನಾಭ ಕುಮಾರ್ ಅವರ ಸನ್ನದು ರದ್ದುಪಡಿಸಲಾಗಿದ್ದು, ದೇಶದ ಯಾವುದೇ ನ್ಯಾಯಾಲಯ ಅಥವಾ ಪ್ರಾಧಿಕಾರದ ಮುಂದೆ ವಕೀಲಿಕೆ ಮಾಡದಂತೆ ಶಾಶ್ವತವಾಗಿ ತಡೆ ಹಿಡಿಯಲಾಗಿದೆ. ಬೆಳಗಾವಿಯ ಮತ್ತೊಬ್ಬ ವಕೀಲ ಪ್ರಭು ಶಿವಪ್ಪ ಯತ್ನಟ್ಟಿ ಅವರ ಸನ್ನದನ್ನೂ ಶಾಶ್ವತವಾಗಿ ರದ್ದುಪಡಿಸಲಾಗಿದ್ದು, ₹ 20 ಸಾವಿರ ದಂಡ ವಿಧಿಸಲಾಗಿದೆ' ಎಂದು ಅಧ್ಯಕ್ಷ ವಿಶಾಲ ರಘು ತಿಳಿಸಿದ್ದಾರೆ.

'ಈ ಇಬ್ಬರ ವಿರುದ್ಧದ ವೃತ್ತಿ ದುರ್ನಡತೆ ಆರೋಪಗಳ ವಿಚಾರಣೆ ನಡೆಸಿದ ಪರಿಷತ್‌ನ ಶಿಸ್ತುಕ್ರಮ ಸಮಿತಿಯು ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಂಡಿದೆ' ಎಂದು ಪರಿಷತ್ ಕಾರ್ಯದರ್ಶಿ ಹೊರಡಿಸಿರುವ ಪ್ರಕಟಣೆಯಲ್ಲೂ ತಿಳಿಸಲಾಗಿದೆ.

'ವಂದೇ ಭಾರತ್' ಎಕ್ಸ್‌ಪ್ರೆಸ್: 10 ಕಿ.ಮೀ.ಗೆ ₹410 ದರ

ಬೆಂಗಳೂರು: ಬೆಂಗಳೂರು–ಧಾರವಾಡ ನಡುವೆ ಸಂಚರಿಸಲಿರುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಟಿಕೆಟ್ ದರವು ಚರ್ಚೆಗೆ ಗ್ರಾಸವಾಗಿದೆ. ಕೆಲವರು ಈ ಟಿಕೆಟ್ ದರ ಟೀಕಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರತಿಕ್ರಿಯಿಸಿದ್ದಾರೆ.

ನಗರದ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ಹಾಗೂ ಯಶವಂತಪುರ ರೈಲು ನಿಲ್ದಾಣಕ್ಕೆ ನಿಗದಿಪಡಿಸಿರುವ ದರಕ್ಕೆ ಕೆಲವರು ವಿರೋಧ ವ್ಯಕ್ತಪಡಿಸಿದ್ದಾರೆ. ಕೆಎಸ್‌ಆರ್‌ನಿಂದ (ಮೆಜೆಸ್ಟಿಕ್) ಯಶವಂತಪುರಕ್ಕೆ ₹410 (ಅಂದಾಜು 10 ಕಿ.ಮೀ, ಎಸಿ ಚೇರ್ ಕಾರ್) ದರವಿದೆ. ಎಕ್ಸಿಕ್ಯುಟಿವ್ ಕ್ಲಾಸ್‌ಗೆ ₹545 ದರ ನಿಗದಿಪಡಿಸಲಾಗಿದೆ.

ಇಲ್ಲಿಗೆ ಬಿಎಂಟಿಸಿ ಬಸ್‌ನಲ್ಲಿ ಟಿಕೆಟ್ ದರವು ₹ 15, 'ನಮ್ಮ ಮೆಟ್ರೊ' ರೈಲು ಟಿಕೆಟ್ ದರ ₹ 26. ಆದರೆ, 'ವಂದೇ ಭಾರತ್'ನ ದರ 23 ಪಟ್ಟು ದುಬಾರಿಯಾಗಿದೆ ಎಂದು ಪ್ರಯಾಣಿಕ-ರೊಬ್ಬರು ಟೀಕಿಸಿದ್ದಾರೆ.

ಹರಸಾಹಸ...

ನಗರದ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಮಂಗಳವಾರ ಮಹಿಳೆಯರು ಅಪಾಯ ಲೆಕ್ಕಿಸದೆಯೇ ಹಳಿ ದಾಟಿ ಪೈಪ್‌ಗಳ ಮೂಲಕ ರೈಲು ಏರಿದರು.

–ಪ್ರಜಾವಾಣಿ ಚಿತ್ರ/ರಂಜು ಪಿ.

ಸೂಪರ್‌ಟೆಕ್ ಸಂಸ್ಥೆ ಮಾಲೀಕ ಆರ್‌.ಕೆ.ಅರೋರಾ ಬಂಧನ

ನವದೆಹಲಿ (ಪಿಟಿಐ): ರಿಯಲ್ ಎಸ್ಟೇಟ್ ಕಂಪನಿ ಸೂಪರ್‌ಟೆಕ್‌ನ ಅಧ್ಯಕ್ಷ ಮತ್ತು ಮಾಲೀಕ ಆರ್.ಕೆ.ಅರೋರಾ ಅವರನ್ನು ಹಣ ಅಕ್ರಮ ವರ್ಗಾವಣೆ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳವಾರ ಬಂಧಿಸಲಾಗಿದೆ.

ಹಣ ಅಕ್ರಮ ವರ್ಗಾವಣೆ ನಿಯಂತ್ರಣ (ಪಿಎಂಎಲ್‌ಎ) ಕಾಯ್ದೆಯ ಕ್ರಿಮಿನಲ್ ಸೆಕ್ಷನ್‌ಗಳ ಅನ್ವಯ ಅವರನ್ನು ವಶಕ್ಕೆ ಪಡೆದು ತನಿಖೆಗೆ ಒಳಪಡಿಸಲಾಗಿತ್ತು. ಬುಧವಾರ ಅವರನ್ನು ಪಿಎಂಎಲ್‌ಎ ವಿಶೇಷ ಕೋರ್ಟ್ ಎದುರು ಹಾಜರುಪಡಿಸುವ ಸಂಭವವಿದೆ.

ಸೂಪರ್‌ಟೆಕ್ ಸಮೂಹದ ನಿರ್ದೇಶಕರು ಮತ್ತು ಪ್ರವರ್ತಕರ ವಿರುದ್ಧ ದೆಹಲಿ, ಹರಿಯಾಣ, ಉತ್ತರ ಪ್ರದೇಶದಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಏಪ್ರಿಲ್ ತಿಂಗಳಲ್ಲಿ ಜಾರಿ ನಿರ್ದೇಶನಾಲಯವು ಕಂಪನಿ ಮತ್ತು ನಿರ್ದೇಶಕರಿಗೆ ಸೇರಿದ್ದ ₹ 40 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿಗಳನ್ನು ಜಪ್ತಿ ಮಾಡಿತ್ತು.

ಏಪ್ರಿಲ್ ತಿಂಗಳಲ್ಲಿ ಈ ಬಗ್ಗೆ ಹೇಳಿಕೆ ನೀಡಿದ್ದ ಇ.ಡಿ, 'ರಿಯಲ್ ಎಸ್ಟೇಟ್ ಯೋಜನೆಗಳಡಿ ಫ್ಲಾಟ್‌ಗಳ ಬುಕ್ಕಿಂಗ್‌ಗೆ ಸಂಬಂಧಿಸಿದಂತೆ ಗ್ರಾಹಕರಿಂದ ಮುಂಗಡವಾಗಿ ಹಣ ಪಡೆದಿದ್ದು, ಬಳಿಕ ಒಪ್ಪಂದದಂತೆ ಫ್ಲಾಟ್‌ಗಳ ಮಾಲೀಕತ್ವ ಹಸ್ತಾಂತರಿಸಲು ವಿಫಲರಾಗಿದ್ದರು. ಹೀಗಾಗಿ, ಕಂಪನಿ ಮತ್ತು ಅದರ ನಿರ್ದೇಶಕರ ವಿರುದ್ಧ ಕ್ರಿಮಿನಲ್ ಸಂಚು ಕುರಿತು ಮೊಕದ್ದಮೆ ದಾಖಲಿಸಲಾಗಿತ್ತು ಎಂದು ತಿಳಿಸಿತ್ತು. ಕಂಪನಿ ಗ್ರಾಹಕರಿಂದ ಹಣ ಸಂಗ್ರಹಿಸಿದ್ದು ತನಿಖೆಯಿಂದ ದೃಢಪಟ್ಟಿತ್ತು. ಅಲ್ಲದೆ, ನಿರ್ದಿಷ್ಟ ಯೋಜನೆಗಳಿಗೆ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದಲೂ ಫ್ಲ್ಯಾಟ್‌ಗಳ ನಿರ್ಮಾಣಕ್ಕಾಗಿ ಹಣ ಸಾಲ ಪಡೆದಿತ್ತು. ಆದರೆ, ಈ ಹಣವನ್ನು ಬಳಿಕ ಸಮೂಹದ ಕಂಪನಿಗಳ ಹೆಸರಿನಲ್ಲಿ ಆಸ್ತಿ ಖರೀದಿಸಲು ದುರ್ಬಳಕೆ ಮಾಡಿಕೊಳ್ಳಲಾಗಿತ್ತು ಎಂದು ಎಫ್‌ಐಆರ್‌ನಲ್ಲಿ ನಮೂದಿಸಲಾಗಿದೆ.

'ಸುರಕ್ಷತಾ ದ್ವೀಪ'ದಿಂದ ವಿದೇಶಿ ಪ್ರಜೆ ಬ್ಯಾಗ್ ಪತ್ತೆ

ಬೆಂಗಳೂರು: ಮಹಿಳೆಯರು, ಮಕ್ಕಳು ಹಾಗೂ ವೃದ್ಧರ ಸುರಕ್ಷತೆಗಾಗಿ ನಗರದ 30 ಸ್ಥಳಗಳಲ್ಲಿ ಸ್ಥಾಪಿಸಿರುವ 'ಸುರಕ್ಷತಾ ದ್ವೀಪ' (ಸೇಫ್ಟಿ ಐಲ್ಯಾಂಡ್) ವ್ಯವಸ್ಥೆಗೆ ಜನರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಇದೇ ವ್ಯವಸ್ಥೆ ಬಳಸಿಕೊಂಡಿರುವ ವಿದೇಶಿ ಪ್ರಜೆಯೊಬ್ಬರು, ತಾವು ಕಳೆದುಕೊಂಡಿದ್ದ ಬ್ಯಾಗ್ ವಾಪಸು ಪಡೆದುಕೊಂಡಿದ್ದಾರೆ.

'ಮಾಲ್ಡೀವ್ಸ್ ಛಾಯಾಗ್ರಾಹಕ ಹಸನ್ ಸಿಮ್ಹಾ, ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ಗಾಗಿ ತಮ್ಮ ದೇಶದ ತಂಡದ ಜೊತೆ ನಗರಕ್ಕೆ ಬಂದಿದ್ದಾರೆ. ಸೋಮವಾರ ಸಂಜೆ ಹಸನ್ ಹಾಗೂ ಇಬ್ಬರು ಸ್ನೇಹಿತರು, ಆಟೊದಲ್ಲಿ ಅಶೋಕನಗರ ಠಾಣೆ ವ್ಯಾಪ್ತಿಯ ಗರುಡಾ ಮಾಲ್‌ಗೆ ಹೋಗಿದ್ದರು. ಮಾಲ್ ಬಳಿ ಇಳಿದುಕೊಂಡಿದ್ದ ಹಸನ್, ಆಟೊದಲ್ಲಿದ್ದ ಬ್ಯಾಗ್ ತೆಗೆದುಕೊಳ್ಳಲು ಮರೆತಿದ್ದರು. ಆಟೊ ಸ್ಥಳದಿಂದ ಹೊರಟು ಹೋಗಿತ್ತು' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

'ಕ್ಯಾಮೆರಾ, ಅದರ ಉಪಕರಣಗಳು, ಲ್ಯಾಪ್‌ಟಾಪ್, ಪಾಸ್‌ಪೋರ್ಟ್ ಹಾಗೂ ಇತರೆ ವಸ್ತುಗಳು ಬ್ಯಾಗ್‌ನಲ್ಲಿ-ದ್ದವು. ಆಟೊ ಪತ್ತೆ ಮಾಡಲು ಹಸನ್ ಹಾಗೂ ಸ್ನೇಹಿತರು ಪ್ರಯತ್ನಿಸಿದ್ದರು. ಆದರೆ, ಯಾವುದೇ ಸುಳಿವು ಸಿಕ್ಕಿರಲಿಲ್ಲ. ಸ್ಥಳೀಯ ಜನರ ಸಲಹೆಯಂತೆ ಸುರಕ್ಷತಾ ದ್ವೀಪದ ಬಳಿ ಹೋಗಿದ್ದ ಹಸನ್, ಘಟನೆ ಬಗ್ಗೆ ನಿಯಂತ್ರಣ ಕೊಠಡಿ ಸಿಬ್ಬಂದಿ ಮಾಹಿತಿ ನೀಡಿದ್ದರು' ಎಂದರು.

'ಕೆಲ ನಿಮಿಷಗಳಲ್ಲಿ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿ ಮಾಹಿತಿ ಪಡೆದುಕೊಂಡಿದ್ದರು. ಇದಾದ ಕೆಲ ಗಂಟೆಗಳಲ್ಲಿ ಆಟೊವನ್ನು ಪತ್ತೆ ಮಾಡಿರುವ ಸಿಬ್ಬಂದಿ, ಹಸನ್ ಅವರಿಗೆ ಬ್ಯಾಗ್ ಹಿಂದಿರುಗಿಸಿದ್ದಾರೆ' ಎಂದು ಹೇಳಿದರು.

ಪೀಣ್ಯ–ಹೆಬ್ಬಾಳ–ಕೆ.ಆರ್‌.ಪುರ ಹಾಗೂ ಹೊಸೂರು ನಡುವೆ ನಿರ್ಮಾಣ

65 ಕಿ.ಮೀ. ಸುರಂಗ ಮಾರ್ಗ: ಕೇಂದ್ರಕ್ಕೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಸಂಚಾರ ದಟ್ಟಣೆ ಕಡಿಮೆ ಮಾಡಲು 65 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಾಣಕ್ಕೆ ಅನುಮೋದನೆ ನೀಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಸರ್ಕಾರ ಪ್ರಸ್ತಾವನೆ ಸಲ್ಲಿಸಿದೆ.

ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ನವದೆಹಲಿಯಲ್ಲಿ ಸೋಮವಾರ ಭೇಟಿ ಮಾಡಿದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಈ ಪ್ರಸ್ತಾವ ಸಲ್ಲಿಸಿದರು. ಮಂಗಳವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಜಾರಕಿಹೊಳಿ, ಪೀಣ್ಯ– ಹೆಬ್ಬಾಳ–ಕೆ.ಆರ್.ಪುರ ಹಾಗೂ ಹೊಸೂರು ನಡುವೆ ಸುರಂಗ ಮಾರ್ಗ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ. ಮೆಟ್ರೊ ಸುರಂಗ ಮಾರ್ಗದ ರೀತಿಯಲ್ಲಿ ಈ ರಸ್ತೆ ನಿರ್ಮಿಸಲು ಯೋಜಿಸಲಾಗಿದೆ ಎಂದರು.

ಮುಖ್ಯಾಂಶಗಳು

- ಹೆಬ್ಬಾಳ ಜಂಕ್ಷನ್‌ನಲ್ಲಿ ಫ್ಲೈಓವರ್ ನಿರ್ಮಾಣಕ್ಕೂ ಅನುಮೋದನೆಗೆ ಮನವಿ
- ಸಕಾರಾತ್ಮಕವಾಗಿ ಸ್ಪಂದಿಸಿದ ನಿತಿನ್ ಗಡ್ಕರಿ
- ನನೆಗುದಿಗೆ ಬಿದ್ದಿರುವ ಕಾಮಗಾರಿಗಳ ಕುರಿತು ಸಚಿವರ ಜೊತೆ ಚರ್ಚೆ

ರಾಷ್ಟ್ರೀಯ ಹೆದ್ದಾರಿ 75ರ ಶಿರಾಡಿ ಘಾಟಿಯಲ್ಲಿ ಸುರಂಗ ನಿರ್ಮಾಣಕ್ಕೆ ಕೇಂದ್ರ ಸಚಿವರು ಉತ್ಸುಕತೆ ತೋರಿದ್ದಾರೆ. ಹೊನ್ನಾವರ–ಕುಮಟಾದಲ್ಲಿ ಮೇಲ್ಸೇತುವೆ ನಿರ್ಮಾಣ, ಬೆಂಗಳೂರಿನ ಹೆಬ್ಬಾಳ ಜಂಕ್ಷನ್‌ನಲ್ಲಿ ಫ್ಲೈಓವರ್ ನಿರ್ಮಾಣಕ್ಕೆ ಅನುಮೋದನೆ ನೀಡುವಂತೆಯೂ ಮನವಿ ಸಲ್ಲಿಸಲಾಗಿದೆ ಎಂದರು.

'ರಾಯಚೂರು, ಗದಗ ಹಾಗೂ ಶಿವಮೊಗ್ಗದಲ್ಲಿ ರಿಂಗ್ ರಸ್ತೆ, ಬೆಳಗಾವಿ ನಗರದಲ್ಲಿ ಎಲಿವೇಟೆಡ್ ಕಾರಿಡಾರ್, ಚಿಕ್ಕಬಳ್ಳಾಪುರ ಹಾಗೂ ನವಲಗುಂದದಲ್ಲಿ ಬೈಪಾಸ್ ನಿರ್ಮಾಣಕ್ಕೆ ಒಪ್ಪಿಗೆ ನೀಡುವಂತೆ ಕೇಳಲಾಗಿದೆ' ಎಂದು ಅವರು ತಿಳಿಸಿದರು.

'ಬೆಂಗಳೂರು – ಮೈಸೂರು ಎಕ್ಸ್‌ಪ್ರೆಸ್‌ವೇ ಕಾಮಗಾರಿ ಮುಗಿದು ವಾಹನ ಸಂಚಾರಕ್ಕೆ ಈಗಾಗಲೇ ಮುಕ್ತಗೊಂಡಿದೆ. ಆದರೆ, ಈಗಿರುವ ರಾಷ್ಟ್ರೀಯ ಹೆದ್ದಾರಿಯ (ಹಳೆ ಬೆಂಗಳೂರು–ಮೈಸೂರು ರಸ್ತೆ) ಸುಧಾರಣೆ ಆಗಬೇಕಿದೆ. ಈ ಹೆದ್ದಾರಿಯು ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣ ಹಾಗೂ ಮೈಸೂರನ್ನು ಸಂಪರ್ಕಿಸಲಿದೆ. ಈ ಹೆದ್ದಾರಿಯ ಅಭಿವೃದ್ಧಿಗೆ ಅನುದಾನ ನೀಡುವಂತೆ ಗಡ್ಕರಿ ಅವರಿಗೆ ಕೋರಲಾಗಿದೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದರು.

ನನೆಗುದಿಗೆ ಬಿದ್ದಿರುವ ಕಾಮಗಾರಿಗಳ ಕುರಿತು ಕೇಂದ್ರ ಸಚಿವರ ಜತೆಗೆ ಚರ್ಚಿಸಲಾಗಿದೆ. ರಾಜ್ಯದ 38 ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೆ ಏರಿಸಬೇಕು ಎಂದು ಕೇಂದ್ರಕ್ಕೆ ಈ ಹಿಂದೆಯೇ ಪ್ರಸ್ತಾವ ಸಲ್ಲಿಸಲಾಗಿತ್ತು. ಈಗ ಮತ್ತೊಮ್ಮೆ ಪ್ರಸ್ತಾವ ಸಲ್ಲಿಸಲಾಗಿದೆ. ಕೇಂದ್ರ ಹಾಗೂ ರಾಜ್ಯದ ಅಧಿಕಾರಿಗಳ ಜಂಟಿ ಸಭೆ ನಡೆಸಿ ಕಾಮಗಾರಿಗಳ ಕುರಿತು ಚರ್ಚೆ ನಡೆಸಲಿದ್ದೇವೆ ಎಂದು ಅವರು ಹೇಳಿದರು.

ದೆಹಲಿ ಕರ್ನಾಟಕ ಭವನದ ನಿರ್ಮಾಣ ಕಾಮಗಾರಿಯನ್ನು ಗಡುವಿನೊಳಗೆ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ. ಈ ಕಾಮಗಾರಿಯ ವೆಚ್ಚ ಹೆಚ್ಚಾಗಿದೆ. ಯೋಜನೆಯ ವಿನ್ಯಾಸದಲ್ಲಿ ಸ್ವಲ್ಪ ಬದಲಾವಣೆ ಮಾಡಿರುವುದು ಇದಕ್ಕೆ ಕಾರಣ ಎಂದು ಅವರು ತಿಳಿಸಿದರು.

ನಾನು ರಾಜ್ಯ ಅಧ್ಯಕ್ಷ ಸ್ಥಾನದ ಆಕಾಂಕ್ಷಿ: ರೇಣುಕಾಚಾರ್ಯ

‘ಸೋತರೂ ಬುದ್ಧಿ ಬಂದಿಲ್ಲ’

ಪ್ರಜಾವಾಣಿ ವಾರ್ತೆ

ಹೊನ್ನಾಳಿ: ‘ವಿಧಾನಸಭೆ ಚುನಾವಣೆಯಲ್ಲಿ ಸೋತು ಸುಣ್ಣವಾದರೂ ಬಿಜೆಪಿ ನಾಯಕರಿಗೆ ಇನ್ನೂ ಬುದ್ಧಿ ಬಂದಂತೆ ಕಾಣುತ್ತಿಲ್ಲ’ ಎಂದು ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಟೀಕಿಸಿದರು.

ಪಟ್ಟಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಚುನಾವಣೆ ಮುಗಿದು ಒಂದೂವರೆ ತಿಂಗಳು ಕಳೆದರೂ ಪಕ್ಷದ ವರಿಷ್ಠರಿಗೆ ವಿಧಾನಸಭೆಯ ವಿಪಕ್ಷ ನಾಯಕನನ್ನು ಆಯ್ಕೆ ಮಾಡಲು ಸಾಧ್ಯವಾಗುತ್ತಿಲ್ಲ. ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಸೋಲಿನ ಹೊಣೆ ಹೊತ್ತು ರಾಜೀನಾಮೆ ನೀಡಬೇಕಿತ್ತು. ಆದರೆ, ಈವರೆಗೂ ನೀಡಿಲ್ಲ. ರಾಜೀನಾಮೆ ನೀಡಿದ್ದಾಗಿ ಒಮ್ಮೆ ಹೇಳುತ್ತಾರೆ. ಮತ್ತೊಮ್ಮೆ ರಾಜೀನಾಮೆ ನೀಡಿಲ್ಲ ಎನ್ನುತ್ತಾರೆ’ ಎಂದು ದೂರಿದರು.

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ರಾಜ್ಯ ಸುತ್ತುವುದು ಮುಖ್ಯವಲ್ಲ. ಅವರಿಗೆ ಮತಗಳನ್ನು ತರುವ ಶಕ್ತಿ ಇರಬೇಕು. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರ ಜೋಡಿ ರಾಜ್ಯದಾದ್ಯಂತ ಸಂಚರಿಸಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದಿದೆ. ನಮ್ಮವರು ಸೂಜಿ– ದಾರದಂತೆ ಪೋಣಿಸುವ ಕೆಲಸ ಮಾಡದೇ ಕತ್ತರಿಸುವ ಕತ್ತರಿಯಾದರು. ಕಾಲೆಳೆದು ನಮ್ಮ ಸೋಲಿಗೆ ಕಾರಣರಾದರು. ಒಳ ಹೊಡೆತಗಳಿಂದ ನಮ್ಮ ಸೋಲಾಯಿತು’ ಎಂದು ಅವರು ವಿಶ್ಲೇಷಿಸಿದರು.

‘ಬಿ.ಎಸ್.ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ್ದು ಸೋಲಿಗೆ ಪ್ರಮುಖ ಕಾರಣ. ಅವರ ಕಣ್ಣೀರಿನಲ್ಲಿ ಬಿಜೆಪಿಯೂ ಕೊಚ್ಚಿ ಹೋಗಲಿದೆ ಎಂದು ದಿಂಗಾಲೇಶ್ವರ ಸ್ವಾಮೀಜಿ ಭವಿಷ್ಯ ನುಡಿದಿದ್ದರು. ಅವರು ಹೇಳಿದಂತೆಯೇ ಬಿಜೆಪಿ ಚುನಾವಣೆಯಲ್ಲಿ ಹೀನಾಯ ಸೋಲು ಅನುಭವಿಸಬೇಕಾಯಿತು’ ಎಂದರು.

‘ಒಳಮೀಸಲಾತಿ ಜಾರಿಗೆ ತನ್ನಿ ಎಂದು ನಮ್ಮನ್ನು ಯಾರೂ ಕೇಳಿರಲಿಲ್ಲ. ಮೀಸಲಾತಿ ವಿಚಾರಕ್ಕೆ ಕೈಹಾಕಬೇಡಿ ಎಂದು ನಾನೂ ಸೇರಿದಂತೆ ಹಲವು ಮುಖಂಡರು ಹೇಳಿದರೂ ನಮ್ಮ ಸಲಹೆಯನ್ನು ಪರಿಗಣಿಸಲಿಲ್ಲ. ಇದರ ಪರಿಣಾಮ ಬಿಜೆಪಿಯ ಘಟಾನುಘಟಿಗಳೆಲ್ಲರೂ ಸೋಲಬೇಕಾಯಿತು’ ಎಂದರು.

ಬಿಜೆಪಿ ಸರ್ಕಾರ ಪಡಿತರ ಅಕ್ಕಿಯ ಪ್ರಮಾಣವನ್ನೂ ಕಡಿತಗೊಳಿಸಿತು. ಓಪಿಎಸ್ ಜಾರಿಗಾಗಿ ನೌಕರರು ಮಾಡಿದ ಮನವಿಯನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಜಗದೀಶ್ ಶೆಟ್ಟರ್ ಹಾಗೂ ಕೆ.ಎಸ್. ಈಶ್ವರಪ್ಪ ಸೇರಿದಂತೆ ಅನೇಕ ನಾಯಕರಿಗೆ ಟಿಕೆಟ್ ತಪ್ಪಿಸಿದ್ದೂ ಸೋಲಿಗೆ ಪ್ರಮುಖ ಕಾರಣವಾಯಿತು ಎಂದರು.

‘ಪಕ್ಷದ ಹಿರಿಯ ಮುಖಂಡ ಮಾಡಾಳ್ ವಿರೂಪಾಕ್ಷಪ್ಪ ಅವರ ಮಗನಿಗೆ ಚನ್ನಗಿರಿ ಕ್ಷೇತ್ರದ ಟಿಕೆಟ್ ನೀಡಬೇಕಾಗಿತ್ತು. ಅದನ್ನು ತಪ್ಪಿಸಿದ್ದು ಸರಿಯಲ್ಲ’ ಎಂದ ಅವರು, ‘ರಾಜ್ಯದಲ್ಲಿ 72 ಹೊಸ ಮುಖಗಳಿಗೆ ಟಿಕೆಟ್ ನೀಡಿದ್ದೂ ಸೋಲಿಗೆ ಕಾರಣ’ ಎಂದರು.

ಲೋಕಸಭೆ ಚುನಾವಣೆ ಆಕಾಂಕ್ಷಿ: ‘ಹೊನ್ನಾಳಿ, ನ್ಯಾಮತಿ ಅವಳಿ ತಾಲ್ಲೂಕಿನ ಜನತೆ ಸೇರಿದಂತೆ ಜಿಲ್ಲೆಯ ಕಾರ್ಯಕರ್ತರು ಲೋಕಸಭೆ ಚುನಾವಣೆಯ ಸ್ಪರ್ಧಿಸಿದರೆ ಗೆಲ್ಲಿಸುವುದಾಗಿ ಹೇಳುತ್ತಿದ್ದಾರೆ. ಸಾಧಕ ಭಾಧಕ ಅವಲೋಕಿಸಿ ತೀರ್ಮಾನಿಸಿದ್ದೇನೆ. ಸಂಸದ ಜಿ.ಎಂ.ಸಿದ್ದೇಶ್ವರ್ ಅವರೆದುರು ಈ ಕುರಿತ ಇಂಗಿತ ವ್ಯಕ್ತಪಡಿಸಿದ್ದೇನೆ. ಪಕ್ಷ ಟಿಕೆಟ್ ಕೊಟ್ಟರೆ ಚುನಾವಣೆ ಎದುರಿಸಲು ಸಿದ್ಧನಿದ್ದೇನೆ ಎಂದರು.

ಅಧ್ಯಕ್ಷ ಸ್ಥಾನದ ಆಕಾಂಕ್ಷಿ: ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರಾಗಲು ಅನೇಕರು ಸಮರ್ಥರಿದ್ದಾರೆ. ಅವಕಾಶ ಸಿಕ್ಕರೆ ಆ ಸ್ಥಾನವನ್ನು ಸಮರ್ಥವಾಗಿ ನಿಭಾಯಿಸುತ್ತೇನೆ ಎಂದು ಹೇಳಿದರು.

‘ಅರ್ಧ ಲೀಟರ್ ಹಾಲು ಯಾರ್‍ಗೆ ಬೇಕು’

‘ಜನವರಿ ತಿಂಗಳಿನಿಂದಲೇ ಕಾಂಗ್ರೆಸ್ ಪಕ್ಷ 5 ಗ್ಯಾರಂಟಿಗಳನ್ನು ಘೋಷಣೆ ಮಾಡಿತು. ಆದರೆ ಬಿಜೆಪಿ ನಾಯಕರು ಆಗ ಮಲಗಿದ್ದು, ಚುನಾವಣೆ ಒಂದು ವಾರ ಇರುವಾಗ ಅರ್ಧ ಲೀಟರ್ ಹಾಲು ನೀಡುವುದಾಗಿ ಘೋಷಿಸಿದರು. ಬಿಜೆಪಿ ಪ್ರಣಾಳಿಕೆ ತಯಾರಿಕೆ ಹೊಣೆಯನ್ನು ಹಿರಿಯರಿಗೆ ವಹಿಸದೇ ಕೆ.ಸುಧಾಕರ್ ಅವರಿಗೆ ನೀಡಿದ್ದರಿಂದ ಪಕ್ಷ ಸೋಲಬೇಕಾಯಿತು’ ಎಂದು ರೇಣುಕಾಚಾರ್ಯ ಟೀಕಿಸಿದರು.

‘ನಮ್ಮ ಹಳ್ಳಿಯ ಜನ ಹಾಲು ಕೇಳಿದರೆ ಕೊಡದ ತುಂಬ ಕೊಡುವ ಪದ್ಧತಿ ಅನುಸರಿಸುತ್ತಾರೆ. ಅಂಥದ್ದರಲ್ಲಿ ಅವರಿಗೆ ಅರ್ಧ ಲೀಟರ್ ಹಾಲು ಕೊಡಲು ಹೋಗಿದ್ದು ತಪ್ಪು. ನಾವು ಅಧಿಕಾರದಲ್ಲಿ ಇದ್ದಾಗ 10 ಕೆ.ಜಿ. ಅಕ್ಕಿ ಕೊಡಲಿಲ್ಲ. 3 ಉಚಿತ ಸಿಲಿಂಡರ್‌ಗಳನ್ನು ಆಗಲೇ ಕೊಡಬೇಕಿತ್ತು’ ಎಂದರು.

‘ಒಳ ಒಪ್ಪಂದಕ್ಕೆ ‘ಟ್ರೀಟ್‌ಮೆಂಟ್’ ಖಚಿತ’

ಬೆಂಗಳೂರು: ರಾಜ್ಯದಲ್ಲಿ ಚುನಾವಣೆ ವೇಳೆ ಒಳ ಒಪ್ಪಂದ ಆಗಿದ್ದರೆ ಅದಕ್ಕೆ ‘ಟ್ರೀಟ್‌ಮೆಂಟ್’ ಖಚಿತ ಎಂದು ಸಂಸದ ಡಿ.ವಿ. ಸದಾನಂದಗೌಡ ಹೇಳಿದರು.

ಬಿಜೆಪಿ ರಾಜ್ಯ ಕಚೇರಿಯಲ್ಲಿ ಮಂಗಳವಾರ ನಡೆದ ‘ನನ್ನ ಬೂತ್ ಶಕ್ತಿಶಾಲಿ ಬೂತ್’ ಅಭಿಯಾನ ಕಾರ್ಯಕ್ರಮದ ಬಳಿಕ ಸುದ್ದಿಗಾರರ ಜತೆ ಮಾತನಾಡಿ, ಬಿಜೆಪಿಯಲ್ಲಿ ಒಳ ಒಪ್ಪಂದಗಳಿಗೆ ಅವಕಾಶವಿಲ್ಲ. ಆದರೆ, ಅಲ್ಲೊಂದು ಇಲ್ಲೊಂದು ಆಗಿರಬಹುದು. ಒಂದು ವೇಳೆ ಆಗಿದ್ದರೂ ಅದು ವೈಯಕ್ತಿಕ ದ್ವೇಷಕ್ಕಾಗಿ ಆಗಿರಬಹುದು ಎಂದರು.

‘ಸಣ್ಣಪುಟ್ಟ ಒಳ ಒಪ್ಪಂದವನ್ನು ರಾಜಕಾರಣದಲ್ಲಿ ದೊಡ್ಡ ಸಂಗತಿ ಎಂದು ಭಾವಿಸುವುದಿಲ್ಲ. ಅಂತಹದ್ದು ಆಗಬಾರದಿತ್ತು. ನಿಜವಾದ ತಪ್ಪಿತಸ್ಥರ ವಿರುದ್ಧ ‘ಟ್ರೀಟ್‌ಮೆಂಟ್’ ಕೊಡಲು ಪಕ್ಷ ಸಿದ್ಧವಿದೆ. ಸಂಘಟನೆಯಲ್ಲಿ ಹಲವಾರು ಸಂದರ್ಭದಲ್ಲಿ ತಪ್ಪು ಮಾಡಿದವರನ್ನು ತಿದ್ದುವ ಕೆಲಸ ಹಿಂದಿನಿಂದಲೂ ನಡೆದಿದೆ. ಆದರೆ ಆತುರಾತುರವಾಗಿ ಕ್ರಮ ಕೈಗೊಳ್ಳುವುದಿಲ್ಲ’ ಎಂದರು. ‘ಸಿ.ಟಿ.ರವಿ ಅವರ ಕ್ಷೇತ್ರದಲ್ಲಿ ಒಳ ರಾಜಕೀಯದ ಮೂಲಕ ಒಳ ಒಪ್ಪಂದ ಆದಂತಿದೆ’ ಎಂದು ಅಭಿಪ್ರಾಯಪಟ್ಟರು.

‘ಚುನಾವಣೆಯಲ್ಲಿ ಸೋತ ತಕ್ಷಣ ಬೇರೆ ಪಕ್ಷದಿಂದ ಬಂದವರ ಮೇಲೆ ಆರೋಪ ಹೊರಿಸುವುದು ಸರಿಯಲ್ಲ’ ಎಂದು ಕೆ.ಎಸ್.ಈಶ್ವರಪ್ಪ ಅವರ ಹೇಳಿಕೆಯನ್ನು ಟೀಕಿಸಿದರು.

ಶಿಸ್ತು ಮೀರಿದರೆ ನೋಟಿಸ್: ನಳಿನ್

ಬೆಂಗಳೂರು: ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಮತ್ತು ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಸಂಬಂಧಿಸಿದಂತೆ ಪಕ್ಷದ ಘನತೆಗೆ ಧಕ್ಕೆ ತರುವ ಹೇಳಿಕೆಗಳನ್ನು ನೀಡಬಾರದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸೂಚನೆ ನೀಡಿದ್ದಾರೆ.

ಒಂದು ವೇಳೆ ಪಕ್ಷದ ಶಿಸ್ತು ಮೀರಿ ಹೇಳಿಕೆಗಳನ್ನು ನೀಡಿದರೆ ಅಂತಹವರಿಗೆ ನೋಟಿಸ್ ನೀಡಿ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ಹೇಳಿದ್ದಾರೆ.

‘ಅನಧಿಕೃತ ನಿವೇಶನ, ಕಟ್ಟಡಗಳಿಗೆ ಬಿ ಖಾತಾ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿನ ವಿವಿಧ ನಗರ ಪ್ರದೇಶಗಳ ಅನಧಿಕೃತ ನಿವೇಶನ ಹಾಗೂ ಕಟ್ಟಡಗಳಿಗೆ ‘ಬಿ ಖಾತಾ’ ನೀಡಲು ನಿರ್ಧರಿಸಲಾಗಿದೆ. ಇದಕ್ಕೆ ಶೀಘ್ರವೇ ರೂಪುರೇಷೆ ಸಿದ್ಧವಾಗಲಿದೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

ವಿಧಾನಸೌಧದಲ್ಲಿ ಮಂಗಳವಾರ ಅವರು ಸುದ್ದಿಗಾರರ ಜತೆ ಮಾತನಾಡಿದರು. ಬೆಂಗಳೂರು ಹೊರತುಪಡಿಸಿ ರಾಜ್ಯದ ಇತರೆ ನಗರಗಳಲ್ಲಿ ಯೋಜನೆ ಜಾರಿಯಾಗಲಿದೆ.ಇದರಿಂದ ಸರ್ಕಾರದ ಬೊಕ್ಕಸಕ್ಕೆ ₹1,100 ಕೋಟಿ ಸಂಗ್ರಹವಾಗುತ್ತದೆ ಎಂದರು.

ನಗರದ ಪ್ರದೇಶಗಳಲ್ಲಿ ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸಲು ಹಿಂದೆ ಕಾನೂನು ರೂಪಿಸಲಾಗಿತ್ತು (94 ಸಿ). ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿದೆ. ಅದಕ್ಕಾಗಿ ರಚಿಸಲಾದ ಸಮಿತಿ ವರದಿ ಪಡೆದ ನಂತರ ಕೋರ್ಟ್ ಗಮನಕ್ಕೆ ತರಲಾಗುವುದು. ಕೋರ್ಟ್ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ರಾಜ್ಯದ ಕೆಲ ನಗರಗಳಲ್ಲಿ ಸ್ಮಾರ್ಟ್‌ಸಿಟಿ ಕಾಮಗಾರಿಗಳ ಕುರಿತು ದೂರುಗಳು ಬಂದಿವೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಜಲಜೀವನ್ ಮಿಷನ್ ಯೋಜನೆಯಲ್ಲಿ ಅವ್ಯವಹಾರದ ಆರೋಪಗಳು ಕೇಳಿ ಬಂದಿದ್ದು, ತಾತ್ಕಾಲಿಕವಾಗಿ ಕಾಮಗಾರಿ ಸ್ಥಗಿತಗೊಳಿಸಲು ಸೂಚಿಸಲಾಗಿದೆ. ತಪ್ಪಿತಸ್ಥರಿಗೆ ದಂಡವಿಧಿಸಲಾಗುವುದು ಎಂದರು.

ರಾಜ್ಯದ ಏಳು ನಗರಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ತುರ್ತು ಅಗತ್ಯವಿರುವ ಕಡೆ ಖಾಸಗಿ ಕೊಳವೆ ಬಾವಿ ವಶಕ್ಕೆ ಪಡೆದು, ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಅನುಮತಿಸಲಾಗಿದೆ ಎಂದರು.

ಇದೇ ಆಗಸ್ಟ್‌ನಿಂದ ತರಗತಿಗಳು ಆರಂಭ

ಆರ್‌.ವಿ. ಕಾನೂನು ಕಾಲೇಜಿಗೆ ಬಿಸಿಐ ಮಾನ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಆರ್‌.ವಿ. ವಿಶ್ವವಿದ್ಯಾಲಯವು ನೂತನವಾಗಿ ಪ್ರಾರಂಭಿಸುತ್ತಿರುವ ಆರ್‌.ವಿ. ಕಾನೂನು ಕಾಲೇಜು ಹಾಗೂ ಅದರಲ್ಲಿ ಆರಂಭಿಸಲಿರುವ ಐದು ವರ್ಷಗಳ ಬಿ.ಎ.- ಎಲ್‌ಎಲ್‌ಬಿ ಹಾಗೂ ಬಿ.ಬಿ.ಎ.- ಎಲ್‌ಎಲ್‌ಬಿ ಕೋರ್ಸ್‌ಗಳಿಗೆ ಭಾರತೀಯ ವಕೀಲರ ಪರಿಷತ್ತು (ಬಿಸಿಐ) ಮಾನ್ಯತೆ ನೀಡಿದೆ.

'ಆರ್‌.ವಿ. ವಿಶ್ವವಿದ್ಯಾಲಯ ಐದು ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ. ಆರನೇ ಸಂಸ್ಥೆಯಾಗಿ ಕಾನೂನು ಕಾಲೇಜು ಆರಂಭಿಸುತ್ತಿದೆ. ವಕೀಲರ ಪರಿಷತ್ತು ಅನುಮತಿ ನೀಡಿರುವುದರಿಂದ ಇದೇ ವರ್ಷದ ಆಗಸ್ಟ್‌ನಿಂದ ಕಾನೂನು ಕೋರ್ಸ್‌ಗಳ ತರಗತಿಗಳು ಆರಂಭವಾಗಲಿವೆ' ಎಂದು ಆರ್‌.ವಿ. ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

'ಕಾನೂನು ಕಾಲೇಜು ಪ್ರಾರಂಭಿಸಲು ನಾವು ಉತ್ಸುಕರಾಗಿದ್ದೇವೆ. ಈಗಾಗಲೇ ಇರುವ 5 ಸಂಸ್ಥೆಗಳ ಜತೆಗೆ ಕಾನೂನು ಕಾಲೇಜು ಆರಂಭವಾಗುತ್ತಿರುವುದರಿಂದ ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಅವಕಾಶ ಕಲ್ಪಿಸುವ ನಮ್ಮ ಸಂಸ್ಥೆಯ ಬದ್ಧತೆ ಮತ್ತಷ್ಟು ಹೆಚ್ಚಲಿದೆ. ಕಾನೂನು ಕಾಲೇಜಿನ ಮೂಲಕ ಸಹಜ ನ್ಯಾಯದ ತತ್ವಗಳು, ಪ್ರಾಮಾಣಿಕತೆ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಎತ್ತಿಹಿಡಿಯುವಂತಹ ವಕೀಲರನ್ನು ಭವಿಷ್ಯದ ತಲೆಮಾರಿಗಾಗಿ ರೂಪಿಸುವ ಗುರಿ ಇದೆ. ನಮ್ಮ ವಿದ್ಯಾರ್ಥಿಗಳು ವ್ಯವಹಾರ, ಅರ್ಥಶಾಸ್ತ್ರ, ತಂತ್ರಜ್ಞಾನ ಮತ್ತು ಸಾರ್ವಜನಿಕ ನೀತಿಯ ಜತೆಗೆ ಕಾನೂನು ಅಭ್ಯಾಸ ಮಾಡುವ ಅವಕಾಶ ಪಡೆಯಲಿದ್ದಾರೆ' ಎಂದು ಆರ್‌.ವಿ. ಕಾನೂನು ಕಾಲೇಜಿನ ಡೀನ್ ಕೂಡ ಆಗಿರುವ ಆರ್‌.ವಿ. ವಿ.ವಿ ಕುಲಪತಿ ಪ್ರೊ. ವೈ.ಎಸ್‌.ಆರ್‌. ಮೂರ್ತಿ ಹೇಳಿದ್ದಾರೆ.

> ಜಗತ್ತಿನ ವಿವಿಧ ಅತ್ಯುತ್ತಮ ಸಂಸ್ಥೆಗಳ ಬೋಧಕರು ನಮ್ಮ ವಿದ್ಯಾರ್ಥಿಗಳಿಗೆ ಬೋಧಿಸಲಿದ್ದಾರೆ. ಇದಕ್ಕಾಗಿ ಹಲವಾರು ಸಂಸ್ಥೆಗಳ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ
> **ಪ್ರೊ. ವೈ.ಎಸ್‌.ಆರ್‌. ಮೂರ್ತಿ,** ಕುಲಪತಿ ಮತ್ತು ಕಾನೂನು ಕಾಲೇಜಿನ ಡೀನ್ ಆರ್‌.ವಿ. ವಿಶ್ವವಿದ್ಯಾಲಯ

> ಇಂದಿನ ಅಗತ್ಯಕ್ಕೆ ತಕ್ಕಂತೆ ಪಠ್ಯಕ್ರಮ ರೂಪಿಸಲಾಗಿದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಒಟ್ಟು ₹ 1 ಕೋಟಿ ಮೊತ್ತದ 75 ವಿದ್ಯಾರ್ಥಿವೇತನ ನೀಡಲಾಗುವುದು
> **ಎ.ವಿ.ಎಸ್‌. ಮೂರ್ತಿ,** ಕುಲಾಧಿಪತಿ, ಆರ್‌.ವಿ. ವಿಶ್ವವಿದ್ಯಾಲಯ

RV UNIVERSITY
Go, change the world
an initiative of RV EDUCATIONAL INSTITUTIONS

ಕಾನೂನು ಕಾಲೇಜಿಗೆ ಮಾನ್ಯತೆ ನೀಡಿರುವುದನ್ನು ಸ್ವಾಗತಿಸಿರುವ ಆರ್‌.ವಿ. ವಿಶ್ವವಿದ್ಯಾಲಯದ ಕುಲಾಧಿಪತಿ ಎ.ವಿ.ಎಸ್‌. ಮೂರ್ತಿ, 'ಅತ್ಯುತ್ತಮ ಗುಣಮಟ್ಟದ ಕಾನೂನು ಶಿಕ್ಷಣ ನೀಡುವುದಕ್ಕಾಗಿ ಭಾರತ ಹಾಗೂ ಜಗತ್ತಿನ ಪರಿಣಿತರನ್ನು ಒಳಗೊಂಡ ಅಧ್ಯಯನ ಮಂಡಳಿಯನ್ನು ರಚಿಸಲಾಗಿದೆ' ಎಂದು ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ.ಎನ್‌. ಶ್ರೀಕೃಷ್ಣ ಮತ್ತು ವರ್ಲ್ಡ್ ಸೊಸೈಟಿ ಆಫ್ ವಿಕ್ಟಿಮಾಲಜಿಯ ಮಾಜಿ ಉಪಾಧ್ಯಕ್ಷ ಪ್ರೊ.ಕೆ. ಚೊಕ್ಕಲಿಂಗಂ ಅವರು ಕಾನೂನು ಕಾಲೇಜಿನ ಸಂದರ್ಶಕ ಪ್ರಾಧ್ಯಾಪಕರಾಗಿರಲಿದ್ದಾರೆ. ಜಿಂದಾಲ್ ಗ್ಲೋಬಲ್ ಲಾ ಸ್ಕೂಲ್, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ಲಂಡನ್ ವಿಶ್ವವಿದ್ಯಾಲಯ ಸೇರಿದಂತೆ ಹಲವು ಶಿಕ್ಷಣ ಸಂಸ್ಥೆಗಳ ಜತೆ ಶೈಕ್ಷಣಿಕ ವಿನಿಮಯ ಕಾರ್ಯಕ್ರಮಗಳಿಗಾಗಿ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

'ಸುಳ್ಳುಸುದ್ದಿ ತಡೆಗೆ ಕಠಿಣ ಕಾನೂನು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳುಸುದ್ದಿ ಹರಡುವುದನ್ನು ತಡೆಯಲು, ಸೃಷ್ಟಿಸಿದವರಿಗೆ ಶಿಕ್ಷೆ ವಿಧಿಸಲು ಕಠಿಣ ಕಾನೂನು ರೂಪಿಸುವ ಚಿಂತನೆ ನಡೆದಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ವಿಧಾನಸೌಧದಲ್ಲಿ ಮಂಗಳವಾರ ನಡೆದ ಪೊಲೀಸ್ ಅಧಿಕಾರಿಗಳೊಂದಿಗಿನ ಸಭೆಯ ನಂತರ ಅವರು ಮಾತನಾಡಿದರು.

ಚುನಾವಣಾ ಸಮಯದಲ್ಲಿ ನಕಲಿ ಸುದ್ದಿಗಳ ಹಾವಳಿ ವಿಪರೀತವಾಗಿತ್ತು. ಈಗಲೂ ಹರಿದಾಡುತ್ತಿರುತ್ತವೆ. ಇಂತಹ ಸುದ್ದಿಗಳನ್ನು ಸೃಷ್ಟಿಸುವವರಿಗೆ ಶಿಕ್ಷೆ ವಿಧಿಸದಿದ್ದರೆ ಭವಿಷ್ಯದಲ್ಲಿ ಸಮಾಜಕ್ಕೆ ಮಾರಕವಾಗಬಹುದು. ಹಾಗಾಗಿ, ಈಗ ಅಸ್ತಿತ್ವದಲ್ಲಿರುವ ಕಾನೂನುಗಳಿಗೆ ತಿದ್ದುಪಡಿ ತರಬೇಕಿದೆ ಎಂದರು.

ಬಿಟ್‌ಕಾಯಿನ್ ಹಗರಣದ ತನಿಖೆಯನ್ನು ಸಿಐಡಿಗೆ ವಹಿಸಬೇಕು ಎಂದು ಬೆಂಗಳೂರು ನಗರ ಆಯುಕ್ತರು ಅಭಿಪ್ರಾಯಪಟ್ಟಿದ್ದಾರೆ. ಸಿಐಡಿ ಪುನಃಶ್ಚೇತನಗೊಂಡಿದ್ದು, ಪ್ರಕರಣದ ತನಿಖೆ ನಡೆಸಲು ಸಮರ್ಥವಾಗಿದೆ. ಕೇಂದ್ರ ಅಥವಾ ವಿದೇಶಿ ತನಿಖಾ ಸಂಸ್ಥೆಗಳೊಂದಿಗೆ ಸಂಪರ್ಕ ಸಾಧಿಸಬೇಕಿದೆ. ಸರ್ಕಾರ ತನಿಖಾ ಸಂಸ್ಥೆಗೆ ಅಗತ್ಯ ನೆರವು ನೀಡಲಿದೆ. ತನಿಖೆಯ ನಂತರ ಬಿಟ್‌ಕಾಯಿನ್ ಹಗರಣದಲ್ಲಿ ಭಾಗಿಯಾಗಿರುವರ ಹೆಸರು ಬಹಿರಂಗಪಡಿಸಲಾಗುವುದು ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಕಳ್ಳನ ಹಿಡಿದ ಕೆಎಸ್‌ಆರ್‌ಟಿಸಿ ನೌಕರರಿಗೆ ಬಹುಮಾನ

ಬೆಂಗಳೂರು: ನಗರದಿಂದ ತಿರುನಲ್ಲಾರ್‌ಗೆ ಹೊರಟಿದ್ದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಕರೊಬ್ಬರ ₹ 5 ಲಕ್ಷ ಕದ್ದು ಪರಾರಿಯಾಗುತ್ತಿದ್ದ ಆರೋಪಿಯನ್ನು ಬೆನ್ನಟ್ಟಿ ಹಿಡಿದಿದ್ದ ಚಾಲಕ ಮಂಜುನಾಥ್ ಹಾಗೂ ನಿರ್ವಾಹಕ ಸೋಮಪ್ಪ ಟಿ. ಎನ್‌. ಅವರಿಗೆ ತಲಾ ₹ 5,000 ನಗದು ಬಹುಮಾನ ನೀಡಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಅವರು ಮಂಗಳವಾರ ಅಭಿನಂದಿಸಿದರು.

ಬೆಂಗಳೂರು ಕೇಂದ್ರೀಯ ವಿಭಾಗದ ಬಸ್‌ನಲ್ಲಿ ಜೂನ್ 14ರಂದು ಪ್ರಯಾಣಿಕರ ಸೋಗಿನಲ್ಲಿ ಆರೋಪಿ ಪ್ರಯಾಣಿಸುತ್ತಿದ್ದ. ಬಸ್‌ನಲ್ಲಿದ್ದ ತಿರುಮುರುಗನ್ ದಂಪತಿಯ ಬ್ಯಾಗ್‌ವೊಂದನ್ನು ಕದ್ದುಕೊಂಡು ಪರಾರಿಯಾಗುತ್ತಿದ್ದ. ಆತನನ್ನು ನೋಡಿದ್ದ ಚಾಲಕ–ನಿರ್ವಾಹಕ ಬೆನ್ನಟ್ಟಿ ಹಿಡಿದಿದ್ದರು. ನಂತರ, ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸರ ಸುಪರ್ದಿಗೆ ಒಪ್ಪಿಸಿದ್ದರು.

ದ್ವಿಚಕ್ರ ವಾಹನಕ್ಕೆ ಟಿಪ್ಪರ್ ಲಾರಿ ಡಿಕ್ಕಿ: ಇಬ್ಬರ ಸಾವು

ಬೆಂಗಳೂರು: ಪುಲಿಕೇಶಿನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಟಿಪ್ಪರ್ ಲಾರಿ ಹಾಗೂ ದ್ವಿಚಕ್ರ ವಾಹನ ನಡುವೆ ಅಪಘಾತ ಸಂಭವಿಸಿದ್ದು, ಇಬ್ಬರು ಯುವಕರು ಮೃತಪಟ್ಟಿದ್ದಾರೆ.

'ನೇಪಾಳದ ಪಾರಸ್(19) ಹಾಗೂ ತಮಿಳುನಾಡಿನ ಯೂಸುಫ್ ಖಾನ್ (19) ಮೃತರು. ಇವರು ಎಂ.ಎಂ. ರಸ್ತೆಯಲ್ಲಿರುವ ಗ್ರ್ಯಾಂಡ್ ಹೈದರಾಬಾದ್ ಬಿರಿಯಾನಿ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಇಬ್ಬರೂ ಸೋಮವಾರ ತಡರಾತ್ರಿ ದ್ವಿಚಕ್ರ ವಾಹನದಲ್ಲಿ ಮನೆಯತ್ತ ಹೊರಟಿದ್ದರು. ಏಕಮುಖ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ವೇಗವಾಗಿ ಬಂದ ಟಿಪ್ಪರ್ ಲಾರಿಯು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು,ಇಬ್ಬರೂ ಸ್ಥಳದಲ್ಲೇ ಮೃತಪಟ್ಟರು. ಲಾರಿ ಚಾಲಕ ಸುನೀಲ್ ಬಾಬು ರಾಥೋಡ್‌ನನ್ನು (23) ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೋಲಾರ ಪ್ರಾದೇಶಿಕ ವಿಭಾಗ,
ಗಾಜಲದಿನ್ನೆ, ಕೋಲಾರ–563101

No.A3/EST/OUTSOURCE/CR- 01 /2023-24

ದಿನಾಂಕ:21.06.2023

ಇ–ಟೆಂಡರ್ ಪ್ರಕಟಣೆ

2023–24ನೇ ಸಾಲಿನಲ್ಲಿ ಕೋಲಾರ ಅರಣ್ಯ ವಿಭಾಗದ ವ್ಯಾಪ್ತಿಗೊಳಪಡುವ ವಿಭಾಗ ಕಛೇರಿ, ಉಪ ವಿಭಾಗ ಕಛೇರಿ, ವಲಯ ಕಛೇರಿಗಳಿಗೆ ಅಗತ್ಯವಿರುವ ಗಣಕಯಂತ್ರ ನಿರ್ವಾಹಕರು, ವಾಹನ ಚಾಲಕರು, ಇತರ 'ಡಿ' ಗ್ರೂಪ್ ನೌಕರರ ಸೇವೆಯನ್ನು ಸೇವಾ ಸಂಸ್ಥೆ (Outsourcing) ಮೂಲಕ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eprockarnataka.gov.inನಲ್ಲಿ ಪಡೆದು ಮೊದಲನೇ ಬಾರಿಗೆ ಇ–ಟೆಂಡರ್ ಬಿಡ್ ಮಾಡಲು ಕೊನೆಯ ದಿನಾಂಕ: **03.07.2023** ರಂದು ಅಪರಾಹ್ನ **4.00** ಗಂಟೆಗೆ, ಮೊದಲನೇ ಬಾರಿ ಯಾವುದೇ ಬಿಡ್‌ದಾರರು ಬಿಡ್ ಮಾಡದಿದ್ದಲ್ಲಿ ಇದೇ ಟೆಂಡರ್ ಷರತ್ತಿಗೊಳಪಟ್ಟು ಎರಡನೇ ಬಾರಿಗೆ ಬಿಡ್ ಮಾಡಲು ಕೊನೆಯ ದಿನಾಂಕ: **15.07.2023**. ಹೆಚ್ಚಿನ ವಿವರಗಳನ್ನು ವಿಭಾಗೀಯ ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೋಲಾರ ವಿಭಾಗ, ಕೋಲಾರ.

ವಾಸಾಸಂಇ/ಕೋಲಾರ/ಆರ್.ಒ.ಸಂಖ್ಯೆ:41/ಕೆಎಸ್‌ಎಂಸಿಎ/2023–24

ಬಹನಗ ಬಜಾರ್ (ಬಾಲಾಸೋರ್) ರೈಲು ಅಪಘಾತದಲ್ಲಿ ಮೃತರಾದವರ ಕುಟುಂಬದವರು / ಸಂಬಂಧಿಕರಿಗೆ

ಪ್ರಕಟಣೆ

ಬಹನಗ ಬಜಾರ್, ಜಿಲ್ಲೆ–ಬಾಲಾಸೋರ್ (ಒಡಿಶಾ) ದಲ್ಲಿ 12841 ಶಾಲಿಮಾರ್–ಎಂಜಿಆರ್ ಚೆನ್ನೈ ಸೆಂಟ್ರಲ್ ಕೋರಮಂಡಲ್ ಎಕ್ಸ್‌ಪ್ರೆಸ್ ಮತ್ತು 12864 ಎಸ್‌ಎಂವಿಬಿ ಹೌರಾ ಎಕ್ಸ್‌ಪ್ರೆಸ್ ರೈಲುಗಳ ನಡುವೆ ದಿನಾಂಕ : 02–06–2023 ರಂದು ಉಂಟಾದ ರೈಲು ಅಪಘಾತದಲ್ಲಿ ಮೃತರಾದವರನ್ನು ಗುರುತಿಸಲು ಮತ್ತು ಗುರುತಿಸಿಲ್ಲದ ದೇಹಗಳನ್ನು ಪಡೆದುಕೊಳ್ಳಲು ಮೃತರ ಕುಟುಂಬದವರು / ಸಂಬಂಧಿಕರು ಮುಂದೆ ಬಂದು ತಮ್ಮ ಡಿಎನ್‌ಎ ಮಾದರಿಗಳನ್ನು ನೀಡಲು ಭಾರತೀಯ ರೈಲ್ವೆಯು ಮನವಿ ಮಾಡುತ್ತಿದೆ.

ಸ್ಥಳ:
ಅಕ್ಯಾಡೆಮಿಕ್ ಬ್ಲಾಕ್ (ಕಮಿಟಿ ರೂಮ್),
ಎಐಐಎಂಎಸ್, ಭುವನೇಶ್ವರ್

ದಯವಿಟ್ಟು ಕೆಳಕಂಡ ವ್ಯಕ್ತಿಗಳನ್ನು ಸಂಪರ್ಕಿಸಿ :

139
ಭಾರತೀಯ ರೈಲ್ವೆ ಸಹಾಯವಾಣಿ

ಶ್ರೀ ದಿಗಂಬರ್ ಪಧಿ, ಸಹಾಯಕ ಸಿಬ್ಬಂದಿ ಅಧಿಕಾರಿ,
ಮೊಬೈಲ್ : 8455887604

ಶ್ರೀ ಬಿಶ್ವನಾಥ ಪಧಿ, ಸಹಾಯಕ ವಾಣಿಜ್ಯ ವ್ಯವಸ್ಥಾಪಕರು,
ಮೊಬೈಲ್ : 8455885967

ಶ್ರೀ ಬಿ. ತಪನ್ ಕುಮಾರ್, ಸಾರ್ವಜನಿಕ ಸಂಪರ್ಕ ಅಧಿಕಾರಿ,
ಮೊಬೈಲ್ : 8455885040

ಶ್ರೀ ವಿಕಾಸ್ ಕುಮಾರ್, ಸಾರ್ವಜನಿಕ ಸಂಪರ್ಕ ಅಧಿಕಾರಿ,
ಮೊಬೈಲ್ : 8455885041

ಭುವನೇಶ್ವರ ರೈಲ್ವೆ ನಿಲ್ದಾಣದ ಸಹಾಯವಾಣಿ ಸಂಖ್ಯೆ : 0674 – 2534027

ಈಸ್ಟ್ ಕೋಸ್ಟ್ ರೈಲ್ವೆ ಕಂಟ್ರೋಲ್ ರೂಮ್ ಸಹಾಯವಾಣಿ ಸಂಖ್ಯೆ :
ಭುವನೇಶ್ವರ – 8455885999
ಮತ್ತು ಖುರ್ದ ರಸ್ತೆ – 8455887999

ಭಾರತೀಯ ರೈಲ್ವೆ

PUB/210/AAD/PRB/SWR/2023-24

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED N.T.T; D.Ed; B.Sc, B.Ed (PCM/ CBZ) LADY TEACHERS. Walk-in Interview. Decent Salary. New Oxford English School, 185, 6th Cross, Gandhinagar, Bangalore-09. Ph: 080-22261590

ST. FRANCIS EVENING COLLEGE
P.B.No.3417, 3rd Block, 8th Main, Koramangala, Bengaluru-560034.
Tel: 080-25531037/38 www.stfranciscollege.edu.in
STAFF RECRUITMENT
Applications are invited for the post of Professors/ Associate/Assistant Professors, Administrative Staff

Course	Qualification	Eligibility & Experience
B.Com & BBA	M.Com./ MBA	NET/ SLET/ Ph.D with minimum of 55% marks is required at PG level, and Above 3 Years of experience.
Librarian	M.L.I.Sc	
Administrative Staff	Any Degree	

Job Location: Koramangala, Bengaluru
Interested and Eligible Candidates may send their resume along with recent passport size photograph, copies of qualification and experience certificate to the Email-ID:
admin@stfranciscollege.edu.in
director@stfranciscollege.edu.in
By mentioning the post and department applying for in the subject line on or before 10/07/2023

REQUIRED TEACHERS
PRIMARY English & Drawing
HIGH SCHOOL English & Social Science
Attractive salary, P.F & ESIC for deserving candidates, pick up and drop from Nelamangala to Jalahalli Cross
Send your resume to E-mail bmnrequest@gmail.com
Or Whatsapp to 9513333834
Walk in interview Directly on working days with original Marks cards and a set of Xerox copies between 11am to 2:30pm
SRUSHTI PUBLIC SCHOOL (Recg. by Govt. of Karnataka)
B.M.N PUBLIC SCHOOL (Affiliated to CBSE, New Delhi)
Makali, Alur Road, Dasanapura (H), Near Himalaya Drug Co., (3 Kms from Jindal), Bengaluru North -562162.
Ph: 9513333834 / 8123333677

BHARATHI GROUP OF INSTITUTIONS
ICSE School at Bagalur - Sathnur Road, Near Reva University, K I Airport Road, Bangalore-63 & also at R.T. Nagar, Bangalore-32
Eligible & Qualified Teaching faculty applications are invited for
Kindergarten, Primary English, Kannada, EVS, Higher Primary English & High School English, Science, Computer & Physical Education. **Experienced Lady Manager** with MBA in Finance and HRD, **Lady Cashier, Subject Heads, Subject Supervisors, Subject Inspectors** in all subjects except Kannada and Hindi.
Whatsapp Resume with Educational certificates to : 9900046660 / 7847037927 9740496131
Email id : bglcareers53@gmail.com

HOLY ANGEL'S High School Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers to handle Science, Hindi, Computer Science for High School. Also need Physical Instructor for Academic year 2023-24. STATE & ICSE. Qualification: B.A./B.Sc.,B.Ed, M.A/M.Sc.,M.Ed. Only English medium candidates need apply.

WANTED TRAINED LADY COMPUTER TEACHER for Lower Primary and High School. Wanted Trained MALE PHYSICAL EDUCATION TEACHER for Primary and High School. Walk-in Interview on 30.06.2023, Friday between 1.00PM and 3.00PM at PRATHIBHA SHIKSHANA SAMITHI, #9, 18th Main, BSK II Stage, Bangalore-70. Ph: 080-26710170/ 74833-77387

REQUIRED FOR a reputed Women's College, near Bommanahalli for Physics, Chemistry, Biology and Economics Lecturer for PU Level Both freshers and experienced can apply. Part/ Full Time. Call: 8277388774, 080-25737014

WANTED ENGLISH MEDIUM TRAINED Teachers for High school to teach Maths/ Science and lady teachers for Primary to teach English/ EVS. PUC passed for Nursery classes. Contact in person- Secretary, Deccan Educational Society®, No. 95, 3rd Cross, Srirampuram, Bengaluru-21 (Near Sampige Theatre, Malleswaram)

WANTED PHYSICAL Education teacher 22K to 25K, Maths/ science Teacher primary. 18k to 22k, Computer Teacher/ Data entry 18 to 20k Matha's International School, Garuve bhavi palya, Bangalore-68 M: 9449814917

VALLABHA INTERNATIONAL School Somanahalli, Kanakapura Road requires Highschool Teachers for Maths & Science. Walk-in Call: 9606369681

WANTED PRIMARY and HIGH SCHOOL TEACHERS for immediate appointment. Subjects:Chemistry Biology,Computer and Hindi. Contact: St.YASH PUBLIC SCHOOL. Kempegowdanagar, Magadi Main-road, Bangalore-91.Phone: 7204347583, 7204347584

PHYSICS & MATH Teacher needed for Chitrakoota CBSE School in Nagarbhavi, Kengeri Ring Road, Call: 7829647333

MORNING STAR English School Ramachandrapuram, Rajajinagar Entrance Bangalore- 560021, Required B.Sc, B.Ed/ B.A,B.Ed, lady teacher to handle Primary: 9845018480

Placement Bureaus/Consultants

APPLY FOR ALL JOB Placements anzconsultants@yahoo.co.in ANZ CONSULTANTS 080-23443555, 8183046799

Receptionist/ Secretary

V&V GROUP, Bannerghatta Road. Wanted immediately LADY RECEPTIONIST, TELECALLING EXECUTIVES, Best Salary. Call: 99000-54461/62

Multiple Vacancy

MULTIPLE VACANCIES @ Convergent Technologies India Pvt Ltd 1.APPLICATION ENGINEER- Diploma/ Graduate in E&C or E&E with or without Experience. 2.SALES ENGINEER/ MANAGER- E&C having 2years of experience 3.SALES ENGINEER/ MANAGER- E&C having Networking backgroundwith cyber security knowledge having at least 2 years of Experience. If interested, send your CV's to gopal@convergenttech.in Contact: 9844441782

HIRING
An ISO/TS: 16949: 2016 Certified Manufacturing Industry in Mysore is looking for suitable candidates for the following posts.
1) Design Engineer - Qualification: B.E.- Mechanical/M.TechExperience: 7 - 8 years in Design & Development of mould for Rubber Products.Knowledge & Skills Required: Solid Edge, PLM Teamcenter, 2D & 3D Modelling, DFMA & GD&T, End to end product cycle.
2) Manager- HR- Qualification: MSW/MBA/PGDHRMExperience: 10 - 15 years in Manufacturing sector with hands on experience in HR & IR, ISO Systems, Statutory Compliances and Legal matters.
Interested candidates can forward their
Resumes to vacanciesmysore@gmail.com

Accounts & Finance

FEMALE ACCOUNTANT required with very good experience Tally, GST, IT, and General Correspondence Preference will be given residence of R.T. Nagar, Hebbal and Malleshwaram. Contact: 9844044346. RK Infra Electricals Pvt. Ltd.

ACCOUNTANTS (F) with 1-2 years experience in Tally prime. Email CV with photo to: chemicals@sreenathji.com or Call: 080 23102109/ 99728-12736

Part-Time Jobs

LIMITED MNC COMPANY Lost Job, Provide Work From Home Earn 30K to 35K: 9886641282/ 7019215243

General

A PUBLIC Limited Company Registered office in Margoa, GOA requires IT & NETWORK EXECUTIVE (Male)- Young, Dynamic, age group of 25-35 years Experience: 3-5 years in IT Profession with adequate software skills. Qualification: BCA/ MCA. Placement at Bangalore Unit, Karnataka Send your resume with passport size photo to Email: hraoffice2023@gmail.com

OFFICE EXECUTIVE for- Office and_Marketing (Dental Equipments Pvt.Ltd. Company) preferably Female's-with MBA or_any Graduation with good English,Hindi speaking_& computer skills.Call:- 9980546442/ 9844016274

REQUIRED FEMALE TELE CALLER at ourMedahalli Office (Knowing Telugu, Kannada and Hindi). Contact 9849233939

BUILDERS ESSENTIAL

Building Contractors

WE WILL undertake building constructions & renovations M/s Samruddhi infrastructures Engineers & contractors 9980632771/ 9900434127

REAL ESTATE SELLING

Flat

Bommanahalli

SALE MINI 15 Flats Apartment near Bommanahalli, Expecting 3,25,00,000/- for total Building, suitable PG -9036706304.

J P Nagar

J.P.NAGAR 9TH Phase 2 BHK Flats for Sale 65,00,000/- approved by Bank of Baroda -9036706304.

Sites

K R Puram

30X40 PLOT for Sale. Near K.R.Puram Metro, Kagadaspura Main Road, Nagappa Reddy Layout, Genuine buyer Contact: 7358274782.

Mysore

CORNER SITE For Sale, with Old House, 71.5'x46', Saraswathipuram, Mysuru. Brokers Excuse. Contact: 9632418363

BUSINESS

Business Offers

Finance

NRI'S Investment And Finance Available On Low Interest Against Properties,Land & Building,Sites,Flats,Converted & Agriculture Lands Call:7204995189

General

LOOKING FOR Investment Director for Herbal Mosquto Repellent &spray start up company having good marketing network in Bangalore contact : 6362731681

PUBLIC NOTICE

Timac AGRO **PUBLIC NOTICE**
In pursuance of S.O. 2900 (E) dated 24/10/2015 and clause 13 and clause 21 of the Fertilizer (Control) Order, 1985, we hereby intimate our intent to sell the following grades of hundred per cent water soluble fertilizer and micronutrients as per FCO in the state of Karnataka:
Timaspray N (NPK 21-7-7)
Timaspray K (NPK 8-11-39)
Timaspray B (Boron 10.5 %)
Date:28.06.2023 Place: Bengaluru
TIMAC AGRO INDIA PRIVATE LIMITED
No. 426, Between 7th and 8th Cross, Sampige Road, Malleswaram, Bengaluru, Karnataka 560003
Regd. Office: T. Nagar, Chennai, Tamil Nadu 600017
Ph: 044 4201 2105
E-mail: contact@in.timacagro.com

EDUCATIONAL

Diploma Courses

DIPLOMA IN Student Counselling, 6-months, ONLINE, Starts:11-July WhatsApp: 9886044221 www.darwinpsychologycentre.com

PERSONAL

Change of Name

CHANGE OF NAME
I, **POOJA KOUJALGI,** R/o #84 Shree, 4th Cross, Vyalikaval, HBCS Layout,Vijayanagar, Bangalore-560040, have changed my name to **POOJA M KOUJALGI** vide affidavit dt 26.06.2023 before Notary HS Sakalesh Aradhya, Bangalore. Henceforth I shall be called as **POOJA M KOUJALGI**

CHANGE OF NAME
We, **S.N.MANJUNATHA & BHAVYA V** R/o # Adarsha Nilaya, 2nd Cross, Ashoknagar, Dobigata Road, Someshwarapuram, Tumkuru-572102, have changed our minor daughter's name from **MANASIVI JAIN M** to **MANUSHREE JAIN M** and my name is worngly mentioned as Manjunath S.N. instead of **Manjunatha S.N.** Vide affidavit dt. 27/06/2023 before Notary K.C.Shashikala, Bengaluru

CHANGE OF NAME
I, **M.MANJUNATHA,** Residing at Ward No. 03, Kelagina Pete, Near Kalamma Temple, Kurugodu, Bellary-583116, have changed my name to **M MANJUNAHTA GOUDA** vide affidavit dated 23/06/2023 before notary B.M. Chandarashekar, Bengaluru

CHANGE OF NAME
I, **MANASA RAMESH BABU** W/o Ramesh Babu, R/at. # 1, Om Sree Hari Hara Nilaya, Old Age Home Road, Near Gandhi Circle, Horamavu, Bengaluru-43, have changed my name to **MANASA NARAYANASWAMY** vide affidavit dt 26/06/2023 before notary Y.R.Chandrasekar, Bengaluru

CHANGE OF NAME
I, **REMA VANDANA WARRIER** W/o Sri Hari Pulakkat, R/at. Flat No.F 902, Purva Venezia, Major Sandeep Unnikrishanan Road, Near Mother Dairy, Yelahanka New Town, Bengaluru-560064, have changed my name to **VANDANA WARRIER** vide affidavit dt 27/06/2023 before notary Manohar Jeerige, Bengaluru

CHANGE OF NAME
I, **SHILPA** D/o Ramaiah, R/at. # 421, 1st Floor, 8th Cross, 8th Main, Mico Layout, BTM 2nd Stage, Bangalore - 560076 have changed my name to **SHILPA RAMAIAH** vide affidavit dated 27/06/2023 before Notary V. Rajashekhara, Bangalore

I SACHITHA I R changed my name to SACHITHA dated 24.06.2023 sworn before notary DEVARAJA E Bengaluru

CHANGE OF NAME
I, **SAMEERA REHMAN @ SAMEERA RAHMAN** Residing at 25/3 Chinnaswamy Mudaliar Road, Tasker Town Bengaluru -560051, declare that both these names pertain to me and henceforth I shall be known as **SAMEERA RAHMAN** vide affidavit dated 27.4.2023 before notary S.I. Balaguru, Bengaluru.

I, SHILPA PARMESWAR, residing at Bengaluru-85 have changed my name as SHILPA KIRAN, vide affidavit dated 27/6/2023 before Notary P.C.Ramaiah, Bengaluru

I HITHESH KUMAR. K. R/a, #18/19, 4th main, Bharathi Layout, Suddugunte Palya, Bangalore 560029, Changed my Name To HITESH KUMAR. K Vide Affidavit Dated 26/06/2023 before Notary K.V. Mani Bangalore

Lost

ದಾನ ಪತ್ರ ಕಳೆದು ಹೋಗಿದೆ
ನಾನು ನಯನಶ್ರೀ ಉರುಪ್ ನಯನ D/o ತಿರುಮಲಾಚಾರ್ ಕುದುರೆಗೆರೆ, ಆಲೂರು ಅಂಚೆ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಜಿಲ್ಲೆ, ಆದ ನಾನು ಸಾರ್ವಜನಿಕರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಇದೇ ಮೇಲ್ಕಂಡ ವಿಳಾಸದ ಆಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಕುದುರೆಗೆರೆ ಗ್ರಾಮದ ಅಸೆಸ್ಮೆಂಟ್ ನಂಬರ್ 92/1 ರಲ್ಲಿ ವಿಂಗಡಿಸಿರುವ ನಿವೇಶನಗಳಲ್ಲಿ 125ನೇ ನಂಬರಿನ ನಿವೇಶನದ ದಾನ ಪತ್ರದ ಮೂಲ ಪ್ರತಿಯು ದಿನಾಂಕ 15–04–2023 ರಂದು ಕುದುರೆಗೆರೆಯಿಂದ ಮಾದನಾಯಕನಹಳ್ಳಿಗೆ ಬೈಕಿನಲ್ಲಿ ಬರುವಾಗ ಆಕಸ್ಮಿಕವಾಗಿ ಕಳೆದುಹೋಗಿರುತ್ತದೆ. ಯಾರಿಗಾದರೂ ಸಿಕ್ಕಿದ್ದಲ್ಲಿ ದಯಮಾಡಿ ಹತ್ತಿರದ ಪೊಲೀಸ್ ಠಾಣೆಗೆ ತಲುಪಿಸಲು ಅಥವಾ ಈ ನಂಬರನ್ನು ಸಂಪರ್ಕಿಸಲು ಕೋರಿದೆ. 76194 81538

DOCUMENT LOST
I, **Mohamed Ansari,** 52 yrs, Ppt No. T8970814,Issue 25/09/2019,Adhaar #768105116512, S/o Ahmed Mohamed Gaffar, No 37-6, Marappa Garden 4th Cross, JC Nagar, Blr-06, do hereby inform to the General Public that I have lost the original land document **No.2124/2004 dated 19/04/2004.** Hosur Sub Registrar Office,TN. Finders please contact **9094111116** or address

TOURS & TRAVEL

Travel

CONTACT ORCHID Travel and Tours, Basavanagudi to Book 20 Days Australia and Newzealand Group Tour, Package cost Includes Air Tickets, visa Accommodation in 4 Star Hotel, Indian Meal, Tour Manager from Bangalore, Call: 9900080796 9880100099

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ASTRO YATRA

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾನಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ
ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

ನಾಡಪ್ರಭು ಕೆಂಪೇಗೌಡರ ವ್ಯಕ್ತಿತ್ವ, ಸೇವೆ ಸ್ಮರಣೆ • ರಾಜ್ಯ ಒಕ್ಕಲಿಗರ ಸಂಘದಿಂದ ಕಾರ್ಯಕ್ರಮ ಆಯೋಜನೆ

ಅದ್ಧೂರಿ ಮೆರವಣಿಗೆ, ಜಾನಪದ ಕಲಾ ವೈಭವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘವು ನಾಡಪ್ರಭು ಕೆಂಪೇಗೌಡ ಜಯಂತಿ ಪ್ರಯುಕ್ತ ಜಾನಪದ ಕಲಾ ತಂಡಗಳ ನೃತ್ಯ ವೈಭವದೊಂದಿಗೆ ನಗರದ ವಿವಿಧೆಡೆ ಅದ್ಧೂರಿ ಮೆರವಣಿಗೆ ನಡೆಸಿತು.

ಸಂಘದ ಆವರಣದಲ್ಲಿರುವ ಕೆಂಪೇಗೌಡರ ಪುತ್ಥಳಿಗೆ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರು ಮಾಲಾರ್ಪಣೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಕೆಂಪೇಗೌಡರ ಭಾವಚಿತ್ರವನ್ನು ಬೆಳ್ಳಿ ರಥದಲ್ಲಿ ಇರಿಸಿ, ಕೆ.ಆರ್. ರಸ್ತೆಯಲ್ಲಿರುವ ರಾಜ್ಯ ಒಕ್ಕಲಿಗರ ಸಂಘದ ಆವರಣದಿಂದ ಹೊರಟ ಮೆರವಣಿಗೆ, ಬಸಪ್ಪ ವೃತ್ತ, ಮಿನರ್ವ ವೃತ್ತ, ಟೌನ್ ಹಾಲ್, ಕಾರ್ಪೋರೇಷನ್ ವೃತ್ತ, ಕೆ.ಆರ್. ವೃತ್ತದ ಮೂಲಕ ವಿಧಾನಸೌಧಕ್ಕೆ ಸಾಗಿತು.

ಮೆರವಣಿಗೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು. ಡೊಳ್ಳು ಕುಣಿತ, ಕಂಸಾಳೆ, ವೀರಗಾಸೆ ಸೇರಿ ವಿವಿಧ ಜಾನಪದ ಕಲಾ ಪ್ರಕಾರಗಳ ಪ್ರದರ್ಶನ ಜಯಂತಿಯ ಸಂಭ್ರಮ ಹೆಚ್ಚಿಸಿತು. ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ ವಿದ್ಯಾರ್ಥಿಗಳು ಸಹ ಪಾಲ್ಗೊಂಡು, ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ನಿರ್ಮಲಾನಂದನಾಥ ಸ್ವಾಮೀಜಿ, 'ಬೆಂಗಳೂರಿನಲ್ಲಿ ನೆಲೆಸಿರುವ ಪ್ರತಿಯೊಬ್ಬರೂ ನಾಡಪ್ರಭು ಕೆಂಪೇಗೌಡರನ್ನು ನೆನೆಯಬೇಕು. ಅವರ ಆದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಅವರು ನಿರ್ಮಿಸಿದ ಬೆಂಗಳೂರು ವಿಶ್ವಮಾನ್ಯತೆ ಪಡೆದಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆದಿ ಚುಂಚನಗಿರಿ ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ, ಸಂಸದ ಡಿ.ವಿ. ಸದಾನಂದಗೌಡ, ಒಕ್ಕಲಿಗರ ಸಂಘದ ಅಧ್ಯಕ್ಷ ಬಿ. ಕೆಂಚಪ್ಪಗೌಡ ಹಾಗೂ ಪದಾಧಿಕಾರಿಗಳು ಇದ್ದರು.

1. ಕಾರ್ಯಕ್ರಮದಲ್ಲಿ ಕೆಂಪೇಗೌಡರ ಪ್ರತಿಮೆಗೆ ಡಿ.ವಿ.ಸದಾನಂದಗೌಡ, ನಿರ್ಮಲಾನಂದನಾಥ ಸ್ವಾಮೀಜಿ, ಆರ್.ಅಶೋಕ್, ಸೌಮ್ಯನಾಥ ಸ್ವಾಮೀಜಿ ಹಾಗೂ ಬಿ. ಕೆಂಚಪ್ಪಗೌಡ ಅವರು ಪುಷ್ಪ ನಮನ ಸಲ್ಲಿಸಿದರು
2. ರಾಜ್ಯ ಒಕ್ಕಲಿಗರ ಸಂಘದ ಆವರಣದಲ್ಲಿ ಕಲಾವಿದರು ನೃತ್ಯ ಪ್ರದರ್ಶಿಸಿದರು
– ಪ್ರಜಾವಾಣಿ ಚಿತ್ರಗಳು

'ಭಾವಚಿತ್ರವಿಟ್ಟು ಪೂಜಿಸಿ'

ಶಾಸಕ ಆರ್. ಅಶೋಕ, 'ಕೆಂಪೇಗೌಡರ ಪ್ರತಿಮೆಗಳಿರುವ ಸ್ಥಳವನ್ನು ರಾಜ್ಯ ಸರ್ಕಾರ ಅಭಿವೃದ್ಧಿ ಮಾಡಬೇಕು. ನಮ್ಮ ಸರ್ಕಾರದ ಅವಧಿಯಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ವಿಧಾನಸೌಧದ ಮುಂಭಾಗ ಅವರ ಪ್ರತಿಮೆಯನ್ನು ನಿರ್ಮಿಸಲಾಗಿತ್ತು. ಕೆಂಪೇಗೌಡರು ಪ್ರತಿ ಕಸುಬಿಗೂ ನಗರದಲ್ಲಿ ಒಂದೊಂದು ಪೇಟೆ ನಿರ್ಮಿಸಿಕೊಟ್ಟಿದ್ದರು. ವಿಶ್ವ ಮನ್ನಣೆ ಪಡೆದಿರುವ ಬೆಂಗಳೂರಿನಲ್ಲಿ ನೆಲೆಸಿರುವ ಸರ್ವರೂ ಮನೆಯಲ್ಲಿ ಕೆಂಪೇಗೌಡರ ಭಾವಚಿತ್ರವಿಟ್ಟು ಪೂಜಿಸಬೇಕು' ಎಂದು ಹೇಳಿದರು.

ಮೆರವಣಿಗೆಯಲ್ಲಿ ಕೆಂಪೇಗೌಡ ವೇಷಧಾರಿಗಳು ಕುದುರೆ ಮೇಲೆ ಸವಾರಿ ಮಾಡಿ, ಗಮನ ಸೆಳೆದರು. ಅವರೊಂದಿಗೆ ಛಾಯಾಚಿತ್ರ ತೆಗೆದುಕೊಳ್ಳಲು ನೆರೆದಿದ್ದವರು ಮುಗಿಬಿದ್ದರು.

ಡಿಕೆಶಿ, ಅಶ್ವತ್ಥನಾರಾಯಣ ವಾಕ್ಸಮರ

ಬೆಂಗಳೂರು: ಸದಾಶಿವನಗರದ ರಮಣಮಹರ್ಷಿ ಉದ್ಯಾನದಲ್ಲಿ ಮಂಗಳವಾರ ನಡೆದ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಶಾಸಕ ಅಶ್ವತ್ಥನಾರಾಯಣ ಅವರ ನಡುವೆ ವಾಕ್ಸಮರ ನಡೆಯಿತು.

ಡಿ.ಕೆ.ಶಿವಕುಮಾರ್ ಅವರು ಮಾತನಾಡಿ, 'ನನಗೂ ಬೆಂಗಳೂರಿಗೂ ಇರುವ ಸಂಬಂಧದ ಇತಿಹಾಸದ ಬಗ್ಗೆ ಶಾಸಕ ಅಶ್ವತ್ಥನಾರಾಯಣ ಅವರಿಗೆ ಗೊತ್ತಿಲ್ಲ. ಅದಕ್ಕೆ ಅವರು ಮಾತನಾಡುತ್ತಾರೆ. ಅದನ್ನು ಅವರು ತಿಳಿದುಕೊಳ್ಳಲಿ' ಎಂದು ಹೇಳಿದರು. ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನಾನು 6ನೇ ವಯಸ್ಸಿಗೆ ಶಿಕ್ಷಣ ಪಡೆಯಲು ನಮ್ಮೂರಿನಿಂದ ಬೆಂಗಳೂರಿಗೆ ಬಂದಿದ್ದೆ. ಇಲ್ಲಿನ ರಾಜಾಜಿನಗರದ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ನನ್ನ ವಿದ್ಯಾಭ್ಯಾಸ ಆರಂಭಿಸಿದೆ' ಎಂದರು.

'ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆ ಕೆಂಪೇಗೌಡರು ಕಟ್ಟಿದ ಪ್ರದೇಶ. ತಮಿಳುನಾಡಿನ ಗಡಿ ಭಾಗದಲ್ಲಿ ಸಂಗಮದ ಬಳಿ ಕೆಂಪೇಗೌಡರ ಕೋಟೆಯಿದೆ. ಅದರ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಆ ಕೋಟೆ ಸಮೀಪ ನಿಜಲಿಂಗಪ್ಪ ಅವರ ಮನೆ ಪಕ್ಕ ವೀರೇಂದ್ರ ಪಾಟೀಲ್ ಅವರ ಮನೆಯಿದ್ದು ಅದರ ಪಕ್ಕದಲ್ಲಿ ನನ್ನ ತಂದೆ ದೊಡ್ಡಹಾಲಹಳ್ಳಿ ಕೆಂಪೇಗೌಡರ ಮನೆ ಇದೆ. ಇತ್ತೀಚೆಗೆ ಅದನ್ನು ಮಾರಿದ್ದೇನೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಅಶ್ವತ್ಥನಾರಾಯಣ ಅವರು, 'ನನಗೂ ರಾಮನಗರಕ್ಕೂ ಏನು ಸಂಬಂಧ ಎಂದು ಶಿವಕುಮಾರ್ ಅವರು ಪ್ರಶ್ನಿಸಿದ್ದಾರೆ. ಹಿಂದೆ ಯಾವುದೇ ಸರ್ಕಾರವು ಕೊಡದಷ್ಟು ಯೋಜನೆಗಳನ್ನು ನಾವು ರಾಮನಗರಕ್ಕೆ ಕೊಟ್ಟಿದ್ದೇವೆ. ಜಿಲ್ಲೆಯನ್ನೇ ಅಭಿವೃದ್ಧಿ ಮಾಡಿದ್ದೇವೆ' ಎಂದರು.

'ರಾಮನಗರ ನನ್ನ ಪೂರ್ವಿಕರ ಕರ್ಮಭೂಮಿ. ನನ್ನ ಹುಟ್ಟು ಹೆಸರು ಕೆಂಪೇಗೌಡ. ಮುಂದಿನ ದಿನಗಳಲ್ಲಿ ಎಲ್ಲಾ ಇತಿಹಾಸ ತಿಳಿಯಲಿದೆ. ನನ್ನ ಕೊಡುಗೆ ಏನು ಎಂದು ಕೆಲಸವೇ ಮಾತನಾಡುತ್ತದೆ' ಎಂದಿದ್ದಾರೆ.

ಉದ್ಘಾಟನೆ ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಎಂ.ಇ.ಎಸ್. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ವತಿಯಿಂದ ನಡೆದ ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಇತಿಹಾಸಕಾರ ಪ್ರೊ.ಮುನಿರಾಜಪ್ಪ ಉದ್ಘಾಟಿಸಿದರು

'ಉಕ್ಕಿನ ಸೇತುವೆ ನಿರ್ಮಾಣ ಕೈಬಿಡಬಾರದಿತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟೀಕೆ, ಪ್ರತಿಭಟನೆಗಳಿಗೆ ಮಣಿದು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಕೆ.ಜೆ.ಜಾರ್ಜ್ ಅವರು ಉಕ್ಕಿನ ಸೇತುವೆ ಯೋಜನೆ ಕೈಬಿಟ್ಟರು. ನಾನು ಮುಖ್ಯಮಂತ್ರಿಯಾಗಿದ್ದಿದ್ದರೆ ಟೀಕೆಗಳಿಗೆ ಮಣಿಯುತ್ತಿರಲಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸೌಧದ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಉಕ್ಕಿನ ಸೇತುವೆ ಯೋಜನೆಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ ಎಂದು ವಿರೋಧ ಪಕ್ಷಗಳು ಅಪಪ್ರಚಾರ ನಡೆಸಿದರು. ಆಗ ಸರ್ಕಾರ ನಿರ್ಧಾರದಿಂದ ಹಿಂದೆ ಸರಿಯಿತು. ಈಗಲೂ ನಾನು ಕೆಲವು ನಿರ್ಧಾರ ಕೈಗೊಳ್ಳುತ್ತೇನೆ. ಪ್ರತಿಭಟನೆ ಮಾಡುವವರು ಸಿದ್ಧರಾಗಲಿ' ಎಂದು ಸವಾಲು ಹಾಕಿದರು.

'ಕೆಲಸದ ವಿಷಯದಲ್ಲಿ ರಾಜಿಯಾಗುವ ಪ್ರಶ್ನೆಯೇ ಇಲ್ಲ. ನಾವು ಪ್ರತಿಮೆಗಿಂತ ಪ್ರಗತಿಯಲ್ಲಿ ನಂಬಿಕೆ ಇಟ್ಟಿರುವ ಜನ. ಪ್ರತಿಮೆ ಬೇಕು. ಅದರ ಜತೆಗೆ ಪ್ರಗತಿಯತ್ತ ಹೆಚ್ಚು ಗಮನ ಹರಿಸಬೇಕು. ಬೆಂಗಳೂರಿನ ಅಭಿವೃದ್ಧಿಗೆ ಕೆಂಪೇಗೌಡರು, ಕೆಂಗಲ್ ಹನುಮಂತಯ್ಯ, ಎಸ್.ಎಂ.ಕೃಷ್ಣ ಅವರ ಕೊಡುಗೆ ಮರೆಯಲು ಸಾಧ್ಯವಿಲ್ಲ.

ವಿಧಾನ ಸೌಧದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕೆಂಪೇಗೌಡ ಜಯಂತಿಯಲ್ಲಿ ರೇವತಿ ಕಾಮತ್, ರಘುರಾಮ ಕಾಮತ್ (ನಿತಿನ್ ಕಾಂತ್ ಪರವಾಗಿ), ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರಿಗೆ ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಚಿವ ಕೃಷ್ಣ ಬೈರೇಗೌಡ, ಶಾಸಕ ಎಸ್.ಆರ್. ವಿಶ್ವನಾಥ್, ಬಸವರಾಜ ಹೊರಟ್ಟಿ, ಚಂದ್ರಶೇಖರ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ರಾಮಲಿಂಗಾ ರೆಡ್ಡಿ, ನಂಜಾವಧೂತ ಸ್ವಾಮೀಜಿ ಇತರರು ಇದ್ದಾರೆ
—ಪ್ರಜಾವಾಣಿ ಚಿತ್ರ

> **ಬೆಂಗಳೂರು ನಗರದ ಅಭಿವೃದ್ಧಿಗೆ ಕೆಂಪೇಗೌಡರು ಐದು ಶತಮಾನಗಳ ಹಿಂದೆಯೇ ಸುಭದ್ರ ಅಡಿಪಾಯ ಹಾಕಿದ್ದರು. ವೃತ್ತಿ ಆಧಾರದ ಮೇಲೆ ಹಲವು ಪೇಟೆಗಳನ್ನು ನಿರ್ಮಿಸಿದ್ದರು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಕೆಂಗಲ್ ಹನುಮಂತಯ್ಯ ಅವರ ಅವಧಿಯಲ್ಲಿ ಬೆಂಗಳೂರಿನ ಜನಸಂಖ್ಯೆ 16 ಲಕ್ಷ ಇತ್ತು. ಈಗ 1.60 ಕೋಟಿ ಜನ ವಾಸಿಸುತ್ತಿದ್ದಾರೆ. ಶೇ 42ರಷ್ಟು ಆದಾಯ ತೆರಿಗೆ ಕೇಂದ್ರ ಸರ್ಕಾರಕ್ಕೆ ಹೋಗುತ್ತಿದೆ' ಎಂದರು.

'ಬೆಂಗಳೂರು ಅಭಿವೃದ್ಧಿ ಕುರಿತ ಚರ್ಚೆಗೆ ಬಿಜೆಪಿಯ ಕೆಲ ನಾಯಕರು ಬಂದಿರಲಿಲ್ಲ. ಯಾರು ಬಂದರೂ, ಬಾರದಿದ್ದರೂ ನಮ್ಮ ಗಾಡಿ ಮುಂದೆ ಸಾಗುತ್ತದೆ. ಹಿರಿಯರು ಬೆಂಗಳೂರಿನ ಅಭಿವೃದ್ಧಿಗೆ ಕೆಂಗೇರಿ, ಯಲಹಂಕ ನಿರ್ಮಾಣ ಮಾಡಿದರು. ಮತ್ತೆ ಆ ರೀತಿಯ ಆಲೋಚನೆ ನಡೆದಿದೆ. ಸಂಚಾರದಟ್ಟಣೆ ನಿಯಂತ್ರಣಕ್ಕೆ ಪ್ರತ್ಯೇಕ ಯೋಜನೆ ರೂಪಿಸಲಾಗುವುದು' ಎಂದು ಮಾಹಿತಿ ನೀಡಿದರು.

ಸ್ಫಟಿಕಪುರಿ ಮಠದ ಪೀಠಾಧಿಪತಿ ನಂಜಾವಧೂತ ಸ್ವಾಮೀಜಿ, ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಕೆಂಪೇಗೌಡರ ಭಾವಚಿತ್ರ ಹಾಕಬೇಕು. ಶಾಲಾ ಪಠ್ಯದಲ್ಲಿ ಕೆಂಪೇಗೌಡರ ಪಾಠ ಅಳವಡಿಸಬೇಕು ಎಂದು ಒತ್ತಾಯಿಸಿದರು.

ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆ, ಗಾಲ್ಫ್ ಆಟಗಾರ್ತಿ ಅದಿತಿ ಅಶೋಕ್, ಜೆರೋಧಾ ಕಂಪನಿ ಸಂಸ್ಥಾಪಕ ನಿತಿನ್ ಕಾಮತ್ ಅವರಿಗೆ ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ತಂತ್ರಜ್ಞಾನ ಪುರವಣಿ ಓದಿರಿ

ಮಯೂರ ಓದಿರಿ

ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿರುವ ನಾಡಪ್ರಭು ಕೆಂಪೇಗೌಡ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು

ನಾಡಪ್ರಭು ಕೆಂಪೇಗೌಡರ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ನಾಡಪ್ರಭು ಕೆಂಪೇಗೌಡ ಅವರ 514ನೇ ಜಯಂತಿ ಅದ್ಧೂರಿಯಿಂದ ನಡೆಯಿತು.

ವಿವಿಧ ಸಂಘ–ಸಂಸ್ಥೆಗಳ ಆಶ್ರಯದಲ್ಲಿ ನಡೆದ ಜಯಂತ್ಯುತ್ಸವದಲ್ಲಿ ಕೆಂಪೇಗೌಡರ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಮಾಡಿ, ಕೆಂಪೇಗೌಡರ ದೂರದೃಷ್ಟಿಯನ್ನು ಕೊಂಡಾಡಿದರು. ಅಲ್ಲಲ್ಲಿ ಮೆರವಣಿಗೆಗಳು ನಡೆದವು. ಕೆಂಪೇಗೌಡ ಕೊಡುಗೆಯನ್ನು ಸ್ಮರಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಮಹೇಶ ಜೋಶಿ ಮಾತನಾಡಿ, 15ನೇ ಶತಮಾನ ಭಾರತದಲ್ಲಿ ಸುವರ್ಣ ಯುಗ ಎಂದು ಕರೆಸಿಕೊಂಡಿದೆ. ಆ ಕಾಲ ಘಟ್ಟದಲ್ಲಿ ಇದ್ದ ರಾಜಮನೆತನಗಳಲ್ಲಿ ವಿಜಯನಗರದ ವೈಭವವನ್ನು ಕಂಡು ಬೆರಗಾಗಿ ಅಂತಹದೇ ಸಾಮ್ರಾಜ್ಯವನ್ನು ಬೆಂಗಳೂರಿನಲ್ಲಿ ಕಟ್ಟ ಬೇಕು ಎನ್ನುವ ಕನಸು ಕಂಡವರು ನಾಡಪ್ರಭು ಕೆಂಪೇಗೌಡರು ಎಂದು ಬಣ್ಣಿಸಿದರು.

ಪರಿಷತ್ತಿನ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗ ಶೆಟ್ಟಿ, ಡಾ.ಪದ್ಮಿನಿ ನಾಗರಾಜು, ಕೋಶಾಧ್ಯಕ್ಷರಾದ ಡಾ.ಬಿ.ಎಂ.ಪಟೇಲ್ ಪಾಂಡು ಇದ್ದರು.

IN THE COURT OF 12TH ADDL CITY CIVIL JUDGE AT BANGALORE
P&S.C No. 136/2023 CCH-27

1. VIJAYA KULKARNI, W/o Late Narayan Kristna Rao Kukami @ Lakshminarayana krisha kulkarni Aged about 67years
2. SMT MAMTA NARAYAN KULKARNI, D/o Late Narayan Krishna Rao Kulkarni @ Lakshminarayana krishan kulkarni Aged about 45years
3 SMT. KAVITHA NARAYAN KULKARNI, D/O Late Narayan Krishna Rao Kulkarni @ Lakshminarayana krishan kulkarni Aged about 41years
4 SMT DEEPTI NARAYAN KULKARNI, D/o Late Narayan Krishna Rao Kulkarni @ Lakshminarayana krishan kulkarni Aged about 39 years

Above all are Residing as follows R/a No 30 14th Cross, Bhuvneshwanagar, Dasarah, Bangalore-24 ...PETITIONERS

V/s

NIL ....RESPONDENTS

PUBLIC NOTICE

Whereas the above named have made petition to this court under section 278 of indan succession act for the grant of Letters of Administration in favour of the petitioners in respect of Schedule mentioned below The below mentioned schedule have held by Late Narayan Krishna Rao Kulkarni @ lakshmiNarayan Krishna Rao Kulkarni husband of the 1st petitoner and father of the petitioners No 2 to 4 respectively who expired on 17-06-2022 Interested parties we hereby called to apper in this court in this person or by pleader duty instructed on 19/7/23 at 11am inform to show cause against the petitioners failling wherein the appearance will be heard and declared as Ex-party

SCHEDULE A
All that piece and parcel of the property bearing SITE No 30 Katha No. 144, measuring East to West on southern side 60 feet and on Northen side 30 feet and North to South 53 feet in total 2385 Sq feet situated at Dasarahalli village KR Puram hobli, Bangalore East Taluk BANGALORE and bounded on- East by: 30.0 FEET ROAD. West by: EARAPPA'S PROPERTY. North by: SITE No.31 South by:SITE No.29

SCHEDULE-B
All the piece and parcel of the Site bearing No 16, Katha No 104 Khanishmari No 1441/A measuring East to West 55.0 feet and North to South 53.0 feet (Total 2915 Feet) situated at Dasarahalli KR Puram Hobli Bangalore South Taluk Bangalore and bounded on East by: ROAD. West by: SITE NO 25. North by:SITE NO 17 South by: SITE NO 15

SCHEDULE.C
All the piece and parcel of the House Property bearing House No 63& 64 Katha No.105 measuring East to West 40 feet) and North to South 60 feet in total 2400 Sq feets situated at Dasarahalli village , KR Puram Hobli Bangalore South Taluk, Bangalore and boulded on East by:ROAD,West by:SITE NO 103 & 104.North by: House List No 65' South by: Private Property

By Order of the Court
Asst Register City Civil Court

On the Occasion of Varamahalakshmi Presenting

Presents Weaves ವೀವ್ಸ್ INDIA
An exposition of handloom textiles

Don't miss it

Silk Saree I Suits I Dress Material I Stoles | Dupattas | Kurtas
Kurties I Pure & Probable Silk | Tussar Silk I Shanthipur Silk
Pure Silk Products directly Purchase by Weavers from Across India

SINDOOR CONVENTION CENTER
15th Cross, Sarakki, 1st Phase, J.P. Nagar Ring Road, Bengaluru
From : 23rd Jun. to 02nd Jul. 2023
5 Days Only

Products on Display - Orissa : Sambhalpuri Ikkat Silk Saree, Bihar : Oragnic Tassar Silk Sarees, Suit & Stoles, Assam : Muga & Eri Silk Sarees, Karnataka : Creap Silk, Georgette Silk, Arini Silk & Printed Sarees, Tamilnadu : Kanjeevaram Silk Sarees & Designer Fancy Sarees, Andra Pradesh : Dharmavara, Uppada, Gadwal, Mangalagiri & Pochampalli Sarees, Uttar Pradesh : Mulbari Silk, Jamdani, Jamawar Silk Sarees & Chiffon Silk, Maharashtra : Designer Dress materials, Chhatisgarh : Exclusive Raw Silk Sarees, Kosa Silk, Tassar Suit & Duppatta, Madhya Pradesh : Maheswari, Chanderi Silk Sarees & Suit, West Bengal : Baluchari, Dhaka Masli, Gicha Sarees, Boutique Sarees, Kantha Sarees, Zordoshi, Jammu & Kashmir : Chinon Silk, Tady Silk Printed Sarees, Pashmina Shawls & Suit, Rajasthan : Kota Silk, Hand Block Print Dress & Sarees, Punjab : Fulkari Dress and many more...

Time : 10.30 am - 8.30 pm
Entry & Parking Free
All Credit & Debit Cards Accepted Call: 088509 02824
Org. by : O.A & C. R/o By : MINISTRY OF TEXTILES GOVT. OF INDIA

कार्यालय सहायक संचालक रेशम (रेशम केन्द्र झगडिया) बैतूल म.प्र.

क्रमांक / सामान्य / जि.अ.रे. / बै. / 2023–24 / 956 बैतूल दिनांकः–07.06.2023

शहतूत जड़युक्त पौधे क्रय निविदा सूचना

कार्यालय सहायक संचालक रेशम जिला बैतूल अन्तर्गत मलबरी रेशम विस्तार प्रक्षेत्र में आत्म निर्भर म.प्र. रोड मैप के क्रियान्वयन हेतु मनरेगा योजनान्तर्गत 200 किसानों के यहॉ नवीन पौधरोपण किया जाना है, जिस हेतु 8 लाख अनुमानित शहतूत जड़युक्त पौधो प्रजाति V1 की आवश्यकता होगी। 8 लाख अनुमानित शहतूत जड़युक्त पौधे प्रजाति V1 क्रय करने हेतु मोहर बंद निविदाए दिनांक 04.07.2023 को सायं 2.00 बजे तक आमंत्रित की जाती है ।

जो उसी दिनांक 04.07.2023 को 4.00 बजे उपस्थित निविदाकारों के समक्ष खोली जावेगी।

निविदा की शर्ते :–
1. शहतूत के पौधे V1 प्रजाति के जड़युक्त होना चाहिये ।
2. पौधे की आयु 5 माह से कम नही होना चाहिये ।
3. पौधे माह जुलाई अगस्त में व माँग अनुसार प्रदाय करना होगा ।
4. पौधों की माँग पर तत्काल नर्सरी से उखाड़ कर देना होगा।
5. पौधे पूर्णतः स्वस्थ होना चाहिये पौधे कमजोर व बगैर जड़ के मान्य नही होगें।
6. भाव पत्रक बंद लिफाफे में स्वीकार्य होगी।
7. भाव पत्रक के साथ राशि रू.5000/– का डिमांड ड्राफट Assistant Director Sericulture Betul M.P. के नाम से तैयार कर संलग्न करना होगा ।
8. भाव पत्रक Office of the Assistant Director Sericulture Jhagariya Betul M.P. Pin Cod 460001 पर निर्धारित तिथि 04.07.2023 शाम 2.00 बजे तक पहुँचाना होगा ।
9. निर्धारित तिथि के बाद प्राप्त भाव पत्रकों पर विचार नही किया जावेगा।
10. प्राप्त भाव पत्रकों को गठित समिति के सम्मुख खोले जावेगें। निविदाकर्ता भी तत्समय उपस्थित हो सकते है।
11. पौधे की दरें प्रति पौधा काउटिंग बंडलिंग लोडिंग परिवहन रेशम केन्द्र झगड़िया बैतूल म.प्र. तक करके देना होगा, यदि इसके आगे परिवहन किया जाता है तो प्रति किलोमीटर की दरें कोड करे।
12. पौधो का परिवहन सावधानी पूर्वक एवं सुरक्षित नियत स्थान पर पहुँचाने की जिम्मेदारी आपकी होगी।
13. विवाद की स्थिति में अंतिम निर्णय सहायक संचालक रेशम बैतूल का होगा जो सभी को मान्य होगा।
14. न्यूनतम दर प्राप्त भाव पत्रक मंजूर किया जावेंगा।
15. क्रय हेतु कोई राशि अग्रिम प्रदाय नही की जावेगी।
16. शहतूत जड़युक्त पौधे आर्डर करने पर 7 दिवस में प्रदाय करनी होगी।
17. पौधो की संख्या आवश्यकतानुसार कम या ज्यादा हो सकती है।

सहायक संचालक रेशम
जिला बैतूल म.प्र.

(G15529/23) दो पहिया वाहन पर तीन सवारी ना बैठाएं सतर्क रहें, सुरक्षित रहें ।

BEFORE THE PRESIDING OFFICER: INDUSTRIAL TRIBUNAL AT BANGALORE

Serial Application No.234/2022 IN I.D. NO.13/2013

BETWEEN
The Chief Traffic Manager (Operation), K.S.R.T.C, Central Offices, Shanthi Nagar, K.H. Road, Bangalore.
APPLICANT

AND
Sri. G.R. Somashekhar
RESPONDENT

SUMMONS/NOTICE TO THE RESPONDENT
Sri. G.R. Somashekhar, S/o. Ramanna, Gopikunta Road, Baragur Post, Sira Taluk, Tumkur District-572 113.

WHEREAS, the Applicant Corporation has filed the above Serial Application under section 33(2) (b) of I.D. Act, against you for approval of dismissal order dated 23/06/2022, you are hereby summoned to appear in this Tribunal in person or by a pleader on the 21st day of July 2023 at 11 a.m to answer the same, failing which suit/ application will be disposed of exparte.

Given under my hand and the seal of the Court on this 21st day of June 2023.

BY ORDER OF THE TRIBUNAL
Sheristedar
Industrial Tribunal, Bangalore

ADVOCATE FOR APPLICANT
B L Sanjeev
Advocate
M/S BLS LEGAL, TF-1, Alpine Arch, Langford Road, Bangalore

DIPR/CP/385/AKAR/2023-24

ಸಾರ್ವಜನಿಕ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, **ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಮಾರತಹಳ್ಳಿ ಹೋಬಳಿ (ದೊಡ್ಡನೆಕುಂದಿ ಗ್ರಾಮದ ಸರ್ವೆ ನಂ. 41ರ ಭಾಗವಾದ)**, ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುವ ಸ್ವತ್ತಿನ ಪ್ರಸ್ತುತ **ಮುನಿಸಿಪಲ್ ನಂ. 3507**, ವಿಸ್ತೀರ್ಣ **1 ಎಕರೆ 13 ಗುಂಟೆಯುಳ್ಳ** ಸ್ಥಿರಾಸ್ತಿ ಸ್ವತ್ತಿಗೆ ಸಂಬಂಧಿಸಿದಂತೆ, **ಶ್ರೀ. ವಿ. ವೆಂಕಟ ಕೃಷ್ಣ ರೆಡ್ಡಿ**, ಬಿನ್ ಶ್ರೀ. ವೆಂಕಟರಾಮಿ ರೆಡ್ಡಿ, ವಾಸ ಪೆಂಟ್‌ಹೌಸ್ – 1, ವಾರ್ಸ್ ಫರ್ನ್‌ಡೇಲ್ ಅಪಾರ್ಟ್‌ಮೆಂಟ್ಸ್, 1ನೇ ಮೈನ್, ಕೋಡಿಹಳ್ಳಿ, ಹೆಚ್‌ಎಎಲ್ 2ನೇ ಹಂತ, ಬೆಂಗಳೂರು – 560 008 (ಇನ್ನು ಮುಂದೆ ಇವರನ್ನು **"ಮಾಲೀಕರು"** ಎಂದು ಕರೆಯಲ್ಪಡುವ), ಇವರ ಮಾಲೀಕತ್ವದ ಷೆಡ್ಯೂಲ್‌ನಲ್ಲಿ ವಿವರಿಸಿರುವ ಮತ್ತು ಇನ್ನುಮುಂದೆ ಇದನ್ನು **"ಷೆಡ್ಯೂಲ್ ಸ್ವತ್ತು"** ಎಂದು ಕರೆಯಲ್ಪಡುವ, ಈ ಸ್ವತ್ತಿನ ಮಾಲೀಕತ್ವವನ್ನು ನಾವು ತನಿಖೆ ನಡೆಸುತ್ತಿದ್ದೇವೆ. ಈ ಷೆಡ್ಯೂಲ್ ಸ್ವತ್ತಿಗೆ ತಾವೇ ಏಕಮಾತ್ರ ಮಾಲೀಕರಾಗಿರುತ್ತೇವೆ ಹಾಗೂ ಷೆಡ್ಯೂಲ್ ಸ್ವತ್ತನ್ನು ಮಾರುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ಸದರಿ ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ; ಮತ್ತು ಸದರಿ ಮಾಲೀಕರು ಸದರಿ ಷೆಡ್ಯೂಲ್ ಸ್ವತ್ತು ಎಲ್ಲಾ ಋಣಭಾರ ಅಡಮಾನ, ಭಾಗಾಂಶ, ಬಾಕಿ ದಾವೆಗಳು ಮತ್ತು ಇತರೆ ಯಾವುದೇ ಮೂರನೇ ವ್ಯಕ್ತಿಗಳ ಹಕ್ಕು/ ಆಕ್ಷೇಪಣೆಗಳಿಂದ ಮುಕ್ತವಾಗಿದೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಎಲ್ಲಾ ವ್ಯಕ್ತಿಗಳು, ಹಿಂದೂ ಅವಿಭಕ್ತ ಕುಟುಂಬ, ಕಂಪನಿಗಳು, ಬ್ಯಾಂಕುಗಳು, ಹಣಕಾಸು ಸಂಸ್ಥೆ(ಗಳು), ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ(ಗಳು), ಸಂಸ್ಥೆಗಳು, ವ್ಯಕ್ತಿಗಳ ಸಂಘ ಅಥವಾ ವ್ಯಕ್ತಿಗಳ ಸಂಸ್ಥೆ, ಸ್ಥಾಪನೆಯಾಗಿರುವುದೊ ಅಥವಾ ಇಲ್ಲದಿರುವುದೋ, ಹಣಕಾಸು ನೀಡಿಕೆದಾರರು ಮತ್ತು/ ಅಥವಾ ಸಾಲನೀಡಿಕೆದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧದಲ್ಲಿ ಅಥವಾ ಅದರ ಯಾವುದೇ ಭಾಗ ಅಥವಾ ಅಂಶದ ಸಂಬಂಧದಲ್ಲಿ ಮಾರಾಟ, ವಿನಿಮಯ, ಈಡು, ಪ್ರಭಾರ, ಉಡುಗೊರೆ, ದತ್ತಿ, ಪಿತ್ರಾರ್ಜಿತ, ಉತ್ತರಾಧಿಕಾರ, ಕುಟುಂಬದ ವ್ಯವಸ್ಥೆ/ ಒಪ್ಪಂದ, ಅಂತಿಮ ಇಷ್ಟಪತ್ರ, ಅನುಭೋಗದ ಹಕ್ಕು, ಒಡಂಬಡಿಕೆ, ಪರವಾನಗಿ, ಪಾಲು, ಹಂಚಿಕೆ, ಧರಣಾಧಿಕಾರ, ಜಪ್ತಿ, ಅಭಿವೃದ್ಧಿ ಹಕ್ಕು, ಪಾಲುದಾರಿಕೆ, ಹಕ್ಕಿನ ವ್ಯವಸ್ಥೆ, ಲಿಸ್ ಪೆಂಡೆನ್ಸ್, ಯಾವುದೇ ನ್ಯಾಯಾಂಗ/ ಅರೆ ನ್ಯಾಯಾಂಗ ಪ್ರಾಧಿಕಾರಿಯ ಡಿಕ್ರಿ ಅಥವಾ ಆದೇಶ, ಮೀಸಲಾತಿ, ಗುತ್ತಿಗೆ/ ಒಪ್ಪಂದ, ಪವರ್ ಆಫ್ ಅಟಾರ್ನಿ, ಆಯ್ಕೆ, ಎಫ್‌ಎಸ್‌ಐ/ ಎಫ್‌ಎಆರ್ ಕನ್‌ಸಮ್ಷನ್, ಪ್ರಥಮ ನಿರಾಕರಣೆ ಹಕ್ಕು, ಮುನ್‌ಕೊಳ್ಳುವಿಕೆ, ಅಥವಾ ಯಾವುದೇ ಸ್ವರೂಪದ ಯಾವುದೇ ಅನುಕೂಲಗಳು, ಆಕ್ಷೇಪಣೆ, ಡಿಮ್ಯಾಂಡ್, ಹಕ್ಕು ಕೇಳಿಕೆ, ಹಕ್ಕು ಬಾಧ್ಯತೆ ಮತ್ತು ಆಸಕ್ತಿ ಹೊಂದಿದ್ದರೆ, ಮೂಲ ದಾಖಲೆ ಪತ್ರಗಳ ಬೆಂಬಲದೊಡನೆ ಸದರಿ ನೋಟೀಸ್ ಪ್ರಕಟವಾದ 15 **(ಹದಿನೈದು) ದಿನಗಳ** ಕಾಲಾವಧಿಯ ಒಳಗೆ ಕೆಳಗೆ ತಿಳಿಸಿರುವ ವಿಳಾಸಕ್ಕೆ ಕಳುಹಿಸಬೇಕಾಗಿ ಈ ಮೂಲಕ ಕರೆ ನೀಡಲಾಗಿದೆ. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು ನಿಗದಿತ ಸದರಿ ಕಾಲಾವಧಿಯ ಒಳಗೆ ಬಾರದಿದ್ದರೆ, ಮೇಲೆ ತಿಳಿಸಿರುವ ಮಾಲೀಕರ ಹೊರತಾಗಿ ಬೇರೆಯಾರೂ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಕ್ಕು ಬಾಧ್ಯತೆ, ಹಿತಾಸಕ್ತಿ ಅಥವಾ ಯಾವುದೇ ಆಕ್ಷೇಪಣೆಗಳು ಮತ್ತು/ ಅಥವಾ ಕ್ಲೇಮನ್ನು ಹೊಂದಿರುವುದಿಲ್ಲವೆಂದು ಭಾವಿಸಲಾಗುವುದು ಮತ್ತು ನಮ್ಮ ಕಕ್ಷಿದಾರರು ಸದರಿ ಮಾಲೀಕರೊಂದಿಗೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಉದ್ದೇಶಿತ ವ್ಯವಹಾರವನ್ನು ಸಂಪೂರ್ಣಗೊಳಿಸಲು ಸ್ವತಂತ್ರರಾಗಿರುವರೆಂದು ತಿಳಿಯಲಾಗುವುದು. ನಿಗದಿತ ಸದರಿ ಕಾಲಾವಧಿ ಮುಗಿದ ನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳು ಮತ್ತು/ ಅಥವಾ ಕ್ಲೇಮುಗಳನ್ನು ನಾವು ಸ್ವೀಕರಿಸುವುದಿಲ್ಲ ಮತ್ತು ಅಂತಹ ಆಕ್ಷೇಪಣೆಗಳು ಮತ್ತು/ ಅಥವಾ ಕ್ಲೇಮುಗಳು ನಮ್ಮ ಕಕ್ಷಿದಾರರ ಮೇಲೆ ಬಂಧನೆಯಾಗುವುದಿಲ್ಲ.

ಷೆಡ್ಯೂಲ್
ಷೆಡ್ಯೂಲ್ ಸ್ವತ್ತು

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಮಾರತಹಳ್ಳಿ ಹೋಬಳಿ (ದೊಡ್ಡನೆಕುಂದಿ ಗ್ರಾಮದ ಸರ್ವೆ ನಂ. 41ರ ಭಾಗವಾದ), ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುವ ಸ್ವತ್ತಿನ ಪ್ರಸ್ತುತ **ಮುನಿಸಿಪಲ್ ನಂ. 3507**, ವಿಸ್ತೀರ್ಣ **1 ಎಕರೆ 13 ಗುಂಟೆಯುಳ್ಳ** ಸ್ಥಿರಾಸ್ತಿ ಸ್ವತ್ತಿನ ಚಕ್ಕುಬಂದಿ ಈ ಕೆಳಕಂಡಂತಿರುವುದು:

ಪೂರ್ವಕ್ಕೆ : ಸರ್ವೆ ನಂ. 24ರ ಭೂಮಿ;
ಪಶ್ಚಿಮಕ್ಕೆ : ಸರ್ವೆ ನಂ. 26 ಮತ್ತು 40ರ ಭೂಮಿ;
ಉತ್ತರಕ್ಕೆ : ಸರ್ವೆ ನಂ. 41 ರ ಉಳಿದ ಭೂಮಿ; ಮತ್ತು
ದಕ್ಷಿಣಕ್ಕೆ : ಹೊರ ವರ್ತುಲ ರಸ್ತೆ ಮತ್ತು ಸರ್ವೆ ನಂ. 24 ಮತ್ತು 25ರ ಭೂಮಿ.

ಸಿ.ಆರ್. ಮುರಳೀಧರನ್, ಪಾಲುದಾರರು
ದುಅ ಅಸೋಸಿಯೇಟ್ಸ್
ಅಡ್ವೊಕೇಟ್ಸ್ ಮತ್ತು ಸಾಲಿಸಿಟರ್ಸ್
130/1, ಎರಡನೇ ಅಂತಸ್ತು, ಹಲಸೂರು ರಸ್ತೆ,
ಬೆಂಗಳೂರು – 560 042
ದೂ. ಸಂ. 91–80–25588799/ 25589909
ಇ–ಮೇಲ್: murali@duaassociates.com

ಸ್ಥಳ: ಬೆಂಗಳೂರು
ದಿನಾಂಕ: ಜೂನ್ 28, 2023

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು, ಯೋಜನೆ (ದಕ್ಷಿಣ) ರವರ ಕಛೇರಿ, 9ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 560 011.

ಸಂ: ಕಾ.ಪಾ.ಅ(ಯೋ–ದ)/ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್/06/2023–24 ದಿನಾಂಕ: 27.06.2023

"ಸಾರ್ವಜನಿಕ ಟೆಂಡರ್ ಪ್ರಕಟಣೆ" (2ನೇ ಕರೆ)

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in E-Auction ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ವಿಭಾಗ ಬಿಬಿಎಂಪಿ ವ್ಯಾಪ್ತಿಯ ಜಯನಗರ 4ನೇ ಬ್ಲಾಕ್‌ನಲ್ಲಿರುವ ಜಯನಗರ ನೂತನ (ಸರ್.ಎಂ.ವಿಶ್ವೇಶ್ವರಯ್ಯ ಕಟ್ಟಡ) ವಾಣಿಜ್ಯ ಸಂಕೀರ್ಣ ಹಾಗೂ ಹಳೆಯ ವಾಣಿಜ್ಯ ಸಂಕೀರ್ಣ ಕಟ್ಟಡದಲ್ಲಿ ಖಾಲಿ ಇರುವ ಮಳಿಗೆಗಳು, ಕಛೇರಿಗಳು ಹಾಗೂ ಹೋಟೆಲ್ ಉದ್ಯಮಕ್ಕಾಗಿ E-Auction ಮುಖಾಂತರ ಟೆಂಡರ್‌ನ್ನು ನಿಯಮ ಹಾಗೂ ಷರತ್ತುಗಳಿಗೆ ಒಳಪಡಿಸಿ ಕೆಳಕಂಡ ವಿವರಗಳಂತೆ ಆಹ್ವಾನಿಸಲಾಗಿರುತ್ತದೆ.

ಕ್ರಮ ಸಂಖ್ಯೆ	ಕೆಲಸದ ಹೆಸರು	ವಿಸ್ತೀರ್ಣ ಚದರ ಅಡಿಗಳಲ್ಲಿ	ಇ.ಎಂ.ಡಿ. ರೂ. ಗಳಲ್ಲಿ
1.	ಜಯನಗರ 4ನೇ ಬ್ಲಾಕ್‌ನಲ್ಲಿರುವ ಸರ್ ಎಂ.ವಿಶ್ವೇಶ್ವರಯ್ಯ ವಾಣಿಜ್ಯ ಸಂಕೀರ್ಣ ಕಟ್ಟಡದಲ್ಲಿರುವ (ನೂತನ ಸಂಕೀರ್ಣ), ಮೊದಲನೇ ಮಹಡಿ ಮಳಿಗೆಗಳ ಸಂಖ್ಯೆ 35ನ್ನು ಬಾಡಿಗೆಗೆ ನೀಡುವುದು.	68.60	5,000.00
		ಗುತ್ತಿಗೆ ಅವಧಿ : 3 ವರ್ಷಗಳು ಅಥವಾ 36 ತಿಂಗಳು	

ಟೆಂಡರ್ ವೇಳಾ ಪಟ್ಟಿ : 1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಬಿಡ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಸಾರ್ವಜನಿಕರು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಎಲ್ಲಾ ಕೆಲಸದ ದಿವಸಗಳಂದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ಪಡೆಯಬಹುದು. 3) ಸದರಿ ಬಿಡ್‌ನಲ್ಲಿ ಭಾಗವಹಿಸಿ ನಮೂದಿಸುವ ದರವು ಪ್ರತಿ ಚದರು ಅಡಿಗೆ ಪ್ರತಿ ಮಾಹೆಯ ದರವಾಗಿರುತ್ತದೆ. (Rate Per Square feet Per month). 4)ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.07.2023 ಮತ್ತು ಲೈವ ಹರಾಜು ಬಿಡ್ಡಿಂಗ್ ಪ್ರಾರಂಭ ದಿನಾಂಕ: 12.07.2023 ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಇ.ಪ್ರೊ.ಪೋರ್ಟಲ್ ನಲ್ಲಿ ತೆರೆಯಲಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ)



ಕೋವಿಡ್ ವೈರಸ್ಸನ್ನು ಚುಚ್ಚಿಸಿಕೊಂಡವರು!

ಭಯಾನಕವಾದ ರೋಗವನ್ನುಂಟುಮಾಡುವ ವೈರಸ್ಸನ್ನು ಸ್ವಪ್ರೇರಣೆಯಿಂದ ವಿಜ್ಞಾನಿಗಳ ಮೇಲೆ ನಂಬಿಕೆ ಇಟ್ಟು ಚುಚ್ಚಿಸಿಕೊಂಡವರ ಧೈರ್ಯ ಎಂಥದ್ದಿರಬಹುದು...

ಕೊಳ್ಳೇಗಾಲ ಶರ್ಮ

ಹೌದು. ಬೇಕೆಂದೇ ಕೋವಿಡ್ ವೈರಸ್ಸನ್ನು ಚುಚ್ಚಿಸಿಕೊಂಡವರ ಕಥೆ ಈಗ ಸುದ್ದಿ ಮಾಡುತ್ತಿದೆ. ಮೊದಲಿಗೆ ಇದು ಸರಿಯೋ ತಪ್ಪೋ ಎನ್ನುವ ಕಾರಣಕ್ಕೆ. ಎರಡನೆಯದಾಗಿ, ಇದರಿಂದ ಕೋವಿಡ್ ಸೋಂಕಿನ ಬಗ್ಗೆ ತಿಳಿದ ಕೆಲವು ಹೊಸ ವಿಷಯಗಳಿಂದಾಗಿ ಸುದ್ದಿ ಆಗಿದೆ. ಇಂಗ್ಲೆಂಡಿನ ಇಂಪೀರಿಯಲ್ ಕಾಲೇಜಿನ ವೈದ್ಯ ವಿಜ್ಞಾನಿ ವೆಂಡಿ ಬಾರ್ಕಲೇ ಮತ್ತು ಸಂಗಡಿಗರು ಮೂವತ್ತನಾಲ್ಕು ಜನರಿಗೆ ಉದ್ದೇಶಪೂರ್ವಕವಾಗಿ, 'ಇಂತಿಷ್ಟು ವೈರಸ್ಸು' ಎಂದು ಸೋಂಕಿಸಿದ್ದಾರೆ. ವೈರಸ್ ತುಂಬಿದ ದ್ರವವನ್ನು ಅವರ ಮೂಗಿನೊಳಗೆ ಸುರಿದಿದ್ದಾರೆ. ಇವರೆಲ್ಲ ಲಸಿಕೆ ಪಡೆಯದ, ಹಿಂದೆ ಎಂದೂ ಕೋವಿಡ್ ಸೋಂಕದ ಯುವಕ, ಯುವತಿಯರು ಎನ್ನುವುದು ವಿಶೇಷ.

ಹೀಗೆಂದು, ವೆಂಡಿ ತಂಡಕ್ಕೆ ಈ ಯುವಕ, ಯುವತಿಯರ ಮೇಲೆ ವೈರವೇನೂ ಇರಲಿಲ್ಲ. ಇದ್ದುದೆಲ್ಲ, 'ಅವರಲ್ಲಿ ಎಷ್ಟು ಜನರಿಗೆ ಕಾಯಿಲೆ ಕಾಣಿಸುತ್ತದೆ? ರೋಗಲಕ್ಷಣಗಳು ಯಾವಾಗ ಕಾಣುತ್ತದೆ?. ಅದು ಕಾಣಿಸುವಾಗ ಅವರ ಮೂಗಿನಿಂದ ಬರುವ ಉಸಿರಿನಲ್ಲಿ ಎಷ್ಟು ವೈರಸ್ಸು ಇರುತ್ತದೆ? ಇದು ಹೆಚ್ಚಾಗುತ್ತದೆಯೋ ಕಡಿಮೆ ಆಗುತ್ತದೆಯೋ? ಇನ್ನೊಬ್ಬರಿಗೆ ಕಾಯಿಲೆ ತರುವಷ್ಟು ವೈರಸ್ಸನ್ನು ಎಲ್ಲರೂ ಉಸಿರಿನಿಂದ ಹೊರ ಬಿಡುತ್ತಾರೆಯೋ?' – ಎಂಬ ಸಂದೇಹಗಳು. ಈ ಸಂದೇಹಗಳಿಗೆ ಇದುವರೆವಿಗೂ ಇದಮಿತ್ಥಂ ಎನ್ನುವ ಉತ್ತರವಿರಲಿಲ್ಲವೆನ್ನಿ.

ಸಾಮಾನ್ಯವಾಗಿ ವೈರಸ್ಸಿನಿಂದ ಕಾಯಿಲೆ ಬಂದಾಗ, ಒಬ್ಬೊಬ್ಬರಿಗೂ ಸೋಂಕಿದ ವೈರಸ್ಸಿನ ಪ್ರಮಾಣ ವಿಭಿನ್ನವಾಗಿರಬಹುದು. ಅಥವಾ ತಳಿಯೇ ಬೇರೆ, ಬೇರೆ ಆಗಿರಬಹುದು. ಇದರಿಂದಾಗಿ ಎಲ್ಲರಲ್ಲಿಯೂ ಕಾಯಿಲೆ ಕಾಣಿಸುವುದಿಲ್ಲ. ಇದು ವೈರಸ್ಸಿನ ಪ್ರಮಾಣದಿಂದಲೋ, ಅಥವಾ ವ್ಯಕ್ತಿಗಳಲ್ಲಿರುವ ರೋಗನಿರೋಧಕತೆಯಿಂದಲೋ ಎನ್ನುವ ಸಂದೇಹ ಇದ್ದೇ ಇರುತ್ತದೆ. ಪರಿಹಾರ: ಎಲ್ಲರಿಗೂ ಒಂದೇ ಪ್ರಮಾಣದ ವೈರಸ್ಸನ್ನು ಚುಚ್ಚಿ ನೋಡಿದರೆ, ಎಷ್ಟು ಜನರಲ್ಲಿ ಕಾಯಿಲೆ ಕಾಣಿಸಿತು ಎನ್ನುವುದರಿಂದ, ಯಾರ್ಯಾರಿಗೆ ವೈರಸ್ಸಿನ ದಾಳಿಯನ್ನು ತಡೆಯುವ ಶಕ್ತಿ ಇದೆ ಎನ್ನುವುದೂ ಗೊತ್ತಾಗುತ್ತದೆ.

ಮೂವತ್ತನಾಲಕ್ಕೂ ಜನರಿಗೆ ಒಂದೇ ಪ್ರಮಾಣದಲ್ಲಿ ವೈರಸ್ಸನ್ನು ಚುಚ್ಚಿದ್ದರೂ, ಕೇವಲ ಹದಿನೆಂಟು ಜನರಲ್ಲಿಯಷ್ಟೆ ಸೋಂಕಿನ ಲಕ್ಷಣಗಳು ಕಾಣಿಸಿಕೊಂಡವು. ಕೇವಲ ಹದಿನೆಂಟು ಮಂದಿಗಷ್ಟೆ ಮೂಗು ಸೋರಿ, ಜ್ವರ ಬಂದು ಕಾಯಿಲೆಯ ಲಕ್ಷಣಗಳು ಕಾಣಿಸಿಕೊಂಡವಂತೆ. ಇವರಲ್ಲಿ ಹನ್ನೆರಡು ಮಂದಿಯ ಗಂಟಲಿನ ದ್ರವದಲ್ಲಿ ಬಹಳಷ್ಟು ವೈರಸ್ಸು ಇತ್ತು.

ಇನ್ನೊಂದು ಬಗೆಹರಿಯದ ಸಂದೇಹ, ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದು ಉಸಿರಿನಲ್ಲಿರುವ ವೈರಸ್ಸೋ, ಸಿಂಬಳದಲ್ಲಿರುವ ವೈರಸ್ಸೋ – ಎನ್ನುವುದು. ಕೋವಿಡ್ ಬಂದಾಗ ಹುಚ್ಚು ಹಿಡಿದ ಹಾಗೆ ಕೈ ತೊಳೆಯುತ್ತಿದ್ದುದು, ಸ್ಯಾನಿಟೈಸರು ಬಳಸುತ್ತಿದ್ದುದು ನೆನಪಿದೆಯಷ್ಟೆ. ಉಸಿರಿನಲ್ಲಿ ಎಷ್ಟು ವೈರಸ್ಸು ಇದೆ, ವಸ್ತುಗಳಿಗೆ ಅಂಟಿಕೊಂಡ ಸಿಂಬಳದಲ್ಲಿ ಎಷ್ಟಿದೆ ಎಂದು ಗೊತ್ತಾದರೆ, ಒಬ್ಬರಿಂದ ಇನ್ನೊಬ್ಬರಿಗೆ ರೋಗ ಯಾವುದರಿಂದ ಹರಡುತ್ತದೆ ಎನ್ನುವುದನ್ನು ತಿಳಿಯಬಹುದಷ್ಟೆ. ಕೇವಲ ಹನ್ನೆರಡು ಮಂದಿಯ ಉಸಿರಿನಲ್ಲಿಯಷ್ಟೆ ಇನ್ನೊಬ್ಬರಿಗೆ ಸೋಂಕಿಸಬಹುದಾದಷ್ಟು ವೈರಸ್ಸು ಇತ್ತಂತೆ. ವಿಚಿತ್ರ ಎಂದರೆ, ಯಾವುದೇ ರೋಗಲಕ್ಷಣಗಳೂ ಇಲ್ಲದ ಇಬ್ಬರ ಉಸಿರಿನಲ್ಲಿ ಸೋಂಕುಂಟು ಮಾಡುವುದಕ್ಕೆ ಬೇಕಾದ ಪ್ರಮಾಣದ ಶೇ. 80ರಷ್ಟು ಇತ್ತು. ಅಂದರೆ ಲಕ್ಷಣಗಳು ಇಲ್ಲದವರೂ ಸೋಂಕನ್ನು ಹರಡಬಲ್ಲರು. ಉಸಿರಿನಿಂದ ಸುರಿದ ವೈರಸ್ಸುಗಳು ಸೋಂಕು ತಗುಲಿಸಿದ ಮೂರು ದಿನಗಳ ನಂತರ ಬಹಳ ಹೆಚ್ಚಿದ್ದುವು. ಅನಂತರ ಕ್ಷೀಣಿಸಿದುವು. ಇವರು ಧರಿಸಿದ ಮಾಸ್ಕಿನಲ್ಲಿನ ವೈರಸ್ಸುಗಳ ಪ್ರಮಾಣವೂ ಹೀಗೆಯೇ ಏರಿಳಿದಿತ್ತು.

ಪಾಸಿಟಿವ್ ಎಂದರೆ ದೇಹದಲ್ಲಿ ವೈರಸ್ಸುಗಳು ಬೆಳೆಯುತ್ತಿವೆ ಎಂದು ಅರ್ಥ

ವೈರಸ್ಸು ದೇಹವನ್ನು ಸೇರಿದ ಎಷ್ಟು ದಿನದ ಮೇಲೆ ಪಾಸಿಟಿವ್ ಎಂದು ತಿಳಿಯುತ್ತದೆ ಎನ್ನುವುದು ಇನ್ನೊಂದು ಪ್ರಶ್ನೆ. ಪಾಸಿಟಿವ್ ಎಂದರೆ ದೇಹದಲ್ಲಿ ವೈರಸ್ಸುಗಳು ಬೆಳೆಯುತ್ತಿವೆ ಎಂದರ್ಥ. ಇದನ್ನು ಹಲವು ತಂತ್ರಗಳಿಂದ ಪತ್ತೆ ಮಾಡುತ್ತಾರೆ. ಆಸ್ಪತ್ರೆಗಳಲ್ಲಿ ಪಿಸಿಆರ್ ತಂತ್ರಗಳಿವೆ. ಮನೆಯಲ್ಲಿಯೂ ಪತ್ತೆ ಮಾಡುವ ಉಪಾಯಗಳಿವೆ. ಆದರೆ ಇವು ನಿಜಕ್ಕೂ ಸೋಂಕಿಸುವ ಸಾಮರ್ಥ್ಯ ಇರುವಂಥವರನ್ನು ತೋರಿಸಿಕೊಡುತ್ತವೆಯೋ? ಅಥವಾ ಅಂಥಹವರನ್ನು ಸುಮ್ಮನೆ ಕ್ವಾರಂಟೈನಿಗೆ ಹಾಕುತ್ತಿದ್ದೇವೆಯೋ ಎನ್ನುವ ಪ್ರಶ್ನೆಯೂ ಇತ್ತು. ಈ ಸೋಂಕು ಹತ್ತಿಸಿಕೊಂಡವರನ್ನು ಪ್ರತಿದಿನವೂ ಇಂತಹ ತಂತ್ರಗಳಿಂದ ಪರೀಕ್ಷಿಸಿಯೂ ನೋಡಿದ್ದಾರೆ. ಬಹುತೇಕ ಎಲ್ಲರಲ್ಲಿಯೂ ಮೂರು ದಿನಗಳ ನಂತರ ಪಾಸಿಟಿವ್ ಕಾಣಿಸಿತ್ತು. ರೋಗಲಕ್ಷಣಗಳು ಕಂಡವರೆಲ್ಲರೂ ಪಾಸಿಟಿವ್ ಆಗಿದ್ದರು. ಇದೇ ಸಂದರ್ಭದಲ್ಲಿ ಅವರ ಉಸಿರಿನಲ್ಲಿ ಅತಿ ಹೆಚ್ಚು ವೈರಸ್ಸು ಇತ್ತು ಎಂಬುದು ಕಾಕತಾಳೀಯವಿರಲಿಕ್ಕಿಲ್ಲ.

ಅಂದರೆ ಅರ್ಥ ಇಷ್ಟೆ. ಮನೆಯಲ್ಲಿಯೇ ಪಾಸಿಟಿವಿಟಿಯನ್ನು ಪರೀಕ್ಷಿಸುವ ಸಾಧನ ಹಾಗೂ ತಂತ್ರಗಳು 'ಆರ್‌ಟಿಪಿಸಿಆರ್'ನಷ್ಟು ನಿಖರವಲ್ಲದಿರಬಹುದು; ಆದರೆ ಈ ಸಾಧನಗಳು ಸೋಂಕಿನ ಬಗ್ಗೆ ಮುನ್ನೆಚ್ಚರಿಕೆ ವಹಿಸಲು ನೆರವಾಗುತ್ತವೆ ಎನ್ನುವುದು ವೆಂಡಿ ಬಾರ್ಕಲೇ ತಂಡದ ಅನಿಸಿಕೆ. ಮೂಗೇ ಸೋಂಕು ಹರಡುವುದರ ಮೂಲ ಎನ್ನುವುದು ಇವರ ತೀರ್ಮಾನ.

ಅಬ್ಬಾ! ಹೀಗೂ ಉಂಟೇ! ಇಷ್ಟೊಂದು ಭಯಾನಕವಾದ ರೋಗವನ್ನುಂಟುಮಾಡುವ ವೈರಸ್ಸನ್ನು ಬೇಕೆಂದೇ ಚುಚ್ಚಿಸಿಕೊಂಡವರು ಎಂಥವರು ಎಂದಿರಾ? ಅವರೂ ನಮ್ಮ ನಿಮ್ಮಂಥವರೇ? ಆದರೆ ವಿಜ್ಞಾನದಲ್ಲಿ, ವೈದ್ಯರ ಮೇಲೆ ನಂಬಿಕೆ ವಿಶ್ವಾಸ ಇಟ್ಟು ಸ್ವಯಂಪ್ರೇರಣೆಯಿಂದ ಪ್ರಯೋಗಕ್ಕೆ ಒಳಗಾದವರು. ಇವರನ್ನು ಹದಿನಾಲ್ಕು ದಿನಗಳ ಕಾಲ ಪ್ರತ್ಯೇಕವಾಗಿಟ್ಟು, ನಿತ್ಯವೂ ರಕ್ತ, ಉಸಿರು, ಗಂಟಲು ಮೊದಲಾದವನ್ನು ಪರೀಕ್ಷಿಸಿದ್ದರು. ಕಾಯಿಲೆ ತೀವ್ರವಾಗದಂತೆ ಎಚ್ಚರವಹಿಸಿದ್ದರಂತೆ. ಆದರೂ ಇದು ಅಪಾಯಕಾರಿ ಪ್ರಯೋಗ. ಇಂಥ ಪ್ರಯೋಗವನ್ನು ಮಾಡಬಾರದಿತ್ತು ಎನ್ನುವ ಮಾತುಗಳು ಕೇಳಿ ಬಂದಿವೆ. ನೀವೇನಂತೀರಿ? ಈ ಸಾಹಸ ಪ್ರಯೋಗದ ವರದಿ ಇತ್ತೀಚಿನ 'ಲ್ಯಾನ್ಸೆಟ್ ಮೈಕ್ರೋಬ್' ಪತ್ರಿಕೆಯಲ್ಲಿ ಪ್ರಕಟವಾಗಿದೆ. ❖

ಚಾಟ್ ಜಿಪಿಟಿ Vs ಗೂಗಲ್ ಬಾರ್ಡ್

ಅವಿನಾಶ್ ಬಿ.

ಅಂತರ್ಜಾಲವನ್ನು ಜಾಲಾಡಿದಷ್ಟೂ ಮಾಹಿತಿ ಭರಪೂರವಾಗಿ ಲಭ್ಯ. ಈ ಮಾಹಿತಿಯ ಪ್ರವಾಹದ ನಡುವೆ ಇತ್ತೀಚೆಗೆ ಸದ್ದು ಮಾಡುತ್ತಿರುವುದು 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್' (ಎಐ ಅಥವಾ ಕೃತಕ ಬುದ್ಧಿಮತ್ತೆ) ಆಧಾರಿತ ಚಾಟ್ ತಂತ್ರಜ್ಞಾನ. ಆರೇಳು ತಿಂಗಳ ಹಿಂದೆ ತಂತ್ರಜ್ಞಾನ ಕ್ಷೇತ್ರಕ್ಕಷ್ಟೇ ಅಲ್ಲ, ಬಹುತೇಕ ಎಲ್ಲ ಕ್ಷೇತ್ರಗಳಿಗೂ ಸುಳಿಗಾಳಿಯಂತೆ ಬಂದು ಅಪ್ಪಳಿಸಿದ್ದು ಚಾಟ್-ಜಿಪಿಟಿ ಎಂಬ ಸಂಭಾಷಣಾ ತಂತ್ರಾಂಶ. ಅದಕ್ಕೆ ಸಮರ್ಥವಾಗಿ ಸವಾಲೊಡ್ಡುತ್ತಿದೆ ಗೂಗಲ್‌ನ 'ಬಾರ್ಡ್' (Google Bard) ಎಂಬ ಮತ್ತೊಂದು 'ಉತ್ತರಿಸುವ ಯಂತ್ರ'.

ಹೇಳಿ ಕೇಳಿ ಗೂಗಲ್ ಎಂಬುದು ನಮಗೆ ಬೇಕಾದ ಎಲ್ಲವನ್ನೂ (ಒಳ್ಳೆಯದು ಮತ್ತು ಕೆಟ್ಟದ್ದು ಎಂಬ ಆಯ್ಕೆ ಮಾತ್ರ ನಮ್ಮ ಬುದ್ಧಿಗೆ ಬಿಟ್ಟ ವಿಚಾರ) ನೀಡಬಲ್ಲ ತಂತ್ರಜ್ಞಾನ ದಿಗ್ಗಜ 'ಸರ್ಚ್ ಎಂಜಿನ್'. ಚಾಟ್-ಜಿಪಿಟಿ ಈ ಪರಿಯಾಗಿ ಸದ್ದು ಮಾಡುತ್ತಿರಬೇಕಾದರೆ ಬಾರ್ಡ್ ಎಂಬ ಎಐ ತಂತ್ರಜ್ಞಾನದ ಮೇಲೆ ಭರ್ಜರಿ ಹೂಡಿಕೆ ಮಾಡುತ್ತಿದೆ, ಗೂಗಲ್ ಒಡೆತನದ ಆಲ್ಫಬೆಟ್ ಸಂಸ್ಥೆ. ಇದು ಕೂಡ ಚಾಟ್-ಜಿಪಿಟಿ ಮಾದರಿಯಲ್ಲೇ, ನಾವು ಪಠ್ಯರೂಪದಲ್ಲಿ ಕೇಳುವ ಪ್ರಶ್ನೆಗಳಿಗೆ ಇಡೀ ಅಂತರ್ಜಾಲವನ್ನು ಜಾಲಾಡಿ ಪರಿಹಾರ ನೀಡಬಲ್ಲ, ಸಹಜ ಭಾಷೆಯಲ್ಲೇ ನಮಗೆ ವಿವರ ನೀಡಬಲ್ಲ ತಂತ್ರಜ್ಞಾನ.

ಆರೇಳು ತಿಂಗಳ ಹಿಂದೆ ತಂತ್ರಜ್ಞಾನ ಕ್ಷೇತ್ರಕ್ಕಷ್ಟೇ ಅಲ್ಲ, ಬಹುತೇಕ ಎಲ್ಲ ಕ್ಷೇತ್ರಗಳಿಗೂ ಸುಳಿಗಾಳಿಯಂತೆ ಬಂದು ಅಪ್ಪಳಿಸಿದ್ದು ಚಾಟ್-ಜಿಪಿಟಿ ಎಂಬ ಸಂಭಾಷಣಾ ತಂತ್ರಾಂಶ. ಅದಕ್ಕೆ ಸಮರ್ಥವಾಗಿ ಸವಾಲೊಡ್ಡುತ್ತಿದೆ ಗೂಗಲ್‌ನ ಬಾರ್ಡ್ (Google Bard) ಎಂಬ ಮತ್ತೊಂದು 'ಉತ್ತರಿಸುವ ಯಂತ್ರ'



●ಏನಿದು ಗೂಗಲ್ ಬಾರ್ಡ್?

ಗೂಗಲ್‌ನಲ್ಲಿ ನಾವು ಹೇಳಿದ್ದಕ್ಕೆ ಉತ್ತರಿಸುವ, ಹೇಳಿದ್ದನ್ನು ಮಾಡಬಲ್ಲ 'ಗೂಗಲ್ ಅಸಿಸ್ಟೆಂಟ್' ಎಂಬ ಸಹಾಯಕ ತಂತ್ರಜ್ಞಾನವನ್ನು ಬಹುಶಃ ಬಹುತೇಕರು ಬಳಸಿರಬಹುದು. 'ಯಂತ್ರಕಲಿಕೆ' (ಮಶಿನ್ ಲರ್ನಿಂಗ್) ಆಧಾರದಲ್ಲಿ ಕೆಲಸ ಮಾಡುವ ಈ ಸಹಾಯಕ ತಂತ್ರಾಂಶದ ಸುಧಾರಿತ ಮತ್ತು ಹೆಚ್ಚು ಶಕ್ತಿಶಾಲಿ ರೂಪವೇ ಬಾರ್ಡ್.

ಗೂಗಲ್ ಇಡೀ ಜಗತ್ತಿನ ಬಹುತೇಕ ಭಾಷೆಗಳಲ್ಲಿ ಸೇವೆ ನೀಡುತ್ತಿರುವುದರಿಂದಾಗಿ, ತನ್ನ ವ್ಯಾಪ್ತಿಯಲ್ಲಿರುವ ಭಾರಿ ಪ್ರಮಾಣದ ದತ್ತಾಂಶ ಸಂಚಯದ ಸಹಾಯ ಪಡೆಯುವ 'ಬಾರ್ಡ್' ಚಾಟ್‌ಬಾಟ್, ಓಪನ್ ಎಐ ಸಂಸ್ಥೆಯ ಚಾಟ್ ಜಿಪಿಟಿಗಿಂತಲೂ ಒಂದು ಕೈ ಮೇಲೆ. ಇದು ಗೂಗಲ್‌ನ ಸ್ವಂತದ್ದಾದ, LaMDA (ಲ್ಯಾಂಗ್ವೇಜ್ ಮಾಡೆಲ್ ಫಾರ್ ಡೈಲಾಗ್ ಅಪ್ಲಿಕೇಶನ್ಸ್) ಎಂಬ LLM (ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್) ಆಧಾರದಲ್ಲಿ ಕೆಲಸ ಮಾಡುತ್ತದೆ. ಹೀಗಾಗಿ, ಆಂಗ್ಲೇತರ ಭಾಷೆಗಳಲ್ಲಿ ಕೂಡ ಇದು ಹೆಚ್ಚು ಚೆನ್ನಾಗಿ ಕೆಲಸ ಮಾಡುತ್ತಿದೆ. ಆದರೆ, ಸದ್ಯಕ್ಕೆ ಕನ್ನಡ ಸಹಿತ ಭಾರತೀಯ ಭಾಷೆಗಳಲ್ಲಿ ಇದು ಇನ್ನಷ್ಟೇ ಲಭ್ಯವಾಗಬೇಕಿದೆ. ಆದರೆ, ಸಣ್ಣದೊಂದು ಇಂಗ್ಲಿಷ್ ವಾಕ್ಯವನ್ನು ಬರೆದು, ಇದನ್ನು ಕನ್ನಡಕ್ಕೆ ಅನುವಾದಿಸಿಕೊಡು ಎಂದು ಸೂಚನೆ ನೀಡಿದರೆ, ಕನ್ನಡದ ಅನುವಾದ ಲಭ್ಯವಾಗುತ್ತದೆ! ದೊಡ್ಡ ವಾಕ್ಯ ಬರೆದರೆ, 'ನಾನಿನ್ನೂ ಈ ಭಾಷೆ ಕಲಿಯಲು ಪ್ರಯತ್ನಿಸುತ್ತಿದ್ದೇನೆ. ಹೀಗಾಗಿ ಈಗ ಇದನ್ನು ಮಾಡಲಾರೆ' ಎಂಬ ಸಂದೇಶ ಕೊಡುತ್ತದೆ.

●ಗೂಗಲ್ ಬಾರ್ಡ್ ಏನೆಲ್ಲ ಮಾಡುತ್ತದೆ?

ಒಂದು ಅಂತರರಾಷ್ಟ್ರೀಯ ಕಂಪನಿಯ ನೌಕರಿಗೆ ಅರ್ಜಿ ಸಲ್ಲಿಸಬೇಕಿದ್ದರೆ, ಒಕ್ಕಣೆ ಹೇಗಿರಬೇಕು ಎಂದು ಅದುವೇ ನಮಗೆ ಹೇಳಿಕೊಡಬಲ್ಲುದು. 'ಅಮ್ಮಾ ಈ ಆಕಾಶವೇಕೆ ನೀಲಿ ಇದೆ?' ಎಂದು ಕೇಳುವ ಪುಟಾಣಿಗಳಿಗೆ ಸಮರ್ಪಕ ಉತ್ತರ ಕೊಡಬಲ್ಲುದು. ಶುಗರ್, ಬಿಪಿ ಇರುವವರಿಗಾಗಿ ಆರೋಗ್ಯಕರವಾದ ರೆಸಿಪಿ ಮಾಡುವುದು ಹೇಗೆ ಎಂದು ಕೇಳಿದರೆ, ಪಠ್ಯರೂಪದಲ್ಲಿ ವಿವರಿಸಬಲ್ಲುದು. ಯಾವುದೋ ಒಂದು ತಂತ್ರಾಂಶ ತಯಾರಿಕೆಗೆ ಕೋಡ್ ತಯಾರಿಸಿಕೊಡಬಲ್ಲುದು; ಪ್ರವಾಸಕ್ಕೆ ಹೋಗುವುದಿದ್ದರೆ ಯೋಜನೆಯನ್ನು ರೂಪಿಸಬಲ್ಲುದು: ಅಥವಾ ನಿಮ್ಮ ಮನಸ್ಸು ತೀರಾ ಮ್ಲಾನವಾಗಿದ್ದರೆ, ನನಗೊಂದು ಬೇಸರದ ಕವನ ಬರೆದುಕೊಡು ಎಂದರೆ, ಕಣ್ಣೀರು ತರಿಸುವಷ್ಟು ಭಾವನಾತ್ಮಕ ಕವನ ರಚನೆಯಾಗುತ್ತದೆ! ಪರಿಸರದ ಬಗ್ಗೆ ಒಂದು ಪ್ರಬಂಧ ಬರೆದುಕೊಡು ಎಂದರೂ ಕ್ಷಣ ಮಾತ್ರದಲ್ಲಿ ಕವನ ಸಿದ್ಧ!

ಇಂಥ ಅನೇಕಾನೇಕ ಕೆಲಸಗಳನ್ನು ಮಾಡಬಲ್ಲ ಚಾಟ್ ಜಿಪಿಟಿ, ಗೂಗಲ್ ಬಾರ್ಡ್ ಹಾಗೂ ಮೈಕ್ರೋಸಾಫ್ಟ್‌ನ 'ಬಿಂಗ್' ಮುಂತಾದವು ಈಗಾಗಲೇ ಸಾಕಷ್ಟು ಉದ್ಯೋಗಗಳಿಗೂ ಕುತ್ತು ನೀಡುತ್ತಿದೆ ಎಂಬ ವರದಿಗಳನ್ನು ನಾವು ಓದಿದ್ದೇವೆ. ಆದರೆ, ಈ ತಂತ್ರಜ್ಞಾನ ರೂಪಿಸಿದವರು ಒಂದು ಅಬಾಧ್ಯತೆ ಅಥವಾ ಹಕ್ಕು ನಿರಾಕರಣೆ (Disclaimer) ವಾಕ್ಯದ ಮೂಲಕ ಎಚ್ಚರಿಸುತ್ತಾರೆ. ಅಂತರ್ಜಾಲದಲ್ಲಿ ಲಭ್ಯವಾಗುವುದೆಲ್ಲವೂ ಎಷ್ಟರ ಮಟ್ಟಿಗೆ ನಿಜವಲ್ಲವೋ, ಈ ಚಾಟ್‌ಬಾಟ್ ಮೂಲಕ ದೊರೆಯುವ ಮಾಹಿತಿಯೂ ಶೇ100ರಷ್ಟು ನಿಖರ ಆಗಿರಲಾರದು ಅಂತ.

●ಬಾರ್ಡ್ ಬಂದಿದ್ದು ಯಾವಾಗ?

ವಾಸ್ತವವಾಗಿ, ಗೂಗಲ್ ಈ ಬಾರ್ಡ್ ಎಂಬ ಚಾಟ್‌ಬಾಟ್ ಅನ್ನು 2021ರ ತನ್ನ ವಾರ್ಷಿಕ ಡೆವಲಪರ್ ಕಾನ್ಫರೆನ್ಸ್‌ನಲ್ಲೇ (I/O) ಘೋಷಿಸಿತ್ತು. ಆದರೆ, ಓಪನ್ ಎಐ ಸಂಸ್ಥೆಯು ಚಾಟ್-ಜಿಪಿಟಿಯನ್ನು 2022ರ ಅಂತ್ಯಭಾಗದಲ್ಲಿ ಯಾವಾಗ ಬಹಿರಂಗಪಡಿಸಿತೋ, ಗೂಗಲ್ ಕೂಡ ಶ್ರಮ ಹಾಕಿ, 2023ರ ಫೆಬ್ರವರಿ ವೇಳೆಗೆ ಬಾರ್ಡ್ ಅನ್ನು ಬಹಿರಂಗಪಡಿಸಿತು. ಆರಂಭದಲ್ಲಿ ಸೀಮಿತ ಜನರಿಗಷ್ಟೇ ಇದಕ್ಕೆ ಪ್ರವೇಶವಿತ್ತು (ಗೂಗಲ್‌ನ ಸಾಮಾನ್ಯ ತಂತ್ರಗಾರಿಕೆ ಎಂದರೆ, ಹೊಸದಾಗಿ ಏನೇ ಘೋಷಿಸುವುದಿದ್ದರೂ ಆಹ್ವಾನ ಆಧಾರಿತ ಪ್ರವೇಶಾವಕಾಶ ನೀಡುವುದು). 2023ರ ಡೆವಲಪರ್ ಸಮಾವೇಶದಲ್ಲಿ ಗೂಗಲ್ ಇದನ್ನು ಎಲ್ಲರಿಗೂ ಮುಕ್ತವಾಗಿಸಿತು. ಮತ್ತು ಈಗಲೂ ಅದಕ್ಕೆ 'ಪ್ರಾಯೋಗಿಕ' ಎಂಬ ಲೇಬಲ್ ಇದ್ದೇ ಇದೆ.

●ಗೂಗಲ್ ಬಾರ್ಡ್ ಹೇಗೆ ಬಳಸುವುದು?

ನಿಮ್ಮಲ್ಲಿ ಜಿಮೇಲ್ ಖಾತೆ ಇದ್ದರಾಯಿತು. ಬ್ರೌಸರಿನಲ್ಲಿಯೇ bard.google.comಗೆ ಹೋಗಿ, ನೋಂದಣಿ ಮಾಡಿಕೊಂಡು, ಅವರ ಷರತ್ತುಗಳು ಮತ್ತು ನಿಯಮಗಳಿಗೆ ಒಪ್ಪಿಗೆ ಸೂಚಿಸಿದ ತಕ್ಷಣವೇ ಗೂಗಲ್ ಬಾರ್ಡ್ ಬಳಕೆ ಆರಂಭಿಸಬಹುದು. ಅಲ್ಲಿರುವ 'Enter a prompt here' ಎಂದಿರುವ ಬಾಕ್ಸ್‌ನಲ್ಲಿ ನಿಮ್ಮ ಪ್ರಶ್ನೆಗಳನ್ನು ಟೈಪ್ ಮಾಡಿ. ಕೆಲವೇ ಕ್ಷಣಗಳಲ್ಲಿ ಉತ್ತರ/ಪರಿಹಾರ ಕಾಣಿಸುತ್ತದೆ.

●ಚಾಟ್-ಜಿಪಿಟಿ ಹಾಗೂ ಗೂಗಲ್ ಬಾರ್ಡ್ - ಏನು ವ್ಯತ್ಯಾಸ?

ಗೂಗಲ್ ಬಾರ್ಡ್‌ನ ಒಂದು ಅನುಕೂಲವೆಂದರೆ, ಈ ವಿಷಯದ ಬಗ್ಗೆ ಮತ್ತಷ್ಟು ತಿಳಿಯಬೇಕಿದ್ದರೆ ಗೂಗಲ್ ಸರ್ಚ್ ಎಂಜಿನ್ ಮೂಲಕ ಹುಡುಕಲು ಅಲ್ಲೇ ಒಂದು ಬಟನ್ ನೀಡಲಾಗಿದೆ. ಜೊತೆಗೆ, ಒಂದು ಪ್ರಶ್ನೆಗೆ ಒಂದೇ ಉತ್ತರವಲ್ಲ, ಇನ್ನಷ್ಟು ಉತ್ತರಗಳನ್ನು ನೋಡುವ ಆಯ್ಕೆಯೂ ಇದೆ. 'View Other Drafts' ಎಂಬ ಆಯ್ಕೆಯ ಮೇಲೆ ಕ್ಲಿಕ್ ಮಾಡಿದಾಗ ಸ್ವಲ್ಪ ಭಿನ್ನವಾದ ಉತ್ತರಗಳು ದೊರೆಯುತ್ತವೆ. ಜೊತೆಗೆ, ನಾವು ಕೇಳಿದ ಪ್ರಶ್ನೆಗಳಿಗೆ ಸಂಬಂಧಿಸಿದ ಅನ್ಯ ವಿಷಯಗಳ ಬಗೆಗೆ ಲಿಂಕ್‌ಗಳನ್ನು ಕೂಡ ಕೆಳಭಾಗದಲ್ಲಿ ಒದಗಿಸುತ್ತದೆ.

ಅದರಿಂದ ಪಡೆದ ಪಠ್ಯವನ್ನು ಗೂಗಲ್ ಡಾಕ್ಸ್ ಅಥವಾ ಜಿಮೇಲ್‌ಗೆ ಎಕ್ಸ್‌ಪೋರ್ಟ್ ಮಾಡುವ ಆಯ್ಕೆ ಇದೆ. ಆದರೆ, ಚಾಟ್-ಜಿಪಿಟಿಗೆ ವ್ಯತಿರಿಕ್ತವಾಗಿ, ನೀವು ಪುನಃ ಲಾಗಿನ್ ಆಗುವಾಗ ಹಿಂದಿನ ಸಂವಾದಗಳು ಲಭ್ಯವಾಗುವುದಿಲ್ಲ. ಅಂದರೆ, ಚಾಟ್ ಕ್ಲೋಸ್ ಮಾಡಿದಾಗ ಅವು ಡಿಲೀಟ್ ಆಗುತ್ತವೆ.

ಒಂದನ್ನು ನೆನಪಿಡಬೇಕು. ಯಾವುದೇ ತಂತ್ರಜ್ಞಾನ ಬಂದರೂ, ಚಾಟ್‌ಬಾಟ್ ನೀಡುವ ಅಥವಾ ಗೂಗಲ್‌ನಲ್ಲೇ ಸರ್ಚ್ ಮಾಡಿ ಲಭ್ಯವಾಗುವ ಅಂತರ್ಜಾಲದ ಮಾಹಿತಿಯನ್ನು ಬಳಸುವ ಮುನ್ನ, ಅದು ಶೇ 100 ನಿಖರ ಆಗಿರಲಾರದು ಎಂಬ ಸಾಮಾನ್ಯಪ್ರಜ್ಞೆ ನಮ್ಮಲ್ಲಿರಬೇಕು. ❖



ಸೆಮಿಕಂಡಕ್ಟರ್ ಎಂಬ ಸರ್ವವ್ಯಾಪಿ

ಶರತ್ ಭಟ್ ಸೇರಾಜೆ

ಸೆಮಿಕಂಡಕ್ಟರ್‌ಗಳು ಈಗ ಸುದ್ದಿಯಲ್ಲಿರುವುದನ್ನು ನೋಡಿದ್ದೇವೆ. ಇದೇನಿದು ಸೆಮಿಕಂಡಕ್ಟರ್; ಇದರ ಪ್ರಯೋಜನವೇನು – ಎಂಬ ಪ್ರಶ್ನೆ ಕೆಲವರ ಮನಸ್ಸಿನಲ್ಲಿಯಾದರೂ ಮೂಡಿರಬಹುದು. ಹಿರಣ್ಯಕಶಿಪುವು ಅಬ್ಬರಿಸಿ, ಪ್ರಹ್ಲಾದನ ಹತ್ತಿರ, 'ಹ್ಞಾ, ಎಲ್ಲಿರುವನು ಆ ನಿನ್ನ ಹರಿ?' ಎಂದು ಕೇಳಿದಂತೆ, 'ಎಲ್ಲಿರುವುದು ಆ ನಿನ್ನ ಸೆಮಿಕಂಡಕ್ಟರು?' ಎಂದು ಕೇಳಿದನಾದರೆ, ಅದು ಎಲ್ಲೆಲ್ಲಿಯೂ ಇರುವುದು ಎಂದೇ ಹೇಳಬೇಕಾದೀತೇನೋ. ಸರ್ವವ್ಯಾಪಿಯಾದ, ಸರ್ವತ್ರ ಗೋಚರವಾದ ಮೊಬೈಲು ಫೋನುಗಳಲ್ಲಿ ಬೇಕಾದಷ್ಟು ಸೆಮಿಕಂಡಕ್ಟರಿನ ಉಪಕರಣಗಳಿರುತ್ತವೆ; ಮನೆ ಮನೆಗಳಲ್ಲಿ ಇರುವ ದೂರದರ್ಶನಗಳಲ್ಲಿ ಅವು ಇರುತ್ತವೆ; ರಸ್ತೆಗಳಲ್ಲಿ ಓಡುತ್ತಿರುವ ಕಾರುಗಳಲ್ಲಿ ಅದಿದೆ; ಎಲ್ಲೆಲ್ಲೂ ಇರುವ ಲ್ಯಾಪ್‌ಟಾಪುಗಳಲ್ಲಿಯೂ ಅದು ಧಾರಾಳವಾಗಿ ಇದೆ. ಮೊಬೈಲಿನ ಒಳಗೋ, ಟಿವಿಯ ಒಳಗೋ ಚಿಪ್ಪುಗಳು ಇರುವುದನ್ನು ಹಲವರು ನೋಡಿರಬಹುದು. ಆ ಚಿಪ್ಪುಗಳ ಒಳಗೆ ಇರುವುದು ಸೆಮಿಕಂಡಕ್ಟರುಗಳೇ. ಹಿಂದೆ ನಮ್ಮಲ್ಲಿ ಒಂದು ತರಹದ ರೇಡಿಯೋಗಳನ್ನು 'ಟ್ರಾನ್ಸಿಸ್ಟರ್' ಎನ್ನುತ್ತಿದ್ದರು; ಆ ರೇಡಿಯೋಗಳ ಒಳಗೆ ಒಂದು ಬಿಡಿಭಾಗವಾಗಿ 'ಟ್ರಾನ್ಸಿಸ್ಟರ್' ಎಂಬ ಉಪಕರಣ ಇದ್ದದ್ದೇ ಅದಕ್ಕೆ ಆ ಹೆಸರು ಬರಲು ಕಾರಣ. ಇದೊಂದು ರೀತಿ ಮನುಷ್ಯನ ದೇಹದಲ್ಲಿ ಮೆದುಳು ಇರುವ ಕಾರಣ ಮನುಷ್ಯನನ್ನು ಮನುಷ್ಯ ಎನ್ನದೆ 'ಮೆದುಳು' ಎಂದೇ ಕರೆದಂತೆ. ಈ ಟ್ರಾನ್ಸಿಸ್ಟರ್ ಎಂಬುದೂ ಮತ್ತದೇ ಸೆಮಿಕಂಡಕ್ಟರಿನ ಉಪಕರಣ. ನಿಮ್ಮ ಮೊಬೈಲು ಫೋನಿನ ಒಳಗೆ ಸುಮಾರು ಹತ್ತು ಕೋಟಿ ಟ್ರಾನ್ಸಿಸ್ಟರ್‌ಗಳಿರುತ್ತವೆ. ನಿಮ್ಮ ಗಣಕಯಂತ್ರದ ಒಳಗೆ ಸುಮಾರು ನೂರು ಕೋಟಿ ಟ್ರಾನ್ಸಿಸ್ಟರ್‌ಗಳು ಇರುತ್ತವೆ.



ಇನ್ನಷ್ಟು ಸರಳವಾಗಿ ಹೇಳುವುದಾದರೆ, 'ಎಲೆಕ್ಟ್ರಾನಿಕ್ಸ್', 'ಡಿಜಿಟಲ್' ಮುಂತಾದ ಪದಗಳು ಎಲ್ಲೆಲ್ಲ ಕಾಣಸಿಗುತ್ತವೋ ಅಲ್ಲೆಲ್ಲ ನೇಪಥ್ಯದಲ್ಲಿ ಕೆಲಸ ಮಾಡುತ್ತಿರುವುದು 'ಸೆಮಿಕಂಡಕ್ಟರ್' ಅಥವಾ 'ಅರೆವಾಹಕಗಳು' ಎಂದರೆ ತಪ್ಪಾಗಲಾರದು. ಹೀಗಾಗಿಯೇ ಇವುಗಳಿಗೆ ಸಂಬಂಧಿಸಿದ ವ್ಯಾಪಾರ ವಹಿವಾಟು 570 ಬಿಲಿಯನ್ ಡಾಲರುಗಳದ್ದು, ಅಂದರೆ ಕೋಟಿ ಕೋಟಿ ಡಾಲರುಗಳದ್ದು ಎಂದು ಅಂದಾಜು ಮಾಡಲಾಗಿದೆ! ಈ ವಹಿವಾಟಿನ ಲಾಭ ಬಹುಮಟ್ಟಿಗೆ ಆಗುತ್ತಿರುವುದು ತೈವಾನ್, ದಕ್ಷಿಣ ಕೊರಿಯಾ, ಜಪಾನ್, ಚೀನಾ ಮುಂತಾದ ದೇಶಗಳಿಗೆ. ಅಂದರೆ ಇದರ ಪ್ರಮಾಣ ಚಿನ್ನದ ವ್ಯಾಪಾರ, ಅರಬ್ ದೇಶಗಳ ತೈಲದ ವಹಿವಾಟು ಇವುಗಳಿಗಿಂತಲೂ ಸ್ವಲ್ಪ ಅಧಿಕವೇ ಎನ್ನಬೇಕೇನೋ!

ಇನ್ನೀಗ ಅರೆವಾಹಕಗಳು ಎಂದರೆ ಏನು ಎಂದು ನೋಡೋಣ. 'ಅರೆವಾಹಕ' ಎಂಬುದು ಇಂಥ ವಸ್ತುಗಳಲ್ಲಿ ವಿದ್ಯುತ್ ಪ್ರವಾಹ ಹೇಗಿರುತ್ತದೆ ಎಂಬುದನ್ನು ಸೂಚಿಸುವ ಪದ. ತನ್ನ ಮೂಲಕ ವಿದ್ಯುತ್ ಪ್ರವಾಹವನ್ನು ಚೆನ್ನಾಗಿ ಹರಿಯಲು ಬಿಡುವ ವಸ್ತುವನ್ನು ವಿದ್ಯುತ್ ವಾಹಕ(elecrical conductor) ಎನ್ನುತ್ತಾರೆ. ಲೋಹಗಳು, ನೀರು, ಗ್ರಾಫೈಟ್ – ಇವೆಲ್ಲ ಒಳ್ಳೆಯ ವಾಹಕಗಳು. ವಿದ್ಯುತ್ ಪ್ರವಾಹವನ್ನು ಸರಿಯಾಗಿ ಆಗಲು ಬಿಡದ ವಸ್ತುಗಳನ್ನು ಅವಾಹಕ(Insulatror)ಗಳೆಂದು ಕರೆಯುತ್ತಾರೆ. ಕಟ್ಟಿಗೆ, ಗಾಜು, ಪ್ಲಾಸ್ಟಿಕ್ – ಇವೆಲ್ಲ ಅವಾಹಕಗಳು. ಈ ಎರಡು ಪಕ್ಷಕ್ಕೂ ಸೇರದೇ ಮಾಧ್ಯಮಮಾರ್ಗವನ್ನು ಹಿಡಿಯುವ, ಇವೆರಡರ ನಡುವೆ ಬರುವ, ಈ ಎರಡರ ಗುಣಗಳ ಸಮ್ಮಿಶ್ರಣವನ್ನು ಹೊಂದಿರುವ ವಸ್ತುವೇ 'ಅರೆವಾಹಕ' ಅಥವಾ 'ಸೆಮಿಕಂಡಕ್ಟರ್'. ಸರಳವಾಗಿ ಹೇಳುವುದಾದರೆ, 'ಟ್ರಾನ್ಸಿಸ್ಟರ್' ಎಂದರೆ ಇಂಥ ಅರೆವಾಹಕ ಗುಣವನ್ನು ಹೊಂದಿರುವ ಸ್ವಿಚ್ ಇದ್ದಂತೆ ಎನ್ನಬಹುದು. ನಮ್ಮ ಮನೆಯಲ್ಲಿ ಸ್ವಿಚ್ ಹಾಕಿದಾಗ ವಿದ್ಯುತ್ತು ಹರಿಯುತ್ತದೆ, ಆಫ್ ಮಾಡಿದಾಗ ಹರಿವು ನಿಲ್ಲುತ್ತದೆ. ಟ್ರಾನ್ಸಿಸ್ಟರ್ ಕೂಡ ಹೆಚ್ಚು ಕಡಿಮೆ ಇದೇ ಕೆಲಸವನ್ನು ಮಾಡುತ್ತದೆ. ಇದು ಎಲೆಕ್ಟ್ರಾನಿಕ್ಸಿಗೆ, ಡಿಜಿಟಲ್ ತಂತ್ರಜ್ಞಾನಕ್ಕೆ ಹೇಗೆ ಸಹಾಯ ಮಾಡುತ್ತದೆ ಎಂಬುದು ಮುಂದಿನ ಪ್ರಶ್ನೆ.

ಕಂಪ್ಯೂಟರುಗಳಿಗೆ, ಎಲೆಕ್ಟ್ರಾನಿಕ್ ಯಂತ್ರಗಳಿಗೆ ನಮ್ಮ ನಿಮ್ಮಂತೆ ಕನ್ನಡ, ಇಂಗ್ಲಿಷ್ ಭಾಷೆಗಳು ಬರುವುದಿಲ್ಲ. ಅವುಗಳ ಜೊತೆ ನಾವು ಮಾತಾಡುವುದು ದ್ವಿಮಾನ ಸಂಖ್ಯಾಪದ್ಧತಿಯ ಭಾಷೆಯಲ್ಲಿ. ಈ ಭಾಷೆಯಲ್ಲಿ 'ಸೊನ್ನೆ' ಮತ್ತು 'ಒಂದು' ಎಂಬ ಎರಡೇ ಸಂಕೇತಗಳಿರುವುದು. ಯಾವ ಮಾಹಿತಿಯನ್ನು ಬೇಕಾದರೂ ಸೊನ್ನೆ ಮತ್ತು ಒಂದುಗಳ ಭಾಷೆಯಲ್ಲಿ ಬರೆಯಬಹುದು. ಈ ಇಡೀ ಲೇಖನವನ್ನು ಬೇಕಾದರೆ ಬರೀ ಸೊನ್ನೆ ಮತ್ತು ಒಂದನ್ನು ಬಳಸಿ ಬರೆಯಬಹುದು. ಸ್ವಿಚ್ ಹಾಕಿದಾಗ ವಿದ್ಯುತ್ತು ಹರಿದರೆ ಅದು ಒಂದು, ಸ್ವಿಚ್ ಆಫ್ ಮಾಡಿದಾಗ ವಿದ್ಯುತ್ತಿನ ಹರಿವು ನಿಂತರೆ ಅದು ಸೊನ್ನೆ ಎಂದು ಮಾಡಿಕೊಂಡರೆ ವಿದ್ಯುತ್ತಿನ ಹರಿವನ್ನು ದ್ವಿಮಾನ ಸಂಖ್ಯಾಪದ್ಧತಿಯ ಭಾಷೆಗೆ ಪರಿವರ್ತನೆ ಮಾಡಿದ ಹಾಗಾಯಿತು! ಹೀಗಾಗಿ ಒಂದು ಒಳ್ಳೆಯ ಸ್ವಿಚ್ಚು ಎಲೆಕ್ಟ್ರಾನಿಕ್ಸಿನ ಭಾಷೆಯನ್ನು, ಕಂಪ್ಯೂಟರಿನ ಭಾಷೆಯನ್ನು ಮಾತನಾಡಬಲ್ಲದು. ಟ್ರಾನ್ಸಿಸ್ಟರ್‌ಗಳು, ಅರೆವಾಹಕಗಳು ಇಂಥ ಅದ್ಭುತ ಸ್ವಿಚ್ಚುಗಳು. ಹೀಗಾಗಿಯೇ ಅವುಗಳು ಅಷ್ಟೊಂದು ಉಪಯುಕ್ತವಾಗಿರುವುದು. ಸಿಲಿಕಾನ್ ಮತ್ತು ಜರ್ಮೇನಿಯಂಗಳು ವ್ಯಾಪಕವಾಗಿ ಬಳಸಲ್ಪಡುವ ಎರಡು ಮುಖ್ಯವಾದ ಅರೆವಾಹಕಗಳು.

ವಿಶೇಷವೆಂದರೆ, ಈ ಅರೆವಾಹಕಗಳು ಈಗ ಡಿಜಿಟಲ್ ಕ್ರಾಂತಿಗೆ ಕಾರಣವಾದರೂ ಮೂಲದಲ್ಲಿ ಅವುಗಳನ್ನು ಕಂಡು ಹಿಡಿದವರ ತಲೆಯಲ್ಲಿದ್ದದ್ದು ಸ್ವಲ್ಪ ಬೇರೆಯದೇ ಆದ ಸಮಸ್ಯೆ. ಇವುಗಳ ಬಗ್ಗೆ ವಿಶೇಷವಾದ ಸಂಶೋಧನೆಗಳು ಆದದ್ದು ಅಮೆರಿಕದ 'ಬೆಲ್ ಲ್ಯಾಬೋರೇಟರಿ' ಎಂಬ ಸಂಸ್ಥೆಯಲ್ಲಿ. ವಿಜ್ಞಾನಕ್ಕೆ, ಎಲೆಕ್ಟ್ರಾನಿಕ್ಸ್ ಕ್ಷೇತ್ರಕ್ಕೆ, ಡಿಜಿಟಲ್ ಕ್ರಾಂತಿಗೆ ಈ ಸಂಸ್ಥೆ ಕೊಟ್ಟ ಕೊಡುಗೆ ದೊಡ್ಡದು. ಇದು ಮೂಲತಃ ಒಂದು ದೂರವಾಣಿ ಸಂಸ್ಥೆ. ಇಡೀ ಅಮೆರಿಕದ ಟೆಲಿಫೋನು ವ್ಯವಸ್ಥೆಯ ಮೇಲೆ ಏಕಸ್ವಾಮ್ಯ ಹೊಂದಿದ್ದ ಬೃಹತ್ ಸಂಸ್ಥೆ. ಟೆಲಿಫೋನು ತಂತಿಗಳು ತರಂಗಗಳನ್ನು ದೂರ ದೂರಕ್ಕೆ ಒಯ್ಯಬೇಕಾದರೆ ಅವುಗಳ ಬಲ ಕುಗ್ಗದಂತೆ ಅವುಗಳಿಗೆ ಅಲ್ಲಲ್ಲಿ ಬಲವರ್ಧನೆ ಮಾಡಬೇಕು. ಹೀಗೆ ತರಂಗವರ್ಧಕಗಳಾಗಿ ಬಂದದ್ದು ಈ ಟ್ರಾನ್ಸಿಸ್ಟರ್‌ಗಳು. ಇವುಗಳು ಸ್ವಿಚ್ಚುಗಳಾಗಿ ಮಾಡುವ ಕೆಲಸವೂ ಅವರಿಗೆ ಪ್ರಯೋಜನಕ್ಕೆ ಬರುತ್ತಿತ್ತು. ಹೀಗೆ ಶುರುವಾದ ಅರೆವಾಹಕಗಳು ಎಲ್ಲಿಂದ ಎಲ್ಲಿಗೋ ಹೋಗಿ ಕ್ಷೇತ್ರವನ್ನು ವಿಸ್ತರಣೆ ಮಾಡಿಕೊಂಡು ಈಗ ಸರ್ವವ್ಯಾಪಿಯಾಗಿರುವುದು ಅಚ್ಚರಿಯೇ ಸರಿ. ❖

ಅಲ್ಪಸಂಖ್ಯಾತರ ತುಷ್ಟೀಕರಣ ನೀತಿ ಅಳವಡಿಸಿಕೊಂಡಿಲ್ಲ: ಪ್ರಧಾನಿ ನರೇಂದ್ರ ಮೋದಿ

ಹಗರಣದ ಲೆಕ್ಕ ಹಾಕಿದ ವಿಪಕ್ಷ: ಟೀಕೆ

ಭೋಪಾಲ್ (ಪಿಟಿಐ): 'ಬಿಹಾರದ ಪಟ್ನಾದಲ್ಲಿ ಇತ್ತೀಚೆಗೆ ಪ್ರತಿಪಕ್ಷಗಳ ಫೋಟೊ ಸೆಷನ್ ನಡೆಯಿತು. ತಾವು ಎಸಗಿರುವ ಹಗರಣಗಳ ಬಗ್ಗೆ ಲೆಕ್ಕ ಹಾಕಲು ವಿಪಕ್ಷ ನಾಯಕರು ಅಲ್ಲಿ ಸಭೆ ಸೇರಿದ್ದರು. ಅವರೆಲ್ಲರ ಹಗರಣಗಳ ಮೊತ್ತವೇ ₹ 20 ಲಕ್ಷ ಕೋಟಿ ದಾಟುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹರಿಹಾಯ್ದರು.

ಇಲ್ಲಿ ಮಂಗಳವಾರ ಬಿಜೆಪಿಯಿಂದ ಹಮ್ಮಿಕೊಂಡಿದ್ದ ಮೇರಾ ಬೂತ್ ಸಬ್‌ಸೇ ಮಜಬೂತ್ ಅಭಿಯಾನದಲ್ಲಿ ಅವರು ಮಾತನಾಡಿದರು.

'ಗ್ಯಾರಂಟಿ ಎಂಬ ಪದ ಇತ್ತೀಚೆಗೆ ಹೆಚ್ಚು ಪ್ರಚಲಿತದಲ್ಲಿದೆ. ಜೊತೆಗೆ, ಲಾಭಗಳಿಸುವ ಕರೆನ್ಸಿ ಆಗಿದೆ' ಎಂದು ಹೇಳಿದರು.

ಆರ್‌ಜೆಡಿ, ಡಿಎಂಕೆ ಸೇರಿದಂತೆ ಹಲವು ಪಕ್ಷಗಳ ವಿರುದ್ಧ ಭ್ರಷ್ಟಾಚಾರದ ಆರೋಪ ಕೇಳಿಬಂದಿದೆ. ಕಾಂಗ್ರೆಸ್ ಸೇರಿದಂತೆ ಹಲವು ಪಕ್ಷಗಳು ಹಗರಣಗಳಲ್ಲಿ ಭಾಗಿಯಾಗಿವೆ. ಅದರ ಲೆಕ್ಕಾಚಾರ ನಡೆಸಲು ಈಗ ಸಭೆ ನಡೆಸುತ್ತಿವೆ ಎಂದು ಲೇವಡಿ ಮಾಡಿದರು.

'ವಿರೋಧ ಪಕ್ಷಗಳು ಮತ್ತಷ್ಟು ಹಗರಣಗಳನ್ನು ಎಸಗುವುದು ಗ್ಯಾರಂಟಿ. ಬಿಜೆಪಿ ಕಾರ್ಯಕರ್ತರು ಪ್ರತಿ ಮನೆಗೂ ಈ ಬಗ್ಗೆ ತಿಳಿಸಬೇಕು. ಈ ಹಗರಣಗಳ ವಿರುದ್ಧ ಕ್ರಮ ಕೈಗೊಳ್ಳುವ ಗ್ಯಾರಂಟಿಯನ್ನಷ್ಟೇ ನಾನು ನೀಡುತ್ತೇನೆ' ಎಂದು ಹೇಳಿದರು.

ಲೋಕಸಭಾ ಚುನಾವಣೆಯಲ್ಲಿ ನಮ್ಮ ವಿರುದ್ಧ ಒಗ್ಗೂಡುವವರ ಬಗ್ಗೆ ನಮಗೆ ಭಯವಿಲ್ಲ. ಅವರ ಬಗ್ಗೆ ಸಹಾನುಭೂತಿ ಇದೆ ಎಂದು ತಿಳಿಸಿದರು.

ಓಲೈಕೆ ಇಲ್ಲ: 'ಬಿಜೆಪಿ ಎಂದಿಗೂ ಅಲ್ಪಸಂಖ್ಯಾತರ ತುಷ್ಟೀಕರಣ ಹಾಗೂ ಮತಬ್ಯಾಂಕ್ ರಾಜಕಾರಣವನ್ನು ಅಳವಡಿಸಿ ಕೊಳ್ಳುವುದಿಲ್ಲ. ಕೆಲವರು ತುಷ್ಟೀಕರಣ ನೀತಿ ಅಳವಡಿಸಿಕೊಂಡಿದ್ದಾರೆ. ಇದು ದೇಶಕ್ಕೆ ಅಪಾಯ ತಂದಿದೆ' ಎಂದು ಕಾಂಗ್ರೆಸ್ ವಿರುದ್ಧ ಟೀಕಿಸಿದರು.

ಬಿಜೆಪಿಯದ್ದು ಸಂತುಷ್ಟೀಕರಣ ನೀತಿ. ಇದೇ ಹಾದಿಯಲ್ಲಿ ಸಾಗುತ್ತೇವೆ ಎಂದರು.

ಬಿಹಾರದ ಪಟ್ನಾದಲ್ಲಿ ಪಸ್ಮಾಂಡ ಮುಸ್ಲಿಂ ಸಮುದಾಯವಿದೆ. ಮತಬ್ಯಾಂಕ್ ರಾಜಕಾರಣದ ಪರಿಣಾಮ ತೀರಾ ಹಿಂದುಳಿದಿದೆ. ಅವರನ್ನು ಇಂದಿಗೂ ತಾರತಮ್ಯದಿಂದಲೇ ನೋಡಲಾಗುತ್ತಿದೆ. ನಾವು ಪಕ್ಷಪಾತ ಮಾಡದೆ ಅವರ ಅಭಿವೃದ್ಧಿಗೆ ಮುಂದಾಗಿದ್ದೇವೆ ಎಂದರು.

ಕಳೆದ ವರ್ಷ ನಡೆದ ಉತ್ತರ ಪ್ರದೇಶದ ಮುಸ್ಲಿಂ ಬಾಹುಳ್ಯ ಹೆಚ್ಚಿರುವ ಅಜಂಗಢ ಮತ್ತು ರಾಂಪುರ್ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿ ಜಯಗಳಿಸಿತ್ತು. 2024ರ ಚುನಾವಣೆಯಲ್ಲೂ ಇದೇ ಹಾದಿಯಲ್ಲಿ ಸಾಗುತ್ತೇವೆ ಎಂದು ತಿಳಿಸಿದರು.

ಉತ್ತರ ಪ್ರದೇಶ, ಬಿಹಾರ, ಕೇರಳ, ಆಂಧ್ರಪ್ರದೇಶ, ತೆಲಂಗಾಣ ಮತ್ತು ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳಲ್ಲಿ ಬಹಳಷ್ಟು ಜಾತಿಗಳು ಅಭಿವೃದ್ಧಿಯಿಂದ ಹಿಂದುಳಿದಿವೆ. ಇದಕ್ಕೆ ತುಷ್ಟೀಕರಣ ನೀತಿಯೇ ಕಾರಣ ಎಂದು ಟೀಕಿಸಿದರು.

'ಪಾಕ್‌ನಲ್ಲಿ ತ್ರಿವಳಿ ತಲಾಖ್ ಏಕಿಲ್ಲ?'

'ಈಜಿಪ್ಟ್‌ನಲ್ಲಿ 80 ರಿಂದ 90 ವರ್ಷಗಳ ಹಿಂದೆಯೇ ತ್ರಿವಳಿ ತಲಾಖ್ ಪದ್ಧತಿಯನ್ನು ನಿಷೇಧಿಸಲಾಗಿದೆ. ಭಾರತದಲ್ಲಿಯೂ ಇದರ ಅಗತ್ಯವಿದೆ ಎಂದು ಪ್ರತಿಪಾದಿಸುವುದಾದರೆ ಪಾಕಿಸ್ತಾನ ಸೇರಿದಂತೆ ಹಲವು ಮುಸ್ಲಿಂ ರಾಷ್ಟ್ರಗಳಲ್ಲಿ ಇದನ್ನೇಕೆ ರದ್ದುಪಡಿಸಲಾಗಿದೆ' ಎಂದು ಮೋದಿ ಪ್ರಶ್ನಿಸಿದರು.

ಅನ್ಯಾಯಕ್ಕೆ ತುತ್ತಾದ ಮುಸ್ಲಿಂ ಪುತ್ರಿಯರಿಗೆ ತ್ರಿವಳಿ ತಲಾಖ್‌ನಿಂದ ಎಂದಿಗೂ ನ್ಯಾಯ ಸಿಗುವುದಿಲ್ಲ. ಇದರಿಂದ ಬಹಳಷ್ಟು ಕುಟುಂಬಗಳು ಸಂಕಷ್ಟ ಅನುಭವಿಸಿವೆ. ಇಸ್ಲಾಂ ಬಗ್ಗೆ ಇದರ ಅಗತ್ಯವಿದೆ ಎನ್ನುವುದಾದರೆ ಕತಾರ್, ಜೋರ್ಡಾನ್, ಇಂಡೋನೇಷ್ಯಾದಲ್ಲಿ ಏಕೆ ರದ್ದುಪಡಿಸಲಾಗಿದೆ ಎಂದರು.

ಈ ಪದ್ಧತಿಯಿಂದ ಮುಸ್ಲಿಂ ಹೆಣ್ಣುಮಕ್ಕಳು ಘೋರ ಅನ್ಯಾಯಕ್ಕೆ ತುತ್ತಾಗುತ್ತಿದ್ದರು. ಇಂತಹ ಪದ್ಧತಿಗೆ ಪ್ರತಿಪಕ್ಷಗಳು ಬೆಂಬಲ ನೀಡುತ್ತಿವೆ ಎಂದು ಟೀಕಿಸಿದರು.

ಹೆಲಿಕಾಪ್ಟರ್ ತುರ್ತು ಭೂಸ್ಪರ್ಶ; ಮಮತಾಗೆ ಗಾಯ

ಸಿಲಿಗುರಿ/ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್, ಪ್ರತಿಕೂಲ ಹವಾಮಾನದಿಂದಾಗಿ ಸಿಲಿಗುರಿ ಬಳಿಯ ಸೆವೊಕ್ ವಾಯುನೆಲೆಯಲ್ಲಿ ಮಂಗಳವಾರ ತುರ್ತು ಭೂಸ್ಪರ್ಶ ಮಾಡಿದ್ದು, ಈ ವೇಳೆ ಬ್ಯಾನರ್ಜಿ ಅವರ ಸೊಂಟ ಹಾಗೂ ಕಾಲುಗಳಿಗೆ ಪೆಟ್ಟಾಗಿದೆ.

ಭಾರತ ಸರ್ಕಾರ
ಸಂಪರ್ಕ ಸಚಿವಾಲಯ (ದೂರಸಂಪರ್ಕ ಇಲಾಖೆ)
ಸಂಪರ್ಕಲೆಕ್ಕ ನಿಯಂತ್ರಕರ ಕಚೇರಿ, ಅಮೇನಿಟಿ ಬ್ಲಾಕ್, ಪ್ಯಾಲೇಸ್ ರೋಡ್, ಬೆಂಗಳೂರು–560 001.

DoT / BSNL ಪಿಂಚಣಿದಾರರ ಗಮನಕ್ಕೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ ಹಲವು DoT / BSNL ಪಿಂಚಣಿದಾರರ ಜೀವನ್ ಪ್ರಮಾಣ್ ಅವಧಿ ಮುಗಿದಿರುತ್ತದೆ. ಅಂತಹ ಪಿಂಚಣಿದಾರರಿಗೆ ಜೀವನ್ ಪ್ರಮಾಣ್ ಪತ್ರವನ್ನು ನವೀಕರಿಸುವವರೆಗೂ ಪಿಂಚಣಿಯ ಲಭ್ಯತೆ ಇರುವುದಿಲ್ಲ. ಹಾಗೂ ಇದಕ್ಕೆ ಸಂಬಂಧಿಸಿದ ವಿವರಗಳನ್ನು ತಿಳಿಯಲು ನಮ್ಮ ವೆಬ್‌ಸೈಟ್ ಆದ https://www.cgca.gov.in/ccakk/ Latest update ಅನ್ನು ವೀಕ್ಷಿಸುವುದು. ಈ ವೆಬ್‌ಸೈಟ್‌ನಿಂದ ಜೀವನ್ ಪ್ರಮಾಣ್ ಪತ್ರದ ಅವಧಿಯ ಮುಕ್ತಾಯವನ್ನು ಕಂಡಂತಹವರು ಈ ಕೂಡಲೇ ಜೀವನ್ ಪ್ರಮಾಣ್ ಪತ್ರವನ್ನು ನವೀಕರಿಸಿ ಅದರ ವಿವರಗಳನ್ನು aopdaccaktk@gmail.com ಇಲ್ಲಿಗೆ ಸಲ್ಲಿಸತಕ್ಕದ್ದು.

The Printers (Mysore) Pvt. Ltd
Publishers of DECCAN HERALD, PRAJAVANI, SUDHA & MAYURA
No.7-12, Kumbalgodu Indl. Area, Mysore Road, Bangalore - 74

NEWSPRINT WASTE FOR SALE

Sealed Tenders are invited for the disposal of the following Newsprint wastes from our Press at Bangalore, Dharwad , Mangalore, Harihara, Mysore, Gulbarga and Hospet. For the period **July - September 2023**

Details	Location-wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH & PV Print waste & unsolds (Voucher & Office Copies)	20	9	3.5	3	4	3	3
Mixed Print & Folded waste	3	1.5	0.2	0.3	0.2	0.3	0.2
DH, PV, Sudha & Mayura White cut Peel waste	2.5	0.6	0.3	0.5	0.4	0.4	0.3
White Reel ends including core DH, PV, Sudha & Mayura	8	2.5	0.6	1	0.7	1	1
DH, PV, Sudha & Mayura Reel Wrappers/Miscellaneous sweep/Bale pattie waste	10	2	0.9	1.2	0.4	0.9	0.9
Sudha & Mayura Print waste & unsolds- Magazine	1	0.6	0.9	0.6	0.6	0.9	0.05
Miscellaneous Tissue/Mixed White waste/ Carton boxes	2.5	0.8	0.3	0.4	0.2	0.5	0.2

For clarification, contact Procurement Head at **25880340/430.** Sealed Tenders/mail may be addressed to Procurement Head and sent to the above address **within 7 days** from the date of this advertisement.

'ವಂದೇ ಭಾರತ್' ಎಕ್ಸ್‌ಪ್ರೆಸ್‌ಗೆ ಪ್ರಧಾನಿ ಮೋದಿ ಚಾಲನೆ

'ಪ್ರಧಾನಿ ಆತ್ಮನಿರ್ಭರ ರೈಲು'

ಪ್ರಜಾವಾಣಿ ವಾರ್ತೆ

ಧಾರವಾಡ: ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಮೂಲಕ 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲಿಗೆ ಮಂಗಳವಾರ ಚಾಲನೆ ನೀಡಿದರು.

ಇದಕ್ಕೆ ಪೂರಕವಾಗಿ ಧಾರವಾಡ ರೈಲು ನಿಲ್ದಾಣದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, 'ವಂದೇ ಭಾರತ್ ಎಕ್ಸ್‌ಪ್ರೆಸ್ ಸ್ವದೇಶಿ ನಿರ್ಮಿತ ರೈಲು. ಪ್ರಧಾನಿ ಮೋದಿ ಅವರ ಆತ್ಮನಿರ್ಭರ ರೈಲು ಕೂಡ ಹೌದು. ಸೆಮಿ ಹೈಸ್ಪೀಡ್ ರೈಲು ಸಂಚಾರ ಆರಂಭಿಸಬೇಕು ಎಂಬ ಹುಬ್ಬಳ್ಳಿ-ಧಾರವಾಡ ಜನರ ಬಹುದಿನಗಳ ಬೇಡಿಕೆ ಈಗ ಈಡೇರಿದೆ' ಎಂದರು.

'ಸದ್ಯದ ವೇಳಾಪಟ್ಟಿಯಂತೆ ಬೆಂಗಳೂರಿನಿಂದ ಹೊರಡುವ ರೈಲು ಮಧ್ಯಾಹ್ನದ ವೇಳೆಗೆ ಧಾರವಾಡ ತಲುಪುವುದು. ಮತ್ತೆ ಅಲ್ಲಿಂದ ಹೊರಟು ರಾತ್ರಿ ಬೆಂಗಳೂರಿಗೆ ತಲುಪುವುದು. ರೈಲು ಬೆಳಿಗ್ಗೆ ಧಾರವಾಡದಿಂದ ಹೊರಡುವಂತೆ ವೇಳಾಪಟ್ಟಿ ಬದಲಿಸುವಂತೆ ಪ್ರಯಾಣಿಕರು ಕೋರಿದ್ದಾರೆ. ಈ ರೈಲಿನ ನಿರ್ವಹಣೆ ಘಟಕ ಬೆಂಗಳೂರಿನಲ್ಲಿ ಮಾತ್ರ ಇದೆ. ಹೀಗಾಗಿ ಕೆಲ ತಿಂಗಳು ಇದೇ ವೇಳಾಪಟ್ಟಿ ಇರಲಿದೆ' ಎಂದು ಹೇಳಿದರು.

'ಹುಬ್ಬಳ್ಳಿಯಲ್ಲೂ ಈ ರೈಲಿನ ನಿರ್ವಹಣೆ ವ್ಯವಸ್ಥೆಗೆ ಟೆಂಡರ್ ಆಹ್ವಾನಿಸಲಾಗಿದೆ. ಘಟಕ ಸಜ್ಜುಗೊಂಡ ಬಳಿಕ ಧಾರವಾಡದಿಂದ ಬೆಳಿಗ್ಗೆ ರೈಲು ಹೊರಡುವಂತೆ ವೇಳಾಪಟ್ಟಿ ಬದಲಾಯಿಸಲು ಪ್ರಯತ್ನಿಸಲಾಗುವುದು' ಎಂದು ಹೇಳಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಧಾರವಾಡದಿಂದ ಹುಬ್ಬಳ್ಳಿ ರೈಲು ನಿಲ್ದಾಣದವರೆಗೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸಿದರು. ರೈಲ್ವೆ ಅಧಿಕಾರಿಗಳು, ವಿಶೇಷ ಆಹ್ವಾನಿತರು ಇದ್ದರು.

ಧಾರವಾಡ ನಿಲ್ದಾಣದಿಂದ ಬೆಳಿಗ್ಗೆ 10.53 ಹೊರಟ ರೈಲು 11.18ಕ್ಕೆ ಹುಬ್ಬಳ್ಳಿ ನಿಲ್ದಾಣ ತಲುಪಿತು. ನಂತರ ಮಧ್ಯಾಹ್ನ 1.57ಕ್ಕೆ ದಾವಣಗೆರೆ, ಸಂಜೆ 7.22ಕ್ಕೆ ಯಶವಂತಪುರ ಮತ್ತು ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣವನ್ನು 7.27ಕ್ಕೆ ತಲುಪಿತು.

ಹುಬ್ಬಳ್ಳಿಯ ರೈಲ್ವೆ ಪ್ರೌಢಶಾಲೆಯ ವಿದ್ಯಾರ್ಥಿನಿಯರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸಿದರು

'ವಂದೇ ಭಾರತ್' ಎಕ್ಸ್‌ಪ್ರೆಸ್ (ಗಾಡಿ ಸಂಖ್ಯೆ: 20661/20662) ವೇಳಾಪಟ್ಟಿ

ಸ್ಥಳ	ಸಮಯ
ಬೆಂಗಳೂರು	ಬೆಳಿಗ್ಗೆ 5.45
ಯಶವಂತಪುರ	5.55
ದಾವಣಗೆರೆ	9.15
ಹುಬ್ಬಳ್ಳಿ	11.30
ಧಾರವಾಡ	ಮಧ್ಯಾಹ್ನ 12.10

ವಾಪಸ್

ಸ್ಥಳ	ಸಮಯ
ಧಾರವಾಡ	ಮಧ್ಯಾಹ್ನ 1.15
ಹುಬ್ಬಳ್ಳಿ	1.35
ದಾವಣಗೆರೆ	3.38
ಯಶವಂತಪುರ	ರಾತ್ರಿ 7.13
ಬೆಂಗಳೂರು	7.45

8 ಬೋಗಿ, 530 ಆಸನ ಸಾಮರ್ಥ್ಯ

ರೈಲಿನಲ್ಲಿ 8 ಬೋಗಿಗಳಿದ್ದು, 530 ಆಸನಗಳಿವೆ. ಎಕ್ಸಿಕ್ಯೂಟಿವ್ ಬೋಗಿಯಲ್ಲಿ ತಿರುಗುವ (ರಿವಾಲ್ವಿಂಗ್) ಆಸನಗಳಿವೆ. ರೈಲಿನ ಎರಡೂ ತುದಿಗಳಲ್ಲಿ ಎಂಜಿನ್ ಕೋಚ್‌ಗಳು ಇವೆ. ಬ್ರೈಲ್ ಅಕ್ಷರಗಳಲ್ಲಿ ಆಸನ ಸಂಖ್ಯೆ ಇರುವ ಆಸನ ಹಿಡಿಕೆಗಳು ಇವೆ. ಗಂಟೆಗೆ 110 ಕಿ.ಮೀ ವೇಗ ಸಾಮರ್ಥ್ಯ ಇದೆ.

ಏಕರೂಪ ಸಂಹಿತೆ ಜಾರಿಗೆ ಮೋದಿ ಇಂಗಿತ

ಒಂದನೇ ಪುಟದಿಂದ...

'ಈ ಜನರು (ವಿರೋಧ ಪಕ್ಷಗಳ ನಾಯಕರು) ನಮ್ಮ ಮೇಲೆ ಆರೋಪ ಹೊರಿಸುತ್ತಿದ್ದಾರೆ. ಮುಸ್ಲಿಮರು, ಮುಸ್ಲಿಮರು ಎಂದು ಬಾಯಲ್ಲಿ ಹೇಳುತ್ತಾರೆ. ಆದರೆ, ಅವರಿಗೆ ನಿಜವಾಗಿಯೂ ಕಾಳಜಿ ಇದ್ದಿದ್ದರೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮುಸ್ಲಿಮರು ಇಷ್ಟೊಂದು ಹಿಂದೆ ಏಕೆ ಇರುತ್ತಿದ್ದರು' ಎಂದು ಅವರು ಪ್ರಶ್ನಿಸಿದ್ದಾರೆ.

ಏಕರೂಪ ನಾಗರಿಕ ಸಂಹಿತೆ ಮೂಲಕ ವೈಯಕ್ತಿಕ ಕಾನೂನುಗಳನ್ನು ಸಾರ್ವತ್ರೀಕರಣಗೊಳಿಸುವುದು ಸಂವಿಧಾನದ ಮೂಲರಚನೆ ಹಾಗೂ ದೇಶದ ವೈವಿಧ್ಯಕ್ಕೆ ವಿರುದ್ಧವಾದುದು

ಡಾ.ಎಸ್.ಕ್ಯೂ.ಆರ್ ಇಲ್ಯಾಸ್
ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ವಕ್ತಾರ

ಒಂದೇ ದಿನ ಐದು ವಂದೇ ಭಾರತ್ ರೈಲುಗಳಿಗೆ ಚಾಲನೆ

ಭೋಪಾಲ್ (ಪಿಟಿಐ): ಧಾರವಾಡ–ಬೆಂಗಳೂರು ಮಧ್ಯೆ ಸಂಚರಿಸಲಿರುವ ಕರ್ನಾಟಕದ ಎರಡನೇ ವಂದೇ ಭಾರತ್ ರೈಲು ಸೇರಿದಂತೆ ದೇಶದ ಪ್ರಮುಖ ಸ್ಥಳಗಳ ನಡುವೆ ಸಂಪರ್ಕ ಬೆಸೆಯುವ ಐದು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳ ಸಂಚಾರಕ್ಕೆ ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ್ದಾರೆ.

ದಕ್ಷಿಣ ಭಾರತದ ಮೊಟ್ಟ ಮೊದಲ ವಂದೇ ಭಾರತ್ ರೈಲು ಮೈಸೂರು-ಚೆನ್ನೈ ಮಾರ್ಗದಲ್ಲಿ ಈಗಾಗಲೇ ಸಂಚರಿಸುತ್ತಿದೆ.

ಮಧ್ಯಪ್ರದೇಶದ ಭೋಪಾಲ್‌ನ ರಾಣಿ ಕಮಲಾಪತಿ ರೈಲು ನಿಲ್ದಾಣದಲ್ಲಿ ಮೋದಿ ಅವರು ಎರಡು ರೈಲುಗಳಿಗೆ ಹಸಿರು ನಿಶಾನೆ ತೋರಿದರೆ ಉಳಿದ ಮೂರು ಎಕ್ಸ್‌ಪ್ರೆಸ್‌ಗಳಿಗೆ ವರ್ಚುವಲ್ ಆಗಿ ಚಾಲನೆ ನೀಡಿದರು.

'ಈ ಐದೂ ರೈಲುಗಳು ಮಧ್ಯಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ಗೋವಾ, ಬಿಹಾರ ಮತ್ತು ಜಾರ್ಖಂಡ್‌ನ ಪ್ರಮುಖ ನಗರಗಳ ನಡುವೆ ಸಂಪರ್ಕ ಕಲ್ಪಿಸುತ್ತವೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಟ್ವೀಟ್ ಮಾಡಿದ್ದಾರೆ.

ಚಾಲನೆಗೊಂಡ ರೈಲುಗಳು

- ರಾಣಿ ಕಮಲಾಪತಿ (ಭೋಪಾಲ್)–ಜಬಲ್‌ಪುರ್ ಎಕ್ಸ್‌ಪ್ರೆಸ್
- ಖಜುರಾಹೊ–ಭೋಪಾಲ್–ಇಂಧೋರ್ ಎಕ್ಸ್‌ಪ್ರೆಸ್
- ಮಡಗಾಂವ್(ಗೋವಾ)–ಮುಂಬೈ ಎಕ್ಸ್‌ಪ್ರೆಸ್
- ಧಾರವಾಡ–ಬೆಂಗಳೂರು ಎಕ್ಸ್‌ಪ್ರೆಸ್
- ಹಾಥಿಯಾ–ಪಟ್ನಾ ಎಕ್ಸ್‌ಪ್ರೆಸ್

ರೈಲುಗಳಿಗೆ ಚಾಲನೆ ನೀಡುವುದನ್ನು ಸ್ಟೇಷನ್ ಮಾಸ್ಟರ್ ಮಾಡುತ್ತಾರೆ. ಮೋದಿ ಅವರೇ ಮೊದಲು ಮಣಿಪುರಕ್ಕೆ ತೆರಳಿ ಬುಡಕಟ್ಟು ಜನರ ನೋವು ಆಲಿಸಿ

ಪ್ರಕಾಶ್ ರಾಜ್
ನಟ

ವಾರಾಂತ್ಯಕ್ಕೆ ಮುಂಗಾರು ಚುರುಕು

ಮುಂಬೈ (ರಾಯಿಟರ್ಸ್): ಮುಂಗಾರು ಮಾರುತವು ವಾರಾಂತ್ಯ ವೇಳೆಗೆ ದೇಶವಿಡೀ ಆವರಿಸಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉತ್ತರದ ರಾಜ್ಯಗಳಲ್ಲಿ ವಾಡಿಕೆಗಿಂತ ಮೊದಲೇ ಬಿತ್ತನೆ ಚಟುವಟಿಕೆ ಆರಂಭಿಸಲು ನೆರವಾಗಲಿದೆ.

ಮುಂಗಾರು ಮಳೆಯು ದೇಶದ ಆರ್ಥಿಕತೆಗೆ ಮೂಲಾಧಾರವಾಗಿದ್ದು, ಕೃಷಿ ಚಟುವಟಿಕೆಯ ಶೇ 70ರಷ್ಟು ನೀರಿನ ಅಗತ್ಯವನ್ನು ಈಡೇರಿಸಲಿದೆ. ಅಲ್ಲದೆ, ಜಲಾಶಯಗಳ ನೀರಿನ ಮಟ್ಟ ಏರಿಕೆಗೂ ಇದು ಕಾರಣವಾಗಲಿದೆ.

ಮುಂಗಾರು ಮಾರುತವು ಕೇರಳ ಮೂಲಕ ದೇಶ ಪ್ರವೇಶಿಸುತ್ತದೆ. ಈ ವರ್ಷ ಬಿಪೊರ್‌ಜಾಯ್ ಚಂಡಮಾರುತದ ಕಾರಣ ವಿಳಂಬವಾಗಿದೆ.

'ಈ ವಾರಾಂತ್ಯಕ್ಕೆ ಮಳೆ ಶುರುವಾಗಲಿದೆ. ಪಂಜಾಬ್, ರಾಜಸ್ಥಾನ, ಹರಿಯಾಣ ಹೊರತುಪಡಿಸಿ ಮಂಗಳವಾರದ ವೇಳೆಗೆ ದೇಶವನ್ನು ಆವರಿಸಲಿದೆ' ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈಶಾನ್ಯ, ಕೇಂದ್ರ, ಉತ್ತರದ ವಿವಿಧ ರಾಜ್ಯಗಳಲ್ಲಿ ಭಾರಿ ಮಳೆಯಾಗುವ ಸಂಭವವಿದೆ. ಇದು, ಒಟ್ಟಾರೆ ಮಳೆ ಕೊರತೆಯ ಪ್ರಮಾಣವನ್ನು ಶೇ 20ಕ್ಕಿಂತ ಕೆಳಮಟ್ಟಕ್ಕೆ ಇಳಿಸುವ ಸಾಧ್ಯತೆಯಿದೆ. ಭತ್ತ, ಹತ್ತಿ, ಸೋಯಾಬೀನ್, ಬೇಳೆಕಾಳುಗಳು, ಬೇಸಿಗೆ ಅವಧಿಯ ಬೆಳೆಗಳ ಬಿತ್ತನೆ ವಿಳಂಬವಾಗಿದ್ದು, ಈ ವಾರ ಅದೂ ಚುರುಕು ಪಡೆಯಲಿದೆ ಎಂದಿದ್ದಾರೆ.

ಎಲ್‌ನಿನೊ ಹವಾಮಾನದ ಪರಿಣಾಮ ಭಾರತ, ಆಸ್ಟ್ರೇಲಿಯ, ದಕ್ಷಿಣ ಏಷ್ಯಾ ಭಾಗದಲ್ಲಿ ಬರ ಪರಿಸ್ಥಿತಿಯು ಕಂಡುಬರಬಹುದು ಎನ್ನಲಾಗಿದೆ.

ಕೇರಳದಲ್ಲಿ ಶೇ 65ರಷ್ಟು ಮಳೆ ಕೊರತೆ

ತಿರುವನಂತಪುರ (ಪಿಟಿಐ): ಮುಂಗಾರು ಋತು ಆರಂಭದ ಬಳಿಕ ಇದುವರೆಗೆ ಕೇರಳದಲ್ಲಿ ವಾಡಿಕೆಗಿಂತ ಶೇ 65ರಷ್ಟು ಮಳೆ ಕೊರತೆ ಉಂಟಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹೇಳಿದೆ.

ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಅಧಿಕ ಮಳೆ ಸುರಿಯುವ ಸಾಧ್ಯತೆ ಇದೆ ಎಂದೂ ತಿಳಿಸಿದೆ. ನೈರುತ್ಯ ಮುಂಗಾರು ವಾಡಿಕೆಗಿಂತ ಒಂದು ವಾರ ತಡವಾಗಿ ಜೂನ್ 8ರಂದು ಕೇರಳಕ್ಕೆ ತಲುಪಿತ್ತು. 'ಈ ಬಾರಿ ಕೇರಳದ ಎಲ್ಲಾ ಜಿಲ್ಲೆಗಳಲ್ಲೂ ಇದುವರೆಗೆ ಸಾಮಾನ್ಯಕ್ಕಿಂತ ಕಡಿಮೆ ಮಳೆ ಸುರಿದಿದೆ' ಎಂದು ಐಎಂಡಿಯ ಕೇರಳದ ಪ್ರಭಾರ ನಿರ್ದೇಶಕಿ ಡಾ. ವಿ.ಕೆ. ಮಿನಿ ತಿಳಿಸಿದ್ದಾರೆ.

'ಆದಿಪುರುಷ್': ಸೆನ್ಸಾರ್ ಮಂಡಳಿಗೆ ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಲಖನೌ: 'ಆದಿಪುರುಷ್' ಸಿನಿಮಾದಲ್ಲಿನ ವಿವಾದಿತ ಸಂಭಾಷಣೆಗಳು ಮತ್ತು ದೃಶ್ಯಗಳ ಕುರಿತು ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿಯನ್ನು (ಸಿಬಿಎಫ್‌ಸಿ) ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠವು ಮಂಗಳವಾರ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. 'ಸೆನ್ಸಾರ್ ಮಂಡಳಿಯು ತನ್ನ ಜವಾಬ್ದಾರಿಯನ್ನು ಅರ್ಥಮಾಡಿಕೊಂಡಿದೆಯೇ' ಎಂದು ಪೀಠವು ಆಶ್ಚರ್ಯ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿಗಳಾದ ರಾಜೇಶ್ ಸಿಂಗ್ ಚೌಹಾಣ್ ಮತ್ತು ಶ್ರೀಪ್ರಕಾಶ್ ಸಿಂಗ್ ಅವರನ್ನೊಳಗೊಂಡ ನ್ಯಾಯಪೀಠವು, ಸಹಿಷ್ಣು ಎಂದು ಹೇಳಲಾದ ಧರ್ಮವನ್ನು ಈ ರೀತಿ ಪರೀಕ್ಷಿಸಲಾಗುತ್ತದೆಯೇ ಎಂದು ಪ್ರಶ್ನಿಸಿದೆ.

'ಆದಿಪುರುಷ್' ಸಿನಿಮಾದಲ್ಲಿ ಭಗವಾನ್ ರಾಮ, ಹನುಮಂತ ಮತ್ತು ಇತರ ಧಾರ್ಮಿಕ ಪಾತ್ರಗಳನ್ನು ಆಕ್ಷೇಪಾರ್ಹವಾದ ರೀತಿಯಲ್ಲಿ ಚಿತ್ರಿಸಲಾಗಿದೆ. ಇದು ಹಿಂದೂಗಳ ಮಹಾಕಾವ್ಯವಾಗಿರುವ 'ರಾಮಾಯಣ'ವನ್ನು ಗೌರವಿಸುವ ಜನರ ಭಾವನೆಗಳಿಗೆ ನೋವುಂಟು ಮಾಡಿದೆ. ಹಾಗಾಗಿ ಈ ಸಿನಿಮಾವನ್ನು ನಿಷೇಧಿಸಬೇಕು' ಎಂದು ಕೋರಿದ ಎರಡು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಪೀಠವು, ಸೆನ್ಸಾರ್ ಮಂಡಳಿಯ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ.

ಸಿನಿಮಾದ ಸಹ–ಲೇಖಕ ಮನೋಜ್ ಮುಂತಾಶ್ರ್ ಶುಕ್ಲಾ ಅವರನ್ನು ಈ ಪ್ರಕರಣದಲ್ಲಿ ಕಕ್ಷಿದಾರರನ್ನಾಗಿ ಪರಿಗಣಿಸಬೇಕೆಂಬ ಮನವಿಯನ್ನು ಅಂಗೀಕರಿಸಿದ ನ್ಯಾಯಾಲಯವು, ಈ ಸಂಬಂಧ ಒಂದು ವಾರದೊಳಗೆ ಪ್ರತಿಕ್ರಿಯೆ ನೀಡುವಂತೆ ಶುಕ್ಲಾ ಅವರಿಗೆ ಸೂಚನೆ ನೀಡಿತು.

'ಶುಕ್ಲಾ ಅವರು ಬರೆದಿರುವ ಸಂಭಾಷಣೆಗಳು ಹಿಂದೂ ಧರ್ಮದ ಧಾರ್ಮಿಕ ಪ್ರತಿಮೆಗಳನ್ನು ಅತ್ಯಂತ ಆಕ್ಷೇಪಾರ್ಹ ರೀತಿಯಲ್ಲಿ ಚಿತ್ರಿಸಿವೆ. ಸೃಜನಶೀಲತೆ ಮತ್ತು ಸ್ವಾತಂತ್ರ್ಯ ಹೆಸರಿನಲ್ಲಿ ಇದನ್ನು ಸಮರ್ಥಿಸಲು ಅವರು ಪ್ರಯತ್ನಿಸಿದ್ದಾರೆ' ಎಂದೂ ಅರ್ಜಿದಾರರು ವಾದಿಸಿದ್ದಾರೆ.

ಸೆನ್ಸಾರ್ ಮಂಡಳಿಯನ್ನು ತರಾಟೆಗೆ ತೆಗೆದುಕೊಂಡ ನ್ಯಾಯಪೀಠವು, 'ಮಂಡಳಿಯು ತನ್ನ ಜವಾಬ್ದಾರಿಗಳನ್ನು ಅರ್ಥಮಾಡಿಕೊಳ್ಳಲು ಅಸಮರ್ಥವಾಗಿದೆ ಎಂದು ತೋರುತ್ತದೆ. ಸಿನಿಮಾ ಸಮಾಜದ ಕನ್ನಡಿ. ಮುಂದಿನ ಪೀಳಿಗೆಗೆ ನೀವು ಏನನ್ನು ಕಲಿಸಲು ಬಯಸುತ್ತೀರಿ' ಎಂದೂ ಟೀಕಿಸಿದೆ.

'ಟೊಮೆಟೊ ಬೆಲೆ ಏರಿಕೆ ತಾತ್ಕಾಲಿಕ'

ನವದೆಹಲಿ (ಪಿಟಿಐ): ಟೊಮೆಟೊ ಬೆಲೆ ಏರಿಕೆಯು ಈ ಋತುವಿನ ತಾತ್ಕಾಲಿಕ ವಿದ್ಯಮಾನ. ಆದಷ್ಟು ಬೇಗ ಟೊಮೆಟೊ ಬೆಲೆ ಕಡಿಮೆಯಾಗಲಿದೆ ಎಂದು ಗ್ರಾಹಕರ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಅವರು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಗ್ರಾಹಕರ ವ್ಯವಹಾರಗಳ ಇಲಾಖೆ ನೀಡಿರುವ ಅಂಕಿಅಂಶದ ಪ್ರಕಾರ, ಭಾರತದಲ್ಲಿ ಟೊಮೆಟೊ ದರದ ಸರಾಸರಿ 1 ಕೆ.ಜಿಗೆ ₹46 ಇದೆ. ದೆಹಲಿಯಲ್ಲಿ ಕೆ.ಜಿಗೆ ₹60, ಬೆಂಗಳೂರಿನಲ್ಲಿ ₹52, ಭುವನೇಶ್ವರದಲ್ಲಿ ₹100 ಇದೆ. ಕರ್ನಾಟಕದ ಬಳ್ಳಾರಿ, ಉತ್ತರ ಪ್ರದೇಶದ ಗೋರಖ್‌ಪುರದಲ್ಲಿ ₹122 ತಲುಪಿದೆ.

ಟೊಮೆಟೊ ಬೆಲೆ ಗಗನಕ್ಕೆ- ಕಾಂಗ್ರೆಸ್ ತರಾಟೆ: ಪ್ರಧಾನಿ ನರೇಂದ್ರ ಮೋದಿ ಅವರ 'ದೋಷಯುಕ್ತ ನೀತಿ'ಗಳಿಂದಾಗಿ ಟೊಮೆಟೊ ಬೆಲೆ ಗಗನಕ್ಕೇರಿದೆ ಎಂದು ಕೇಂದ್ರ ಸರ್ಕಾರವನ್ನು ಕಾಂಗ್ರೆಸ್ ತರಾಟೆಗೆ ತೆಗೆದುಕೊಂಡಿತು.

'ಪ್ರಧಾನಿ ಅವರ ದೋಷಯುಕ್ತ ನೀತಿಗಳಿಂದಾಗಿ ಮೊದಲು ಟೊಮೆಟೊವನ್ನು ಬೀದಿಗೆ ಎಸೆಯಲಾಗಿತ್ತು, ಈಗ ಕೆ.ಜಿಗೆ ನೂರು ರೂಪಾಯಿಯಂತೆ ಮಾರಲಾಗುತ್ತಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟ್ವೀಟ್ ಮಾಡಿದ್ದಾರೆ.

ಉದ್ಯೋಗ ವಾಣಿ

ಕೃಷಿಕ್ ಸರ್ವೋದಯ ಫೌಂಡೇಷನ್(ರಿ)
ಕೆಎಸ್‌ಎಫ್ ಸ್ಪರ್ಧಾತ್ಮಕ ಪರೀಕ್ಷೆಗಳ ಸಂಸ್ಥೆ (ಕೆಎಸ್‌ಎಫ್‌ಐಸಿಇ)
ನಂ.15 ಗಾಲ್ಫ್ ಅವೆನ್ಯೂ ರಸ್ತೆ, ಆಫ್ ಹೆಚ್‌ಎಎಲ್ ವಿಮಾನ ನಿಲ್ದಾಣ ರಸ್ತೆ, ಕೋಡಿಹಳ್ಳಿ, ಬೆಂಗಳೂರು–560008.
ಇ–ಮೇಲ್: ksfbangalore@gmail.com ದೂರವಾಣಿ : 080–2520 2299

ದಿನಾಂಕ: 27.06.2023

ಶೈಕ್ಷಣಿಕ ಸಂಯೋಜಕರು ಹಾಗೂ ಸ್ಟೆನೋಗ್ರಾಫರ್ ಬೇಕಾಗಿದ್ದಾರೆ

1. **ಕೃಷಿಕ್ ಸರ್ವೋದಯ ಫೌಂಡೇಶನ್ (ರಿ) ಬೆಂಗಳೂರಿನ ಕೇಂದ್ರ ಕಛೇರಿಗೆ ಶೈಕ್ಷಣಿಕ ಸಂಯೋಜಕರ ಅಗತ್ಯವಿದ್ದು ಸ್ನಾತಕೋತ್ತರ ಪದವೀಧರರಾಗಿರಬೇಕು,** ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕನಿಷ್ಠ 5 ವರ್ಷಗಳ ಭೋದನೆ/ ತರಬೇತಿ ನೀಡಿದ ಅನುಭವವಿರಬೇಕು. 30 ರಿಂದ 50 ವರ್ಷ ವಯಸ್ಸಿನವರಾಗಿದ್ದು ಕಂಪ್ಯೂಟರ್ ಜ್ಞಾನವಿರಬೇಕು.
2. **ಸಂಸ್ಥೆಗೆ ಒಬ್ಬ ಇಂಗ್ಲೀಷ್ ಮತ್ತು ಕನ್ನಡ ಶೀಘ್ರಲಿಪಿ ಅಥವಾ ಬೆರಳಚ್ಚು ಪರಿಣಿತರ ಅಗತ್ಯವಿದೆ.**

ಇವರುಗಳ ವಿದ್ಯಾರ್ಹತೆ ಮತ್ತು ಅನುಭವದ ಆಧಾರದ ಮೇಲೆ ಸೂಕ್ತ ಸಂಭಾವನೆ ನೀಡಲಾಗುವುದು. ಅರ್ಜಿಗಳನ್ನು ಈ ಮೇಲ್ಕಂಡ ವಿಳಾಸಕ್ಕೆ **ದಿನಾಂಕ: 20–07–2023** ರ ಒಳಗೆ ತಲುಪಿಸಬೇಕು.

ಸಹಿ/– ಕಾರ್ಯದರ್ಶಿ

भारत इलेक्ट्रॉनिक्स BHARAT ELECTRONICS
QUALITY. TECHNOLOGY. INNOVATION.

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯದ ಒಂದು ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ರಕ್ಷಣಾ ಮಂತ್ರಾಲಯ ಅಧೀನ ಒಂದು ನವರತ್ನ ಕಂಪನಿ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ ಕಂಪನಿಗೆ ತನ್ನ ಎನ್ ಎಸ್ (ಎಸ್ ಮತ್ತು ಸಿ ಎಸ್) ಗಾಗಿ ಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಸಿಬ್ಬಂದಿಗಳ ಆವಶ್ಯಕತೆ ಇವೆ.

ಹುದ್ದೆ	ಹುದ್ದೆ ಸಂಹಿತೆ	ನಿಯೋಜನೆ ಸ್ಥಳ	ವಿದ್ಯಾರ್ಹತೆ	ಹುದ್ದೆಗಳ ಸಂಖ್ಯೆ	ಅನುಭವ	ಮಾಹೆಯಾನ ಕ್ರೋಢೀಕೃತ ಸಂಭಾವನೆ
ಎನ್ ಎಸ್ (ಎಸ್ & ಎಸ್) ಗೆ ಯೋಜನಾ ಇಂಜಿನಿಯರ್ -1	PESSI -2023	ಪೋರ್ಟ್ ಬ್ಲೇರ್ ಕವರಟ್ಟಿ ಗುರಗಾಂವ್ ಕೊಚ್ಚಿ ಗಾಂಧಿನಗರ ಕೋಲ್ಕತ್ತ ವೈಜಾಗ್ ಚೆನ್ನೈ ಮುಂಬಯಿ	ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಶನ್/ ಎಲೆಕ್ಟ್ರಾನಿಕ್ಸ್ / ಟೆಲಿಕಮ್ಯೂನಿಕೇಶನ್ / ಕಮ್ಯೂನಿಕೇಶನ್/ಎಲೆಕ್ಟ್ರಾನಿಕ್ಸ್ & ಟೆಲಿಕಮ್ಯೂನಿಕೇಶನ್ ವಿಷಯದಲ್ಲಿ 4 ವರ್ಷಗಳ ಪೂರ್ಣಾವಧಿಯ ಬಿ.ಇ./ ಬಿ.ಟೆಕ್ / ಬಿ.ಎಸ್.ಸಿ ಇಂಜಿನಿಯರಿಂಗ್	09 ಸಾಮಾನ್ಯ -06 ಇ.ಹಿ.ವ -02 ಪ.ಜಾ. -01	ನೆಟ್ ವರ್ಕ್ ನಿರ್ವಹಣೆ ಕ್ಷೇತ್ರದಲ್ಲಿ ಕನಿಷ್ಠ 2 ವರ್ಷಗಳ ಅರ್ಹತೋತ್ತರ ಅನುಭವ. ಸಿಸಿಎನ್ ಎ ಸೆಕ್ಯೂರಿಟಿ ಪ್ರಮಾಣೀಕೃತ ವೃತ್ತಿದಾದರು, ಡಾಟಾ ಸೆಂಟರ್, ಕಂಪ್ಯೂಟರ್ ನೆಟ್ ವರ್ಕ್ ಸೇವೆಗಳು, ವಿಎಸ್ ಎಟಿ ನಿರ್ವಹಣೆ ಕ್ಷೇತ್ರದಲ್ಲಿ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು.	1ನೇ ವರ್ಷ- Rs. 40,000/- 2ನೇ ವರ್ಷ Rs. 45,000/- 3ನೇ ವರ್ಷ Rs. 50,000/- 4ನೇ ವರ್ಷ Rs. 55,000/-
ಎನ್ ಎಸ್ (ಎಸ್ & ಎಸ್) ಗೆ ಯೋಜನಾ ಇಂಜಿನಿಯರ್ -1	PESMV -2023	ವೈಜಾಗ್	ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಶನ್ / ಎಲೆಕ್ಟ್ರಾನಿಕ್ಸ್ / ಟೆಲಿಕಮ್ಯೂನಿಕೇಶನ್ / ಕಮ್ಯೂನಿಕೇಶನ್ / ಎಲೆಕ್ಟ್ರಾನಿಕ್ಸ್ & ಟೆಲಿಕಮ್ಯೂನಿಕೇಶನ್ ವಿಷಯದಲ್ಲಿ 4 ವರ್ಷಗಳ ಪೂರ್ಣಾವಧಿಯ ಬಿ.ಇ./ ಬಿ.ಟೆಕ್ / ಬಿ.ಎಸ್.ಸಿ ಇಂಜಿನಿಯರಿಂಗ್	14 ಸಾಮಾನ್ಯ - 05 ಇಡಬ್ಲ್ಯೂಎಸ್ -02 ಇ.ಹಿ.ವ. -04 ಪ.ಜಾ. - 02 ಪ.ಪಂ. -01	ಎಲೆಕ್ಟ್ರಾನಿಕ್ ಪಿಸಿಬಿ ಗಳು / ಮಾಡ್ಯೂಲ್ ಗಳು / ಸಿಸ್ಟಮ್ ಗಳ ಪರೀಕ್ಷಣೆ, ದೋಷನಿವಾರಣೆ ಮತ್ತು ಏಕೀಕರಣ ಕ್ಷೇತ್ರದಲ್ಲಿ ಕನಿಷ್ಠ 2 ವರ್ಷಗಳ ಅರ್ಹತೋತ್ತರ ಅನುಭವ.	
	PESMB -2023	ಬೆಂಗಳೂರು				

ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ **12.07.2023** ಆಗಿರುತ್ತದೆ. ಅರ್ಜಿ ಸಲ್ಲಿಸುವ ವಿಸ್ತೃತ ಜಾಹೀರಾತು ಮತ್ತು ಸೂಚನೆಗಳಿಗಾಗಿ ದಯವಿಟ್ಟು ಅಧಿಕೃತ ವೆಬ್ ಸೈಟ್ **www.bel&india.in** ನಲ್ಲಿ CAREERS ಲಿಂಕ್ ಅನ್ನು ವೀಕ್ಷಿಸಿ.

'Har Ek Kaam Desh Ke Naam'

रजिस्ट्री सं. डी.एल. -33004/99 | REGD. NO. D.L.-33004/99

सत्यमेव जयते

भारत का राजपत्र
The Gazette of India

सी.जी.-डी.एल.-अ.-07062023-246332
CG-DL-E-07062023-246332

असाधारण
EXTRAORDINARY
भाग II—खण्ड 3—उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

सं : 2355] नई दिल्ली, मंगलवार, जून 6, 2023/ज्येष्ठ 16, 1945
No. 2355] NEW DELHI, TUESDAY, JUNE 6, 2023/JYAISHTHA 16, 1945

ವಿಶೇಷ ಭೂಸ್ವಾಧೀನಾಧಿಕಾರಿಗಳ ಮತ್ತು ಸಕ್ಷಮ ಪ್ರಾಧಿಕಾರರವರ ಕಾರ್ಯಾಲಯ, ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 48, (ನೆಲಮಂಗಲ–ಹಾಸನ ಸೆಕ್ಷನ್), ಕೆ ಆರ್ ಎಸ್ ಅಗ್ರಹಾರ, ಕುಣಿಗಲ್, ತಮಕೂರು–572130.

ನಂ. LAQ/NHAI/MISSING SURVEY No./CR/2023-24 ದಿನಾಂಕ: 27.06.2023

ಸಾರ್ವಜನಿಕ ಪ್ರಕಟಣೆ

(ರಾಷ್ಟ್ರೀಯ ಹೆದ್ದಾರಿ ಕಾಯ್ದೆ – 1956 ಕಲಂ 3ಜಿ ರಂತೆ)

ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956ರ (1956 ರ 48) ಮತ್ತು ತಿದ್ದುಪಡಿ ಕಾಯ್ದೆ 1997ರ ಸೆಕ್ಷನ್ 3ಡಿ(1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭಾರತ ಸರ್ಕಾರವು ತನ್ನ ಗೆಜೆಟ್ ಅಧಿಸೂಚನೆ ಸಂಖ್ಯೆ ಎಸ್.ಓ. 2465(ಇ) ದಿನಾಂಕ: 6ನೇ ಜೂನ್ 2023 ರಲ್ಲಿ ಕರ್ನಾಟಕ ರಾಜ್ಯದ, ಮಂಡ್ಯ ಜಿಲ್ಲೆಯ ಈ ಕೆಳಗೆ ಅಧಿಸೂಚನೆಯಲ್ಲಿ ಪ್ರಕಟಿಸಿರುವ ಗ್ರಾಮಗಳ ಜಮೀನುಗಳನ್ನು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 75 (48) ರಲ್ಲಿ ಕಿಮೀ 91.401 ರಿಂದ 118.6 ರವರೆಗೆ ರಸ್ತೆಯನ್ನು ನಿರ್ಮಾಣ ಮಾಡಲು (ಅಗಲಗೊಳಿಸಲು 4 ಪಥಗಳ ರಸ್ತೆ, ಇತ್ಯಾದಿ) 3(ಡಿ) ಅಧಿಸೂಚನೆ ಹೊರಡಿಸಿರುತ್ತದೆ.

ಆದಕಾರಣ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ಮತ್ತು ತಿದ್ದುಪಡಿ ಕಾಯ್ದೆ 1997ರ ನಿಯಮ 3–ಜಿ ಉಪ ಕಲಂ(1)(2)(3) ಮತ್ತು (4) ಹಾಗೂ 1997ರ ತಿದ್ದುಪಡಿ ಅಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನ ಅನುಸೂಚಿಯಲ್ಲಿ ನಮೂದಿಸಿರುವ ಗ್ರಾಮಗಳ ಜಮೀನುಗಳಿಗೆ ಪರಿಹಾರ ನಿಗಧಿಪಡಿಸಿ ಪಾವತಿಸಲು ಜಮೀನಿಗೆ ಸಂಬಂಧಿಸಿದ ಮಾಲೀಕರು/ಹಿತಾಸಕ್ತಿದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸದರಿ ಜಮೀನಿಗೆ ಭೂಪರಿಹಾರ ನಿರ್ಧರಿಸಲು/ಅವಾರ್ಡ್ ರಚಿಸಲು ಸಂಬಂಧಿಸಿದ ಅಧಿಕೃತ ದಾಖಲೆಗಳನ್ನು ಅಂದರೆ ಮೂಲ ದಾಖಲೆ ಪತ್ರಗಳಾದ (1) ಕ್ರಯಪತ್ರ, ವಿಭಾಗಪತ್ರ, ಇತರೆ ಹಕ್ಕು ಪತ್ರಗಳು, (2) ಪಹಣಿ/ಖಾತಾ ಪತ್ರಿಕೆಗಳು, (3) ಹಕ್ಕುಬದಲಾವಣೆ ದಾಖಲೆ (ಮ್ಯುಟೇಶನ್), ಕಂದಾಯ ಪಾವತಿಸಿದ ರಸೀದಿ ಭೂ ಪರಿವರ್ತನೆ (Convertion) ಯಾಗಿದ್ದಲ್ಲಿ ಆದೇಶದ ಪ್ರತಿ ಇತ್ಯಾದಿ, ಅನ್ವಯವಾಗುವ ದಾಖಲೆಗಳು ಹಾಗೂ ಅಪೇಕ್ಷಿಸುವ ಪರಿಹಾರ ಧನದ ಬಗ್ಗೆ ಸೂಕ್ತ ಸಮರ್ಥನೆ ಅರ್ಜಿಯೊಂದಿಗೆ, ಈ ಪ್ರಕಟಣೆಯಲ್ಲಿ ನಮೂದಿಸಿರುವ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ನೀವಾಗಲಿ, ನಿಮ್ಮ ಅಧಿಕೃತ ಪ್ರತಿನಿಧಿಯ ಮೂಲಕವಾಗಲಿ ಅಥವಾ ನ್ಯಾಯವಾದಿಗಳ ಮೂಲಕವಾಗಲಿ ವಿಶೇಷ ಭೂಸ್ವಾಧೀನಾಧಿಕಾರಿಗಳ ಮತ್ತು ಸಕ್ಷಮ ಪ್ರಾಧಿಕಾರರವರ ಕಾರ್ಯಾಲಯ, ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 48, (ನೆಲಮಂಗಲ–ಹಾಸನ ಸೆಕ್ಷನ್), ಕೆ ಆರ್ ಎಸ್ ಅಗ್ರಹಾರ, ಕುಣಿಗಲ್, ತಮಕೂರು ಇವರಿಗೆ ಸಲ್ಲಿಸತಕ್ಕದ್ದು.

ನಿಗಧಿತ ಅವಧಿಯೊಳಗೆ ದಾಖಲೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರ, ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಷ್ಟ್ರೀಯ ಹೆದ್ದಾರಿ ಸಂ. 75(48) ಹಾಸನ ಇವರಿಗೆ ಸಲ್ಲಿಸದೇ ಇದ್ದಲ್ಲಿ ಲಭ್ಯವಿರುವ ದಾಖಲೆಗಳ ಮೇರೆಗೆ ಭೂಪರಿಹಾರ ನಿಗಧಿಪಡಿಸಲಾಗುವುದು. ಅಲ್ಲದೇ ಸದರಿ ಅಧಿಸೂಚನೆಯಂತೆ ಕೇಂದ್ರ ಸರ್ಕಾರದಲ್ಲಿ ನಿಹಿತ(vest)ವಾಗಿರುವ ಜಮೀನುಗಳಲ್ಲಿ ಇನ್ನು ಮುಂದೆ ಜಮೀನು ಅಭಿವೃದ್ಧಿಪಡಿಸುವುದಾಗಲಿ/ಬೆಳೆಯನ್ನು ಬೆಳೆಯುವುದಾಗಲಿ ಮಾಡತಕ್ಕದ್ದಲ್ಲ. ತಪ್ಪಿದಲ್ಲಿ ಅಂತಹ ಅಭಿವೃದ್ಧಿ/ಬೆಳೆಗಳಿಗೆ ಪರಿಹಾರ ನೀಡಲಾಗುವುದಿಲ್ಲ ಎಂದು ಈ ಮೂಲಕ ಜಮೀನಿನ ಮಾಲೀಕರು, ಹಿತಾಸಕ್ತಿದಾರರಿಗೆ ತಿಳಿಯಪಡಿಸಿದೆ.

ತಾಲ್ಲೂಕಿನ ಹೆಸರು ಮತ್ತು ಗ್ರಾಮದ ಹೆಸರು	ದಿನಾಂಕ	ಅರ್ಜಿ ಮತ್ತು ದಾಖಲೆಗಳನ್ನು ಸಲ್ಲಿಸಬೇಕಾದ ಸ್ಥಳ/ವಿಳಾಸ
ತಾಲ್ಲೂಕು: ನಾಗಮಂಗಲ ಗ್ರಾಮ: ಅವೆರಹಳ್ಳಿ	25.07.2023	ವಿಶೇಷ ಭೂಸ್ವಾಧೀನಾಧಿಕಾರಿಗಳ ಮತ್ತು ಸಕ್ಷಮ ಪ್ರಾಧಿಕಾರರವರ ಕಾರ್ಯಾಲಯ, ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 48, (ನೆಲಮಂಗಲ–ಹಾಸನ ಸೆಕ್ಷನ್), ಕೆ ಆರ್ ಎಸ್ ಅಗ್ರಹಾರ ಕುಣಿಗಲ್, ತಮಕೂರು–572130.

ಸಹಿ/–
ಡಾ. ಗೀತಾ ಎನ್. ಆರ್
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಹೆ ನಂ. 48, (ನೆಲಮಂಗಲ–ಹಾಸನ ಸೆಕ್ಷನ್), ಕೆ ಆರ್ ಎಸ್ ಅಗ್ರಹಾರ ಕುಣಿಗಲ್, ತಮಕೂರು 572130.

ರಾಷ್ಟ್ರೀಯ ಹೆದ್ದಾರಿ ಹಾಗೂ ರಸ್ತೆ ಸಾರಿಗೆ
ಅಧಿಸೂಚನೆ
ನವದೆಹಲಿ, ದಿನಾಂಕ: 6ನೇ ಜೂನ್ 2023

ಎಸ್.ಓ. 2465(ಇ)– ಭಾರತ ಸರ್ಕಾರದ ರಸ್ತೆ ಸಾರಿಗೆ ಹೆದ್ದಾರಿ ಸಚಿವಾಲಯವು ಅನುಸೂಚಿಯಲ್ಲಿನ ಜಮೀನುಗಳನ್ನು ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 48, (ನೆಲಮಂಗಲ–ಹಾಸನ ಸೆಕ್ಷನ್), ಕೆ ಆರ್ ಎಸ್ ಅಗ್ರಹಾರ ಕುಣಿಗಲ್, ತಮಕೂರು, ರಾಷ್ಟ್ರೀಯ ಹೆದ್ದಾರಿ ನಂ.75 (48) ರಲ್ಲಿ ಕಿಮೀ 91.401 ರಿಂದ 118.6 ರವರೆಗೆ ರಸ್ತೆ ನಿರ್ಮಾಣ (ಅಗಲೀಕರಣ/ ಚತುಷ್ಪಥ, ಇತ್ಯಾದಿ) ಸಂರಕ್ಷಣೆ, ಕಾರ್ಯ ನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆಂದು ಇಚ್ಛಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ರ ಕಲಂ 3ಎ (1) ರ ಪ್ರಕಾರ (ಇನ್ನು ಮುಂದೆ ಮೇಲೆ ಉಲ್ಲೇಖಿಸಲ್ಪಟ್ಟ ಕಾಯ್ದೆ) ಸಂಖ್ಯೆ ಎಸ್. ಓ. 601 (ಇ) ರಂತೆ ಅಧಿಸೂಚನೆ ಹೊರಡಿಸಿ ದಿನಾಂಕ 6ನೇ ಫೆಬ್ರವರಿ 2023 ರ ವಿಶೇಷ ಗೆಜೆಟ್‌ನ ಭಾಗ– 2 ಸೆಕ್ಷನ್–3, ಸಬ್‌ಕ್ಷನ್ (ii) ರಂತೆ ಪ್ರಕಟಪಡಿಸಿತ್ತು.

ಈ ಕಾಯ್ದೆ ಸೆಕ್ಷನ್ 3(ಎ)ರ ಸಬ್ ಸೆಕ್ಷನ್ 3 ರಂತೆ ಅಧಿಸೂಚನೆಯನ್ನು "ಡೆಕ್ಕನ್ ಹೆರಾಲ್ಡ್" ಮತ್ತು "ಪ್ರಜಾವಾಣಿ" ಈ ಎರಡೂ ದಿನಪತ್ರಿಕೆಗಳಲ್ಲಿ ದಿನಾಂಕ: 01–03–2023 ರಂದು ಪ್ರಕಟಿಸಲಾಗಿರುತ್ತದೆ.

ಈ ಪ್ರಕಾರ ತಕರಾರುಗಳು ಸ್ವೀಕೃತವಾಗಿದ್ದು, ಆ ತಕರಾರುಗಳನ್ನು ಸಕ್ಷಮ ಪ್ರಾಧಿಕಾರವು ಪರಿಗಣಿಸಿ, ವಿಚಾರಣೆ ನಂತರ, ಅರ್ಜಿಗಳನ್ನು ತಿರಸ್ಕರಿಸಿ ಆದೇಶ ಮಾಡಲಾಗಿರುತ್ತದೆ.

ಆದ್ದರಿಂದ ಈಗ ಕೇಂದ್ರ ಸರ್ಕಾರವು ಸಕ್ಷಮ ಪ್ರಾಧಿಕಾರಿಗಳ ವರದಿಯನ್ನು ಆಧರಿಸಿ ಸೆಕ್ಷನ್ 3ಡಿ(1) ರಲ್ಲಿರುವ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆಯಲ್ಲಿ ಹೇಳಲಾದ ಉದ್ದೇಶಕ್ಕೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆಯೆಂದು ಈ ಮೂಲಕ ಘೋಷಿಸಿದೆ.

ಇನ್ನು ಮುಂದೆ ಇದೇ ಕಾಯ್ದೆ ಸೆಕ್ಷನ್ 3ಡಿ(2) ರಂತೆ ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಣೆಯಾದ ದಿನಾಂಕದಿಂದ ಅನ್ವಯವಾಗುವಂತೆ ಭೂಸ್ವಾಧೀನಕ್ಕೆ ಒಳಪಟ್ಟಿರುವ ಜಮೀನುಗಳು ಎಲ್ಲಾ ಋಣಭಾರಗಳಿಂದ ಮುಕ್ತವಾಗಿ ಕೇಂದ್ರ ಸರ್ಕಾರದಲ್ಲಿ ನಿಹಿತ (vest)ವಾಗಿದ್ದು, ಕೇಂದ್ರ ಸರ್ಕಾರದ ಸ್ವಾಧೀನಕ್ಕೆ ಒಳಪಟ್ಟಿರುತ್ತದೆ. ಎಂದು ಘೋಷಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 75(48) ರಲ್ಲಿ 91.401 ರಿಂದ ಕಿ.ಮೀ. 118.6 ವರೆಗೆ ರೂಪಿತ (structures) ಗಳು ಸೇರಿದಂತೆ ಅಥವ ರೂಪಿತ ರಹಿತವಾಗಿ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಸಂಕ್ಷಿಪ್ತ ವಿವರ.

ರಾಜ್ಯ: ಕರ್ನಾಟಕ ಜಿಲ್ಲೆ: ಮಂಡ್ಯ

ಕ್ರಮ ಸಂಖ್ಯೆ	ಸರ್ವೆ/ಪ್ಲಾಟ್ ನಂಬರ್	ಜಮೀನಿನ ತರಹೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಹೆಕ್ಟರ್‌ಗಳಲ್ಲಿ)	ಆಸಕ್ತಿಉಳ್ಳ ವ್ಯಕ್ತಿಗಳ ಹೆಸರು/ಖಾತೆದಾರರುಗಳ ಹೆಸರು
1	2	3	4	5	6
ತಾಲ್ಲೂಕು: ನಾಗಮಂಗಲ					ಗ್ರಾಮ : ಅವೆರಹಳ್ಳಿ
1	25/2	ಖಾಸಗಿ (ಕೃಷಿ)	ಖುಷ್ಕಿ	0.1213	ನಂಜೇಗೌಡ @ ತಮ್ಮಣ್ಣಗೌಡ ತಂದೆ ನಿಂಗೇಗೌಡ, ಸಿದ್ದೇಗೌಡ ತಂದೆ ನಿಂಗೇಗೌಡ
			ಒಟ್ಟು	0.1213	

[F. No. 1/3D3]
ಅಭಯ್ ಜೈನ್, ಉಪ ಕಾರ್ಯದರ್ಶಿ.

ಸುಭಾಷಿತ

ನಗುಮುಖಗಳೆಂದರೆ ಅಲ್ಲಿ ದುಃಖವಿಲ್ಲ ಎಂದರ್ಥವಲ್ಲ! ಆದರೆ ಅದನ್ನು ಎದುರಿಸುವ ಸಾಮರ್ಥ್ಯ ಅವರಲ್ಲಿದೆ ಎಂದರ್ಥ. **-ವಿಲಿಯಂ ಷೇಕ್ಸ್‌ಪಿಯರ್**

ವಿರೋಧಪಕ್ಷಗಳಿಗೆ ಅವಕಾಶಗಳಿವೆ ಹಾದಿಯಲ್ಲಿನ ಸವಾಲುಗಳೂ ಹೆಚ್ಚು

ಹದಿನೈದು ಪ್ರಮುಖ ವಿರೋಧಪಕ್ಷಗಳ ನಾಯಕರು ಪಟ್ನಾದಲ್ಲಿ ಈಚೆಗೆ ಒಟ್ಟಾಗಿ ಸಭೆ ನಡೆಸಿದರು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಒಗ್ಗಟ್ಟಿನ ಹೋರಾಟ ನಡೆಸುವ ದಿಸೆಯಲ್ಲಿ ಇಟ್ಟಿರುವ ಮೊದಲ ಹೆಜ್ಜೆ ಇದು. ಚುನಾವಣೆಗೆ ಈಗ ಒಂದು ವರ್ಷದಷ್ಟು ಕಾಲಾವಕಾಶವೂ ಉಳಿದಿದೆ. ಹೀಗಾಗಿ ಈ ಬಗೆಯ ಪ್ರಯತ್ನ ವೇಗ ಪಡೆದಿದೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕೆ ಮತ್ತು ಅವರು ಪ್ರತಿನಿಧಿಸುವ ಬಿಜೆಪಿಗೆ ಸ್ಪರ್ಧಾತ್ಮಕವಾಗಿ ಹಾಗೂ ರಾಜಕೀಯವಾಗಿ ಸವಾಲೊಡ್ಡಲು ಸಮಾನ ವೇದಿಕೆಯೊಂದನ್ನು ಸೃಷ್ಟಿಸುವ ಹಂಬಲ ಈ ನಾಯಕರದ್ದಾಗಿದೆ. ಮೊದಲು ಹಿಮಾಚಲ ಪ್ರದೇಶದಲ್ಲಿ, ಬಳಿಕ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭರ್ಜರಿ ಗೆಲುವು ಸಿಕ್ಕಿರುವುದು ವಿರೋಧಪಕ್ಷಗಳಿಗೆ ಈ ದಿಸೆಯಲ್ಲಿ ಸ್ಫೂರ್ತಿಯನ್ನು ತುಂಬಿದೆ. ಮುಂಬರುವ ಚುನಾವಣೆಯಲ್ಲಿ ತಮ್ಮ ಅಸ್ತಿತ್ವದ ಪ್ರಶ್ನೆಯೇ ಅಡಗಿದೆ ಎಂದು ಭಾವಿಸಿ ಆ ಚುನಾವಣೆಯನ್ನು ವಿರೋಧಪಕ್ಷಗಳು ಗಂಭೀರವಾಗಿ ತೆಗೆದುಕೊಂಡಿವೆ. ಒಗ್ಗಟ್ಟಾಗಿ ಬಿಜೆಪಿಯನ್ನು ಎದುರಿಸುವ ತುರ್ತೊಂದು ಅವುಗಳ ಮುಂದಿದೆ. ಪ್ರಜಾಪ್ರಭುತ್ವ ಯಾವಾಗಲೂ ಬದಲಾವಣೆಯನ್ನು ಬಯಸುತ್ತಿರುತ್ತದೆ. ಈ ಕಾರಣದಿಂದ, ಬಿಜೆಪಿ ನೇತೃತ್ವದ ಸರ್ಕಾರವನ್ನು ಅಧಿಕಾರದಿಂದ ಇಳಿಸುವ ವಿರೋಧಪಕ್ಷಗಳ ಹಂಬಲ ಸಹಜವಾದುದು. ಯಾವುದೇ ಪಕ್ಷ ಸುದೀರ್ಘ ಅವಧಿಯವರೆಗೆ ಅಧಿಕಾರದಲ್ಲಿದ್ದರೆ ತನ್ನ ಸ್ಥಾನ ತುಂಬಬಲ್ಲವರು ಯಾರೂ ಇಲ್ಲ ಎಂಬ ಮನೋಭಾವ ಬಲಿತು ನಿರಂಕುಶಾಧಿಕಾರದ ಧೋರಣೆಯನ್ನು ಅದು ಮೈಗೂಡಿಸಿಕೊಳ್ಳುತ್ತದೆ. ಸಮಾಜದಲ್ಲಿ ಹೆಚ್ಚುತ್ತಿರುವ ಸಂಘರ್ಷಮಯ ವಾತಾವರಣ ಮತ್ತು ಬೆಳೆಯುತ್ತಿರುವ ದಮನಕಾರಿ ಪ್ರವೃತ್ತಿಯು ತಮಗೆ ಒಟ್ಟಾಗಲು ಹಾಗೂ ಬಿಜೆಪಿಯ ವಿರುದ್ಧ ಗಟ್ಟಿಯಾದ ಮೈತ್ರಿಕೂಟವನ್ನು ಕಟ್ಟಲು ಅವಕಾಶ ಸೃಷ್ಟಿಯಾಗುವಂತೆ 'ಭೂಮಿಯನ್ನು ಹದಗೊಳಿಸಿದೆ' ಎಂದು ವಿರೋಧ ಪಕ್ಷಗಳು ಭಾವಿಸಿವೆ. ಹೀಗಾಗಿ ಭಿನ್ನಾಭಿಪ್ರಾಯಗಳನ್ನೆಲ್ಲ ಬದಿಗಿಟ್ಟು ಮೋದಿ ನೇತೃತ್ವದ ಸರ್ಕಾರಕ್ಕೆ ಸವಾಲೊಡ್ಡಲು ಅವುಗಳು ಸಜ್ಜಾಗುತ್ತಿವೆ. ಬೆಲೆ ಏರಿಕೆಯೂ ಸೇರಿದಂತೆ ಜನಸಾಮಾನ್ಯರ ಬದುಕನ್ನು ಸುಡುತ್ತಿರುವ ವಿಷಯಗಳನ್ನು ಮುಂದಿಟ್ಟುಕೊಂಡು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬಹುದು ಎಂದು ಈ ಪಕ್ಷಗಳ ನೇತಾರರು ಭಾವಿಸಿದ್ದಾರೆ. ಒಂದೇ ವೇದಿಕೆಯಲ್ಲಿ ಗುರುತಿಸಿಕೊಳ್ಳಲು ಸಜ್ಜಾಗಿರುವ ಪಕ್ಷಗಳು ಹನ್ನೊಂದು ರಾಜ್ಯಗಳಲ್ಲಿ ಸರ್ಕಾರಗಳನ್ನು ರಚಿಸಿವೆ ಮತ್ತು ಸಂಬಂಧಿಸಿದ ರಾಜ್ಯಗಳ ಚುನಾವಣೆಗಳಲ್ಲಿ ಗಣನೀಯ ಪ್ರಮಾಣದಲ್ಲಿ ಮತವನ್ನೂ ಗಳಿಸಿವೆ. ಈ ಪಕ್ಷಗಳ ನಾಯಕರಲ್ಲಿ ಪ್ರಭಾವಿಗಳಿದ್ದಾರೆ. ಚುನಾವಣೆ ತಂತ್ರ ಹಾಗೂ ಪ್ರಚಾರದಲ್ಲಿ ಪಳಗಿದವರೂ ಇದ್ದಾರೆ. ಆಡಳಿತದಲ್ಲಿ ಅನುಭವಿಗಳೂ ಹೌದು. ಈ ಎಲ್ಲ ಅಂಶಗಳು ವಿರೋಧಪಕ್ಷಗಳ ವೇದಿಕೆಗೆ ಬಲ ತುಂಬಬಲ್ಲವು.

ಬಿಜೆಪಿಯನ್ನು ವಿರೋಧಿಸುವ ಕಾರಣಕ್ಕೆ ಮಾತ್ರವಲ್ಲದೆ, ಜನ ತಮ್ಮನ್ನು ಏತಕ್ಕಾಗಿ ಬೆಂಬಲಿಸಬೇಕು ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡುವ ಕೆಲಸವನ್ನು ವಿರೋಧಪಕ್ಷಗಳು ಮಾಡಬೇಕಿದೆ

ವಿರೋಧಪಕ್ಷಗಳಿಗೆ ಎಷ್ಟು ಅವಕಾಶಗಳಿವೆಯೋ ಅಷ್ಟೇ ಸವಾಲುಗಳೂ ಉಂಟು. ಜನಪ್ರಿಯತೆಯಲ್ಲಿ ರಾಷ್ಟ್ರಮಟ್ಟದಲ್ಲಿ ಮೋದಿ ಅವರ ವರ್ಚಸ್ಸಿಗೆ ಸರಿಸಮ ವರ್ಚಸ್ಸು ಹೊಂದಿರುವ ನಾಯಕ ವಿರೋಧ ಪಕ್ಷಗಳ ಪಾಳಯದಲ್ಲಿ ಸದ್ಯಕ್ಕೆ ಇಲ್ಲ. ಕೆಲವು ಜನಪ್ರಿಯ ನಾಯಕರು ಇದ್ದರೂ ಅವರ ಪ್ರಭಾವ ರಾಷ್ಟ್ರದ ಉದ್ದಗಲಕ್ಕೂ ಒಂದೇ ರೀತಿಯಲ್ಲಿ ಚಾಚಿಕೊಂಡಿಲ್ಲ. ಇನ್ನೊಂದೆಡೆ, ಮೋದಿ ನೇತೃತ್ವದ ಸರ್ಕಾರವು ದೇಶದ ಮೇಲೆ ಬಿಗಿಹಿಡಿತ ಹೊಂದಿದೆ. ಸ್ವಾಯತ್ತ ಸಂಸ್ಥೆಗಳು ಮತ್ತು ಕೆಲವು ಮಾಧ್ಯಮ ಸಂಸ್ಥೆಗಳ ಮೇಲೂ ತನ್ನ ಪ್ರಭಾವವನ್ನು ಹೊಂದಿದೆ. ಚುನಾವಣೆ ಎದುರಿಸುವಂತಹ 'ಬಲಾಢ್ಯ'ವಾದ ವ್ಯವಸ್ಥೆಯನ್ನೂ ಬಿಜೆಪಿ ಬೆಳೆಸಿಕೊಂಡಿದೆ. ಇಂತಹ ಸನ್ನಿವೇಶದಲ್ಲಿ ಆ ಪಕ್ಷವನ್ನು ಎದುರಿಸಲು ವಿರೋಧಪಕ್ಷಗಳಿಗೆ ಸಂಖ್ಯಾ ಲೆಕ್ಕಾಚಾರಕ್ಕಿಂತಹೆಚ್ಚಾಗಿಬೇಕಿರುವುದುಅವುಗಳಒಗ್ಗಟ್ಟನ್ನುಗಟ್ಟಿಗೊಳಿಸಬಲ್ಲಹೊಂದಾಣಿಕೆ. ಒಟ್ಟಾಗಲು ಹೊರಟಿರುವ ಕೆಲವು ಪಕ್ಷಗಳಲ್ಲಿ ಆಂತರಿಕ ತಿಕ್ಕಾಟಗಳಿವೆ. ನಾಯಕತ್ವಕ್ಕೆ ಸಂಬಂಧಿಸಿದ ಪ್ರಶ್ನೆಗಳೂ ಇವೆ. ಪರಸ್ಪರರನ್ನು ಕಂಡು ಹಲ್ಲು ಮಸೆಯುವ ನಾಯಕರೂ ಇದ್ದಾರೆ. ಪಟ್ನಾ ಸಭೆಯ ಬೆನ್ನಹಿಂದೆಯೇ ಕಾಂಗ್ರೆಸ್ ವಿರುದ್ಧ ಎಎಪಿ ಭಿನ್ನರಾಗ ತೆಗೆದಿದ್ದು ಈಗ ಜಗಜ್ಜಾಹೀರಾಗಿದೆ. ಪರಸ್ಪರ ವಿರೋಧಾಭಾಸಗಳಿಂದ ಕೂಡಿದ ಭಿನ್ನ ಸಿದ್ಧಾಂತದ ಪ್ರತಿಪಾದಕರನ್ನು ಒಂದೇ ವೇದಿಕೆಯಲ್ಲಿ ಹಿಡಿದು ನಿಲ್ಲಿಸುವುದೆಂದರೆ ತಕ್ಕಡಿಯಲ್ಲಿಟ್ಟು ಕಪ್ಪೆಗಳನ್ನು ತೂಗಿದಂತೆ. ಅಲ್ಲದೆ, ಈ ಪಕ್ಷಗಳು ಹೆಚ್ಚಿನ ಯಶಸ್ಸು ಗಳಿಸಿರುವುದು ವಿಧಾನಸಭೆ ಚುನಾವಣೆಗಳಲ್ಲಿ. ಲೋಕಸಭೆ ಚುನಾವಣೆಯಲ್ಲಿ ಚರ್ಚೆಯಾಗುವ ವಿಷಯಗಳಿಗೂ ರಾಜ್ಯಗಳ ವಿಧಾನಸಭೆ ಚುನಾವಣೆಗಳಲ್ಲಿ ಚರ್ಚೆಯಾಗುವ ವಿಷಯಗಳಿಗೂ ಅಜಗಜಾಂತರವಿದೆ. ಮೋದಿ ಅವರನ್ನು ಮತ್ತು ಬಿಜೆಪಿಯನ್ನು ವಿರೋಧಿಸುವ ಕಾರಣಕ್ಕೆ ಮಾತ್ರವಲ್ಲದೆ ಜನ ತಮ್ಮನ್ನು ಏತಕ್ಕಾಗಿ ಬೆಂಬಲಿಸಬೇಕು ಎಂಬುದನ್ನು ಜನರ ಮುಂದೆ ವಿವರಿಸುವಂತಹ ಕೆಲಸವನ್ನೂ ಈ ಪಕ್ಷಗಳು ಮಾಡಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ತಾವೊಂದು ವೇಳೆ ಅಧಿಕಾರಕ್ಕೆ ಬಂದರೆ ಒಟ್ಟಾಗಿ ಮುನ್ನಡೆಯುವುದಾಗಿ ಮತ್ತು ಒಳ್ಳೆಯ ಆಡಳಿತವನ್ನು ನೀಡುವುದಾಗಿ ಜನರಿಗೆ ಮನವರಿಕೆ ಮಾಡಿಕೊಡಬೇಕು. ಆ ನಿಟ್ಟಿನಲ್ಲಿ ಅವುಗಳು ಇನ್ನೂ ದೀರ್ಘ ಹಾದಿಯನ್ನು ಸವೆಸಬೇಕಿದೆ. ಆ ಹಾದಿಯಲ್ಲಿ ಶಿಮ್ಲಾ ಮುಂದಿನ ನಿಲ್ದಾಣವಾಗಿದೆ.

ದಿನದ ಟ್ವೀಟ್

ಬಡ್ಡಿ ಸಮೇತ ವಾಪಸ್?

ಕರ್ನಾಟಕವು ನರೇಂದ್ರ ಮೋದಿ ನೇತೃತ್ವದ ಸರ್ಕಾರದಿಂದ ಇಂದು ಎರಡನೇ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸೌಲಭ್ಯ ಪಡೆದಿದ್ದು, ಇದು ಧಾರವಾಡ ಹಾಗೂ ಬೆಂಗಳೂರಿನ ನಡುವೆ ಸಂಪರ್ಕ ಕಲ್ಪಿಸುತ್ತದೆ. ಕರ್ನಾಟಕ ಸರ್ಕಾರದ ಸಚಿವರೊಬ್ಬರು ನಿನ್ನೆ ತೆರಿಗೆ ಬಗ್ಗೆ ಮಾತನಾಡುತ್ತಿದ್ದರು. ಕನ್ನಡಿಗರಾದ ನಾವು ಅದನ್ನು ಬಡ್ಡಿ ಸಮೇತ ವಾಪಸ್ ಪಡೆಯುತ್ತಿದ್ದೇವೆ.

ಬಿ.ಎಲ್.ಸಂತೋಷ್, ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ

ಕಿಡಿನುಡಿ

ಸಣ್ಣಪುಟ್ಟ ಒಳ ಒಪ್ಪಂದವನ್ನು ರಾಜಕಾರಣದಲ್ಲಿ ದೊಡ್ಡ ಸಂಗತಿ ಎಂದು ಭಾವಿಸುವುದಿಲ್ಲ. ಅಂತಹದ್ದು ಕೂಡ ಆಗಬಾರದಿತ್ತು. ನಿಜವಾದ ತಪ್ಪಿತಸ್ಥರಿಗೆ 'ಟ್ರೀಟ್‌ಮೆಂಟ್' ಕೊಡಲು ಪಕ್ಷ ಸಿದ್ಧವಿದೆ.

ಡಿ.ವಿ.ಸದಾನಂದ ಗೌಡ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಭಾನುವಾರ, 28-6-1998

- **ಮೇಲ್ಮನೆ ಚುನಾವಣೆ: ಬಿಜೆಪಿ, ಲೋಕಶಕ್ತಿಗೆ ಮೂರು ಸ್ಥಾನ**

ಬೆಂಗಳೂರು, ಜೂನ್ 27– ರಾಜ್ಯ ವಿಧಾನ ಪರಿಷತ್ತಿನ ನಾಲ್ಕು ಸ್ಥಾನಗಳಿಗೆ ಶಿಕ್ಷಕರು ಮತ್ತು ಪದವೀಧರ ಕ್ಷೇತ್ರಗಳಿಂದ ಗುರುವಾರ ನಡೆದ ಚುನಾವಣೆಯಲ್ಲಿ ಬಿಜೆಪಿ– ಲೋಕಶಕ್ತಿ ಮೈತ್ರಿಕೂಟ ಮೂರು ಸ್ಥಾನಗಳನ್ನು ಗಳಿಸಿ ಜಯಭೇರಿ ಭಾರಿಸಿದೆ. ಮತ್ತೊಂದು ಸ್ಥಾನ ಪಕ್ಷೇತರ ಅಭ್ಯರ್ಥಿಯ ಪಾಲಾಗಿದೆ.

ಲೋಕಶಕ್ತಿಯ ಅಭ್ಯರ್ಥಿಗಳಾದ ಬಸವರಾಜ ಹೊರಟ್ಟಿ ಮತ್ತು ಡಾ. ಎಂ.ಪಿ. ನಾಡಗೌಡ ಅವರು ಅನುಕ್ರಮವಾಗಿ ಪಶ್ಚಿಮ ಶಿಕ್ಷಕರ ಕ್ಷೇತ್ರ ಹಾಗೂ ವಾಯವ್ಯ ಪದವೀಧರ ಕ್ಷೇತ್ರದಿಂದ ಚುನಾಯಿತರಾಗಿದ್ದಾರೆ. ದಕ್ಷಿಣ ಪದವೀಧರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿ ಜಿ.ಮಧುಸೂದನ ಹಾಗೂ ವಾಯವ್ಯ ಶಿಕ್ಷಕರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿ ಎಸ್.ಎಸ್. ಪೂಜಾರ್ ಅವರು ಜಯ ಗಳಿಸಿದ್ದಾರೆ. ಈ ನಾಲ್ವರೂ ಮೇಲ್ಮನೆಯ ಹಾಲಿ ಸದಸ್ಯರಾಗಿದ್ದು ತಮ್ಮ ಸ್ಥಾನಗಳನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

- **ಬಾವಿಗೆ ಬಿದ್ದ ಚಿರತೆ ಗುಂಡಿಗೆ ಬಲಿ**

ತುಮಕೂರು, ಜೂನ್ 27– ನಗರದ ಚಿಕ್ಕಪೇಟೆ ಅಗ್ರಹಾರಕ್ಕೆ ಇಂದು ಮುಂಜಾನೆ ದಾರಿತಪ್ಪಿ ಬಂದ ಚಿರತೆಯೊಂದು ಜನರನ್ನು ಗಾಬರಿಗೀಡುಮಾಡಿ ತಾನೂ ಗಾಬರಿ ಹೊಂದಿ ಕೊನೆಗೆ ಪೊಲೀಸರ ಗುಂಡಿಗೆ ಬಲಿಯಾಯಿತು.

50 ವರ್ಷಗಳ ಹಿಂದೆ

ಗುರುವಾರ, 28-6-1973

- **ಗುಜರಾತ್: ಮುಖ್ಯಮಂತ್ರಿ ಪದವಿ ಬಿಡಲು ಓಜಾ ನಿರ್ಧಾರ– ಪ್ರಧಾನಿ ಅವರ ಸಮ್ಮತಿ**

ನವದೆಹಲಿ, ಜೂನ್ 27– ಮುಖ್ಯಮಂತ್ರಿ ಪದವಿ ತ್ಯಜಿಸುವ ತಮ್ಮ ನಿರ್ಧಾರವನ್ನು ಗುಜರಾತ್ ಮುಖ್ಯಮಂತ್ರಿ ಘನಶ್ಯಾಮ ಓಜಾ ಅವರು ಈ ರಾತ್ರಿ ಇಲ್ಲಿ ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ತಿಳಿಸಿದರು.

ಶ್ರೀ ಓಜಾ ಅವರ ಈ ನಿರ್ಧಾರಕ್ಕೆ ಪ್ರಧಾನಿ ಇಂದಿರಾ ಗಾಂಧಿ ಅವರು ಸಮ್ಮತಿಸಿದರೆಂದು ಗೊತ್ತಾಗಿದೆ. ಅಹಮದಾಬಾದ್ ಬಳಿ ನಡೆದ ಗುಜರಾತ್ ಶಾಸಕ ಪಕ್ಷದ ಭಿನ್ನಮತೀಯ ಸಭೆಯಲ್ಲಿ ತಮ್ಮ ವಿರುದ್ಧ ಅವಿಶ್ವಾಸ ನಿರ್ಣಯ ಅಂಗೀಕಾರವಾದ ಕೆಲವು ಗಂಟೆಗಳಲ್ಲೇ ಅವರ ರಾಜೀನಾಮೆ ನಿರ್ಧಾರ ಬಂತು.

- **ಚೀನಾದಿಂದ ನ್ಯೂಕ್ಲಿಯರ್ ಸ್ಫೋಟ**

ಮುಂಬಯಿ, ಜೂನ್ 27– ಚೀನಾ ಇಂದು ಲಾಪ್‌ನಾರ್ ಪ್ರದೇಶದಲ್ಲಿ ಒಂದರಿಂದ ಎರಡು ಮೆಗಾಟನ್ ಟಿ.ಎನ್.ಟಿ ಸಾಮರ್ಥ್ಯದ ನ್ಯೂಕ್ಲಿಯರ್ ಸಾಧನ ಸ್ಫೋಟಿಸಿತೆಂದು ಇಲ್ಲಿನ ಭಾಭಾ ಅಣುಶಕ್ತಿ ಸಂಶೋಧನಾ ಕೇಂದ್ರ ತಿಳಿಸಿದೆ.

ಚೀನಾ 1964ರ ಅಕ್ಟೋಬರ್‌ನಲ್ಲಿ ನ್ಯೂಕ್ಲಿಯರ್ ಸಾಧನಗಳ ಪ್ರಯೋಗ ಆರಂಭಿಸಿತು. ಇಂದಿನ ಪ್ರಯೋಗ ಹದಿನೈದನೆಯದು. ಬೆಳಿಗ್ಗೆ ಭಾರತೀಯ ಕಾಲಮಾನ 9.25ಕ್ಕೆ ನ್ಯೂಕ್ಲಿಯರ್ ಸಾಧನ ಪ್ರಯೋಗಿಸಿತೆಂದು ಅಣುಶಕ್ತಿ ಇಲಾಖೆಯ ಮೈಕ್ರೋ ಬಾರೋಗ್ರಾಫ್ ವ್ಯವಸ್ಥೆ ನೀಡಿರುವ ಸೂಚನೆಗಳಿಂದ ಗೊತ್ತಾಗಿದೆ.

ಸ್ನೇಹಕ್ಕೆ ಕೈ ಚಾಚಿದಷ್ಟೇ ಸರಾಗವಾಗಿ ದೂರ ತಳ್ಳಲೂ ಗೊತ್ತಿದೆ ದೊಡ್ಡಣ್ಣನಿಗೆ!

ಅಮೆರಿಕ ಸಖ್ಯ, ಎಷ್ಟಿದ್ದರೆ ಸೌಖ್ಯ?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಅಮೆರಿಕದ ಅತಿಥಿಯಾಗಿ ಶ್ವೇತಭವನಕ್ಕೆ ಭೇಟಿಯಿತ್ತಾಗ ಅವರಿಗೆ ಕೆಂಪುಹಾಸಿನ ಸ್ವಾಗತ ದೊರೆಯಿತು. ಔತಣ ಕೂಟದಲ್ಲಿ ಮೋದಿ ಅವರ ಅಭಿರುಚಿಗೆ ತಕ್ಕಂತೆ ಆಹಾರವನ್ನು ಸಿದ್ಧಪಡಿಸಲಾಗಿತ್ತು. ಅವರನ್ನು ಓಲೈಸಲೋ ಎಂಬಂತೆ ಊಟದ ಮೇಜನ್ನು ಕೇಸರಿ ಹೂಗುಚ್ಛದಿಂದ ಅಲಂಕರಿಸಲಾಗಿತ್ತು. ವ್ಯಾಪಾರ, ಪಾಲುದಾರಿಕೆ ಮತ್ತು ರಕ್ಷಣಾ ಒಪ್ಪಂದಗಳ ಹೊರತಾಗಿ ಅಮೆರಿಕದ ಅಧ್ಯಕ್ಷರು ಬೇರಾವ ವಿಷಯವನ್ನೂ ಪ್ರಸ್ತಾಪಿಸಲಿಲ್ಲ. ಅಮೆರಿಕ ಮತ್ತು ಭಾರತದ ನಡುವಿನ ಬಾಂಧವ್ಯಕ್ಕೆ ಬೇರಾವ ಸಂಗತಿಯೂ ಧಕ್ಕೆ ತರಬಾರದು ಎಂದು ಜೋ ಬೈಡನ್ ಅವರು ನಿರ್ಧರಿಸಿದಂತಿತ್ತು.

ಅಧ್ಯಕ್ಷ ಬೈಡನ್ ಪ್ರಜಾತಂತ್ರ ರಾಷ್ಟ್ರಗಳ ನಡುವೆ ಸ್ನೇಹ, ಸಹಕಾರ ಮತ್ತು ಪಾಲುದಾರಿಕೆ ಏಕೆ ಮುಖ್ಯ ಎನ್ನುವುದನ್ನು ಪುನರುಚ್ಚರಿಸಿದರು. ಒಟ್ಟಾಗಿ ಮುಂದಡಿ ಇಡುವ ವಾಗ್ದಾನ ಮಾಡಿದರು.

ಸೋಜಿಗ ಎಂದರೆ, 1947ರಲ್ಲಿ ನಾವು ಸ್ವಾತಂತ್ರ್ಯ ಪಡೆದು ಅತಿದೊಡ್ಡ ಪ್ರಜಾತಂತ್ರ ರಾಷ್ಟ್ರವಾಗಿ ಹೊರಹೊಮ್ಮಿದಾಗ, ಅಮೆರಿಕಕ್ಕೆ ಭಾರತದಂತಹ ಪ್ರಜಾತಂತ್ರ ರಾಷ್ಟ್ರದೊಂದಿಗೆ ಸ್ನೇಹ ಸಾಧಿಸಬೇಕು ಎಂಬ ಒತ್ತಾಸೆ ಇರಲಿಲ್ಲ. ಅಮೆರಿಕ ಮತ್ತು ಸೋವಿಯತ್ ನಡುವೆ ಶೀತಲ ಸಮರ ಆರಂಭವಾದಾಗ, ಭಾರತ ಅಲಿಪ್ತ ನೀತಿಗೆ ಅಂಟಿಕೊಂಡಿತು. ಅಮೆರಿಕದ ಅಧ್ಯಕ್ಷ ಟ್ರೂಮನ್, ಅಲಿಪ್ತ ದೇಶಗಳನ್ನು ಅನುಮಾನದಿಂದಲೇ ನೋಡುತ್ತಿದ್ದರು. ನೆಹರೂ ಒಬ್ಬ ಕಮ್ಯುನಿಸ್ಟ್ ಎಂಬುದು ಅವರ ಅಭಿಪ್ರಾಯವಾಗಿತ್ತು. ಭಾರತವನ್ನು ಆ ಕಾರಣದಿಂದಲೇ ಉಪೇಕ್ಷಿಸಿದರು. ಅಲಿಪ್ತ ಒಕ್ಕೂಟದ ನಾಯಕತ್ವವನ್ನು ನೆಹರೂ ವಹಿಸಿಕೊಂಡರಾದರೂ, ಸೋವಿಯತ್ ಬಗೆಗೆ ಅವರಿಗೆ ವಿಶೇಷ ಮಮಕಾರವಿತ್ತು. ಭಾರತವನ್ನು 'ಸೋವಿಯತ್ ಏಜೆಂಟ್' ಎಂಬಂತೆ ಅಮೆರಿಕ ನೋಡಲು ಆರಂಭಿಸಿತು.

ಐಸೆನ್ ಹೋವರ್ ಅವರ ಅವಧಿಯಲ್ಲಿ, ಅಮೆರಿಕದ ವಿದೇಶಾಂಗ ಸಚಿವ ಜಾನ್ ಡಲ್ಲಸ್ 'ನೀವು ನಮ್ಮೊಂದಿಗಿದ್ದೀರಿ ಇಲ್ಲವೇ ನಮ್ಮ ವಿರುದ್ಧ ಇದ್ದೀರಿ' ಎಂಬ ಗೆರೆ ಎಳೆದು ಅಮೆರಿಕದ ಸ್ನೇಹ ವಲಯವನ್ನು ಗುರುತಿಸಿದರು. ಆಗಷ್ಟೇ ಸ್ವತಂತ್ರಗೊಂಡು ಮಂದಗತಿಯ ಹೆಜ್ಜೆ ಇಡುತ್ತಿದ್ದ ಭಾರತಕ್ಕೆ ಸಂಪನ್ಮೂಲಗಳ ಅವಶ್ಯಕತೆ ಇತ್ತು. ಅಭಿವೃದ್ಧಿ ಹೊಂದಿದ ಪ್ರಬಲ ಪ್ರಜಾತಂತ್ರ ರಾಷ್ಟ್ರ ಅಮೆರಿಕ, ಅಭಿವೃದ್ಧಿ ಹೊಂದುತ್ತಿರುವ ಪ್ರಜಾತಂತ್ರ ರಾಷ್ಟ್ರದ ಜೊತೆ ನಿಲ್ಲಬೇಕು ಎಂದು ನೆಹರೂ ಬಯಸಿದ್ದರು. ಆದರೆ ಅಮೆರಿಕ ಪ್ರತಿಲಾಭ ನಿರೀಕ್ಷಿಸಿತು. ಆರ್ಥಿಕ ಸಹಾಯಕ್ಕೆ ಪ್ರತಿಯಾಗಿ ಅಮೆರಿಕದ ನಿಲುವುಗಳನ್ನು ವಿಶ್ವಸಂಸ್ಥೆಯಲ್ಲಿ ಭಾರತ ಬೆಂಬಲಿಸಬೇಕು ಎಂದಿತು. ಗೆಳೆತನ ಸಾಧ್ಯವಾಗಲಿಲ್ಲ.

ಇಂದಿರಾ ಗಾಂಧಿ ಅವರ ಆಡಳಿತದ ಅವಧಿಯಲ್ಲೂ ಭಾರತ ಮತ್ತು ಅಮೆರಿಕದ ನಡುವೆ ಸ್ನೇಹ ಚಿಗುರಲಿಲ್ಲ. 1966ರಲ್ಲಿ ನಾವು ಭೀಕರ ಬರಗಾಲ ಎದುರಿಸಿದಾಗ, ಇಂದಿರಾ ಅವರು ಅಮೆರಿಕದತ್ತ ಸಹಾಯಕ್ಕಾಗಿ ನೋಡಿದ್ದರು. ಅಮೆರಿಕದ ವಿಯೆಟ್ನಾಂ ನೀತಿಯನ್ನು ಇಂದಿರಾ ಟೀಕಿಸಿದ್ದರು ಎಂಬುದನ್ನೇ ನೆಪವಾಗಿ ಇಟ್ಟುಕೊಂಡ ಲಿಂಡನ್ ಜಾನ್ಸನ್, ನೆರವು ವಿಳಂಬವಾಗುವಂತೆ ನೋಡಿಕೊಂಡರು. ಆಗ ಭಾರತವು ಪ್ರಜಾಪ್ರಭುತ್ವ ರಾಷ್ಟ್ರ, ಸಂಕಷ್ಟದ ಸಮಯದಲ್ಲಿ ಅದರ ಜೊತೆಗೆ ನಾವು ನಿಲ್ಲಬೇಕು ಎಂದು ಅಮೆರಿಕಕ್ಕೆ ಅನ್ನಿಸಿರಲಿಲ್ಲ!

ನಂತರ ಭಾರತ ಮತ್ತು ಪಾಕಿಸ್ತಾನದ ನಡುವೆ ಬಿಕ್ಕಟ್ಟು ಏರ್ಪಟ್ಟಾಗಲೆಲ್ಲಾ, ಅರೆ ಪ್ರಜಾಪ್ರಭುತ್ವ ಮತ್ತು ಸೇನಾ ಸರ್ವಾಧಿಕಾರದ ನಡುವೆ ಜೀಕುತ್ತಿದ್ದ ಪಾಕಿಸ್ತಾನವೇ ಅಮೆರಿಕದ ಆಯ್ಕೆಯಾಯಿತು!

ಬಾಂಗ್ಲಾ ವಿಮೋಚನಾ ಯುದ್ಧದ ಸಮಯದಲ್ಲಿ ನಿಕ್ಸನ್ ಮತ್ತು ಕಿಸ್ಸಿಂಜರ್ ಜೋಡಿ ಭಾರತದ ಕುರಿತು ಅಪಶಬ್ದಗಳನ್ನು ನುಡಿದಿತ್ತು. ತಮ್ಮ ಹಿತಾಸಕ್ತಿಗೆ ಪೂರಕವಾಗಿ ಕಮ್ಯುನಿಸ್ಟ್ ಚೀನಾದ ಜೊತೆ ಸ್ನೇಹಕ್ಕೆ ಅವರು ಹಾತೊರೆದಿದ್ದರು!

90ರ ದಶಕದಲ್ಲಿ ಭಾರತದಲ್ಲಿ ಹೊಸ ಗಾಳಿ ಬೀಸಿತು. ಅಂದಿನ ಪ್ರಧಾನಿ ಪಿ.ವಿ.ನರಸಿಂಹ ರಾವ್ ಮತ್ತು ಅಂದಿನ ಹಣಕಾಸು ಸಚಿವ ಮನಮೋಹನ್ ಸಿಂಗ್ ಆರ್ಥಿಕ ಬೆಳವಣಿಗೆಗೆ ವೇಗ ತಂದರು. ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದಿಂದಾಗಿ ಭಾರತೀಯರ ಕನಸುಗಳಿಗೆ ರೆಕ್ಕೆ ಬಂತು. ವಾಜಪೇಯಿ ಅವರ ಆಡಳಿತಾವಧಿಯಲ್ಲಿ ಪೋಕ್ರಾನ್‌ನಲ್ಲಿ ನಮ್ಮ ಸಾಮರ್ಥ್ಯವನ್ನು ಒರೆಗೆ ಹಚ್ಚಿದಾಗ ಮೊದಲಿಗೆ ಅಮೆರಿಕ ಸಿಟ್ಟಾಯಿತು. ದಿಗ್ಬಂಧನ ಹೇರಿತು. ಆದರೆ ನಂತರ ಬಿಲ್ ಕ್ಲಿಂಟನ್ ಭಾರತಕ್ಕೆ ಭೇಟಿಯಿತ್ತರು. ಸಂಬಂಧ ಚಿಗುರಲಾರಂಭಿಸಿತು. ಮನಮೋಹನ್ ಸಿಂಗ್ ಮತ್ತು ಜಾರ್ಜ್ ಬುಷ್ ನಾಗರಿಕ ಪರಮಾಣು ಒಪ್ಪಂದಕ್ಕೆ ಶ್ರೀಕಾರ ಬರೆದರು. ಮನಮೋಹನ್ ಸಿಂಗ್ ಅವರಿಗೆ ಒಬಾಮ ಆಡಳಿತ ಕೆಂಪುಹಾಸಿನ ಸ್ವಾಗತ ಕೋರಿ ಸತ್ಕರಿಸಿತು.

2014ರಲ್ಲಿ ಮೋದಿ ಅವರು ಪ್ರಧಾನಿಯಾದ ಮೇಲೆ ಅಮೆರಿಕ ಮತ್ತು ಭಾರತದ ನಡುವಿನ ಸ್ನೇಹಕ್ಕೆ ಹೊಸ ಅರ್ಥ ಬಂತು. ಪ್ರಬಲ ರಾಷ್ಟ್ರಗಳ ಜೊತೆ ಏಕರೀತಿಯ ಸಂಬಂಧ ಕಾಯ್ದುಕೊಳ್ಳುವ, ಆದರ್ಶಕ್ಕೆ ಜೋತು ಬೀಳದೆ ಭಾರತದ ಹಿತಾಸಕ್ತಿಯನ್ನಷ್ಟೇ ಗಮನದಲ್ಲಿ ಇಟ್ಟುಕೊಂಡು ಜಾಗತಿಕವಾಗಿ ಹೆಜ್ಜೆಯಿಡುವ ಪ್ರಕ್ರಿಯೆ ಆರಂಭವಾಯಿತು. 2016ರಲ್ಲಿ ಟ್ರಂಪ್ ಅವರು ಅಧ್ಯಕ್ಷರಾದ ಬಳಿಕವಂತೂ, ಮೋದಿ ಮತ್ತು ಟ್ರಂಪ್ ಅವರು ಎರಡು ದೇಶಗಳ ನಡುವಿನ ಸಖ್ಯವನ್ನು ಮುಂದಿನ ಹಂತಕ್ಕೆ ಕೊಂಡೊಯ್ದರು. ಅಮೆರಿಕದ ಪ್ರತಿಸ್ಪರ್ಧಿ ಚೀನಾವೇ ವಿನಾ ರಷ್ಯಾ ಅಲ್ಲ ಎಂಬುದು ಟ್ರಂಪ್ ಅವರಿಗೆ ಮನವರಿಕೆಯಾಗಿತ್ತು. ಇತ್ತ ಭಾರತದ ಗಡಿಯಲ್ಲಿ ಚೀನಾದ ಉಪಟಳ ತಡೆಯಲು ಅಮೆರಿಕದೊಂದಿಗೆ ಗುರುತಿಸಿಕೊಳ್ಳುವ ಜರೂರು ನಮಗಿತ್ತು. ಮೋದಿ ಮತ್ತು ಟ್ರಂಪ್ ಅವರ ಆಲಿಂಗನವು ಚೀನಾಕ್ಕೆ ಸ್ಪಷ್ಟ ಸಂದೇಶ ರವಾನಿಸಿತು. ಹೌಡಿ ಮೋದಿ ಸಮಾರಂಭ ಅಮೆರಿಕದಲ್ಲಿ ಕಳೆಕಟ್ಟಿತು.

ಅದಾಗ ಒಂದಿಷ್ಟು ಟೀಕೆಗಳೂ ಬಂದಿದ್ದವು. ಪ್ರಧಾನಿ ಮೋದಿ ಅಮೆರಿಕದ ರಾಜಕೀಯವನ್ನು ಪ್ರಭಾವಿಸುವ ನಡೆ ಪ್ರದರ್ಶಿಸುತ್ತಿದ್ದಾರೆ. ಒಂದೊಮ್ಮೆ ಟ್ರಂಪ್ ಅವರು ಸೋತು, ಡೆಮಾಕ್ರಟಿಕ್ ಪಕ್ಷ ಅಧಿಕಾರಕ್ಕೆ ಬಂದರೆ, ಭಾರತ ಮತ್ತು ಅಮೆರಿಕದ ಸಂಬಂಧಕ್ಕೆ ಧಕ್ಕೆ ಆಗಲಿದೆ ಎನ್ನಲಾಗಿತ್ತು. ಚುನಾವಣೆಯಲ್ಲಿ ಟ್ರಂಪ್ ಸೋತರು. ಬೈಡನ್ ಅಧ್ಯಕ್ಷರಾದರು. ಆದರೆ ಭಾರತ- ಅಮೆರಿಕದ ನಡುವಿನ ಸಂಬಂಧ ಕೆಡಲಿಲ್ಲ. ಅಸಲಿಗೆ ಯಾವುದೇ ಎರಡು ದೇಶಗಳ ನಡುವಿನ ಸಂಬಂಧವನ್ನು ಗಟ್ಟಿಗೊಳಿಸುವುದು ಅಥವಾ ಟೊಳ್ಳಾಗಿಸುವುದು ಆಯಾ ಸಂದರ್ಭ ಮತ್ತು ಹಿತಾಸಕ್ತಿಗಳೇ ವಿನಾ ಬೇರೇನೂ ಅಲ್ಲ.

ಹಾಗಾಗಿಯೇ ನಾವು ರಷ್ಯಾದಿಂದ ಎಸ್- 400 ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ಖರೀದಿಸಿದರೂ, ಉಕ್ರೇನ್ ಯುದ್ಧದ ವಿಷಯದಲ್ಲಿ ಅಮೆರಿಕದ ಒತ್ತಡಕ್ಕೆ ಮಣಿಯದಿದ್ದರೂ, ರಷ್ಯಾದ ಜೊತೆ ವಾಣಿಜ್ಯಿಕ ವ್ಯವಹಾರವನ್ನು ಮುಂದುವರಿಸಿದರೂ ಅಮೆರಿಕಕ್ಕೆ ಸಿಟ್ಟು ಬರಲಿಲ್ಲ. ಕಾರಣ, ಚೀನಾ ಮತ್ತು ರಷ್ಯಾವನ್ನು ಎದುರಿಸಲು, ಇಂಡೊ ಪೆಸಿಫಿಕ್ ಪ್ರಾಂತ್ಯದಲ್ಲಿ ಹಿತಾಸಕ್ತಿ ಕಾಯ್ದುಕೊಳ್ಳಲು, ಬೆಳೆಯುತ್ತಿರುವ ಆರ್ಥಿಕತೆಯಾದ, ಸೇನೆಯ ದೃಷ್ಟಿಯಿಂದಲೂ ಬಲಿಷ್ಠವಾದ ಭಾರತದೊಂದಿಗಿನ ಸ್ನೇಹ ಅಗತ್ಯ ಎಂಬುದು ಅಮೆರಿಕಕ್ಕೆ ತಿಳಿದಿತ್ತು. ಹಾಗಾಗಿ ಮೋದಿ ಅವರಿಗೆ ಕೆಂಪುಹಾಸಿನ ಸ್ವಾಗತ ಕೋರಲು ಬೈಡನ್ ಬಯಸಿದರು.

ಹಾಗಾದರೆ ಭಾರತ ಈ ಸಂದರ್ಭವನ್ನು ಹೇಗೆ ನೋಡಬೇಕು? ಭಾರತದ ಮಟ್ಟಿಗಂತೂ ನಾವು ಆರ್ಥಿಕವಾಗಿ ಬೆಳೆಯಲು, ಆತ್ಮನಿರ್ಭರವಾಗಲು ಇದು ಸುಸಂದರ್ಭ. ಭಾರತ ಮತ್ತು ಅಮೆರಿಕದ ನಡುವೆ ರಕ್ಷಣೆ, ಬಾಹ್ಯಾಕಾಶ, ಸೆಮಿಕಂಡಕ್ಟರ್ ವಲಯಕ್ಕೆ ಸಂಬಂಧಿಸಿದಂತೆ ಪ್ರಮುಖ ಒಪ್ಪಂದಗಳಾಗಿವೆ. ಎಫ್ 414 ಎಂಜಿನ್ ತಂತ್ರಜ್ಞಾನದ ವರ್ಗಾವಣೆ ನಮ್ಮನ್ನು ಇನ್ನಷ್ಟು ಸಬಲಗೊಳಿಸಲಿದೆ. ಚೀನಾ ಕೇಂದ್ರಿತ ಪೂರೈಕೆ ಜಾಲಕ್ಕೆ ಪರ್ಯಾಯ ಹುಡುಕಲು ಅಮೆರಿಕವು ಭಾರತದತ್ತ ನೋಡುತ್ತಿದೆ. ಈ ಅವಕಾಶವನ್ನು ಭಾರತ ತ್ವರಿತ ಅನುಷ್ಠಾನಗಳ ಮೂಲಕ ಎರಡೂ ಕೈಗಳಿಂದ ಬಾಚಿಕೊಳ್ಳಬೇಕಿದೆ.

ಆದರೆ ಒಂದು ಅಂಶ ನೆನಪಿರಬೇಕು. ಅಮೆರಿಕ ತನ್ನನ್ನು ಅತ್ಯಂತ ಹಳೆಯ ಪ್ರಜಾಪ್ರಭುತ್ವ ರಾಷ್ಟ್ರ ಎಂದು ಕರೆದುಕೊಂಡರೂ, ಮೌಲ್ಯಗಳ ಬಗ್ಗೆ ಮಾತನಾಡಿದರೂ, ಅದು ತನ್ನ ಹಿತಾಸಕ್ತಿಯನ್ನು ಗಮನದಲ್ಲಿ ಇರಿಸಿಕೊಂಡೇ ಪ್ರತಿ ಹೆಜ್ಜೆ ಇಡುತ್ತದೆ. ಸ್ನೇಹಕ್ಕೆ ಕೈ ಚಾಚಿದಷ್ಟೇ ಸರಾಗವಾಗಿ ಸಂದರ್ಭ ಬದಲಾದಾಗ ದೂರ ತಳ್ಳುತ್ತದೆ. ವ್ಯಾವಹಾರಿಕವಾಗಿ ಮತ್ತು ಶತ್ರು ರಾಷ್ಟ್ರಗಳಿಗೆ ಸಂದೇಶ ರವಾನಿಸಲು ಅಮೆರಿಕದ ಜೊತೆ ನಾವು ಎಷ್ಟೇ ಗುರುತಿಸಿಕೊಂಡರೂ, ನ್ಯಾಟೊ ಪ್ಲಸ್ ಅಥವಾ ಇನ್ನಾವುದೇ ಬಗೆಯ ಸೇನಾ ಒಕ್ಕೂಟದ ಭಾಗವಾಗಿ ತನ್ನದಲ್ಲದ ಯುದ್ಧದಲ್ಲಿ ಭಾರತ ಭಾಗಿಯಾಗುವಂತೆ ಆಗಬಾರದು. ಆ ಎಚ್ಚರವಂತೂ ನಮ್ಮಲ್ಲಿ ಇರಬೇಕು.

ಚುರುಮುರಿ



ಪಟ್ಟುಗಳ ಪಾಠ!

• ತುರುವೇಕೆರೆ ಪ್ರಸಾದ್

'**ನಮ್** ಒಸ ಶಾಸಕರಿಗೆ ಅಭಿನಂದನೆ ಸಲ್ಲಣ ಅಂತ ಓಗಿದ್ದೆ. ಆದ್ರೆ ಸಾಹೇಬ್ರು ಅದ್ಯಾವುದೋ ಟ್ರೈನಿಂಗ್ಗೆ ಓಗವ್ರಂತೆ' ಎಂದ ಮಾದೇವ.

'ಹೌದಾ? ಅವ್ರಿಗೂ ಟ್ರೈನಿಂಗ್ ಇರ್ತದಾ? ಕುರಿತೋದದಯಂ, ತರಬೇತಿ ಪಡೆಯದೆಯಂ ಸಿದ್ಧಿಪ ಏಕೈಕ ವಿದ್ಯೆಯೇ ರಾಜಕೀಯ. ಅವರಿಗೆಂತ ತರಬೇತಿನೋ?' ಕೇಳಿದ ಕಲ್ಲೇಶಿ.

'ಅಂಗಲ್ಲಲೆ, ಒಸ್ದಾಗಿ ವಿದಾನಸೌಧಕ್ಕೆ ಬಂದಿರ್ತಾರಲ್ವಾ? ಎಂಗ್ ಮಾತಾಡ್ಬೇಕು, ಎಂಗ್ ಪ್ರಶ್ನೆ ಕೇಳ್ಬೇಕು ಅದ್ನೆಲ್ಲಾ ಯೋಳ್ ಕೊಡ್ತಾರಂತೆ'.

'ಏನ್ ಮಾತಾಡ್ಬೇಕು ಅನ್ನಾಕಿಂತ ಏನ್ ಮಾತಾಡ್ಬಾರ್ದು ಅಂತ ಯೋಳ್‌ಕೊಡ್ಬೇಕು. ಮೆದ್ಲು ಐತಾ, ಕಿಡ್ನಿ ಐತಾ ಅಂತೆಲ್ಲಾ ಮಾತಾಡ್ದಂಗ್ ಬುದ್ದಿ ಯೋಳ್ಬೇಕು' ಎಂದ ಗುದ್ಲಿಂಗ.

'ಕಾಲ್ ಕೆರ್ಕಂಡು ಗುಟ್ರು ಆಕುದ್ರೇಯ ಗಮ್ಮತ್ತು? ರಾಜಕೀಯ ಏನ್ ಸಂಗೀತ್ ಕಛೇರಿ ನೇನಾ ತಲೆ ಆಡುಸ್ಕಂಡು, ತಾಳ ಆಕ್ಕಂಡು ಕುಂತಿರಾಕೆ? ಆಮೇಲೆ ಈ ರಾಜಕೀಯ್ದೋರು ಇನ್ನೂ ಔಟ್‌ಡೇಟೆಡ್ ಸಿ.ಡಿ.ನಲ್ಲೇ ಅವ್ರೆ. ಹಗರಣನೆಲ್ಲಾ ಪೆನ್‌ಡ್ರೈವ್, ಚಿಪ್ಪಲ್ಲಿ ರೆಕಾರ್ಡ್ ಮಾಡಿ ಅಂತ ಯೋಳಿ ಅಪ್‌ಡೇಟ್ ಮಾಡ್ಬೇಕು'.

'ಇವ್ರಿಗೆ ಪರ್ಸಂಟೇಜ್ ಲೆಕ್ಕ ಅಂದ್ರೆ ಪ್ರಾಣ ಕಣ್ರಲಾ... ಬಿಲ್ಗೆ ಪಾಸ್ ಪರ್ಸಂಟೇಜ್ ಮಡಿಕ್ಕಳಿ, ಫಸ್ಟ್ ಕ್ಲಾಸ್ಗೆ ಓಗ್ಬೇಡಿ ಅಂತ ಯೋಳ್ಬೇಕು'.

'ಹ್ಞೂಂ ಕಣಪ್ಪ, ಅಂಗೇ ಈ ಆಪರೇಶನ್ ಮಾಡಾದು, ರೆಸ್ಟೋರೆಂಟಾಗೆ ಟೆಂಟ್ ಹೊಡೆಯೋದು, ಪಾರ್ಟಿಲಿ ಸಿಪ್ ಮಾಡೋದು, ಮೊಗಸಾಲೇಲಿ ಗಾಸಿಪ್ ಮಾಡೋದು ಎಲ್ಲಾ ಯೋಳ್ ಕೊಟ್ಟಿರ್ಬೇಕು, ಆಪತ್ತಲ್ಲಿ ಇವೇ ಕಾಪಾಡೋದು ನೋಡು'.

'ಒಟ್ನಲ್ಲಿ ನಮ್ ಸಾಸಕರು ಸ್ಕ್ಯಾಂಡಲ್‌ನಂಗೆ ಗಮ್ ಅಂತಿರ್ಬೇಕು, ಸ್ಕ್ಯಾಂಡಲ್ ಮಾಡ್ಕಬಾರದು ಅಂತ ಯೋಳ್ಕೊಡ್ಬೇಕು'.

'ಸುಮ್ಕಿರಪ್ಪ, ಸ್ಯಾಂಡಲ್ ಎಲ್ಲಿ ಗಮ್ ಅಂತದೆ? ಅದು ಗಬ್ ನಾರೇ ಕಮಲ ದಬಾಕ್ಕಂಡಿದ್ದು. ನಮ್ ಶಾಸಕರೂ ಮುಂದೆ ಇದೇ ತರ ಹೊಸಬರಿಗೆ ಟ್ರೈನಿಂಗ್ ಕೊಡೊ 'ಸಂಪನ್ಮೂಲ' ವ್ಯಕ್ತಿಗಳಾಗ್ಬೇಕು'.

'ಹೆಂಗೆ? ಈಗ ರಾಜಕೀಯ ಪಟ್ಟು ಹೇಳ್ಕೊಡೋ ಕೆಲವ್ರು ಮಾಡ್ಕಂಡವ್ರಲ್ಲ, ಸಂಪತ್ತು, ಅದರ ಮೂಲ ಎರಡೂ ಗೊತ್ತಾಗದಂಗೆ, ಅಂಗಾ?' ಕೇಳಿದ ಗುದ್ಲಿಂಗ. ಎಲ್ಲಾ ಗೊಳ್ಳೆಂದು ನಕ್ಕರು.

ಸಂಗತ

'ಶಾಸ್ತ್ರ'ದ ಶಾಲಾ ಭೇಟಿ ಸಲ್ಲ

ಶಾಲೆ ಮತ್ತು ಶಿಕ್ಷಕರ ಕಾರ್ಯನಿರ್ವಹಣೆಯಲ್ಲಿನ ದೋಷಗಳನ್ನು ಕಂಡು ಹಿಡಿಯುವುದೇ ಅಧಿಕಾರಿಗಳ ಶಾಲಾ ಭೇಟಿಯ ಪ್ರಮುಖ ಉದ್ದೇಶ ಆಗಿರಬಾರದು

• ಡಾ. ಎಚ್.ಬಿ.ಚಂದ್ರಶೇಖರ್

ಶಾಲೆಗಳು ಮತ್ತು ಶಿಕ್ಷಕರ ಕಾರ್ಯನಿರ್ವಹಣೆಯ ಸ್ವರೂಪ ಹಾಗೂ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟವನ್ನು ಅರ್ಥ ಮಾಡಿಕೊಳ್ಳಲು ಶಿಕ್ಷಣ ಇಲಾಖೆಯ ಅಧಿಕಾರಿ ಹಾಗೂ ಮೇಲ್ವಿಚಾರಣಾ ಸಿಬ್ಬಂದಿಯು ಶಾಲಾ ಭೇಟಿಗೆ ಮುಂದಾಗುತ್ತಾರೆ. ವ್ಯವಸ್ಥಿತವಾದ ಶಾಲಾ ಭೇಟಿಗಳು ಶೈಕ್ಷಣಿಕ ಗುಣಮಟ್ಟದ ವೃದ್ಧಿಗೆ ಸಹಾಯಕವಾಗುತ್ತವೆ. ಈ ಭೇಟಿಗಳು ಗಮನಕೇಂದ್ರಿತ, ಸ್ಫೂರ್ತಿಯುತ, ಪ್ರೇರಣೆದಾಯಕ, ಸೃಜನಶೀಲ ಮತ್ತು ಸೌಹಾರ್ದವಾಗಿ ಇರಬೇಕು.

ಶಾಲೆ ಮತ್ತು ಶಿಕ್ಷಕರ ಕಾರ್ಯನಿರ್ವಹಣೆಯಲ್ಲಿನ ದೋಷಗಳನ್ನು ಕಂಡುಹಿಡಿಯುವುದೇ ಶಾಲಾ ಭೇಟಿಯ ಪ್ರಮುಖ ಉದ್ದೇಶ ಆಗಿರಬಾರದು. ಆದಾಗ್ಯೂ ಶಾಲೆ ಮತ್ತು ಶಿಕ್ಷಕರ ಕಾರ್ಯನಿರ್ವಹಣೆಯನ್ನು ಯಾವ ಅಂಶಗಳಿಗೆ ಸಂಬಂಧಿಸಿದಂತೆ ಹೇಗೆ ಉತ್ತಮಪಡಿಸಿಕೊಳ್ಳಬೇಕು ಎಂಬ ಕುರಿತಾದ ವಿವರಗಳನ್ನು ಯಾವುದೇ ಹಿಂಜರಿಕೆಯಿಲ್ಲದೆ ನವಿರಾಗಿ ತಿಳಿಸಲು ಹಿಂಜರಿಯಬಾರದು. ಕೆಲ ನಿಮಿಷಗಳ ಅವಧಿಗೆ ಮಾತ್ರ ಶಾಲೆಗೆ ಭೇಟಿ ನೀಡಿ, ಮುಖ್ಯೋಪಾಧ್ಯಾಯರ ಕಚೇರಿಯಲ್ಲಿ ಕುಳಿತು, ಶಾಲಾ ಸಂದರ್ಶನ ನಮೂನೆಯನ್ನು ಭರ್ತಿ ಮಾಡುವ ಶಾಸ್ತ್ರದ ಶಾಲಾ ಭೇಟಿಯಿಂದ ಹೆಚ್ಚಿನ ಉಪಯೋಗವಾಗದು.

ಹೇಗೆ ಪ್ರತಿ ಮಗು ಅಥವಾ ವಿದ್ಯಾರ್ಥಿ ಅನನ್ಯವೋ ಅದೇ ರೀತಿ ಪ್ರತಿ ಶಾಲೆಯೂ ವಿಭಿನ್ನ, ವಿಶಿಷ್ಟ ಹಾಗೂ ಅನನ್ಯ. ಶಾಲೆಯು ತನ್ನ ಅನೇಕ ವರ್ಷಗಳ ಕಾರ್ಯನಿರ್ವಹಣೆಯಲ್ಲಿ ಒಂದಷ್ಟು ಉತ್ತಮ ಅಂಶಗಳನ್ನು ಮೈಗೂಡಿಸಿಕೊಂಡಿರುವಂತೆಯೇ ಒಂದಷ್ಟು ಮಿತಿ ಅಥವಾ ಕೊರತೆಯ ಅಂಶಗಳನ್ನೂ ಹೊಂದಿರುತ್ತದೆ. ಒಂದೆರಡು ಶಾಲಾ ಭೇಟಿಗಳಿಂದ ಒಂದು ಶಾಲೆಯ ಸ್ವರೂಪವನ್ನೇ ಬದಲಾಯಿಸಿಬಿಡುತ್ತೇನೆ ಎಂಬ ಮನೋಭಾವದಿಂದ ಭೇಟಿ ನೀಡಬಾರದು. ಯಾವುದೇ ಬದಲಾವಣೆ ಆಗಲು ಸೂಕ್ತ ಸಮಯ ಅಗತ್ಯವಾಗಿ ಬೇಕಾಗುತ್ತದೆ. ಹೀಗಾಗಿ, ಶಾಲೆಗಳ ಕಾರ್ಯನಿರ್ವಹಣೆಯ ಸುಧಾರಣೆಗೂ ಸಮಯ ತಗಲುತ್ತದೆ ಎಂಬ ಧೋರಣೆಯಿಂದ ಅಧಿಕಾರಿ, ಸಿಬ್ಬಂದಿಯು ತಾಳ್ಮೆ, ಸಾವಧಾನದಿಂದ ಶಾಲಾ ಭೇಟಿಯ ಪ್ರಕ್ರಿಯೆಯನ್ನು ಕೈಗೊಳ್ಳುವುದು ಸೂಕ್ತ.

ಶಾಲೆಯಲ್ಲಿರುವ ಮೂಲ ಸೌಕರ್ಯಗಳು, ಕಾರ್ಯನಿರ್ವಹಣೆ, ಶಿಕ್ಷಕರ ಕಾರ್ಯತತ್ಪರತೆ, ವಿದ್ಯಾರ್ಥಿಗಳ ಕಲಿಕೆಯ ಸ್ಥಿತಿ, ಶಾಲೆ ಅನುಷ್ಠಾನ ಮಾಡುತ್ತಿರುವ ಉತ್ತಮ ಮತ್ತು ಪರಿಣಾಮಕಾರಿ ಅಭ್ಯಾಸಗಳು, ಶಿಕ್ಷಕರ ನವೀನ ಬೋಧನಾ ಪ್ರಯೋಗಗಳು, ವಿದ್ಯಾರ್ಥಿಗಳಲ್ಲಿ ಇರಬಹುದಾದ ವಿಶಿಷ್ಟ ಪ್ರತಿಭೆಯ ಸ್ವರೂಪ, ಪೋಷಕರು, ಶಾಲಾಭಿವೃದ್ಧಿ ಸಮಿತಿ, ಹಳೆಯ ವಿದ್ಯಾರ್ಥಿಗಳು, ಸಮುದಾಯದ ಸಹಭಾಗಿತ್ವ, ಶಾಲೆಯ ಅಗತ್ಯಗಳಂತಹ ಅಂಶಗಳನ್ನು ಶಾಲಾ ಭೇಟಿಗಳ ಮೂಲಕ ತಿಳಿದುಕೊಳ್ಳಲು ಸಾಧ್ಯವಿದೆ.

ಕೆಲವೊಮ್ಮೆ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರಿಂದ ಕೆಲವು ದಾಖಲಾತಿ, ವಿವಿಧ ಮಾಹಿತಿಗಳ ಸಂಗ್ರಹಕ್ಕೆ ಮಾತ್ರ ಶಾಲಾ ಭೇಟಿಗಳು ಸೀಮಿತವಾಗುತ್ತವೆ. ಇದರ ಜೊತೆಗೆ ಶಾಲೆಯ ವಿದ್ಯಾರ್ಥಿಗಳ ಕಲಿಕಾ ಮಟ್ಟದ ಸ್ಥಿತಿಯನ್ನು ಶಾಲಾ ಭೇಟಿಯಿಂದ ಕಂಡುಕೊಂಡು, ಕಲಿಕಾ ಮಟ್ಟದ ಅಭಿವೃದ್ಧಿಗೆ ಶಿಕ್ಷಕರು ಕೈಗೊಳ್ಳಬೇಕಾದ ಕಾರ್ಯತಂತ್ರಗಳ ಬಗ್ಗೆ ಸಲಹೆ, ಸೂಚನೆ, ಮಾರ್ಗದರ್ಶನವನ್ನು ಪರಿಶೀಲನಾ ಅಧಿಕಾರಿಗಳು ನೀಡುವುದು ಪ್ರಮುಖವಾದ ಅಂಶವಾಗಿದೆ. ಆಯಾ ತರಗತಿಗೆ ನಿಗದಿಪಡಿಸಿದ ಕಲಿಕಾ ಫಲಗಳನ್ನು ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಕರಗತ ಮಾಡಿಕೊಂಡಿದ್ದಾರೆ ಎಂಬುದನ್ನು ಕಂಡುಕೊಳ್ಳಬೇಕು.

ಶಾಲಾ ಭೇಟಿಗಳು ನಿರಂತರವಾಗಿದ್ದಲ್ಲಿ ಪರಿಣಾಮಕಾರಿಯಾಗುತ್ತವೆ. ಒಂದು ನಿರ್ದಿಷ್ಟ ಶಾಲೆಗೆ ಒಮ್ಮೆ ಭೇಟಿ ನೀಡಿ, ಶಾಲೆ, ಶಿಕ್ಷಕರ ಕಾರ್ಯನಿರ್ವಹಣೆ ಮತ್ತು ವಿದ್ಯಾರ್ಥಿಗಳ ಕಲಿಕಾ ಮಟ್ಟದ ಕುರಿತು ಅರ್ಥ ಮಾಡಿಕೊಂಡು, ಬದಲಾವಣೆ, ಬೆಳವಣಿಗೆಗೆ ನೀಡಿದ ಸಲಹೆ, ನಿರ್ದೇಶನವನ್ನು ಶಿಕ್ಷಕರು ಯಾವ ರೀತಿ ಅನುಪಾಲನೆ ಮಾಡಿದ್ದಾರೆ ಎಂಬುದನ್ನು ನಂತರದ ಅನುಸರಣಾ ಶಾಲಾ ಭೇಟಿಗಳಲ್ಲಿ ಕಂಡುಕೊಳ್ಳಬೇಕು. ಹೀಗೆ ವರ್ಷದಲ್ಲಿ ಒಂದು ಶಾಲೆಗೆ ಕನಿಷ್ಠ 6ರಿಂದ 7 ಬಾರಿ ಭೇಟಿ ನೀಡಿದಲ್ಲಿ ಪರಿಣಾಮಕಾರಿಯಾಗುತ್ತದೆ. ಈ ದಿಸೆಯಲ್ಲಿ, ರಾಜ್ಯದಲ್ಲಿರುವ ಎಲ್ಲ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಇಲಾಖೆಯಲ್ಲಿ

ಕಾರ್ಯನಿರ್ವಹಿಸುತ್ತಿರುವ ರಾಜ್ಯ, ವಿಭಾಗ, ಜಿಲ್ಲಾ ಮತ್ತು ಬ್ಲಾಕ್ ಹಂತದ ಎಲ್ಲಾ ಶಿಕ್ಷಣ ಅಧಿಕಾರಿಗಳು ಹಾಗೂ ಶಿಕ್ಷಣ ಸಂಯೋಜಕರು (ಇ.ಸಿ.ಒ), ಕ್ಷೇತ್ರ ಸಂಪನ್ಮೂಲ ವ್ಯಕ್ತಿ (ಬಿ.ಆರ್.ಪಿ.), ಸಮೂಹ ಸಂಪನ್ಮೂಲ ವ್ಯಕ್ತಿಗಳಿಗೆ (ಸಿ.ಆರ್.ಪಿ) 'ತಲಾ ಇಷ್ಟು ಮತ್ತು ಇಂಥಿಂಥ ಶಾಲೆ'ಗಳೆಂದು ಹಂಚಿಕೆ ಮಾಡಿ, ನಿಯಮಿತವಾಗಿ ಭೇಟಿಗಳನ್ನು ಕೈಗೊಳ್ಳಲು ಕ್ರಮ ವಹಿಸಿದಲ್ಲಿ ಪರಿಣಾಮಕಾರಿಯಾಗುತ್ತದೆ.

ರಾಜ್ಯದಲ್ಲಿರುವ ಒಟ್ಟು 47,000 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಲಭ್ಯವಿರುವ ಸುಮಾರು 7,000 ಶಿಕ್ಷಣ ಅಧಿಕಾರಿ ಮತ್ತು ಸಿಬ್ಬಂದಿಗೆ ಹಂಚಿಕೆ ಮಾಡಿದಲ್ಲಿ ಒಬ್ಬರಿಗೆ 6ರಿಂದ 7 ಶಾಲೆಗಳು ಹಂಚಿಕೆಯಾಗುತ್ತವೆ. ಶಾಲಾ ಭೇಟಿಯಲ್ಲಿ ಗಮನಿಸಬೇಕಾದ ಮುಖ್ಯ ಅಂಶಗಳ ಬಗ್ಗೆ ತಜ್ಞ ಅಧಿಕಾರಿಗಳು, ಶಿಕ್ಷಕರನ್ನು ಒಳಗೊಂಡ ಸಭೆಯಲ್ಲಿ ಚಿಂತಿಸಿ ನಿರ್ಧಾರ ಕೈಗೊಳ್ಳಬಹುದು. ಮುಖ್ಯ ಶಿಕ್ಷಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಅಗತ್ಯವಾಗಿ ಬೇಕಾದ ಮೂಲ ಸೌಕರ್ಯ ಅಥವಾ ಇನ್ನಿತರ ಶೈಕ್ಷಣಿಕ ಬೆಂಬಲದ ಕುರಿತು ಭೇಟಿ ನೀಡಿದ ಅಧಿಕಾರಿ, ಸಿಬ್ಬಂದಿ ಗುರುತು ಹಾಕಿಕೊಂಡು, ಅವುಗಳನ್ನು ಪೂರೈಸುವತ್ತ ಪ್ರಯತ್ನಿಸಬೇಕು. ಈ ದಿಸೆಯಲ್ಲಿ ಉನ್ನತ ಹಂತದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಹಾಗೂ ಬೆಂಬಲಿಸುವ ವ್ಯವಸ್ಥೆಯನ್ನು ಸೃಜಿಸಿದಲ್ಲಿ ಹೆಚ್ಚಿನ ಪ್ರಯೋಜನವಾಗುತ್ತದೆ.

ವಾಚಕರ ವಾಣಿ

ಮಳೆ ನೀರು ಸಂಗ್ರಹಿಸಿ, ಕೊರತೆ ನೀಗಿಸಿ

ರಾಜ್ಯದ ಹಲವು ಹಳ್ಳಿಗಳಲ್ಲಿ ಈಗಲೂ ಶುದ್ಧ ಕುಡಿಯುವ ನೀರು ದೊರೆಯುತ್ತಿಲ್ಲ. ಕುಡಿಯುವ ನೀರಿಗೆ ಪಡಿಪಾಟಲು ಪಡಬೇಕಾಗಿರುವುದು ಶೋಚನೀಯ. ಮಳೆಗಾಲದಲ್ಲಿ ರೈತರು ಹೊಲದಲ್ಲಿ ಬಿದ್ದ ಮಳೆ ನೀರನ್ನು ಇಂಗುಗುಂಡಿ, ಕೃಷಿಹೊಂಡದಲ್ಲಿ ಸಂಗ್ರಹಿಸಬೇಕು ಮತ್ತು ಕೆರೆಗಳಲ್ಲಿ ಹೂಳು ತೆಗೆದು ಅವು ತುಂಬುವಂತೆ ನೋಡಿಕೊಳ್ಳಬೇಕು. ಇದರಿಂದ, ಮುಂದೆ ಬರಬಹುದಾದ ನೀರಿನ ಕೊರತೆಯನ್ನು ನೀಗಿಸಬಹುದು.

ಡಾ. ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಗಗನಮುಖಿಯಾದ ತರಕಾರಿ ದರ

ತರಕಾರಿ ದರ ಗಗನಕ್ಕೇರುತ್ತಿದ್ದು, ಗ್ರಾಹಕರ ಕೈಸುಡುತ್ತಿದೆ. ಜೂನ್ ಅಂತ್ಯ ಸಮೀಪಿಸಿದರೂ ವಾಡಿಕೆಯಂತೆ ಮುಂಗಾರು ಮಳೆ ಆಗದಿರುವುದು ಇದಕ್ಕೆ ಪ್ರಮುಖ ಕಾರಣ. 15 ಕೆ.ಜಿ ಟೊಮ್ಯಾಟೊ ದರ ₹ 1,000ದ ಗಡಿ ದಾಟಿದ್ದು, ಮುಂದೆ ಇನ್ನೂ ಹೆಚ್ಚಾಗುವ ಸಂಭವವಿದೆ.

ನಮ್ಮ ರಾಜ್ಯದ ಟೊಮ್ಯಾಟೊಗೆ ಹೊರ ರಾಜ್ಯಗಳಲ್ಲಿ ಭಾರಿ ಬೇಡಿಕೆಯಿದ್ದು, ಅಲ್ಲಿಗೆ ಕಳುಹಿಸಲಾಗುತ್ತಿದೆ ಹಾಗೂ ವಿಶೇಷವಾಗಿ ಇದೇ ಮೊದಲ ಬಾರಿಗೆ ಬಾಂಗ್ಲಾದೇಶಕ್ಕೂ ರಫ್ತು ಮಾಡಲಾಗುತ್ತಿದೆ. ಟೊಮ್ಯಾಟೊ ದರ ಏರಲು ಇದು ಕೂಡ ಪ್ರಮುಖ ಕಾರಣ ಎನ್ನಲಾಗಿದೆ. ಇತರ ತರಕಾರಿಗಳ ಬೆಲೆಯೂ ಗ್ರಾಹಕರನ್ನು ಕಂಗಾಲಾಗಿಸಿದೆ. ಮಾರುಕಟ್ಟೆಗೆ ತರಕಾರಿ ಪೂರೈಕೆಯನ್ನು ಹೆಚ್ಚಿಸಲು ಮತ್ತು ದರ ನಿಯಂತ್ರಿಸಲು ಸಾಧ್ಯವಿರುವ ಕ್ರಮಗಳನ್ನು ಸರ್ಕಾರ ತಕ್ಷಣ ಕೈಗೊಳ್ಳಬೇಕು.

ರಾಸುಮ ಭಟ್, ಚಿಕ್ಕಮಗಳೂರು

ಪಕ್ಷಾಂತರ ಮಾಡಿಸಿದ ಪ್ರತಿಫಲ

ವಿಧಾನಸಭಾ ಚುನಾವಣೆಯಲ್ಲಿ ಸೋತಿರುವ ಬಿಜೆಪಿಯು ಇದೀಗ ಅದರ ಪರಾಮರ್ಶೆಗೆ ಹೊರಟಾಗ ಕಾರ್ಯಕರ್ತರ ಆಕ್ರೋಶ ಭುಗಿಲೆದ್ದಿದೆ (ಪ್ರ.ವಾ., ಜೂನ್ 27). ಇದೇ ಸಂದರ್ಭದಲ್ಲಿ 'ಕಾಂಗ್ರೆಸ್‌ನವರನ್ನು ನಾವೇ ಪಕ್ಷಕ್ಕೆ ಕರೆತಂದಿದ್ದು ಅವರ ಗಾಳಿ ಬೀಸಿದೆ. ಅದಕ್ಕೇ ಈಗ ಅನುಭವಿಸುತ್ತಿದ್ದೇವೆ' ಎಂದು ಮಾರ್ಮಿಕ ಸತ್ಯವನ್ನೇ ನುಡಿದಿದ್ದಾರೆ ಬಿಜೆಪಿ ಮುಖಂಡ ಕೆ.ಎಸ್.ಈಶ್ವರಪ್ಪ. ನಿಜ, ತಮ್ಮದು ಶಿಸ್ತು ಮತ್ತು ಸೈದ್ಧಾಂತಿಕ ಪಕ್ಷ ಎಂದು ಹೇಳಿಕೊಳ್ಳುತ್ತಿದ್ದ ಬಿಜೆಪಿ, ಅಧಿಕಾರದ ಆಸೆಗೆ ಬಿದ್ದಾಗ ಕಾಂಗ್ರೆಸ್, ಜೆಡಿಎಸ್, ಪಕ್ಷೇತರ... ಹೀಗೆ ಯಾರು ಸಿಗುತ್ತಾರೋ ಅವರನ್ನೆಲ್ಲ ಪಕ್ಷಾಂತರ ಮಾಡಿಸಿ, ಅನೈತಿಕ ರಾಜಕೀಯಕ್ಕೆ ಮುನ್ನುಡಿ ಬರೆಯಿತು. ಇದಕ್ಕೆ ಆಪರೇಷನ್ ಕಮಲ ಎಂದು ಹೆಸರಿಟ್ಟು ಜನತಾಂತ್ರಿಕ ಮೌಲ್ಯವನ್ನೇ ಅಣಕಿಸಿತು. ಮತದಾರರು ಬಿಜೆಪಿಯ ಈ ಕ್ರಿಯೆಯನ್ನು ನಮ್ಮ ಪ್ರಜಾಪ್ರಭುತ್ವದ ಬಹುದೊಡ್ಡ ಮೌಲ್ಯಕ್ಕೆ ನೀಡಿದ ಕೊಡಲಿ ಪೆಟ್ಟು ಎಂದೇ ಪರಿಭಾವಿಸಿದರು.

ಹೀಗೆ ಏನಕೇನ ಪ್ರಕಾರೇಣ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಸರ್ಕಾರ ನಂತರವೂ ಜನಪರ ಆಡಳಿತ ನೀಡದೆ, ಬರೀ ಪಠ್ಯ ಪರಿಷ್ಕರಣೆ ಅವಾಂತರ, ಪಡಿತರ ವಿತರಣೆಯಲ್ಲಿ ಅಕ್ಕಿ ಕಡಿತ, ಗುತ್ತಿಗೆಯಲ್ಲಿ ಭ್ರಷ್ಟಾಚಾರ... ಹೀಗೆ ಸಾಲು ಸಾಲು ಜನವಿರೋಧಿ ಕೆಲಸಗಳಲ್ಲಿ ಮುಳುಗಿಹೋಯಿತು. ಹೀಗಾಗಿ ಮತದಾರರ ಪ್ರತಿಕ್ರಿಯೆಯಾಗಿ ಚುನಾವಣೆಯಲ್ಲಿ ಸೋತುಹೋಯಿತು. ಮಾಡಿದ್ದುಣ್ಣೋ ಮಾರಾಯ ಎಂಬ ಗಾದೆ ಮಾತೇ ಇದೆಯಲ್ಲ...!

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ವಂದೇ ಭಾರತ್: ಇಳಿಯಲಿ ಪ್ರಯಾಣದರ

ಬೆಂಗಳೂರು– ಧಾರವಾಡದ ನಡುವೆ ಸಂಚಾರ ಆರಂಭಿಸಿರುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ವಿವರಗಳು ಪ್ರಕಟಗೊಂಡಿವೆ. ಸದರಿ ರೈಲುಯಾನದ ಪ್ರಯಾಣದರ ವಿಪರೀತ ಎನಿಸುತ್ತದೆ. ವಿಚಿತ್ರವೆಂದರೆ, ಬೆಂಗಳೂರಿನಿಂದ ಧಾರವಾಡಕ್ಕೆ ಎಸಿ ಚೇರ್ ಕಾರ್ ₹ 1,165 ಮತ್ತು ಎಕ್ಸಿಕ್ಯುಟಿವ್ ಕ್ಲಾಸ್ ₹ 2,010 ಇದೆ. ಅದೇ ವಾಪಸ್ ಬರುವಾಗ ಕ್ರಮವಾಗಿ ₹ 1,330 ಮತ್ತು ₹ 2,440 ಇದೆ. ಈ ರೀತಿ ದರದ ತಾರತಮ್ಯ ಏಕೆ? ಎರಡೂ ದಿಕ್ಕಿನ ಪ್ರಯಾಣದರ ಒಂದೇ ಇರುವುದು ಒಳಿತು. ಜೊತೆಗೆ, ಬೆಂಗಳೂರು ನಿಲ್ದಾಣದಿಂದ ಬರೀ ಏಳೆಂಟು ಕಿ.ಮೀ. ದೂರದ ಪ್ರಯಾಣಕ್ಕೆ ₹ 410 ದರವಿದೆ. ಅದೇ ಧಾರವಾಡದಿಂದ ಹುಬ್ಬಳ್ಳಿಗೆ ಸುಮಾರು ಇಪ್ಪತ್ತು ಕಿ.ಮೀ. ದೂರವಿದ್ದು, ಅದರ ಪ್ರಯಾಣದರವೂ ₹ 410 ಆಗಿದೆ. ಯಾವ ಲೆಕ್ಕಾಚಾರ ಮತ್ತು ಆಧಾರದ ಮೇಲೆ ಈ ರೀತಿ ದರಗಳನ್ನು ನಿಗದಿ ಮಾಡಲಾಗುತ್ತದೆ? ಒಟ್ಟಾರೆ ದರವು ಪ್ರಯಾಣಿಕರು 'ಹಿಂದೆ' ಸರಿಯುವಂತೆ ಇರದೆ 'ಮುಂದೆ' ಬರುವಂತೆ ಇರಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಮಂಡ್ಯ ರೈಲು ನಿಲ್ದಾಣದ ಅವ್ಯವಸ್ಥೆ!

ನಾನು ಪತ್ನಿ ಸಮೇತ ಮಂಡ್ಯದಿಂದ ಕೊಪ್ಪಳಕ್ಕೆ ಹಂಪಿ ಎಕ್ಸ್‌ಪ್ರೆಸ್ ರೈಲಿಗೆ ಬರಬೇಕಿತ್ತು. ನಮ್ಮದು ಬಿ3 ಎ.ಸಿ ಬೋಗಿಯಾಗಿದ್ದು ನಾವು 3ನೇ ಅಂಕಣದಲ್ಲಿ ಕಾಯುತ್ತಿದ್ದೆವು. ನಾನು ಬೋಗಿಯ ಸ್ಥಳ ನಿಲುಗಡೆಯ ಮಾಹಿತಿ ಇರಬೇಕಿದ್ದ ಡಿಸ್‌ಪ್ಲೇ ಫಲಕದತ್ತ ನೋಡುತ್ತಿದ್ದೆ. ಅದು ಬರೀ ಎಂವೈಎ ಎಂದುಮಾತ್ರ ತೋರಿಸುತ್ತಿತ್ತು! ನಾನು ಗೊಂದಲಕ್ಕೆ ಒಳಗಾಗುವಷ್ಟರಲ್ಲಿ ರೈಲು ಬಂದೇಬಿಟ್ಟಿತು. ಇಬ್ಬರೂ ಓಡಿ ನಮ್ಮ ಬೋಗಿಯನ್ನು ಹುಡುಕುತ್ತಾ ಹೊರಟೆವು. ನಂತರ ರೈಲು ಬಿಡುವ ಸೂಚನೆ ಸಿಕ್ಕ ಕೂಡಲೇ ಸಿಕ್ಕ ಬೋಗಿಯನ್ನು ಅಂಥ ರಷ್‌ನಲ್ಲೇ ಜಾಗ ಮಾಡಿಕೊಂಡು ಹತ್ತಿದೆವು. ಲಗೇಜ್ ಹಿಡಿದುಕೊಂಡು ಬೋಗಿ ಹುಡುಕುತ್ತಾ ಮುಂದೆ ಮುಂದೆ ಹೊರಟೆವು. ಕಷ್ಟಪಟ್ಟು 5ನೇ ನಂಬರಿನ ಬೋಗಿಗೆ ಬಂದ ನಂತರ ತಿಳಿಯಿತು, ನಮ್ಮ ಬೋಗಿ ಹಿಂದೆ ಇದೆ ಎಂದು! ಸರಿ ಮತ್ತೆ ಹಿಂದಕ್ಕೆ ನೂಕು ನುಗ್ಗಲಿನಲ್ಲಿ ನುಗ್ಗುತ್ತಾ ಹತ್ತು ಬೋಗಿಗಳಷ್ಟು ಹಿಂದೆ ಬಂದರೂ ನಮ್ಮ ಬೋಗಿ ಸಿಕ್ಕಲೇ ಇಲ್ಲ. ಅಷ್ಟರಲ್ಲಿ ಮದ್ದೂರು ನಿಲ್ದಾಣ ಬಂತು. ಇಳಿದು ಮತ್ತೆ ಎರಡು ಬೋಗಿಗಳನ್ನು ದಾಟಿದ ನಂತರ ನಮ್ಮ ಬೋಗಿ ಸಿಕ್ಕಿತು. ಆದರೆ ಅಲ್ಲಿನ ಪ್ರಯಾಣಿಕರೋ ಒಳಗೆ ಬಾಗಿಲು ಹಾಕಿಕೊಂಡು ಅಡ್ಡಡ್ಡ ಮಲಗಿಬಿಟ್ಟಿದ್ದರು! ಬಾಗಿಲನ್ನು ಬಡಿದು ಬಡಿದು ತೆರೆಸುವಷ್ಟರಲ್ಲಿ ರೈಲು ಹೊರಟಿತು. ಓಡುವ ರೈಲನ್ನೇ ಲಗೇಜು ಸಮೇತ ಹತ್ತುವಷ್ಟರಲ್ಲಿ ಸಾಕು ಸಾಕಾಯಿತು.

ರೈಲ್ವೆ ಇಲಾಖೆ ಡಿಸ್‌ಪ್ಲೇ ಫಲಕದಲ್ಲಿ ಬೋಗಿಯ ನಿಲುಗಡೆ ಮಾಹಿತಿಯನ್ನು ಸರಿಯಾಗಿ ತೋರಿಸದೇ ಇದ್ದುದು ಎಷ್ಟು ಸರಿ? ಮಂಡ್ಯ ನಿಲ್ದಾಣದ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ ಡಿಸ್‌ಪ್ಲೇ ಫಲಕ ಸರಿಪಡಿಸಲಿ.

ವೀರೇಶ ಬಂಗಾರಶೆಟ್ಟರ, ಕುಷ್ಟಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಧಾನಿ ಮೋದಿ ವಿದೇಶ ಪ್ರವಾಸದ ವೇಳೆ ದೇಶದಲ್ಲಿ ಆಗಿದ್ದೇನು...

‘ದೇಶದಲ್ಲಿ ಏನಾಗುತ್ತಿದೆ?’. ಅಮೆರಿಕ ಮತ್ತು ಈಜಿಪ್ಟ್‌ನ ಆರು ದಿನಗಳ ಪ್ರವಾಸ ಮುಗಿಸಿ ಭಾನುವಾರ ಭಾರತಕ್ಕೆ ವಾಪಸಾದ ತಕ್ಷಣವೇ ಪ್ರಧಾನಿ ನರೇಂದ್ರ ಮೋದಿ ಅವರು ಕೇಳಿದ ಪ್ರಶ್ನೆ ಇದು. ಇದಕ್ಕೆ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು, ‘ದೇಶವು ಸಂತೋಷವಾಗಿದೆ’ ಎಂದು ಹೇಳಿದ್ದಾರೆ. ಪ್ರಧಾನಿ ಮತ್ತು ಆಡಳಿತಾರೂಢ ಪಕ್ಷದ ಅಧ್ಯಕ್ಷನ ನಡುವಣ ಈ ಪ್ರಶ್ನೋತ್ತರಕ್ಕೆ ವ್ಯಾಪಕ ಟೀಕೆ ವ್ಯಕ್ತವಾಗಿದೆ. ಪ್ರಧಾನಿ ವಿದೇಶ ಪ್ರವಾಸದಲ್ಲಿ ಇದ್ದಾಗ ದೇಶದಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ ಅವರಿಗೆ ಮಾಹಿತಿ ಇರುವುದಿಲ್ಲವೇ ಎಂದು ಕೆಲವರು ಪ್ರಶ್ನಿಸಿದ್ದಾರೆ. ಮಣಿಪುರದಲ್ಲಿ ಸಂಘರ್ಷ ತೀವ್ರಮಟ್ಟಕ್ಕೆ ಮುಟ್ಟಿದೆ, ಅಸ್ಸಾಂನಲ್ಲಿ ಪ್ರವಾಹ ತಲೆದೋರಿದೆ, ದೇಶದ ಹಲವೆಡೆ ಹಲವು ಅವಘಡಗಳು ಸಂಭವಿಸಿವೆ. ಹೀಗಿದ್ದೂ ‘ದೇಶವು ಸಂತೋಷವಾಗಿದೆ’ ಎಂದು ನಡ್ಡಾ ಉತ್ತರಿಸಿದ್ದಕ್ಕೂ ಆಕ್ಷೇಪ ವ್ಯಕ್ತವಾಗಿದೆ. ಮೋದಿ ಅವರ ವಿದೇಶ ಪ್ರವಾಸದ ಅವಧಿಯಲ್ಲಿ ದೇಶದಲ್ಲಾದ ಕೆಲವು ಪ್ರಮುಖ ಬೆಳವಣಿಗೆಗಳು ಇಂತಿವೆ



120 ಮಣಿಪುರ ಹಿಂಸಾಚಾರದಲ್ಲಿ ಈವರೆಗೆ ಮೃತಪಟ್ಟವರು

3,000 ಮಣಿಪುರ ಹಿಂಸಾಚಾರದಲ್ಲಿ ಈವರೆಗೆ ಗಾಯಗೊಂಡವರ ಸಂಖ್ಯೆ

ಮಣಿಪುರ ಹಿಂಸಾಚಾರ ತೀವ್ರ

ಮಣಿಪುರದಲ್ಲಿ ಹಿಂಸಾಚಾರ ಆರಂಭವಾಗಿ ಜೂನ್ 21ಕ್ಕೆ 50 ದಿನ ಕಳೆಯಿತು. ಅಂದು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಅಮೆರಿಕ ಪ್ರವಾಸದಲ್ಲಿ ಇದ್ದರು. ಜೊತೆಗೆ, ಅಂತರರಾಷ್ಟ್ರೀಯ ಯೋಗ ದಿನದ (ಜೂನ್ 21) ಅಂಗವಾಗಿ ವಿಶ್ವಸಂಸ್ಥೆಯ ಮುಖ್ಯಕಚೇರಿ ಮುಂಭಾಗ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಯೋಗದ ಮಹತ್ವವನ್ನು ವಿದೇಶಿಯರಿಗೆ ತಿಳಿಸಿಕೊಟ್ಟರು.

ಮೈತೇಯಿ ಹಾಗೂ ಕುಕಿ ಎಂಬ ಎರಡು ಪ್ರಮುಖ ಸಮುದಾಯಗಳ ನಡುವೆ ಆರಂಭವಾದ ಸಂಘರ್ಷವು ಹಿಂಸಾಚಾರದ ಸ್ವರೂಪ ಪಡೆದಿಕೊಂಡಿದೆ. ಹಾಗಿದ್ದರೂ ಇಲ್ಲಿಯವರೆಗೂ ಪ್ರಧಾನಿ ಮೋದಿ ಅವರು ಒಮ್ಮೆಯೂ ಈ ಬಗ್ಗೆ ಮಾತನಾಡಿಲ್ಲ ಎಂಬುದು ಮಣಿಪುರ ಜನರ ಹಾಗೂ ವಿರೋಧ ಪಕ್ಷಗಳ ಆಕ್ರೋಶ.

ಹಿಂಸಾಚಾರದ ಕುರಿತು ಸರ್ವಪಕ್ಷ ಸಭೆ ಕರೆಯಬೇಕು ಎಂದು ಸುಮಾರು 10 ವಿರೋಧ ಪಕ್ಷಗಳು ಜೂನ್ 10ರಿಂದ ಪ್ರಧಾನಿ ಮೋದಿ ಅವರನ್ನು ಆಗ್ರಹಿಸಿದ್ದವು. ಈ ಸಂಬಂಧ ಪ್ರಧಾನಿ ಕಚೇರಿಗೆ ಮನವಿ ಪತ್ರವನ್ನೂ ನೀಡಿದ್ದವು. ನಂತರ, ಪ್ರಧಾನಿ ಮೋದಿ ಅವರು ಅಮೆರಿಕ ಪ್ರವಾಸಕ್ಕೆ ತೆರಳಿದ ಬಳಿಕ ಜೂನ್ 24ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಸರ್ವ ಪಕ್ಷಗಳ ಸಭೆ ನಡೆದಿದೆ. ‘ಮಣಿಪುರದಲ್ಲಿ ನಡೆಯುತ್ತಿರುವ ಸಂಗತಿಗಳ ಕುರಿತು ಒಂದು ದಿನವೂ ಬಿಡದಂತೆ ನಿತ್ಯವೂ ಪ್ರಧಾನಿ ಮೋದಿ ಅವರೊಂದಿಗೆ ನಾನು ಮಾತನಾಡುತ್ತಿದ್ದೇನೆ. ರಾಜ್ಯದಲ್ಲಿ ಶಾಂತಿ ನೆಲೆಸಲು ಪ್ರಧಾನಿ ಅವರ ಸಲಹೆ, ಸೂಚನೆಯಂತೆ ಸರ್ಕಾರವು ಕ್ರಮ ಕೈಗೊಳ್ಳುತ್ತಿದೆ ಎಂದು ಸಭೆಯಲ್ಲಿ ಸಚಿವ ಅಮಿತ್ ಶಾ ಅವರು ಹೇಳಿದರು’ ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರ ಅವರು ಸಭೆ ಬಳಿಕ ನಡೆದ ಮಾಧ್ಯಮಗೋಷ್ಠಿಯಲ್ಲಿ ಹೇಳಿದ್ದರು.

ಪ್ರಧಾನಿ ಮೋದಿ ಅವರು ವಿದೇಶ ಪ್ರವಾಸ ಮುಗಿಸಿ, ಭಾರತಕ್ಕೆ ಮರಳಿದ ಬಳಿಕ ಬಿಜೆಪಿ ಅಧ್ಯಕ್ಷ ನಡ್ಡಾ ಅವರಿಗೆ ಕೇಳಿದ ಪ್ರಶ್ನೆ ಹಾಗೂ ಅಮಿತ್ ಶಾ ಅವರು ಸಭೆಯಲ್ಲಿ ಕೇಳಿದ್ದಕ್ಕೂ ತಾಳೆ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗಳು ಆರಂಭವಾಗಿವೆ. ‘ಮಣಿಪುರವು ಹೊತ್ತಿ ಉರಿಯುತ್ತಿದೆ. ಇದು ಪ್ರಧಾನಿ ಅವರಿಗೆ ತಿಳಿದಿಲ್ಲವೇ?’ ಎಂದು ಟ್ವಿಟರ್‌ನಲ್ಲಿ ಹಲವರು ಪ್ರಶ್ನಿಸಿದ್ದಾರೆ. ವಿರೋಧ ಪಕ್ಷಗಳೂ ಇದೇ ಪ್ರಶ್ನೆಯನ್ನೇ ಕೇಳಿವೆ.

ಹಲವು ಅತ್ಯಾಚಾರ ಪ್ರಕರಣಗಳು

ಜೂನ್ 20ರಿಂದ ಜೂನ್ 25ರ ರಾತ್ರಿವರೆಗೆ ದೇಶದಾದ್ಯಂತ ಆರು ಅತ್ಯಾಚಾರ ಪ್ರಕರಣಗಳು ವರದಿಯಾಗಿವೆ. ಇವುಗಳಲ್ಲಿ ಹೆಚ್ಚಿನ ಪ್ರಕರಣಗಳು ಉತ್ತರ ಪ್ರದೇಶದಲ್ಲಿ ವರದಿಯಾಗಿವೆ. ಈ ಅವಧಿಯಲ್ಲಿ ದೇಶದಲ್ಲಿ ವರದಿಯಾದ ಅತ್ಯಾಚಾರ ಪ್ರಕರಣಗಳ ವಿವರ ಇಲ್ಲಿವೆ

- ಉತ್ತರ ಪ್ರದೇಶದ ಮೀರಠ್‌ನಲ್ಲಿ ಇದೇ 21ರಂದು 17 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ನಡೆದ ಸುದ್ದಿ ಬಹಿರಂಗವಾಗಿದೆ. ರಮೇಶ್ ಚಂದ್ರ ಗುಪ್ತಾ (67) ಎಂಬ ವಕೀಲ ತನ್ನದೇ ಕಚೇರಿಯಲ್ಲಿ ಸಹಾಯಕಿಯಾಗಿ ಕೆಲಸ ಮಾಡುವ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದಾನೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಆತನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಲಾಗಿದೆ
- ರಾಜಸ್ಥಾನದ ಬಿಕಾನೇರ್‌ನಲ್ಲಿ ಜೂನ್ 21ರಂದು ದಲಿತ ಮಹಿಳೆಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಹತ್ಯೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಪೊಲೀಸರೂ ಆರೋಪಿಗಳಾಗಿದ್ದರು. ಅವರನ್ನು ಕರ್ತವ್ಯದಿಂದ ಅಮಾನತು ಮಾಡಲಾಗಿದೆ
- ಮೇಘಾಲಯದ ರಾಜಧಾನಿ ಶಿಲ್ಲಾಂಗ್‌ನ ಪುನರ್ವಸತಿ ಕೇಂದ್ರದಲ್ಲಿ ಇದ್ದ 17 ವರ್ಷದ ಬಾಲಕಿ ಇದೇ ಜೂನ್ 21ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆಕೆಯ ಮೇಲೆ ಅತ್ಯಾಚಾರ ನಡೆದಿತ್ತು. ಆನಂತರ ಆಕೆಯನ್ನು ಪುನರ್ವಸತಿ ಕೇಂದ್ರಕ್ಕೆ ಕಳುಹಿಸಲಾಗಿತ್ತು
- ಉತ್ತರ ಪ್ರದೇಶದ ಬಾರಾಬಂಕಿಯಲ್ಲಿ ದಲಿತ ಬಾಲಕಿ (16) ಮೇಲೆ ಅತ್ಯಾಚಾರ ನಡೆದಿತ್ತು. ಆ ಪ್ರಕರಣದ ಆರೋಪಿ ಪೊಲೀಸರ ಬಂಧನದಿಂದ ಜೂನ್ 21ರಂದು ತಪ್ಪಿಸಿಕೊಂಡಿದ್ದ. ಜೂನ್ 23ರಂದು ಮರಕ್ಕೆ ನೇಣುಹಾಕಿದ ಸ್ಥಿತಿಯಲ್ಲಿ ಬಾಲಕಿಯ ಶವ ಪತ್ತೆಯಾಗಿತ್ತು. ಇದು ಕೊಲೆಯೇ ಅಥವಾ ಆತ್ಮಹತ್ಯೆಯೇ ಎಂಬುದು ಇನ್ನೂ ದೃಢಪಟ್ಟಿಲ್ಲ
- ಅರುಣಾಚಲ ಪ್ರದೇಶದ ಇಟಾನಗರದಲ್ಲಿ ಜೂನ್ 25ರಂದು 13 ವರ್ಷದ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಒಬ್ಬ ಆರೋಪಿಯನ್ನು ಬಂಧಿಸಲಾಗಿದ್ದು, ಮತ್ತೊಬ್ಬ ತಲೆಮರೆಸಿಕೊಂಡಿದ್ದಾರೆ
- ಉತ್ತರಪ್ರದೇಶದ ಗಾಜಿಯಾಬಾದ್‌ನಲ್ಲಿ ಆರು ವರ್ಷದ ಬಾಲಕಿ ಮೇಲೆ ಇಬ್ಬರು ಬಾಲಕರು ಜೂನ್ 25ರಂದು ಅತ್ಯಾಚಾರ ನಡೆಸಿದ್ದಾರೆ. ಅತ್ಯಾಚಾರದ ನಂತರ ತೀವ್ರ ಅಸ್ವಸ್ಥಳಾಗಿದ್ದ ಬಾಲಕಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಇಬ್ಬರು ಆರೋಪಿಗಳನ್ನೂ ಬಂಧಿಸಲಾಗಿದೆ
- ಉತ್ತರ ಪ್ರದೇಶದ ಬಲಿಯಾದಲ್ಲಿ ಎಂಟು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಲು 45 ವರ್ಷದ ವ್ಯಕ್ತಿಯೊಬ್ಬ ಯತ್ನಿಸಿದ್ದಾನೆ

ಅಸ್ಸಾಂ ಪ್ರವಾಹ ತೀವ್ರ ಮಳೆಯಾಗಿದ್ದರಿಂದ ಬ್ರಹ್ಮಪುತ್ರ ಹಾಗೂ ಬರಾಕ್ ನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿ, ಅಸ್ಸಾಂನಲ್ಲಿ ಪ್ರವಾಹ ಹಾಗೂ ಭೂಕುಸಿತ ಸಂಭವಿಸಿದೆ. ಈ ಕಾರಣದಿಂದಾಗಿ ರಾಜ್ಯದಲ್ಲಿ ಇಬ್ಬರು ಮೃತಪಟ್ಟು, 1.55 ಲಕ್ಷ ಜನರು ನಿರಾಶ್ರಿತರಾಗಿದ್ದಾರೆ. ಒಟ್ಟು 11 ಜಿಲ್ಲೆಗಳಲ್ಲಿ ಹಾನಿ ಉಂಟಾಗಿದೆ

ಸ್ವಯಂಘೋಷಿತ ಗೋರಕ್ಷಕರ ದಾಳಿ

ದೇಶದಲ್ಲಿ ಸ್ವಯಂಘೋಷಿತ ಗೋರಕ್ಷಕರು ದಾಳಿ ನಡೆಸಿದ ಒಂದು ಪ್ರಕರಣ ವರದಿಯಾಗಿದೆ. ಮಹಾರಾಷ್ಟ್ರದ ನಾಸಿಕ್‌ನಲ್ಲಿ ಕಾರಿನಲ್ಲಿ ಮೇಕೆಯ ಮಾಂಸ ಸಾಗಿಸುತ್ತಿದ್ದ ಅಫಾನ್ ಅನ್ಸಾರಿ ಮತ್ತು ನಾಸಿರ್ ಖುರೇಶಿ ಎಂಬವರ ಮೇಲೆ 15 ಜನರಿದ್ದ ಸ್ವಯಂಘೋಷಿತ ಗೋರಕ್ಷಕರ ತಂಡವು ಹಲ್ಲೆ ನಡೆಸಿದೆ. ಅನ್ಸಾರಿ ಮೃತಪಟ್ಟಿದ್ದಾರೆ.

ವಿದ್ಯುತ್ ದರದಲ್ಲಿ ರಿಯಾಯಿತಿ, ಏರಿಕೆ

ವಿದ್ಯುತ್ ದರದಲ್ಲಿ ಏಕಕಾಲಕ್ಕೆ ರಿಯಾಯಿತಿ ನೀಡುವ ಮತ್ತು ಏರಿಕೆಯನ್ನೂ ಮಾಡುವ ನಿರ್ಧಾರವನ್ನು ಕೇಂದ್ರ ಸರ್ಕಾರ ತೆಗೆದುಕೊಂಡಿದೆ. ಹಗಲಿನಲ್ಲಿ ಬಳಸುವ ವಿದ್ಯುತ್‌ನ ದರದಲ್ಲಿ ಶೇ 10–20ರಷ್ಟು ರಿಯಾಯಿತಿ ಘೋಷಿಸಿದೆ. ಆದರೆ, ವಿದ್ಯುತ್‌ಗೆ ಹೆಚ್ಚು ಬೇಡಿಕೆ ಇರುವ ರಾತ್ರಿಯ ಸಂದರ್ಭದಲ್ಲಿ, ವಿದ್ಯುತ್ ಬಳಸಿದರೆ ಅದರ ದರದಲ್ಲಿ ಶೇ 10–20ರಷ್ಟು ಏರಿಕೆಯಾಗಲಿದೆ.

ಹಗಲು ವೇಳೆ ಸೌರವಿದ್ಯುತ್ ಲಭ್ಯತೆ ಇರುವ ಕಾರಣ ದರದಲ್ಲಿ ಕಡಿತ ಮಾಡಲಾಗಿದೆ. ರಾತ್ರಿಯ ವೇಳೆ ಪಳೆಯುಳಿಕೆ ಇಂಧನಗಳನ್ನು ಬಳಸಿ ವಿದ್ಯುತ್ ಉತ್ಪಾದನೆ ಮಾಡುವ ಕಾರಣ ದರವನ್ನು ಶೇ 10–20ರಷ್ಟು ಏರಿಕೆ ಮಾಡಲಾಗಿದೆ ಎಂದು ಸರ್ಕಾರವು ಜೂನ್ 23ರಂದು ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

ಹಗಲಿನ ವೇಳೆ ವಿದ್ಯುತ್‌ನ ಬೇಡಿಕೆ ಮತ್ತು ಬಳಕೆ ಕಡಿಮೆ ಇರುತ್ತದೆ. ಹೀಗಾಗಿ ರಿಯಾಯಿತಿಯಿಂದ ಹೆಚ್ಚಿನ ಲಾಭವೇನೂ ಆಗುವುದಿಲ್ಲ. ಆದರೆ, ರಾತ್ರಿಯ ವೇಳೆ ವಿದ್ಯುತ್‌ನ ಬಳಕೆ ಪ್ರಮಾಣ ಹೆಚ್ಚು. ಅಂತಿಮವಾಗಿ ವಿದ್ಯುತ್‌ನ ದರ ಏರಿಕೆಯಾಗಲಿದೆ.

ಆದರೆ, 2024ರ ಏಪ್ರಿಲ್‌ನಿಂದ ಈ ದರ ವ್ಯತ್ಯಾಸ ವಾಣಿಜ್ಯ ಬಳಕೆದಾರರಿಗೆ ಮತ್ತು ಕೈಗಾರಿಕೆಗಳಿಗೆ ಅನ್ವಯವಾಗಲಿದೆ. 2025ರ ಏಪ್ರಿಲ್‌ನಿಂದ ಎಲ್ಲರಿಗೂ ಅನ್ವಯವಾಗಲಿದೆ.

ಆಧಾರ: ಪಿಟಿಐ, ಪಿಐಬಿ

ಮಾಲಾಶ್ರೀ ಕೈಲಿ ‘ಮಾರಕಾಸ್ತ್ರ’

‘ಐಪಿಎಸ್ ಭವಾನಿ’, ‘ಚಾಮುಂಡಿ’, ‘ದುರ್ಗಿ’ಯಾಗಿ ಚಿತ್ರರಂಗದಲ್ಲಿ ಹಲವು ಅವತಾರ ತಾಳಿದ ನಟಿ ಮಾಲಾಶ್ರೀ ಸದ್ಯಕ್ಕೆ ‘ಮಾರಾಕಾಸ್ತ್ರ’ ಹಿಡಿದಿದ್ದಾರೆ! ಮಾಲಾಶ್ರೀ ಪೊಲೀಸ್ ಅಧಿಕಾರಿಯಾಗಿ ನಟಿಸಿರುವ ‘ಮಾರಾಕಾಸ್ತ್ರ’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

‘ನಾನು ಈ ಚಿತ್ರ ಒಪ್ಪಿಕೊಳ್ಳಲು ನಿರ್ದೇಶಕರೇ ಕಾರಣ. ಅವರು ಅಂಗವಿಕಲರಾಗಿದ್ದರೂ, ಅವರಲ್ಲಿರುವ ಸಿನಿಮಾ ಪ್ರೀತಿ ಕಂಡು ಸಂತೋಷವಾಯಿತು. ಅರವತ್ತು ದಿನಗಳ ಕಾಲ ಚಿತ್ರೀಕರಣದ-ಲ್ಲಿ ಪಾಲ್ಗೊಂಡಿದ್ದೇನೆ. ಥ್ರಿಲ್ಲರ್ ಮಂಜು ಮಾಸ್ಟರ್ ಜೊತೆಗೆ ಈ ಚಿತ್ರದಲ್ಲಿಯೂ ಕೆಲಸ ಮಾಡಿದ್ದು ಖುಷಿಯಾಗಿದೆ. ಈ ಚಿತ್ರದ ಸಾಹಸ ಸನ್ನಿವೇಶಗಳು ನನ್ನ ಹಿಂದಿನ ‘ಚಾಮುಂಡಿ’, ‘ಶಕ್ತಿ’ ಮುಂತಾದ ಚಿತ್ರಗಳ ಸಾಹಸ ಸನ್ನಿವೇಶಗಳನ್ನು ನೆನಪಿಸಿದವು. ಇದರಲ್ಲಿ ನನ್ನದು ಪೊಲೀಸ್ ಅಧಿಕಾರಿಯ ಪಾತ್ರ’ ಎಂದರು ಮಾಲಾಶ್ರೀ.

‘ಇದೊಂದು ಕೌಟುಂಬಿಕ ಚಿತ್ರ. ಇದರಲ್ಲಿ ಆ್ಯಕ್ಷನ್, ಸಸ್ಪೆನ್ಸ್, ಥ್ರಿಲ್ಲರ್ ಎಲ್ಲ ಅಂಶಗಳೂ ಇವೆ. ಚಿತ್ರೀಕರಣ ಮುಕ್ತಾಯವಾಗಿದೆ. ಸದ್ಯದಲ್ಲೇ ಚಿತ್ರ ಬಿಡುಗ-ಡೆಯಾಗಲಿದೆ’ ಎಂದು ನಿರ್ದೇಶಕ ಗುರುಮೂರ್ತಿ ಸುನಾಮಿ ತಿಳಿಸಿದರು.

ಚಿತ್ರವನ್ನು ನಟರಾಜ್ ನಿರ್ಮಿಸಿದ್ದಾರೆ. ಆನಂದ್ ಆರ್ಯ ಚಿತ್ರದ ನಾಯಕ. ಹರ್ಷಿಕಾ ಪೂಣಚ್ಚ, ಭರತ್ ಸಿಂಗ್, ಉಗ್ರಂ ಮಂಜು ಮೊದಲಾದವರು ನಟಿಸಿದ್ದಾರೆ. ಮಂಜು ಕವಿ ಸಂಗೀತ, ಅರುಣ್ ಸುರೇಶ್ ಛಾಯಾಗ್ರಹಣ ಚಿತ್ರಕ್ಕಿದೆ. ❖

ಮಾಲಾಶ್ರೀ

ತೆರೆಗೆ ಬರ್ತಿದ್ದಾರೆ ‘ಬೆಂಗಳೂರು ಬಾಯ್ಸ್’

ನಟ ಚಿಕ್ಕಣ್ಣ ನಟಿಸಿರುವ ‘ಬೆಂಗಳೂರು ಬಾಯ್ಸ್’ ಸಿನಿಮಾ ಇದೇ 30ರಂದು ತೆರೆಗೆ ಬರಲಿದೆ. ವಿ ಮೇಕರ್ಸ್ ನಿರ್ಮಾಣದಲ್ಲಿ ಮೂಡಿ ಬಂದಿರುವ ಈ ಚಿತ್ರದ ಹಾಡು, ಸಿನಿಮಾ ಬಿಡುಗಡೆ ಹೊಸ್ತಿಲಲ್ಲೇ ರಿಲೀಸ್ ಆಗಿದೆ. ಈ ಹಾಡಿಗೆ ಚಿಕ್ಕಣ್ಣ ಅವರೇ ಧ್ವನಿಯಾಗಿರುವುದು ವಿಶೇಷ.

ಸದ್ಯ ಈ ‘ಟಪಾಸ್..’ ಹಾಡು ಸದ್ದು ಮಾಡುತ್ತಿದೆ. ಸಾಫ್ಟ್‌ವೇರ್ ಕೆಲಸ ಮಾಡುತ್ತಿರುವವರ ಪಾಡು ವಿವರಿಸುವ ಹಾಡು ಇದಾಗಿದೆ. ಧರ್ಮವಿಶ್ ಸಂಗೀತದ ಈ ಹಾಡಿಗೆ ಅರಸು ಅಂತಾರೆ ಸಾಹಿತ್ಯ ಬರೆದಿದ್ದಾರೆ.

‘ಯಾವುದೇ ಕೆಲಸಕ್ಕೂ ಪ್ರಯೋಜನವಿಲ್ಲವೆಂದೆನಿಸಿಕೊಳ್ಳುವ ಲಾಸ್ಟ್ ಬೆಂಚ್ ವಿದ್ಯಾರ್ಥಿಗಳು ಬದುಕಿನಲ್ಲಿ ಸಾಧನೆಯ ಗುರಿಮುಟ್ಟಿದ ಸಾಕಷ್ಟು ಉದಾಹರಣೆಗಳಿವೆ. ಅಂತಹ ಕಥಾಹಂದರ ಹೊಂದಿರುವ ಸಿನಿಮಾ ಬೆಂಗಳೂರು ಬಾಯ್ಸ್’ ಎಂದಿದೆ ಚಿತ್ರತಂಡ. 90ರ ದಶಕದ ಸೂಪರ್ ಹಿಟ್ ಸಿನಿಮಾಗಳಾದ ‘ರಣಧೀರ’, ‘ಅಂತ’, ‘ಓಂ’ ಹಾಗೂ ‘ಎ’ ಚಿತ್ರಗಳ ಹೀರೊ ಪಾತ್ರದಲ್ಲಿ ಅಭಿಷೇಕ್ ದಾಸ್, ಸಚಿನ್ ಚೆಲುವರಾ-ಯಸ್ವಾಮಿ, ಚಂದನ್ ಆಚಾರ್, ರೋಹಿತ್ ನಟಿಸಿ ಮಿಂಚಿದ್ದಾರೆ. ಇವರಿಗೆ ಜೋಡಿಯಾಗಿ ಪ್ರಗ್ಯ ನಯನ, ವೈನಿಧಿ ಜಗದೀಶ್, ಜಯಶ್ರೀ ಆಚಾರ್ ಹಾಗೂ ಸೋನಿ ನಟಿಸಿದ್ದಾರೆ.

ಕಾಮಿಡಿ ಕಿಂಗ್ ಚಿಕ್ಕಣ್ಣ ಪ್ರಮುಖ ಪಾತ್ರವೊಂದ ರಲ್ಲಿ ನಟಿಸಿದ್ದು, ಐಟಿ ಬಿಟಿ ಉದ್ಯೋಗಿಯಾಗಿ ಕಾಣಿಸಿಕೊಂಡಿದ್ದಾರೆ. ‘ಬೆಂಗಳೂರು ಬಾಯ್ಸ್’ ಸಿನಿಮಾಗೆ ‘ಅಂಬಿ ನಿಂಗೆ ವಯಸ್ಸಾಯ್ತೋ’ ಸಿನಿಮಾ ಖ್ಯಾತಿಯ ಗುರುದತ್ ಗಾಣಿಗ ಕ್ರಿಯೇಟಿವ್ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ‘ಗೋ ರಕ್ಷಕರನ್ನು ಬಂಧಿಸಿ ಜೈಲಿಗೆ ಕಳುಹಿಸಿ’ ಎಂದು ಕರ್ನಾಟಕದ ಸಚಿವ ಪ್ರಿಯಾಂಕ್ ಖರ್ಗೆ ಅವರು ಪೊಲೀಸರೊಂದಿಗೆ ನಡೆದ ಸಭೆಯೊಂದರಲ್ಲಿ ಆದೇಶ ನೀಡಿದ್ದಾರೆ. ಈ ಹೇಳಿಕೆಯು ಪ್ರಿಯಾಂಕ್ ಅವರ ಹಿಂದೂ ವಿರೋಧಿ ಧೋರಣೆಯನ್ನು ತೋರಿಸುತ್ತದೆ. ಕರ್ನಾಟಕದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ತಲೆದೋರಿದೆ ಎಂಬಂಥ ಬರಹಗಳನ್ನು, ಪ್ರಿಯಾಂಕ್ ಹೇಳಿದ್ದಾರೆ ಎನ್ನಲಾದ ವಿಡಿಯೊದೊಂದಿಗೆ ಹಂಚಿ-ಕೊಳ್ಳಲಾಗುತ್ತಿದೆ. ಕರ್ನಾಟಕ ಬಿಜೆಪಿಯು ತನ್ನ ಅಧಿಕೃತ ಟ್ವಿಟರ್ ಖಾತೆ ಮೂಲಕ ಪ್ರಿಯಾಂಕ್ ಅವರ ಹೇಳಿಕೆಗೆ ವಿರೋಧ ವ್ಯಕ್ತಪಡಿಸಿದೆ. ಕಾನೂನುಬಾಹಿರ ಗೋ ಸಾಗಣೆ ನಡೆಸುವವ-ರನ್ನು ಶಿಕ್ಷಿಸುವ ಬದಲು, ಗೋ ರಕ್ಷಕರನ್ನು ಶಿಕ್ಷಿಸಿ ಎಂದು ಪೊಲೀಸರಿಗೆ ಸಚಿವರು ಆದೇಶ ನೀಡಿದ್ದಾರೆ ಎಂದು ಅದು ಆರೋಪಿಸಿದೆ. ಸಾವಿರಾರು ಜನರು, ಇತರೆ ರಾಜ್ಯಗಳ ಬಿಜೆಪಿ ನಾಯಕರೂ ಈ ವಿಡಿಯೊವನ್ನು ಹಂಚಿಕೊಂಡಿದ್ದಾರೆ. ಆದರೆ ಇದು ತಿರುಚಲಾದ ವಿಡಿಯೊ.

✓ ‘ಸಂಘ ಸಂಸ್ಥೆಗಳ ಹೆಸರಲ್ಲಿ, ವ್ಯಕ್ತಿಗಳು ತಮ್ಮನ್ನು ಗೋ ರಕ್ಷಕರು ಎಂದು ಹೇಳಿಕೊಂಡು ಕಾನೂನನ್ನು ಕೈಗೆತ್ತಿಕೊಂಡರೆ, ಅಂಥವರನ್ನು ಬಂಧಿಸಿ’ ಎಂದು ಪೊಲೀಸರೊಂದಿಗೆ ನಡೆದ ಸಭೆಯಲ್ಲಿ ಪ್ರಿಯಾಂಕ್ ಅವರು ಹೇಳಿದ್ದಾರೆ. ಸಚಿವರ ಪೂರ್ಣ ವಿಡಿಯೊದಲ್ಲಿನ ಕೆಲವು ಭಾಗಗಳನ್ನು ಮಾತ್ರ ಇಟ್ಟುಕೊಂಡು, ತಿರುಚಲಾದ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಈ ಬಗ್ಗೆ ಪ್ರಿಯಾಂಕ್ ಖರ್ಗೆ ಅವರೂ ಸ್ಪಷ್ಟನೆ ನೀಡಿದ್ದಾರೆ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಬದುಕಿನ ಸಾರ - ನಗು

ಬರಿಯ ಪೊಳ್ಳುವಿಚಾರ ಮನುಷ ವ್ಯಾಪಾರ |
ಪರಿಕಿಸಲು ಪುಣ್ಯವೆಂಬುದುಮಹಂಕಾರ ||
ಅರಳೆ ಮೊಗವನಿತಿನಿತು, ನಕ್ಕು ನಗಿಸಿರೆ ಸಾರ |
ಹೊರೆ ಮಿಕ್ಕ ಸಂಸಾರ – ಮಂಕುತಿಮ್ಮ || **915** ||

ಪದ-ಅರ್ಥ: ಪರಿಕಿಸಲು = ಪರೀಕ್ಷಿಸಲು, ಪುಣ್ಯ-ವೆಂಬುದುಮಹಂಕಾರ = ಪುಣ್ಯ + ಎಂಬುದು-ಮ್(ಎಂಬುದು) + ಅಹಂಕಾರ, ಮೊಗವನಿತಿನಿತು- = ಮೊಗವನು + ಇನಿತು + ಇನಿತು, ಸಾರ = ಸತ್ವ.

ವಾಚ್ಯಾರ್ಥ: ಮನುಷ್ಯ ಜೀವನದ ಭೌತಿಕ ವ್ಯವಹಾರ ಕೇವಲ ಪೊಳ್ಳು. ಪರೀಕ್ಷಿಸಿ ನೋಡಿದರೆ ಪುಣ್ಯಸಂಪಾದನೆ ಎನ್ನುವುದೂ ಅಹಂಕಾರವೇ. ಮುಖವನ್ನು ಕೊಂಚ ಅರಳಿಸಿ, ತಾನೂ ನಕ್ಕು ಮತ್ತೊಬ್ಬರನ್ನು ನಗಿಸಿದರೆ ಬದುಕು ಸತ್ವಯುತ. ಉಳಿದಸಂಸಾರವೆಲ್ಲ ಬರೀ ಭಾರ.

ವಿವರಣೆ: ಬದುಕಿರುವ ವರೆಗೆ ಮನುಷ್ಯ, ಮನುಷ್ಯ ಸಂಬಂಧಗಳು, ವ್ಯವಹಾರಗಳು ನಡೆದೇ ಇರುತ್ತವೆ. ಆದರೆ ಯಾವ ವ್ಯವಹಾರವೂ ಶಾಶ್ವತವಲ್ಲ, ಇಂದು ಸರಿಯಾದದ್ದು ಎನ್ನಿಸಿದ್ದು ಮುಂದೆಂದೊ ತಪ್ಪು ನಿರ್ಧಾರ ಎನ್ನಿಸಬಹುದು ಅಥವಾಇಂದು ತಪ್ಪಾಗಿದ್ದದ್ದು ಮುಂದೆ ಅತ್ಯುತ್ತಮ ತೀರ್ಮಾನವಾ-ಗಬಹುದು. ಮಾಡಿದ ಕೆಲಸ ಮರೆತು ಹೋಗುತ್ತದೆ. ಸಂಬಂಧಗಳು ಮರೆಯಾಗುತ್ತವೆ. ಯಾವುದು ಶಾಶ್ವತವೆಂದು ಭಾವಿಸಿ ರಕ್ಷಿಸುತ್ತಿದ್ದೆವೋ ಅದು ಅಲ್ಪಕಾಲದ್ದು ಎಂದು ತಿಳಿದು ನೋವಾಗುತ್ತದೆ. ನಾನು ತುಂಬ ಧರ್ಮದ ಕಾರ್ಯಗಳನ್ನು ಮಾಡಿದ್ದೇನೆ, ಜನಪ್ರಿಯನಾಗಿದ್ದೇನೆ, ಪುಣ್ಯಗಳಿಸಿ-ದ್ದೇನೆ ಎನ್ನುವುದೂ ಅಹಂಕಾರವೇ. ಅಹಂಕಾರಕ್ಕೆ ಒಂದಲ್ಲ ಒಂದು ದಿನ ಪೆಟ್ಟು ಬಿದ್ದು ನೋವು ತರುತ್ತದೆ. ಅದಕ್ಕೇ ಅಲ್ಲಮಪ್ರಭು ಹೇಳಿದ, “ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದು:ಖ ನೋಡಾ”. ಡಾ. ಗೋಪಾಲಕೃಷ್ಣ ಅಡಿಗರ ಒಂದು ಅದ್ಭುತವಾದ ಕವನ ಇದನ್ನೇ ಧ್ವನಿಸುತ್ತದೆ.

ಅಳುವ ಕಡಲೊಳು ತೇಲಿ ಬರುತಲಿದೆ ನಗೆಯ ಹಾಯಿದೋಣಿ |
ಆಶೆಯೆಂಬ ತಳ ಒಡೆದ ದೋಣಿಯಲಿ ದೂರ ತೀರಯಾನ |
ಯಾರ ಲೀಲೆಗೋ ಯಾರೊ ಏನೊ ಗುರಿ ಇಡದೆ ಬಿಟ್ಟಬಾಣ ||
ಇದು ಬಾಳು ನೋಡು ಇದು ತಿಳಿದೆವೆಂದರೂ ತಿಳಿದ ಧೀರನಿಲ್ಲ |
ಹಲವುತನದ ಮೈಮರೆಸುವಾಟವಿದು ನಿಜವು ತೋರದಲ್ಲ ||

ಬದುಕೆಂಬ ದು:ಖದ ಕಡಲಿನಲ್ಲಿ ನಗೆಯೇ ಒಂದು ಹಾಯಿದೋಣಿ. ಅದಿರುವುದರಿಂ-ದಲೇ ಬದುಕಿನ ಕಡಲಪ್ರಯಾಣ ಸಹ್ಯವಾಗುತ್ತದೆ, ಸಾಧ್ಯವಾಗುತ್ತದೆ. ಈ ಬಾಳನ್ನು ಸಂಪೂರ್ಣವಾಗಿ ತಿಳಿದಿದ್ದೇನೆಂಬ ಧೀರನಿಲ್ಲ ಮತ್ತು ಹಲವು ವಿಧದಲ್ಲಿ ಮೈಮರೆಸುವ ಆಟಗಳನ್ನಾಡುವ ಪ್ರಪಂಚದಲ್ಲೇ ಇದ್ದರೂ ಅದರ ನಿಜ ನಮಗೆ ತಿಳಿಯದು. ಹಾಗಿರುವಾಗ ಕಗ್ಗ ಒಂದು ಸಮಾಧಾನದ ಸೂತ್ರವನ್ನು ಹೇಳುತ್ತದೆ. ಸಾಧ್ಯವಿದ್ದಷ್ಟು ಕಾಲ, ಸಾಧ್ಯವಿದ್ದಷ್ಟು ಮಟ್ಟಿಗೆ ಮುಖವನ್ನು ಅರಳಿಸಿ ನಕ್ಕು, ಮತ್ತೊಬ್ಬರಲ್ಲೂ ನಗೆ ಮೂಡಿಸಿದರೆ ಬದುಕು ಹಗುರವಾಗುತ್ತದೆ. ಅದಷ್ಟೇ ಬದುಕಿನ ಸುಖದ ಭಾಗ. ಉಳಿದದ್ದೆಲ್ಲ ಸಂಸಾರದ ಹೊರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಜೂನ್ 28, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುದ್ಧ ದಶಮಿ ಗಂ. 27-19, ನಕ್ಷತ್ರ: ಚಿತ್ತಾ ಗಂ. 16-01 ಯೋಗ: ಪರಿಘ ಗಂ. 06-08 ನಂತರ ಶಿವ ಗಂ. 29-15, ಮಿಥುನ ಮಾಸದ 13 ನೇ ದಿನ, ಮಳೆನಕ್ಷತ್ರ: ಆರ್ದ್ರಾ 2.
ರಾಹುಕಾಲ : ಮಧ್ಯಾಹ್ನ 12-00 - 01-30
ಸೂರ್ಯೋದಯ : 06-10 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 09 ಜುಲ್‌ಹಿಜಾ, ದಿನ ವಿಶೇಷ : ಪುನರ್ಯಾತ್ರಾ ಅಲ್ಲರತ್ (ಒರಿಸ್ಸಾ), ಬಹುದಾ ಯಾತ್ರಾ, ಅದೃಷ್ಟ ಸಂಖ್ಯೆ : 12, 2

ಮೇಷ: ಸರ್ಕಾರಿ ಕೆಲಸಗಳು ಸುಗಮವಾಗಿ ಸಾಗಲಿದೆ. ಮಗನ ಉದ್ಯೋಗ ನಿಮಿತ್ತದ ವಿದೇಶ ಪ್ರಯಾಣ ಸಂತೋಷ ಉಂಟುಮಾಡುವುದು. ಸ್ವಂತವಾದ ಮನೆಯ ನಿರ್ಮಾಣ ಮಾಡಲು ಅಥವಾ ಕೊಳ್ಳಲು ಸುಸಮಯ.

ವೃಷಭ: ಭಾವನೆಗಳಿಗೆ ಉತ್ತಮ ಪ್ರಶಂಸೆ ಸಿಗುವ ದಿನ ಇದಾಗಿದೆ. ವೈಯಕ್ತಿಕ ವಿಚಾರಕ್ಕಾಗಿ ದೂರದ ಊರಿಗೆ ಪ್ರಯಾಣ ಮಾಡುವ ಅವಕಾಶ ಒದಗಿ ಬರಬಹುದು. ಚಿನ್ನಾಭರಣ ಮಾರಾಟಗಾರರಿಗೆ ಶುಭ ದಿನ.

ಮಿಥುನ: ಸಮಾಜದಲ್ಲಿ ಗಣ್ಯವ್ಯಕ್ತಿಯಾಗಿರುವವರನ್ನು ನೋಡುವ ಅವರಲ್ಲಿ ಮಾತನಾಡುವ ಅವಕಾಶ ನಿಮಗೆ ಸಿಗುವುದು. ಶಸ್ತ್ರ ಚಿಕಿತ್ಸೆಯ ವಿಚಾರವಾಗಿ ವೈದ್ಯರ ಮಾತುಗಳನ್ನು ಗಮನವನ್ನು ಇಟ್ಟು ಕೇಳುವುದು ಸೂಕ್ತ.

ಕರ್ಕಾಟಕ: ದೈನಂದಿನ ಖರ್ಚು-ವೆಚ್ಚಗಳಿಗಾಗಿ ಹಾಗೂ ಜೀವನೋಪಾಯಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳುವಿರಿ. ಆರೋಗ್ಯದ ವಿಷಯದಲ್ಲಿ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಮನಸ್ಸಿಗೆ ಸಮಾಧಾನ ಇರುವುದು.

ಸಿಂಹ: ಪ್ರಯತ್ನಗಳಿಗೆ ವ್ಯಕ್ತಿಯೊಬ್ಬರ ಬೆಂಬಲ ದೊರೆತು ಯಶಸ್ವಿಯಾಗಿ ನೆರವೇರಲಿದೆ. ನಿಮ್ಮ ಈಗಿನ ಉದ್ಯೋಗದಲ್ಲಿ ಸ್ಥಿರತೆ ಮತ್ತು ಧನಾನುಕೂಲತೆ ಇರುತ್ತದೆ. ಯಂತ್ರಗಳ ರಿಪೇರಿ ಕೆಲಸಗಾರರಿಗೆ ಅಧಿಕ ವರಮಾನ.

ಕನ್ಯಾ: ತೆಗೆದುಕೊಂಡಿರುವ ನಿರ್ಧಾರ ಸರಿಯಾದುದೆಂದು ಈ ದಿನ ನಿಮಗೆ ಮನವರಿಕೆಯಾಗುವುದು. ವೃತ್ತಿ ಪ್ರವೃತ್ತಿಗಳಲ್ಲಿ ಸಮತೋಲನ ಕಾಯ್ದುಕೊಳ್ಳಿರಿ. ಬಾಳಸಂಗಾತಿಯ ಮಾತುಗಳಿಗೆ ನಿಮ್ಮ ಸಹಮತವಿರಲಿ.

ತುಲಾ: ತಂದೆ ತಾಯಿಯ ಶುಭ ಆಶೀರ್ವಾದದೊಂದಿಗೆ ಈ ದಿನವನ್ನು ಪ್ರಾರಂಭಿಸಿ. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದಲ್ಲಿ ಗಮನಹರಿಸಬೇಕು. ಆಯುರ್ವೇದದ ಪ್ರಭಾವದಿಂದ ಆರೋಗ್ಯವು ಸುಧಾರಿಸುವುದು.

ವೃಶ್ಚಿಕ: ಆಲೋಚನೆಯಲ್ಲಿ ಉದ್ಯೋಗಿಗಳ ಯಾವುದೇ ತರಹದ ಒತ್ತಡಕ್ಕೆ ಮಣಿಯದೆ ಕೆಲಸದಲ್ಲಿ ಮುನ್ನುಗ್ಗಿ. ಉನ್ನತ ವ್ಯಾಸಂಗಕ್ಕಾಗಿ ಪಟ್ಟ ಪರಿಶ್ರಮ ಶುಭಫಲ ನೀಡಲಿದೆ. ರಕ್ತ ಪರೀಕ್ಷೆ ಮಾಡಿಸಿಕೊಳ್ಳುವುದು ಉತ್ತಮ.

ಧನು: ಮಕ್ಕಳಿಂದ ಅಹಿತಕರ ಘಟನೆಗಳು ನಡೆದು ಪಾಲಕರಿಗೆ ಭವಿಷ್ಯದ ಬಗ್ಗೆ ಯೋಚನೆಗಳು ಬರಲಿದೆ. ಕುಡಿಯುವ ನೀರಿನ ಶುದ್ಧತೆಯ ಬಗ್ಗೆ ಸೇವನೆಯ ಮೊದಲಾಗಿ ಗಮನಿಸಿ. ಸ್ವಂತ ಉದ್ದಿಮೆ ಆರಂಭಿಸುವ ಮನಸ್ಸಾಗಲಿದೆ.

ಮಕರ: ಧೈರ್ಯದಿಂದ ದೊಡ್ಡ ದೊಡ್ಡ ಯೋಜನೆ ಕೈಗೊಳ್ಳಬಹುದು, ಆದರೆ ಹಣದ ವಿಚಾರದಲ್ಲಿ ಎಚ್ಚರ ವಹಿಸಿ. ಸ್ವಯಂ ಸಾಮರ್ಥ್ಯದ ಬಗ್ಗೆ ಈ ದಿನ ಅರಿವಾಗುವುದು. ಉದ್ಯೋಗದಲ್ಲಿ ದೃಢಚಿತ್ತದಿಂದ ಮುಂದುವರಿಯಿರಿ.

ಕುಂಭ: ಯೋಚಿಸಿದ ವಿಶೇಷ ಕಾರ್ಯಗಳಿಗೆ ಪತ್ನಿ ಮಕ್ಕಳಿಂದ ಸಹಕಾರ ದೊರೆತು ಕಾರ್ಯ ನೆರವೇರುವುದು. ಸಂಘ- ಸಂಸ್ಥೆಗಳಿಗೆ ಪದಾಧಿಕಾರಿಯಾ-ಗುವ ಅವಕಾಶ ಸಿಗಲಿದೆ. ಮಿತ್ರರ ಬೇಟಿಯಿಂದ ಸಂತೋಷ ಹೆಚ್ಚುವುದು.

ಮೀನ: ಯೋಜನೆಗಳು ಸರಿಯಾದ ಹಾದಿಯಲ್ಲಿ ಸಾಗುತ್ತಿರುವುದರಿಂದ ಸಮಾಧಾನ ಇರಲಿದೆ. ಜೀವನವನ್ನು ಹಿರಿಯರ ಮಾತಿನಂತೆ ನಡೆದುಕೊಳ್ಳು-ವುದು ಉತ್ತಮ. ನೂತನ ಭೂ ಖರೀದಿಗೆ ಚಿಂತನೆ ನಡೆಸಬಹುದು.

ಪದಬಂಧ 5363

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಅತಿಶಯವಾದ ಮಾತು (3)
4.ಕ್ಷೌರಿಕನ ಸಲಕರಣೆಯ ಪೆಟ್ಟಿಗೆ (3)
5.ಕೊನೆಗೆ ವೇಶವನ್ನಿಟ್ಟು ಸೇರುವಿಕೆ! (4)
6.ಹೊಳೆಯ ದಂಡೆಯಿದು (4)
8.ನರಕದಲ್ಲಿರುವ ಮನುಷ್ಯ (2)
10.ಹೀಗೆ ಮುಷ್ಟಿಯಿಂದ ಚುಚ್ಚು (2)
13.ತಾಯಿಯ ಮನೆಯಲ್ಲಿರುವ ಕಿಟಕಿ (4)
14.ಸರ್ಕಾರಕ್ಕೆ ಸೇರಬೇಕಾದ ಕಂದಾಯನಿಗದಿಪಡಿಸುವುದು (4)
15.ಬೇಡುವವ ಇಲ್ಲಿದ್ದಾನೆ (3)
16.ತಾರುಣ್ಯವನ್ನು ಹೀಗೆನ್ನಿ (3)

ಮೇಲಿಂದ ಕೆಳಕ್ಕೆ
1.ಪಂಚಾಯಿತರ ಸಮ್ಮುಖದಲ್ಲಿ ಸಿದ್ಧಪಡಿಸಿದ ವರದಿ (6)
2.ಬ್ರಹ್ಮೋಪದೇಶವನ್ನು ಹೀಗನ್ನಿ (5)
3.ಆ ವೇಷ ಧರಿಸಿದವನ ರೋಷ ! (3)
5.ವಾಗ್ದೇವಿಯ ಇನ್ನೊಂದು ಹೆಸರು (4)
7.ಇದು ಚರಿತ್ರೆಗೆ ಸಂಬಂಧಿಸಿದುದು (6)
9.ರಸತಂತ್ರಜ್ಞನನ್ನು ಹೀಗೂ ಕರೆವರು (4)
11.ಲೋಹದ ಹಕ್ಕಿಯಲ್ಲಿನ ಪಯಣ (5)
12.ಮಗಳ ಗಂಡ (3)

1	■	2			■	■	3	■
4			■	■	5			
	■	6				■		■
	■		■	■		■	■	7
	■	8	9	■	10	11	■	
	■	■		■	■		■	
■	12	■	13				■	
14				■	■	15		
■		■	■	16			■	

5362ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಖುಜುತೆ 4.ಗಡಿಯಾರ
6.ವಿದೂಷಕ 8.ಕೆಸರು
11.ಲುಬ್ಧಕ 13.ಪರಂಧಾಮ
17.ತಟವಟ 18.ಕರುಳು

ಮೇಲಿಂದ ಕೆಳಕ್ಕೆ :
1.ಖುತ್ವಿಕ್ಕು 2.ತೆಗಳಿಕೆ
3.ನಿಕಷ 5.ರವಿ
7.ಕರ್ಪೂರ 9.ರುಮಾಲು
10.ಸಂತಾಪ 12.ಕರ್ನಾಟಕ
14.ರಂಜಕ 15.ಮತ
16.ಮರಳು

ಸುಡೊಕು 5749

2		8		7			6	
			4		2			1
	3	1		5		2		
6		4		3			5	
5	7	2	6		9			8
				2			4	
3				1			9	
		5	8		3	6		7
1				6				3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5748 ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,691
ಇಂದಿನ ಅಂತ್ಯ	18,817
▲	126
ದಿನದ ಕನಿಷ್ಠ	18,829

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹600
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹603

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1675(1690)
ಸೋಯಾ (ರಿಫೈಂಡ್)	₹950(980)
ಸೂರ್ಯಕಾಂತಿ (ರಿಫೈಂಡ್)	₹950(940)
ಪಾಮೋಲಿನ್	₹850(857)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹144.50
ಗುಡ್ ಲಾಟ್	₹125

ಕೊಬ್ಬರಿ ಧಾರಣೆ

ಕೆ.ಆರ್.ಪೇಟೆ (ಇತರ)	₹7900-7900
ಪುತ್ತೂರು (ಇತರ)	₹4500-7300

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹222-400
ದ್ವಿತಳಿ (ಬಿ.ವಿ)	₹266-538

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1,200-1,500
ಮಧ್ಯಮ	₹800-1,200
ಸಣ್ಣ	₹400-800

ಎಚ್‌ಡಿಎಫ್‌ಸಿ ವಿಲೀನ ಜುಲೈ 1ರಿಂದ ಅನ್ವಯ

ಮುಂಬೈ (ಪಿಟಿಐ): ಗೃಹಸಾಲ ಮಾರುಕಟ್ಟೆಯ ಪ್ರಮುಖ ಕಂಪನಿ ಎಚ್‌ಡಿಎಫ್‌ಸಿ ಹಾಗೂ ದೇಶದ ಅತಿದೊಡ್ಡ ಖಾಸಗಿ ಬ್ಯಾಂಕ್ ಆಗಿರುವ ಎಚ್‌ಡಿಎಫ್‌ಸಿ ಬ್ಯಾಂಕ್‌ನ ವಿಲೀನವು ಜುಲೈ 1ರಿಂದ ಜಾರಿಗೆ ಬರಲಿದೆ ಎಂದು ಎಚ್‌ಡಿಎಫ್‌ಸಿ ಅಧ್ಯಕ್ಷ ದೀಪಕ್ ಪಾರೇಖ್ ಹೇಳಿದ್ದಾರೆ.

ಎಚ್‌ಡಿಎಫ್‌ಸಿ ಹಾಗೂ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಆಡಳಿತ ಮಂಡಳಿಗಳು ಜೂನ್ 30ರಂದು ಸಭೆ ಸೇರಿ, ವಿಲೀನಕ್ಕೆ ಒಪ್ಪಿಗೆ ನೀಡಲಿವೆ ಎಂದು ಪಾರೇಖ್ ತಿಳಿಸಿದ್ದಾರೆ.

ಎಚ್‌ಡಿಎಫ್‌ಸಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಎಚ್‌ಡಿಎಫ್‌ಸಿ ಬ್ಯಾಂಕ್ ಹಿಂದಿನ ವರ್ಷದ ಏಪ್ರಿಲ್ 4ರಂದು ಒಪ್ಪಿಗೆ ನೀಡಿತು. ವಿಲೀನದ ನಂತರದ ಬ್ಯಾಂಕ್, ದೇಶದ ಹಣಕಾಸು ಸೇವಾ ಮಾರುಕಟ್ಟೆಯಲ್ಲಿ ದೈತ್ಯ ಕಂಪನಿಯಾಗಲಿದೆ. ದೇಶದ ಕಾರ್ಪೊರೇಟ್ ಇತಿಹಾಸ ಕಂಡಿರುವ ಅತಿದೊಡ್ಡ ವಹಿವಾಟು ಇದು ಎಂದು ಹೇಳಲಾಗಿದೆ. ವಿಲೀನದ ನಂತರದ ಕಂಪನಿಯ ಆಸ್ತಿ ಮೌಲ್ಯವು ಸರಿಸುಮಾರು ₹18 ಲಕ್ಷ ಕೋಟಿ ಆಗಲಿದೆ.

ಎಚ್‌ಡಿಎಫ್‌ಸಿ ಷೇರುದಾರರಿಗೆ ಪ್ರತಿ 25 ಷೇರುಗಳಿಗೆ, ಎಚ್‌ಡಿಎಫ್‌ಸಿ ಬ್ಯಾಂಕ್‌ನ 42 ಷೇರುಗಳು ಸಿಗಲಿವೆ.

ಯುಪಿಐ ಕ್ರೆಡಿಟ್ ಕಾರ್ಡ್ ಪಾವತಿಗೆ ಕೆನರಾ ಬ್ಯಾಂಕ್ ಚಾಲನೆ

ಬೆಂಗಳೂರು: ರುಪೇ ಕ್ರೆಡಿಟ್ ಕಾರ್ಡ್‌ನ ಹಣವನ್ನು ಯುಪಿಐ ವ್ಯವಸ್ಥೆಯ ಮೂಲಕ ಪಾವತಿ ಮಾಡುವ ಸೌಲಭ್ಯವನ್ನು ಕೆನರಾ ಬ್ಯಾಂಕ್ ಜಾರಿಗೆ ತಂದಿದೆ. ಈ ಸೌಲಭ್ಯವನ್ನು ಕೆನರಾ ಬ್ಯಾಂಕ್‌ನ 'ಕೆನರಾ ಎಐ1' ಆ್ಯಪ್ ಮೂಲಕ ಪಡೆಯಬಹುದು.

ಎನ್‌ಪಿಸಿಐ ಜೊತೆಗೂಡಿ ಈ ಸೌಲಭ್ಯವನ್ನು ಜಾರಿಗೆ ತಂದಿರುವ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಪೈಕಿ ತಾನೇ ಮೊದಲಿಗ ಎಂದು ಕೆನರಾ ಬ್ಯಾಂಕ್ ಹೇಳಿಕೊಂಡಿದೆ.

ಕೆನರಾ ಬ್ಯಾಂಕ್ ಗ್ರಾಹಕರು ಇನ್ನು ಮುಂದೆ ಯುಪಿಐ ಬಳಸಿ ತಮ್ಮ ಉಳಿತಾಯ ಖಾತೆಯಿಂದ ಮಾತ್ರವೇ ಅಲ್ಲದೆ, ರುಪೇ ಕ್ರೆಡಿಟ್ ಕಾರ್ಡ್‌ನಿಂದಲೂ ಪಾವತಿ ಮಾಡಬಹುದು ಎಂದು ಪ್ರಕಟಣೆ ಹೇಳಿದೆ. ರುಪೇ ಕ್ರೆಡಿಟ್ ಕಾರ್ಡ್‌ಗಳನ್ನು ಯುಪಿಐ ಜೊತೆ ಜೋಡಿಸುವ ವ್ಯವಸ್ಥೆಗೆ ಆರ್‌ಬಿಐ ಈಚೆಗೆ ಅನುಮತಿ ನೀಡಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಏಳನೇ ವರ್ಷದ ಪುಣ್ಯಸ್ಮರಣೆ



ಶ್ರೀ ಕೆ. ಎಲ್. ನಂಜುಂಡರೆಡ್ಡಿ

ಮಾಜಿ ಛೇರ್ಮನ್, ದೊಡ್ಡ ಕನ್ನೆಲ್ಲಿ

ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ನಿಮ್ಮ ಆದರ್ಶ ಜೀವನ ನಮಗೆ ಎಂದಿಗೂ ಮಾರ್ಗದರ್ಶನ. ನಿಮ್ಮ ನೆನಪು ಸದಾ ಹಸಿರು ಮತ್ತು ಸ್ಫೂರ್ತಿದಾಯಕ.

ನಮ್ಮೆಲ್ಲರಿಗೆ ಸದಾ ಸ್ಫೂರ್ತಿಯಾಗಿರುವ
ಸದಾ ನಿಮ್ಮನ್ನು ಸ್ಮರಿಸುವ
ಪತ್ನಿ ಶ್ರೀಮತಿ ನಾಗಮ್ಮ ಮತ್ತು ಕುಟುಂಬವರ್ಗದವರು

ಬೆಲೆ ನಿಯಂತ್ರಣ: ತೊಗರಿ ಕಾಳು ಮಾರಲಿರುವ ಕೇಂದ್ರ

ನವದೆಹಲಿ (ಪಿಟಿಐ): ತೊಗರಿ ಬೇಳೆಯ ಬೆಲೆ ಏರಿಕೆಯನ್ನು ನಿಯಂತ್ರಣದಲ್ಲಿ ಇರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ತನ್ನ ಸಂಗ್ರಹದಲ್ಲಿ ಇರುವ ತೊಗರಿ ಕಾಳನ್ನು ಅರ್ಹ ಮಿಲ್‌ಗಳಿಗೆ ಮಾರಾಟ ಮಾಡಲಿದೆ.

'ಆಮದು ತೊಗರಿ ಬೇಳೆಯು ದೇಶದ ಮಾರುಕಟ್ಟೆಯನ್ನು ತಲುಪುವವರೆಗೆ ಕೇಂದ್ರವು ತನ್ನ ಸಂಗ್ರಹದಲ್ಲಿನ ತೊಗರಿ ಕಾಳನ್ನು ಬಿಡುಗಡೆ ಮಾಡಲಿದೆ' ಎಂದು ಪ್ರಕಟಣೆ ತಿಳಿಸಿದೆ.

ಆನ್‌ಲೈನ್ ಹರಾಜು ಮೂಲಕ ತೊಗರಿ ಕಾಳನ್ನು ಮಾರಾಟ ಮಾಡುವಂತೆ ಗ್ರಾಹಕ ವ್ಯವಹಾರಗಳ ಇಲಾಖೆಯು ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಮಹಾಮಂಡಳ (ನಾಫೆಡ್) ಹಾಗೂ ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳಕ್ಕೆ (ಎನ್‌ಸಿಸಿಎಫ್) ಸೂಚನೆ ನೀಡಿದೆ ಎಂದೂ ಪ್ರಕಟಣೆಯು ತಿಳಿಸಿದೆ.

ತೊಗರಿ ಬೇಳೆಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದಾಗ, ಅದರಿಂದಾಗಿ ಗ್ರಾಹಕರಿಗೆ ತೊಗರಿ ಬೇಳೆಯು ಎಷ್ಟರ ಮಟ್ಟಿಗೆ ಕಡಿಮೆ ಬೆಲೆಯಲ್ಲಿ ಲಭ್ಯವಾಯಿತು ಎಂಬುದನ್ನು ಆಧರಿಸಿ ಮುಂದೆ ಎಷ್ಟು ಪ್ರಮಾಣದಲ್ಲಿ ಹಾಗೂ ಎಷ್ಟು ದಿನಗಳಿಗೆ ಒಮ್ಮೆ ಮಾರುಕಟ್ಟೆಗೆ ಬಿಡುಗಡೆ ಮಾಡಬೇಕು ಎಂಬುದನ್ನು ತೀರ್ಮಾನಿಸಲಾಗುತ್ತದೆ.

ಕೇಂದ್ರ ಸರ್ಕಾರವು ಅಗತ್ಯ ವಸ್ತುಗಳ ಕಾಯ್ದೆ 1955ರ ಅಡಿಯಲ್ಲಿ, ಉದ್ದಿನ ಬೇಳೆ ಹಾಗೂ ತೊಗರಿ ಬೇಳೆಯ ದಾಸ್ತಾನಿನ ಮೇಲೆ ಈಗಾಗಲೇ ಮಿತಿ ಹೇರಿದೆ.

ತೊಗರಿ ಬೇಳೆ ಬೆಲೆ ಏರಿಕೆ ಎಲ್ಲಿ, ಎಷ್ಟು?

ನಗರ	ಮೇ 26	ಜೂನ್ 26
	ಪ್ರತಿ ಕೆ.ಜಿಗೆ ₹ಗಳಲ್ಲಿ	
ಬೆಂಗಳೂರು	131	143
ಧಾರವಾಡ	136	157
ಮಂಗಳೂರು	123	124
ಕಲಬುರಗಿ	121	129

ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರಗಳ ಇಲಾಖೆಯ, ಆಹಾರ ಪದಾರ್ಥಗಳ ಬೆಲೆ ನಿಗಾ ವಿಭಾಗದಲ್ಲಿ ಇರುವ ಮಾಹಿತಿ. ಬೆಂಗಳೂರು ಹಾಗೂ ಧಾರವಾಡದಲ್ಲಿ ತೊಗರಿಬೇಳೆ ಬೆಲೆ ಏರಿಕೆ ಹೆಚ್ಚಿದೆ. ಮಂಗಳೂರು ಮತ್ತು ಕಲಬುರಗಿಯಲ್ಲಿ ಬೆಲೆ ಏರಿಕೆ ಪ್ರಮಾಣವು ಅಲ್ಪಮಟ್ಟದಲ್ಲಿ ಇದೆ

ಏರಿಕೆ ಕಂಡ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರದ ವಹಿವಾಟಿನಲ್ಲಿ ಏರಿಕೆ ದಾಖಲಿಸಿವೆ. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 446 ಅಂಶ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 126 ಅಂಶ ಏರಿಕೆ ಕಂಡಿವೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಹಾಗೂ ಎಚ್‌ಡಿಎಫ್‌ಸಿ, ಐಸಿಐಸಿಐ ಬ್ಯಾಂಕ್, ಎಕ್ಸಿಸ್ ಬ್ಯಾಂಕ್ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದರು. ಅಲ್ಲದೆ, ರಿಯಾಲ್ಟಿ, ಐ.ಟಿ. ವಲಯದ ಷೇರುಗಳ ಖರೀದಿಯೂ ಹೆಚ್ಚಿತ್ತು ಎಂದು ವರ್ತಕರು ಹೇಳಿದ್ದಾರೆ.

'ಬ್ಯಾಂಕಿಂಗ್ ಮತ್ತು ಹಣಕಾಸು ವಲಯದ ಷೇರುಗಳ ಖರೀದಿ ಹೆಚ್ಚಿದ್ದ ಕಾರಣದಿಂದಾಗಿ ಸೂಚ್ಯಂಕಗಳು ಜಿಗಿದಿವೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 1.12ರಷ್ಟು ಕಡಿಮೆ ಆಗಿದ್ದು ಪ್ರತಿ ಬ್ಯಾರೆಲ್‌ಗೆ 73.35 ಡಾಲರ್‌ಗೆ ತಲುಪಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 300-350
ನಡುಗೋಲು 450-500
ರಾಶಿ 500-550
ರಾಶಿ ಉತ್ತಮ 750-800
ಜರಡಿ 1,000 - 1,050
ಹೆರಕಿದ್ದು 1,200-1,300
ಹಸಿರು ಸಾಧಾರಣ 8,00-9,00
ಹಸಿರು ಉತ್ತಮ 1,000-1,100
ಹಸಿರು ಅತಿ ಉತ್ತಮ 1,600-1,650

ಅಡಿಕೆ
ಬಂಟ್ವಾಳ
ಕೋಕ 12,500-25,000
ಹೊಸತು 27,500-41,500
ಹಳತು 48,000-50,500
ಕಾರ್ಕಳ
ಹೊಸತು 30,000-41,500
ಹಳತು 40,000-50,000
ಪುತ್ತೂರು
ಕೋಕ 11,000-25,000
ಹೊಸತು 34,000-41,500
ಸಾಗರ
ಬಿಳಿಗೋಟು 30,199-33,599
ಚಾಲಿ 37,209-38,109
ಕೋಕ 32,789-34,499
ಕೆಂಪುಗೋಟು 32,989-38,009
ರಾಶಿ 37,899-51,899
ಸಿಪ್ಪೆಗೋಟು 19,389-22,023
ಶಿವಮೊಗ್ಗ
ಬೆಟ್ಟೆ 47,400-53,189
ಗೊರಬಲು 21,001-39,699
ರಾಶಿ 30,419-53,211
ಸರಕು 51,899-83,200
ಸಿದ್ದಾಪುರ
ಬಿಳಿಗೋಟು 22,699-33,599
ಚಾಲಿ 36,089-39,139
ಕೋಕ 16,869-32,899
ಕೆಂಪುಗೋಟು 29,099-33,900
ರಾಶಿ 44,109-50,209
ತಟ್ಟಿಬೆಟ್ಟೆ 38,489-43,099
ಶಿರಸಿ
ಬೆಟ್ಟೆ 35,809-46,999
ಬಿಳಿಗೋಟು 24,109-34,199
ಚಾಲಿ 36,398-39,898
ಕೆಂಪುಗೋಟು 25,696-36,361
ರಾಶಿ 47,218-49,999
ಯಲ್ಲಾಪುರ
ಆಪಿ 54,009-54,199
ಬಿಳಿಗೋಟು 24,899-35,000
ಚಾಲಿ 35,812-39,599
ಕೋಕ 18,899-33,612
ಕೆಂಪುಗೋಟು 30,969-36,612
ರಾಶಿ 44,080-53,989
ತಟ್ಟಿಬೆಟ್ಟೆ 39,799-48,499

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14,500	14,700	14,650	165.15 ಸೆಂಟ್ಸ್
ಎಸಿ	7,280	7,500	7,500	
ಆರ್‌ಪಿ	10,200	10,700	10,750	ಲಂಡನ್
ಆರ್‌ಸಿ	6,090	256	6,150	- ಡಾಲರ್ಸ್ 2710

ಮುಂಬೈ ಧಾರಣೆ

ಶೇಂಗಾ

27–6-2023

ಜಾವಾ 70/80(ಹೊಸ)	11,250-11,300
ಜಾವಾ 80/90(ಹೊಸ)	10,650-10,700
ದಪ್ಪ ಮಧ್ಯಪ್ರದೇಶ(ಹೊಸ)	11,100-11,200
ದಪ್ಪ ಗುಜರಾತ್(ಹೊಸ)	12,000-12,100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1685(1700)
ಒಂದು ವಾರದ ಡೆಲಿವರಿ	1680(1695)
ಸೋಯಾ ಕಚ್ಚಾ	900(892)
ಪಾಮ್ ವಾರದ ಡೆಲಿವರಿ	848(855)
ಸೂರ್ಯಕಾಂತಿ ಎಣ್ಣೆ ಕಚ್ಚಾ	850(840)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58300(58200)
ಬೆಳ್ಳಿ ಕೆ.ಜಿ 69600(68400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಾಘವೇಂದ್ರ ಚಿಪ್ಳೂಣ್ಕರ್, ಕಾರ್ಕಳ

• **ಪ್ರಶ್ನೆ:** ನಾನು ಷೇರುಪೇಟೆಯಲ್ಲಿ ಹಾಗೂ ಕೆಲವು ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ತೊಡಗಿಸಿದ್ದೇನೆ. ನನ್ನಲ್ಲಿ ಕೆಲವು ಬ್ಲೂಚಿಪ್ ಕಂಪನಿಗಳ ಷೇರುಗಳು ಇವೆ. ಕಳೆದ ನಾಲ್ಕೈದು ವರ್ಷಗಳಿಂದ ಹಣ ತೊಡಗಿಸಿರುವ ಕಾರಣ ನನಗೆ ಬೋನಸ್ ಷೇರುಗಳೂ ಬಂದಿವೆ. ನನ್ನ ತಂದೆಯ ಹೆಸರಲ್ಲಿದ್ದ ಕೆಲವು ಷೇರುಗಳನ್ನು ನಾನು ಅವರ ನಿಧನದ ಬಳಿಕ ಪಡೆದಿರುವೆ. ನನ್ನ ವೈಯಕ್ತಿಕ ಹಣಕಾಸು ಅಗತ್ಯಕ್ಕಾಗಿ ಕೆಲವು ಷೇರುಗಳನ್ನು ಮಾರಬೇಕಾಗಿದೆ. ಹೀಗಾಗಿ ಇದರ ತೆರಿಗೆ ಪರಿಣಾಮ ತಿಳಿಸಬೇಕಾಗಿ ಕೋರಿಕೆ.

ಉತ್ತರ: ನಿಮ್ಮಲ್ಲಿರುವ ಷೇರುಗಳ ಮಾರಾಟದಿಂದ ಬಂದ ಲಾಭವನ್ನು ದೀರ್ಘಾವಧಿ ಅಥವಾ ಅಲ್ಪಾವಧಿ ಹೂಡಿಕೆಯ ಮೇಲಣ ಲಾಭವೇ ಎನ್ನುವುದನ್ನು ಮೊದಲು ತೀರ್ಮಾನಿಸಬೇಕು. ಷೇರುಗಳಲ್ಲಿನ ಹೂಡಿಕೆ ಹನ್ನೆರಡು ತಿಂಗಳ ಒಳಗಿನ ಅವಧಿಯದಾಗಿದ್ದರೆ, ಅದು ಅಲ್ಪಾವಧಿ ಹೂಡಿಕೆ ಎಂದೂ ಅದರ ಮೇಲ್ಪಟ್ಟ ಅವಧಿಯ ಹೂಡಿಕೆಯಾಗಿದ್ದರೆ ದೀರ್ಘಾವಧಿ ಹೂಡಿಕೆ ಎಂದೂ ಪರಿಗಣಿಸಬೇಕು. ಅಲ್ಪಾವಧಿ ಹೂಡಿಕೆ ಲಾಭಕ್ಕೆ ನಿಮಗೆ ಶೇ 15ರಷ್ಟು ತೆರಿಗೆ ಅನ್ವಯವಾಗುತ್ತದೆ. ದೀರ್ಘಾವಧಿ ಹೂಡಿಕೆ ಲಾಭಕ್ಕೆ ಶೇ 10ರಷ್ಟು ದರ ಅನ್ವಯ ಆಗುತ್ತದೆ. ಇದಕ್ಕೆ ಹಣದುಬ್ಬರ ಸೂಚ್ಯಂಕದ (ಇಂಡೆಕ್ಸೇಷನ್) ಲಾಭ ಸಿಗುವುದಿಲ್ಲ. ಆದರೆ, ದೀರ್ಘಾವಧಿ ಹೂಡಿಕೆಯಲ್ಲಿ ಷೇರುಗಳ ಮಾರಾಟದಿಂದ ಗಳಿಸುವ ₹1 ಲಕ್ಷದವರೆಗಿನ ಲಾಭಕ್ಕೆ ತೆರಿಗೆ ವಿನಾಯಿತಿ ಇದೆ. ಅದಕ್ಕಿಂತ ಹೆಚ್ಚಿನ ಮೊತ್ತದ ಲಾಭಕ್ಕೆ ಮಾತ್ರ ತೆರಿಗೆ ಅನ್ವಯಿಸುತ್ತದೆ.

ಬೋನಸ್ ಷೇರುಗಳ ಮೌಲ್ಯದ ಬಗ್ಗೆ ತಿಳಿದುಕೊಳ್ಳುವುದಾದರೆ: ಇವುಗಳ ಖರೀದಿ ಮೌಲ್ಯ ಶೂನ್ಯವಾಗಿರುತ್ತದೆ. ಹೀಗಾಗಿ ಮಾರಾಟ ವೆಚ್ಚ ಹೊರತುಪಡಿಸಿ ಉಳಿದ ಪೂರ್ಣ ಮೌಲ್ಯ ತೆರಿಗೆಗೊಳಪಡುತ್ತದೆ. ಅದರ ಅವಧಿಯನ್ನು ಬೋನಸ್ ಷೇರುಗಳನ್ನು ಬಿಡುಗಡೆ ಮಾಡಿದ ದಿನಾಂಕದಿಂದ ಲೆಕ್ಕ ಹಾಕಬೇಕು. ಮಾತ್ರವಲ್ಲ, ನೀವು ನಿಮ್ಮಲ್ಲಿನ ಒಂದಿಷ್ಟು ಷೇರುಗಳನ್ನು ಮಾತ್ರ ಮಾರಾಟ ಮಾಡಿದಾಗ, ಷೇರುಗಳನ್ನು ಕೊಂಡ ದಿನಾಂಕದ ಕ್ರಮಾಂಕದಲ್ಲಿಯೇ ಮಾರಾಟ ಮಾಡಲಾಗಿದೆ ಎಂದು ಭಾವಿಸಿ ತೆರಿಗೆ ಲೆಕ್ಕ ಹಾಕಬೇಕು.

ಯಾವುದೇ ಷೇರುಗಳನ್ನು ಉಡುಗೊರೆಯ ರೂಪದಲ್ಲಿ ಪಡೆದರೆ ಅಥವಾ ಮರಣಾನಂತರ ಮಕ್ಕಳ ಹೆಸರಿಗೆ ವರ್ಗಾವಣೆಯಾದಾಗ, ಹಿಂದಿನ ಖರೀದಿದಾರ ಯಾವ ಮೌಲ್ಯ ಪಾವತಿಸಿದ್ದನೋ ಆ ಮೌಲ್ಯವೇ ಮಾರಾಟ ಮಾಡಿದ ವ್ಯಕ್ತಿಗೆ ಅಸಲು ಮೌಲ್ಯವಾಗಿ ಪರಿಗಣಿತವಾಗುತ್ತದೆ. ಹೀಗಾಗಿ ಅವರು ಖರೀದಿಸಿದ ಮಾಹಿತಿಯನ್ನು ಡಿಮ್ಯಾಟ್ ಮಾಹಿತಿಯ ಆಧಾರದ ಮೇಲೆ ಅರಿತು ಅಂದಿನ ದಿನಾಂಕದ ಮೌಲ್ಯ ತಿಳಿದುಕೊಳ್ಳಿ.

ರವಿರಾಜ್, ಮಂಗಳೂರು

• **ಪ್ರಶ್ನೆ:** ನಾನು 67 ವರ್ಷ ವಯಸ್ಸಿನ ಹಿರಿಯ ನಾಗರಿಕ. ಆರ್ಥಿಕ ವರ್ಷ 2022-23ರಲ್ಲಿ ನನಗೆ ಬಾಡಿಗೆಯಿಂದ ₹1.71 ಲಕ್ಷ (ಶೇ 30ರಷ್ಟು ಕಡಿತ ಮಾಡಿ) ಮತ್ತು ಅಂಗಡಿ ವ್ಯವಹಾರದಿಂದ ₹1.60 ಲಕ್ಷ, ಬ್ಯಾಂಕ್ ಬಡ್ಡಿ ₹11.10 ಲಕ್ಷ ಬಂದಿದೆ. ವಾರ್ಷಿಕವಾಗಿ ಎಲ್‌ಐಸಿ, ಪಿಪಿಎಫ್‌ನಲ್ಲಿ ₹1.50 ಲಕ್ಷ ತೊಡಗಿಸಿದ್ದೇನೆ. ಕೆಲಸದವರಿಗೆ ಸಂಬಳ ಕೊಟ್ಟು ಅಂಗಡಿ ನಡೆಸುವುದರಿಂದ ಲಾಭವಿಲ್ಲ. ಸರ್ಕಾರದ ಪ್ರಕಾರ ನಾನು ಮಾರಾಟ ತೆರಿಗೆ ಕೊಡಬೇಕು. ಮುಂದೆ ವಯಸ್ಸಿನ ಕಾರಣ ವ್ಯವಹಾರ ನಡೆಸಲು ಸಾಧ್ಯವಿಲ್ಲ. ನಾನು ಈ ಆದಾಯ ಹಾಗೂ ಹೂಡಿಕೆಗೆ ಯಾವ ತೆರಿಗೆ ಪದ್ಧತಿ ಅನುಸರಿಸಬೇಕು? ಎರಡೂ ಪದ್ಧತಿಗಳಲ್ಲಿ ತೆರಿಗೆ ಎಷ್ಟು ಬರುತ್ತದೆ?

ಉತ್ತರ: ನೀವು ಹಿರಿಯ ನಾಗರಿಕ, ಮೂರು ಪ್ರತ್ಯೇಕ ಮೂಲಗಳಿಂದ ಆದಾಯ ಗಳಿಸುತ್ತಿದ್ದೀರಿ. ಅನೇಕ ಹೂಡಿಕೆಗಳಲ್ಲಿ ಹಣ ತೊಡಗಿಸಿದ್ದೀರಿ. ಪ್ರಶ್ನೆಯಲ್ಲಿ ನೀಡಿರುವ ಮಾಹಿತಿಯಂತೆ ನಿಮ್ಮ ಬಾಡಿಗೆ ಆದಾಯಕ್ಕೆ ತೆರಿಗೆ ಇದೆ. ಸೆಕ್ಷನ್ 24ಎ ಪ್ರಕಾರ, ಬಾಡಿಗೆ ಆದಾಯದ ಮೇಲೆ ಶೇ 30ರ ಕಟ್ಟಡ ನಿರ್ವಹಣಾ ವೆಚ್ಚ ಮಾತ್ರವಲ್ಲದೆ ಪಾವತಿ ಮಾಡಿದ ಆಸ್ತಿ ತೆರಿಗೆಯನ್ನು ಕಳೆದು ಉಳಿದ ಮೊತ್ತಕ್ಕೆ ಮಾತ್ರ ತೆರಿಗೆ ಇರುತ್ತದೆ. ಹೀಗಾಗಿ ಬಾಡಿಗೆಗೆ ಕೊಟ್ಟ ಮನೆಗೆ ಸಂಬಂಧಿಸಿದ ಆಸ್ತಿ ತೆರಿಗೆ ಪಾವತಿಸಿದ ಮಾಹಿತಿ ನಿಮ್ಮಲ್ಲಿರಲಿ.

ನಿಮ್ಮ ಅಂಗಡಿ ವ್ಯವಹಾರದಿಂದಲೂ ಒಂದಷ್ಟು ಆದಾಯ ಬರುತ್ತಿದೆ. ಇಲ್ಲಿ ನೀವು ತಿಳಿಸಿರುವುದು ಒಟ್ಟು ವ್ಯವಹಾರದ ಮೊತ್ತವನ್ನೋ ಅಥವಾ ಲಾಭವನ್ನೋ ಎಂಬುದು ಸ್ಪಷ್ಟವಾಗಿಲ್ಲ. ಯಾರೆಲ್ಲ ವ್ಯವಹಾರದಲ್ಲಿ ತೊಡಗಿ, ಲೆಕ್ಕ ಪರಿಶೋಧನೆಗೆ ಒಳಪಡಬೇಕಾಗಿಲ್ಲವೋ, ಅವರಿಗೆ ಡಿಜಿಟಲ್ ವಹಿವಾಟಿನ ಮೇಲೆ ಶೇ 6ರಷ್ಟು ಹಾಗೂ ಇತರ ಮೂಲಗಳ ಮುಖಾಂತರ ನಡೆಯುವ ವ್ಯವಹಾರಕ್ಕೆ ಶೇ 8ರಷ್ಟು ಮೊತ್ತವನ್ನು ತೆರಿಗೆಗೆ ಒಳಪಡುವ ಆದಾಯವೆಂದು ಪರಿಗಣಿಸಿ, ಆ ಮೊತ್ತಕ್ಕೆ ವೈಯಕ್ತಿಕ ದರದಂತೆ ತೆರಿಗೆ ಕಟ್ಟುವುದಕ್ಕೆ ಅವಕಾಶವಿದೆ.

ನಿಮ್ಮ ಬಡ್ಡಿ ಆದಾಯಕ್ಕೂ ತೆರಿಗೆ ಇದೆ. ಇದರ ಮೇಲೆ ₹50,000 ವರೆಗೆ ವಿನಾಯಿತಿ ಇದೆ. ಇದಲ್ಲದೆ, ನೀವು ವಾರ್ಷಿಕವಾಗಿ ಎಲ್‌ಐಸಿ, ಪಿಪಿಎಫ್‌ನಲ್ಲಿ ₹1.50 ಲಕ್ಷ ತೊಡಗಿಸಿರುವುದಾಗಿ ತಿಳಿಸಿದ್ದೀರಿ. ಆದರೆ ಈ ವಿನಾಯಿತಿಗಳು ಹಳೆಯ ತೆರಿಗೆ ಪದ್ಧತಿ ಆಯ್ಕೆ ಮಾಡುವುದಾದರೆ ಮಾತ್ರ ಸಿಗುತ್ತವೆ. ಪ್ರಸ್ತುತ ನಿಮ್ಮ ಸನ್ನಿವೇಶದಲ್ಲಿ ಈ ಎರಡೂ ವಿನಾಯಿತಿ ಪಡೆದು ತೆರಿಗೆ ಲೆಕ್ಕ ಹಾಕಿದರೂ ಹಳೆ ಪದ್ಧತಿಯಡಿ ₹1.74 ಲಕ್ಷ ತೆರಿಗೆ ಬರುತ್ತದೆ. ನೀವು ಹೊಸ ತೆರಿಗೆ ಪದ್ಧತಿ ಆರಿಸಿ ಯಾವುದೇ ವಿನಾಯಿತಿಗಳನ್ನು ಪಡೆಯದಿದ್ದರೂ ಬರುವ ತೆರಿಗೆ ₹1.33 ಲಕ್ಷ. ಹೀಗಾಗಿ ಸುಮಾರು ₹40 ಸಾವಿರದ ಲಾಭ ಹೊಸ ತೆರಿಗೆ ಪದ್ಧತಿಯಿಂದ ಇದೆ. ನೀವು ತಿಳಿಸಿರುವ ಅಂಗಡಿ ವ್ಯವಹಾರದ ಆದಾಯ ₹1.60 ಲಕ್ಷವನ್ನು ತೆರಿಗೆಗೊಳಪಡುವ ಮೊತ್ತವೆಂದು ಊಹಿಸಲಾಗಿದೆ.

ನಿಮ್ಮ ಹೂಡಿಕೆಗಳು ತೆರಿಗೆ ಪ್ರಯೋಜನಕ್ಕೆ ಬರದಿದ್ದರೂ, ಮುಂದೆ ಒಂದು ದೊಡ್ಡ ಮೊತ್ತವಾಗಿ ನಿಮಗೆ ಸಿಗಬಹುದು. ಹೀಗಾಗಿ ಇರುವ ಹೂಡಿಕೆ ಮುಂದುವರಿಸಿ. ವ್ಯಾಪಾರ-ವ್ಯವಹಾರ ನಿಲ್ಲಿಸಿ ನಿವೃತ್ತ ಬದುಕನ್ನು ಮತ್ತಷ್ಟು ಚೆನ್ನಾಗಿ ಸಾಗಿಸುವ ಬಗ್ಗೆ ಹೇಳಿದ್ದೀರಿ. ಇದಕ್ಕೂ ಮುನ್ನ, ಹಳೆಯ ತೆರಿಗೆ ಬಾಕಿ ಇತ್ಯಾದಿಗಳನ್ನು ಸಂಪೂರ್ಣ ಪಾವತಿಸಿ ಅಗತ್ಯ ನಿಯಮದಂತೆ ವ್ಯವಹಾರ ಸ್ಥಗಿತಗೊಳಿಸುವ ಬಗ್ಗೆ ಗಮನಹರಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001 ಇ-ಮೇಲ್: businessdesk@prajavani.co.in

ಹೆದ್ದಾರಿ: ಸಂಚಾರ ಪುನರಾರಂಭ

ಶಿಮ್ಲಾ (ಪಿಟಿಐ): ದಿಢೀರ್ ಪ್ರವಾಹ ಮತ್ತು ಭೂಕುಸಿತದ ಪರಿಣಾಮ ವಾಹನ ಸಂಚಾರ ಸ್ಥಗಿತಗೊಂಡಿದ್ದ ಚಂಡೀಗಢ- ಮನಾಲಿ ರಾಷ್ಟ್ರೀಯ ಹೆದ್ದಾರಿಯನ್ನು 24 ತಾಸುಗಳ ಬಳಿಕ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಾಹನ ಸಂಚಾರ ಸ್ಥಗಿತಗೊಂಡಿದ್ದ ಕಾರಣ ಪ್ರವಾಸಿಗರು ಸೇರಿದಂತೆ ನೂರಾರು ಮಂದಿ ಪ್ರಯಾಣಿಕರು ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯಲ್ಲಿ ಭಾನುವಾರ ಸಂಜೆಯಿಂದಲೇ ಸಿಲುಕಿಕೊಂಡಿದ್ದರು. ಮಂಡಿ–ಪಾಂಡೋಹ್–ಕುಲ್ಲು ರಸ್ತೆಯಲ್ಲಿ 6 ಮೈಲಿ ದೂರದವರೆಗೆ ವಾಹನಗಳು ಸಿಲುಕಿಕೊಂಡಿದ್ದವು.

ವಿಚಾರಣೆ: ಜುಲೈ 1ಕ್ಕೆ ಆದೇಶ

ನವದೆಹಲಿ (ಪಿಟಿಐ): ಆರು ಮಂದಿ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಬಿಜೆಪಿ ಸಂಸದ ಹಾಗೂ ಭಾರತೀಯ ಕುಸ್ತಿ ಫೆಡರೇಷನ್‌ನ ನಿರ್ಗಮಿತ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಸಲ್ಲಿಕೆಯಾಗಿರುವ ದೋಷಾರೋಪ ಪಟ್ಟಿಯ ಅನ್ವಯ ವಿಚಾರಣೆ ನಡೆಸುವ ಕುರಿತು ಜುಲೈ 1ರಂದು ಆದೇಶ ನೀಡಲಾಗುವುದು ಎಂದು ದೆಹಲಿ ಕೋರ್ಟ್ ಮಂಗಳವಾರ ಹೇಳಿದೆ. ಪ್ರಕರಣಕ್ಕೆ ಸಂಬಂಧಿಸಿ ವಾದ–ಪ್ರತಿವಾದ ಆಲಿಸಿದ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಹರ್ಜೀತ್ ಸಿಂಗ್ ಜಸ್ಪಾಲ್, ವಿಚಾರಣೆಯನ್ನು ಮುಂದೂಡಿದರು.

ಉತ್ತರಪ್ರದೇಶ: ಹಲವು ಪ್ರಕರಣಗಳಲ್ಲಿ ಬೇಕಾಗಿದ್ದ ಪಾತಕಿ ಹತ್ಯೆ

ಕೌಶಾಂಬಿ/ ಲಖನೌ (ಪಿಟಿಐ): ಹಲವು ಪ್ರಕರಣಗಳಲ್ಲಿ ಬೇಕಾಗಿದ್ದ ಪಾತಕಿ ಗುಫ್ರಾನ್‌ನನ್ನು ಉತ್ತರ ಪ್ರದೇಶದ ಪೊಲೀಸರು ಮಂಗಳವಾರ ಬೆಳಿಗ್ಗೆ ಇಲ್ಲಿ ನಡೆಸಿದ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಉತ್ತರ ಪ್ರದೇಶ ಪೊಲೀಸ್ ವಿಶೇಷ ಕಾರ್ಯಪಡೆಯು ಜಿಲ್ಲೆಯ ಸಮದಾ ಗ್ರಾಮದ ಸಮೀಪ ನಡೆಸಿದ ಗುಂಡಿನ ಕಾಳಗ ನಡೆಯಿತು.

'ಗುಫ್ರಾನ್ ವಿರುದ್ಧ 13 ಕೊಲೆ, ಕೊಲೆ ಯತ್ನ, ದರೋಡೆ ಪ್ರಕರಣಗಳು ದಾಖಲಾಗಿದ್ದವು. ಈತನ ಸುಳಿವು ನೀಡಿದವರಿಗೆ ₹1.25 ಲಕ್ಷ ಬಹುಮಾನ ಘೋಷಿಸಲಾಗಿತ್ತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವೈಕುಂಠ ಸಮಾರಾಧನೆ



ಜನನ: 13-01-1950
ಮರಣ: 18-06-2023

ಶ್ರೀ ಎಂ. ಗಿರಿಗೌಡರು
ಅಧ್ಯಕ್ಷರು, ಗಂಗೋತ್ರಿ ಸಮೂಹ ಶಿಕ್ಷಣ ಸಂಸ್ಥೆಗಳು

ಶ್ರೀಮತಿ ಲಕ್ಷ್ಮಮ್ಮ
ನಂ. 01, ಗಂಗೋತ್ರಿ, ವೆಂಕಟೇಶ್ವರ ಫಾರಂ, ರಾಜೀವ್‌ಗಾಂಧಿನಗರ, ವಿಶ್ವನೀಡಂ ಪೋಸ್ಟ್, ಬೆಂಗಳೂರು-560091
ಇವರು ಮಾಡುವ ವಿಜ್ಞಾಪನೆಗಳು, ನನ್ನ ಪೂಜ್ಯ ಪತಿಯವರಾದ
ಶ್ರೀ ಎಂ. ಗಿರಿಗೌಡರು

ಇವರು ದಿನಾಂಕ: 18-06-2023ನೇ ಭಾನುವಾರ ರಾತ್ರಿ 10-50ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ವೈಕುಂಠ ಸಮಾರಾಧನೆಯನ್ನು ದಿನಾಂಕ: 28-06-2023ನೇ ಬುಧವಾರ ಮೇಲ್ಕಂಡ ವಿಳಾಸದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಕಾರ್ಯಕ್ರಮಗಳು
ಬೆಳಿಗ್ಗೆ 11-30ಕ್ಕೆ

ಇಂತಿ ದುಃಖತಪ್ತರು
ಶ್ರೀಮತಿ ಲಕ್ಷ್ಮಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

WORK FROM HOME & ಜಾಬ್‌ಗಳಿಗೆ ಕೆಲಸಗಾರರು ಬೇಕಾಗಿದ್ದಾರೆ. ಯಾವುದೇ ವಿದ್ಯಾರ್ಹತೆ ಪರವಾಗಿಲ್ಲ . ಸಂಪರ್ಕಿಸಿ : 8722155842, 8722155787

Drivers

ಕವಿ ಲಾಜಿಸ್ಟಿಕ್ಸ್ ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9886683188/ 9738421001

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Wanted

ಎಂಎನ್ಸಿಗೆ &ಇತರೆ ಕಂಪನಿಗಳಿಗೆ ಡಿಪ್ಲೋಮಾ ಮೆಕ್ಯಾನಿಕಲ್ಸ್, ಎಲೆಕ್ಟ್ರಿಕಲ್ಸ್ /ಹೊರದೇಶದ ಕಂಪೆನಿಗಳಿಗೆ ಯುಕೆ ಯುಎಸ್‌ಎ ಕೆನಡಾ ಕೆಲಸಕ್ಕೆ ಬೇಕಾಗಿದ್ದಾರೆ: 8892501007/ 9606701007

Hotel

ಮೆಜೆಸ್ಟಿಕ್ ಹಾಗೂ ಹೊಸೂರಿನಲ್ಲಿರುವ ಹೋಟೆಲ್ ಮತ್ತು ಕ್ಯಾಂಟೀನ್ ಒಂದಕ್ಕೆ ಅಡುಗೆಯವರು, ಅಡುಗೆ ಸಹಾಯಕರು, ದೋಸೆ, ಕಾಫಿ ಮಾಡುವವರು, ರುಬ್ಬುವವರು, ತರಕಾರಿ ಹೆಚ್ಚುವವರು, ಕೌಂಟರ್ ಬಾಯ್ಸ್ ಬೇಕಾಗಿದ್ದಾರೆ ಸಂಪರ್ಕಿಸಿ 7353500688, 9449112306, 9900141311

ಸಾರ್ವಜನಿಕ ಪ್ರಕಟಣೆ

Timac AGRO PUBLIC NOTICE
In pursuance of S.O. 2900 (E) dated 24/10/2015 and clause 13 and clause 21 of the Fertilizer (Control) Order, 1985, we hereby intimate our intent to sell the following grades of hundred per cent water soluble fertilizer and micronutrients as per FCO in the state of Karnataka:
Timaspray N (NPK 21-7-7)
Timaspray K (NPK 8-11-39)
Timaspray B (Boron 10.5 %)
Date:28.06.2023 Place: Bengaluru
TIMAC AGRO INDIA PRIVATE LIMITED
No. 426, Between 7th and 8th Cross, Sampige Road, Malleswaram, Bengaluru, Karnataka 560003
Regd. Office: T. Nagar, Chennai, Tamil Nadu 600017
Ph: 044 4201 2105
E-mail: contact@in.timacagro.com

ಪ್ರವಾಸ

Travel

ಶ್ರೀರಾಜರಾಜೇಶ್ವರಿ ಟೂರ್ಸ್ 20.7.23 8ದಿನ ಕಾಶಿ,ಗಯಾ, ಅಯೋಧ್ಯ. 11.8.23 7ದಿನ ತಮಿಳುನಾಡು. 1.9.23 11ದಿನ ಮಧ್ಯಪ್ರದೇಶ. 25.10.23 13ದಿನ ಚಾರ್'ಧಾಮ್. 9739618243, 9743895346.

30.6.2023 7ದಿನಗಳು ರಾಮೇಶ್ವರಂ ನವಗ್ರಹಸಹಿತ ತಮಿಳುನಾಡು. 2.9.2023, 22.9.2023 14ದಿನಗಳ ಚಾರ್ ಧಾಮ್' ಯಾತ್ರೆ. ಅಕ್ಟೋಬರ್ ಕಾಶಿ. ನವೆಂಬರ್ ಗುಜರಾತ್. 9448792891.

ಭವಿಷ್ಯ

Astrology

'ವಶೀಕರಣ ಮಾಂತ್ರಿಕರು' ಪ್ರೇಮವಿಚಾರ, ಮದುವೆ, ಸಾಲಬಾಧೆ, ವ್ಯಾಪಾರ, ಮನೆಯಲ್ಲಿನ ಅಶಾಂತಿ, ಅನಾರೋಗ್ಯ, ಮಾನಸಿಕ ತೊಂದರೆಗಳಿಗೆ ದೈವಿಕ ಪೂಜಾ ಶಕ್ತಿಯಿಂದ ಫೋನಿನ ಮೂಲಕ ಪರಿಹಾರ.9964108888 (ವೀಡಿಯೋ ಕಾಲ್ ಗೆ ಲಭ್ಯವಿರುತ್ತಾರೆ).

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
conditions apply*
@803/-* Per Sqcm Single Column
@825/-* Per Sqcm Multi Column
For more information Contact:
9845114560 : 9731810277
9901641752 : 9886213331
080 - 45557163 / 164

ಮುಖ್ಯಮಂತ್ರಿ ಕೇಜ್ರಿವಾಲ್ ಅಧಿಕೃತ ನಿವಾಸ ನವೀಕರಣದಲ್ಲಿ ಅವ್ಯವಹಾರ ಆರೋಪ

ಸಿಎಜಿಯಿಂದ ವಿಶೇಷ ಪರಿಶೋಧನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಅಧಿಕೃತ ನಿವಾಸದ ನವೀಕರಣದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಮತ್ತು ನಿಯಮಗಳ ಉಲ್ಲಂಘನೆ ಕುರಿತು ಮಹಾಲೇಖಪಾಲರು (ಸಿಎಜಿ) ವಿಶೇಷ ಪರಿಶೋಧನೆ ನಡೆಸಲಿದ್ದಾರೆ.

ಈ ನಡೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಆಡಳಿತಾರೂಢ ಆಮ್ ಆದ್ಮಿ ಪಕ್ಷ (ಎಎಪಿ), 'ಇದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಹತಾಶೆಯನ್ನು ತೋರಿಸುತ್ತದೆ' ಎಂದಿದೆ.

'ಕೇಜ್ರಿವಾಲ್ ಅವರ ಅಧಿಕೃತ ನಿವಾಸದ ನವೀಕರಣದಲ್ಲಿ ಭಾರಿ ಅವ್ಯವಹಾರ ನಡೆದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಎಂಬುದಾಗಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಗೃಹ ಸಚಿವಾಲಯಕ್ಕೆ ಮೇ 24ರಂದು ಪತ್ರ ಬರೆದಿದ್ದರು. ಈ ಹಿನ್ನೆಲೆಯಲ್ಲಿ ವಿಶೇಷ ಪರಿಶೋಧನೆಗೆ ಗೃಹ ಸಚಿವಾಲಯ ಶಿಫಾರಸು ಮಾಡಿದೆ' ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಕೇಜ್ರಿವಾಲ್ ನಿವಾಸದ ನವೀಕರಣ ಕಾರ್ಯದಲ್ಲಿ ಆಗಿರುವ ಅವ್ಯವಹಾರ ಕುರಿತು ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳು, ದೆಹಲಿ ಮುಖ್ಯ ಕಾರ್ಯದರ್ಶಿ ಏಪ್ರಿಲ್ 27 ಹಾಗೂ ಮೇ 12ರಂದು ಸಲ್ಲಿಸಿದ್ದ ವರದಿಗಳಲ್ಲಿನ ಅಂಶಗಳನ್ನು ಸಕ್ಸೇನಾ ಅವರು ಗೃಹ ಸಚಿವಾಲಯಕ್ಕೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಲೋಕೋಪಯೋಗಿ ಇಲಾಖೆ ಹಾಗೂ ದೆಹಲಿ ಸರ್ಕಾರ ನಿಯಮಗಳು, ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ಬಗ್ಗೆ ಮುಖ್ಯ ಕಾರ್ಯದರ್ಶಿಗಳು ತಮ್ಮ ವರದಿಯಲ್ಲಿ ವಿವರಿಸಿದ್ದಾರೆ' ಎಂದು ರಾಜಭವನ ಅಧಿಕಾರಿಗಳು ಹೇಳಿದ್ದಾರೆ.

ದೆಹಲಿ ಆಡಳಿತದಲ್ಲಿ ಕೇಂದ್ರದ ಹಸ್ತಕ್ಷೇಪ: ಎಎಪಿ

'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಅಧಿಕೃತ ನಿವಾಸ ನವೀಕರಣ ಕುರಿತು ಸಿಎಜಿಯಿಂದ ವಿಶೇಷ ಪರಿಶೋಧನೆಗೆ ಶಿಫಾರಸು ಮಾಡಿರುವುದು ಬಿಜೆಪಿಯ ಹತಾಶೆ ಹಾಗೂ ಸರ್ವಾಧಿಕಾರ ಪ್ರವೃತ್ತಿಯನ್ನು ತೋರಿಸುತ್ತದೆ' ಎಂದು ಎಎಪಿ ಟೀಕಿಸಿದೆ.

ಈ ಕುರಿತು ಪ್ರಕಟಣೆ ಬಿಡುಗಡೆ ಮಾಡಿರುವ ಎಎಪಿ, 'ಕಳೆದ ವರ್ಷವೇ ಸಿಎಜಿ ಲೆಕ್ಕಪರಿಶೋಧನೆ ನಡೆಸಿದ್ದು, ಅವ್ಯವಹಾರ ಕುರಿತು ಯಾವುದೇ ಸಾಕ್ಷ್ಯಗಳು ಸಿಕ್ಕಿರಲಿಲ್ಲ' ಎಂದಿದೆ. 'ಈಗ ಮತ್ತೊಮ್ಮೆ ಲೆಕ್ಕಪರಿಶೋಧನೆ ನಡೆಸುವುದು ಚುನಾಯಿತ ಸರ್ಕಾರದ ವ್ಯವಹಾರಗಳಲ್ಲಿ ಕೇಂದ್ರ ಸರ್ಕಾರ ಹಸ್ತಕ್ಷೇಪ ಮಾಡಿದಂತೆ. ಸಾಂವಿಧಾನಿಕ ತತ್ವಗಳ ಉಲ್ಲಂಘನೆಯೂ ಆಗುತ್ತದೆ' ಎಂದು ಹೇಳಿದೆ.

ದೆಹಲಿ ಹಾಗೂ ನಂತರ ನಡೆದ ವಿಧಾನಸಭಾ ಚುನಾವಣೆಗಳಲ್ಲಿನ ಸೋಲಿನಿಂದ ಬಿಜೆಪಿ ಕಂಗೆಟ್ಟಿದೆ. ಕೇಜ್ರಿವಾಲ್ ನೇತೃತ್ವದ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಪ್ರಯತ್ನಿಸುತ್ತಿದೆ

ಎಎಪಿ

ಸಮಗ್ರ ತನಿಖೆ ಅಗತ್ಯ: ಕಾಂಗ್ರೆಸ್ ನಾಯಕ ಮಾಕನ್

ನವದೆಹಲಿ (ಪಿಟಿಐ): 'ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅಧಿಕೃತ ನಿವಾಸದ ನವೀಕರಣಕ್ಕೆ ₹ 171 ಕೋಟಿ ಖರ್ಚು ಮಾಡಲಾಗಿದೆ. ಈ ಬಗ್ಗೆ ಸಮಗ್ರವಾದ, ಕ್ರಿಮಿನಲ್ ತನಿಖೆ ನಡೆಸಬೇಕು' ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಅಜಯ್ ಮಾಕನ್ ಮಂಗಳವಾರ ಆಗ್ರಹಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಅವರು, 'ಜನರ ತೆರಿಗೆ ಹಣವನ್ನು ದುರ್ಬಳಕೆ ಮಾಡಿರುವ ಕುರಿತು ಸಿಎಜಿಯಿಂದ ವಿಶೇಷ ಪರಿಶೋಧನೆ ನಡೆಸುತ್ತಿರುವುದು ಸ್ವಾಗತಾರ್ಹ' ಎಂದಿದ್ದಾರೆ.

'ಮಾರ್ಬಲ್‌ಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಲಕ್ಷಾಂತರ ರೂಪಾಯಿ ಮೌಲ್ಯದ ಪರದೆಗಳು, ಅಡುಗೆ ಮನೆ ಉಪಕರಣಗಳನ್ನು ಖರೀದಿಸಲಾಗಿದೆ. ಬ್ರಿಟಿಷ್ ಕಾಲದ ಪಾರಂಪರಿಕ ಕಟ್ಟಡವನ್ನು ಕೆಡವಿ, ಮರಗಳನ್ನು ನಾಶ ಮಾಡಿ ಹೊಸ ನಿವಾಸ ನಿರ್ಮಿಸಲಾಗಿದ್ದು, ಆ ಮೂಲಕ ಜನರ ಹಣವನ್ನು ದುರ್ಬಳಕೆ ಮಾಡಲಾಗಿದೆ' ಎಂದು ಅವರು ವಾಗ್ದಾಳಿ ಮಾಡಿದ್ದಾರೆ.

ಪ್ರಮುಖ ಅಂಶಗಳು

- ನವೀಕರಣದ ಹೆಸರಿನಲ್ಲಿ ಸುಸಜ್ಜಿತ ಹೊಸ ಕಟ್ಟಡವನ್ನು ನಿರ್ಮಿಸಲಾಗಿದೆ/ಮರು ನಿರ್ಮಾಣ ಮಾಡಲಾಗಿದೆ. ಆರಂಭಿಕ ಅಂದಾಜು ವೆಚ್ಚ ₹ 15–20 ಕೋಟಿ ಇತ್ತು. ಕಾಲಕಾಲಕ್ಕೆ ಇದು ಹೆಚ್ಚಳವಾಗಿ, ₹ 52.17 ಕೋಟಿಗೆ ತಲುಪಿತು
- ₹ 10 ಕೋಟಿ ಹಾಗೂ ಅದಕ್ಕಿಂತ ಹೆಚ್ಚು ಮೊತ್ತದ ಕಾಮಗಾರಿಗೆ ಪಿಡಬ್ಲ್ಯುಡಿಯ ಪ್ರಧಾನ ಕಾರ್ಯದರ್ಶಿಯ ಅನುಮೋದನೆ ಅಗತ್ಯ. ಇದನ್ನು ತಪ್ಪಿಸಲು ಪ್ರತಿಬಾರಿಯೂ ಕಾಮಗಾರಿಗಳ ವೆಚ್ಚವನ್ನು ₹ 10 ಕೋಟಿಗಿಂತ ಕಡಿಮೆ ತೋರಿಸಿ, ಅನುಮೋದನೆ ಪಡೆಯಲಾಗಿದೆ.
- ಕಟ್ಟಡ ನಕಾಶೆಗಳಿಗೆ ಮಂಜೂರಾತಿ ಪಡೆದಿಲ್ಲ. ಆಸ್ತಿಯ ಮಾಲೀಕತ್ವದ ಬಗ್ಗೆ ಪಿಡಬ್ಲ್ಯುಡಿಯು ಖಚಿತಪಡಿಸಿಕೊಂಡಿಲ್ಲ
- 10 ಅಥವಾ ಅದಕ್ಕಿಂತ ಹೆಚ್ಚು ಮರಗಳನ್ನು ಕಡಿಯಲು/ಸ್ಥಳಾಂತರಗೊಳಿಸಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಕಡ್ಡಾಯ. ಮರಗಳನ್ನು ಕಡಿಯುವುದಕ್ಕೆ ಐದು ಬಾರಿ ಅನುಮೋದನೆ ಪಡೆಯುವ ಮೂಲಕ ನಿಯಮಗಳನ್ನು ಗಾಳಿಗೆ ತೂರಲಾಗಿದೆ.

ವೇಷಧಾರಿಗೆ ಮುತ್ತಿಗೆ

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ಕೆಂಪೇಗೌಡ ಜಯಂತಿ ಅಂಗವಾಗಿ ಮಂಗಳವಾರ ನಡೆದ ಮೆರವಣಿಗೆಯಲ್ಲಿ ಉಗ್ರ ನರಸಿಂಹ ವೇಷಧಾರಿ ಕಲಾವಿದನನ್ನು ಮುಟ್ಟಲು ಶಾಲೆಯ ಮಕ್ಕಳು ಮುಗಿಬಿದ್ದರು -ಪ್ರಜಾವಾಣಿ ಚಿತ್ರ: ಡಿ.ಜಿ.ಮಲ್ಲಿಕಾರ್ಜುನ

ಮಣಿಪುರ: ಕಾರ್ಯಾಚರಣೆಗೆ ಮಹಿಳೆಯರಿಂದ ಅಡ್ಡಿ – ಸೇನೆ

ಇಂಫಾಲ್ (ಪಿಟಿಐ): ಹಿಂಸಾಚಾರ ಪೀಡಿತ ಮಣಿಪುರದಲ್ಲಿ ಭದ್ರತಾಪಡೆಗಳ ಕಾರ್ಯಾಚರಣೆಗಳಿಗೆ ಮಹಿಳೆಯರು ಉದ್ದೇಶಪೂರ್ವಕವಾಗಿ ತಡೆಯೊಡ್ಡುತ್ತಿದ್ದಾರೆ ಮತ್ತು ಮಧ್ಯಪ್ರವೇಶಿಸುತ್ತಿದ್ದಾರೆ ಎಂದು ಸೇನೆಯು ಮಂಗಳವಾರ ಆರೋಪಿಸಿದೆ.

ಈಶಾನ್ಯ ರಾಜ್ಯದಲ್ಲಿ ಶಾಂತಿ ಸ್ಥಾಪನೆಗಾಗಿ ಸಹಕರಿಸಿ ಎಂದೂ ಸೇನೆಯು ಜನರಲ್ಲಿ ಮನವಿ ಮಾಡಿದೆ.

ಮಹಿಳೆಯರ ಅನಗತ್ಯ ಹಸ್ತಕ್ಷೇಪದಿಂದ ಭದ್ರತಾ ಪಡೆಗಳ ಸಮಯೋಚಿತ ಕಾರ್ಯಾಚರಣೆಗಳಿಗೆ ತೊಂದರೆಯಾಗುತ್ತಿದೆ ಎಂದಿರುವ ಸೇನೆಯು ಇಂತಹ ದೃಶ್ಯವಿರುವ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದೆ. ಇಥಾಮ್ ಗ್ರಾಮದಲ್ಲಿ ಈಚೆಗೆ ಮಹಿಳೆಯರ ಗುಂಪು ಭದ್ರತಾ ಪಡೆಯ ಕಾರ್ಯಾಚರಣೆಗೆ ತಡೆಯೊಡ್ಡಿದ ಪರಿಣಾಮ 12 ಮಂದಿ ಬಂಡುಕೋರರನ್ನು ಬಿಡುಗಡೆಗೊಳಿಸಲಾಗಿತ್ತು.

ಸಂತ್ರಸ್ತರಿಗೆ ₹ 1 ಸಾವಿರ ನೆರವು: ರಾಜ್ಯದ ಜನಾಂಗೀಯ ಗಲಭೆಯಲ್ಲಿ ಸಂತ್ರಸ್ತರಾಗಿ ಪರಿಹಾರ ಶಿಬಿರಗಳಲ್ಲಿ ನೆಲೆಸಿರುವವರಿಗೆ ಒಂದು ಸಾವಿರ ರೂಪಾಯಿ ನೆರವು ನೀಡಲಾಗುವುದು ಎಂದು ಮಣಿಪುರದ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಮಂಗಳವಾರ ಹೇಳಿದ್ದಾರೆ.

ಕೆಲಸ ಮಾಡದಿದ್ದರೆ ವೇತನ ಇಲ್ಲ: ಕಚೇರಿಗೆ ಹಾಜರಾಗದ ಸರ್ಕಾರಿ ಉದ್ಯೋಗಿಗಳಿಗೆ 'ಕೆಲಸ ಮಾಡದಿದ್ದರೆ ವೇತನ ಇಲ್ಲ' ಎಂಬ ನಿಯಮ ಜಾರಿಗೆ ತರಲು ಮಣಿಪುರ ಸರ್ಕಾರ ನಿರ್ಧರಿಸಿದೆ.

ರಾಜ್ಯದಲ್ಲಿ ಉದ್ಭವಿಸಿರುವ ಸಂಘರ್ಷದಿಂದಾಗಿ ಕಚೇರಿಗೆ ಬಂದು ಕೆಲಸ ಮಾಡಲು ಸಾಧ್ಯವಾಗದ ಉದ್ಯೋಗಿಗಳ ಮಾಹಿತಿ ನೀಡುವಂತೆ ಸಾರ್ವಜನಿಕ ಆಡಳಿತ ಇಲಾಖೆ (ಜಿಡಿಎ) ಕೇಳಿದೆ.

ರಾಹುಲ್ ಪ್ರವಾಸ ನಾಳೆಯಿಂದ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಹಾಗೂ ಶುಕ್ರವಾರ ಮಣಿಪುರ ಪ್ರವಾಸ ಕೈಗೊಂಡಿದ್ದಾರೆ.

'ರಾಹುಲ್ ಗಾಂಧಿ ಅವರು ಇಂಫಾಲ್ ಮತ್ತು ಚುರಚಾಂದಪುರದಲ್ಲಿ ನಾಗರಿಕ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸುವರು. ನಂತರ ಪರಿಹಾರ ಕೇಂದ್ರಗಳಿಗೆ ಭೇಟಿ ನೀಡುವರು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

ಪರಿಷ್ಕೃತ 'ಜಾತಿಗಣತಿ' ಸಲ್ಲಿಕೆ?

ಒಂದನೇ ಪುಟದಿಂದ...

'ಸರ್ಕಾರದಿಂದ ಉತ್ತರ ಬಂದ ಬಳಿಕ, ಹಿಂದಿನ ಆಯೋಗ ಸಿದ್ಧಪಡಿಸಿರುವ ವರದಿಯನ್ನೇ ಸಲ್ಲಿಸಬೇಕೇ ಅಥವಾ ನಾವು ಸಮೀಕ್ಷೆಯ ದತ್ತಾಂಶ ಗಳನ್ನು ವಿಶ್ಲೇಷಣೆ ನಡೆಸಿರುವ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನಿಂದ ತೆಗೆದುಕೊಂಡು, ಶಿಫಾರಸುಗಳನ್ನು ಒಳಗೊಂಡ ಪ್ರತ್ಯೇಕ ವರದಿ ಕೊಡಬೇಕೇ ಎಂದು ನಿರ್ಧರಿಸಲಾಗುವುದು. ಕಾಂತರಾಜು ಆಯೋಗದ ಸಮೀಕ್ಷೆಯ ದತ್ತಾಂಶಗಳನ್ನು ಆಧರಿಸಿ ಪ್ರತ್ಯೇಕ ವರದಿ ಸಿದ್ಧಪಡಿಸುವುದು ಕಷ್ಟದ ಕೆಲಸ ವಿಷಯವಲ್ಲ. ಆದರೆ, ಯಾವುದಕ್ಕೂ ಸರ್ಕಾರದಿಂದ ಉತ್ತರ ಬರಬೇಕು' ಎಂದೂ ವಿವರಿಸಿದರು.

'ಹಿಂದೆ ಆಯೋಗ ಸಿದ್ಧಪಡಿಸಿದ್ದ ವರದಿ ಜಾತಿ ಜನಗಣತಿ ಎಂದೇ ಬಿಂಬಿತವಾಗಿದೆ. ಆದರೆ, ಅದು ಸರಿಯಲ್ಲ. ಅದು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ. ಲಭ್ಯವಾಗಿರುವ ದತ್ತಾಂಶಗಳ ಆಧಾರದಲ್ಲಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಲು ಅವಕಾಶ ಸಿಗಲಿದೆ. ಸಮೀಕ್ಷೆಯ ವರದಿಗೆ ಸಂಬಂಧಿಸಿದಂತೆ ಈ ಹಿಂದಿನ ಸರ್ಕಾರಕ್ಕೂ (ಬಿಜೆಪಿ) ಪತ್ರ ಬರೆದಿದ್ದೆವು. ಹೊಸ ಸರ್ಕಾರಕ್ಕೂ ಪತ್ರ ಬರೆದಿದ್ದೇವೆ' ಎಂದೂ ಹೇಳಿದರು.

ಸಂಕ್ಷಿಪ್ತ ಸುದ್ದಿ

'ಬಿಆರ್‌ಎಸ್ ಜೊತೆ ಮೈತ್ರಿ ಇಲ್ಲ'

ನವದೆಹಲಿ: ಕಾಂಗ್ರೆಸ್ ಪಕ್ಷವು ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಜೊತೆ ತೆಲಂಗಾಣದಲ್ಲಿ ಮೈತ್ರಿ ಮಾಡಿಕೊಳ್ಳುವುದಿಲ್ಲ ಮತ್ತು ರಾಷ್ಟ್ರಮಟ್ಟದ ವಿರೋಧ ಪಕ್ಷಗಳ ಒಕ್ಕೂಟದಲ್ಲೂ ಬಿಆರ್‌ಎಸ್ ಭಾಗವಾಗುವುದಿಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ರಾಜ್ಯದ ಕಾಂಗ್ರೆಸ್ ನಾಯಕರಿಗೆ ಮಂಗಳವಾರ ಹೇಳಿದ್ದಾರೆ.

ತೆಲಂಗಾಣದಲ್ಲಿ ವಿಧಾನಸಭೆ ಚುನಾವಣೆ ಸನ್ನಿಹಿತವಾಗುತ್ತಿರುವ ಕಾರಣ ಕಾಂಗ್ರೆಸ್‌ನ ಕೇಂದ್ರ ನಾಯಕರು ರಾಜ್ಯದ ನಾಯಕರ ಜೊತೆ ನಡೆಸಿದ ಸಭೆಯಲ್ಲಿ ಹೀಗೆ ಹೇಳಿದ್ದಾರೆ. ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷ ರೇವಂತ್ ರೆಡ್ಡಿ ಸೇರಿ ಹಲವು ನಾಯಕರು ಸಭೆಯಲ್ಲಿ ಭಾಗಿಯಾಗಿದ್ದರು.

ಭಿನ್ನಾಭಿಪ್ರಾಯಗಳನ್ನು ಮರೆತು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲುವಿನತ್ತ ಕೊಂಡೊಯ್ಯುವಂತೆ ರಾಹುಲ್ ಗಾಂಧಿ ಅವರು ಹೇಳಿದರು. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರು ರಾಹುಲ್ ಸಲಹೆಯನ್ನು ಅನುಮೋದಿಸಿದರು ಎಂದು ರಾಜ್ಯದ ಮುಖಂಡರು ಸಭೆ ಬಳಿಕ ತಿಳಿಸಿದ್ದಾರೆ.

40% ಲಂಚ: ಮಾತಿಗೆ ಸೀಮಿತ

ಒಂದನೇ ಪುಟದಿಂದ...

ಬಿಲ್ ಪಾವತಿಯಲ್ಲಿ ಜ್ಯೇಷ್ಠತೆ ಕಾಯ್ದುಕೊಳ್ಳಲು ತಂತ್ರಾಂಶ ರೂಪಿಸುವಂತೆ ಆದೇಶಿಸಿದ್ದರು. ಆದರೆ, ಭ್ರಷ್ಟಾಚಾರದ ಆರೋಪದ ಕುರಿತು ಯಾವುದೇ ತನಿಖೆಗೆ ಆದೇಶಿಸಿರಲಿಲ್ಲ.

ಶೇ 40ರಷ್ಟು ಕಮಿಷನ್ ಆರೋಪದ ಕುರಿತ ಚರ್ಚೆ ಜೋರಾಗುತ್ತಿದ್ದಂತೆಯೇ 2022ರ ಜೂನ್ ತಿಂಗಳಲ್ಲಿ ಕೆಂಪಣ್ಣ ಅವರನ್ನು ಸಂಪರ್ಕಿಸಿದ್ದ ಕೇಂದ್ರ ಗುಪ್ತಚರ ಇಲಾಖೆಯ ಅಧಿಕಾರಿಗಳು, ಗುತ್ತಿಗೆದಾರರಿಂದ ಕಮಿಷನ್ ವಸೂಲಿ ಬಗ್ಗೆ ಮಾಹಿತಿ ನೀಡುವಂತೆ ಕೇಳಿದ್ದರು. ಆದರೆ, ಮರುದಿನವೇ ಭೇಟಿಯ ಸಮಯ ಬದಲಿಸಿದ್ದರು. ಬಳಿಕ ಭೇಟಿಯನ್ನೇ ಮಾಡಿರಲಿಲ್ಲ.

ಸಚಿವರ ಹೇಳಿಕೆಗೆ ಸೀಮಿತ: ಮೇ 20ರಂದು ಸಿದ್ದರಾಮಯ್ಯ ನೇತೃತ್ವದ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಆ ಬಳಿಕ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ಕೆಲವು ಸಚಿವರು, 'ಬಿಜೆಪಿ ಸರ್ಕಾರದ ವಿರುದ್ಧದ ಶೇ 40ರಷ್ಟು ಕಮಿಷನ್ ಆರೋಪದ ಬಗ್ಗೆ ತನಿಖೆ ನಡೆಸುತ್ತೇವೆ' ಎಂದು ಭಾವಾವೇಶದಲ್ಲಿ ಹೇಳಿಕೆ ನೀಡಿದ್ದರು. ಆದರೆ, ತನಿಖೆ ಆರಂಭದ ಕುರಿತು ಈವರೆಗೆ ಯಾವುದೇ ಪ್ರಕ್ರಿಯೆ ಆರಂಭವಾಗಿಲ್ಲ. ಆದೇಶವೂ ಹೊರಬಿದ್ದಿಲ್ಲ.

'ಕಾಲಾವಕಾಶ ಬೇಕು'

'ಬಿಜೆಪಿ ಸರ್ಕಾರದ ಅವಧಿಯಲ್ಲಿ ಹಲವು ಹಗರಣಗಳು ನಡೆದಿವೆ. ಎಲ್ಲವನ್ನೂ ಒಂದೇ ರೀತಿ ತನಿಖೆ ನಡೆಸಲು ಸಾಧ್ಯವಿಲ್ಲ. ಶೇಕಡ 40ರಷ್ಟು ಲಂಚದ ಆರೋಪದ ಬಗ್ಗೆ ತನಿಖೆ ನಡೆಸಲು ಪ್ರತ್ಯೇಕವಾಗಿ ತೀರ್ಮಾನ ಮಾಡಬೇಕಾಗುತ್ತದೆ. ಇದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ 'ಪ್ರಜಾವಾಣಿ'ಗೆ ತಿಳಿಸಿದರು.

'ಆರೋಪಕ್ಕೆ ಪೂರಕವಾದ ದಾಖಲೆ ಒದಗಿಸಲು ಸಿದ್ಧ' ಎಂದು ಕೆಂಪಣ್ಣ ಹೇಳಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ನಾನು ಕೂಡ ಚರ್ಚಿಸಿದ್ದೇನೆ. ಶೀಘ್ರದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುತ್ತಾರೆ' ಎಂದರು.

'ತನಿಖೆಗೆ ಹಿಂದೇಟು ಸರಿಯಲ್ಲ'

'ಒಂದು ಪಕ್ಷದವರು ಅಧಿಕಾರದಲ್ಲಿ ಇದ್ದಾಗ ಮಾಡಿದ ಹಗರಣಗಳನ್ನು ಮತ್ತೊಂದು ಪಕ್ಷದವರು ಅಧಿಕಾರಕ್ಕೆ ಬಂದಾಗ ಮುಚ್ಚಿ ಹಾಕುವ ಪ್ರವೃತ್ತಿ ಸರಿಯಲ್ಲ. ಭ್ರಷ್ಟಾಚಾರ ಪ್ರಕರಣಗಳನ್ನು ರಾಜಕೀಯಕ್ಕಷ್ಟೇ ಬಳಸಿಕೊಳ್ಳುವುದು ನಿಲ್ಲಬೇಕು. ಯಾರೇ ಭ್ರಷ್ಟಾಚಾರ ಮಾಡಿದ್ದರೂ ಸರಿಯಾದ ತನಿಖೆ ನಡೆಸಿ, ತಪ್ಪಿತಸ್ಥರನ್ನು ಪತ್ತೆಹಚ್ಚಿ ಶಿಕ್ಷೆಯಾಗುವಂತೆ ಮಾಡಬೇಕು' ಎನ್ನುತ್ತಾರೆ ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ.

'ಶೇ 40ರಷ್ಟು ಲಂಚದ ಆರೋಪದ ಬಗ್ಗೆಯೂ ತನಿಖೆಯಾಗಲಿ. ಭ್ರಷ್ಟಾಚಾರ ಪ್ರಕರಣಗಳ ತನಿಖೆಯನ್ನು ಪಕ್ಷಪಾತ ಎಂದು ಬಿಂಬಿಸಬಾರದು. ಯಾವುದೇ ಪಕ್ಷದವರು ಮಾಡಿದ್ದರೂ ತನಿಖೆ ನಡೆಯಲಿ. ಸತ್ಯ ಹೊರಬರಲಿ' ಎಂದು ಅವರು ಹೇಳುತ್ತಾರೆ.

'ದೂರು ಬಂದರೆ ತನಿಖೆಗೆ ಸಿದ್ಧ'

'ರಾಜಕೀಯ ವಿಚಾರಗಳ ಕುರಿತು ನಾನು ಪ್ರತಿಕ್ರಿಯಿಸುವುದಿಲ್ಲ. ಭ್ರಷ್ಟಾಚಾರದ ಆರೋಪದ ಕುರಿತು ಕಾನೂನಿನ ಪ್ರಕಾರ ದೂರು ಬಂದರೆ ತನಿಖೆ ನಡೆಸಲು ಲೋಕಾಯುಕ್ತ ಸಿದ್ಧವಿದೆ. ಈವರೆಗೆ ದೂರು ಬಾರದ ಕಾರಣ ತನಿಖೆ ಆಗಿಲ್ಲ. ಈಗ ದಾಖಲೆ ಸಹಿತ ಯಾರೇ ದೂರು ನೀಡಿದರೂ ತನಿಖೆ ನಡೆಸುತ್ತೇವೆ' ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ತಿಳಿಸಿದರು.

ಮೋದಿ ಪ್ರಶ್ನಿಸಿದ್ದ ಪತ್ರಕರ್ತೆಗೆ ನಿಂದನೆ: ಶ್ವೇತಭವನ ಖಂಡನೆ

ವಾಷಿಂಗ್ಟನ್ (ಪಿಟಿಐ): ಭಾರತದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಮೆರಿಕದಲ್ಲಿ ಪ್ರಶ್ನಿಸಿದ್ದ ಪತ್ರಕರ್ತೆಯ ವಿರುದ್ಧ ಆನ್‌ಲೈನ್ ವೇದಿಕೆಗಳಲ್ಲಿ ನಿಂದನೆ, ಕಿರುಕುಳ ಎದುರಾಗುತ್ತಿವೆ. ಇದನ್ನು ಶ್ವೇತಭವನ ತೀವ್ರವಾಗಿ ಖಂಡಿಸಿದೆ.

ಕಳೆದ ವಾರ ಮೋದಿ ಅವರು ಅಮೆರಿಕ ಪ್ರವಾಸದಲ್ಲಿದ್ದಾಗ, ಅಧ್ಯಕ್ಷ ಜೋ ಬೈಡನ್ ಅವರ ಜತೆ ಜಂಟಿ ಪತ್ರಿಕಾಗೋಷ್ಠಿ ನಡೆಸಿದ್ದರು.

ಈ ವೇಳೆ ವಾಲ್ ಸ್ಟ್ರೀಟ್ ಜರ್ನಲ್‌ನ ಪತ್ರಕರ್ತೆ ಸಬ್ರಿನಾ ಸಿದ್ದಿಕ್ಕಿ ಅವರು, ಭಾರತದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳು ಮತ್ತು ಅವುಗಳ ಸುಧಾರಣೆ ಹಾಗೂ ವಾಕ್ ಸ್ವಾತಂತ್ರ್ಯವನ್ನು ಎತ್ತಿಹಿಡಿಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಕುರಿತು ಪ್ರಧಾನಿ ಮೋದಿ ಅವರನ್ನು ಪ್ರಶ್ನಿಸಿದ್ದರು.

ಪತ್ರಿಕಾಗೋಷ್ಠಿಯಾದ ಮಾರನೇ ದಿನದಿಂದಲೇ ಆ ಪತ್ರಕರ್ತೆಗೆ ಆನ್‌ಲೈನ್ ವೇದಿಕೆಗಳ ಮೂಲಕ ನಿಂದನೆಗಳು ಬರುತ್ತಿವೆ. ಅವರ ಪ್ರಶ್ನೆಗಳು ಯಾರಿಂದಲೋ 'ಪ್ರೇರಿತ'ವಾಗಿವೆ ಮತ್ತು ಅವರು 'ಪಾಕಿಸ್ತಾನಿ ಇಸ್ಲಾಮಿಸ್ಟ್' ಎಂದೆಲ್ಲ ಕೆಲವರು ಅಪಾದನೆಗಳನ್ನು ಮಾಡಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಶ್ವೇತಭವನದ ಸಮನ್ವಯಕಾರ (ಕಾರ್ಯತಂತ್ರ ಸಂವಹನ) ಜಾನ್ ಕಿರ್ಬಿ, 'ಈ ಕಿರುಕುಳದ ವರದಿಗಳ ಬಗ್ಗೆ ನಮಗೆ ತಿಳಿದಿದೆ. ಇದು ಸ್ವೀಕಾರಾರ್ಹವಲ್ಲ ಮತ್ತು ಪ್ರಜಾಪ್ರಭುತ್ವದ ತತ್ವಗಳಿಗೆ ವಿರುದ್ಧವಾದದ್ದು. ಪತ್ರಕರ್ತರಿಗೆ ಎದುರಾಗುವ ಯಾವುದೇ ಬಗೆಯ ಕಿರುಕುಳವನ್ನು ನಾವು ಪೂರ್ಣವಾಗಿ ಖಂಡಿಸುತ್ತೇವೆ' ಎಂದು ಹೇಳಿದ್ದಾರೆ.

'ಶ್ವೇತಭವನವು ಪತ್ರಿಕಾ ಸ್ವಾತಂತ್ರ್ಯಕ್ಕೆ ಬದ್ಧವಾಗಿದೆ ಮತ್ತು ಪತ್ರಕರ್ತರಿಗೆ ಎದುರಾಗುವ ಯಾವುದೇ ರೀತಿಯ ಬೆದರಿಕೆ ಅಥವಾ ಕಿರುಕುಳವನ್ನು ಖಂಡಿಸುತ್ತದೆ' ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೀನ್ ಜೀನ್ ಪಿಯರ್ ಪ್ರತಿಕ್ರಿಯಿಸಿದ್ದಾರೆ.

ದಕ್ಷಿಣ ಏಷ್ಯಾ ಪತ್ರಕರ್ತರ ಸಂಘ (ಎಸ್‌ಎಜೆಎ) ಕೂಡ ಸಿದ್ದಿಕಿ ಅವರಿಗೆ ಬೆಂಬಲ ನೀಡಿದೆ.

ಸಿದ್ದಿಕಿ ಅವರ ಪ್ರಶ್ನೆಗೆ, ಜಂಟಿ ಪತ್ರಿಕಾಗೋಷ್ಠಿಯಲ್ಲಿ ಉತ್ತರಿಸಿದ್ದ ಪ್ರಧಾನಿ ಮೋದಿ ಅವರು, ಭಾರತದ ಪ್ರಜಾಪ್ರಭುತ್ವ ಮತ್ತು ತಮ್ಮ ಸರ್ಕಾರದ ಸಾಧನೆಗಳು ಹಾಗೂ ಮಾನವ ಹಕ್ಕುಗಳ ಕುರಿತು ಬಲವಾಗಿ ಸಮರ್ಥಿಸಿಕೊಂಡಿದ್ದರು. ತಮ್ಮ ಸರ್ಕಾರದ ಮೂಲ ಅಡಿಪಾಯವೇ 'ಸಬ್ಕಾ ಸಾಥ್, ಸಬ್ಕಾ ವಿಕಾಸ್, ಸಬ್ಕಾ ವಿಶ್ವಾಸ್ ಮತ್ತು ಸಬ್ಕಾ ಪ್ರಯಾಸ್' ಆಗಿದೆ. ಅಂದರೆ ನಾವು ಎಲ್ಲರ ವಿಶ್ವಾಸದ ಜತೆಗೆ ಒಟ್ಟಾಗಿ ಮುಂದೆ ಸಾಗುತ್ತಿದ್ದೇವೆ ಎಂದು ಹೇಳಿದ್ದರು.

'ಸಂವಿಧಾನದ ಮೂಲ ತತ್ವಗಳ ಆಶಯದಂತೆ ನಮ್ಮ ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ. ಹೀಗಾಗಿ ನಮ್ಮಲ್ಲಿ ಜಾತಿ, ಧರ್ಮ, ಲಿಂಗ, ಧರ್ಮದ ಆಧಾರದ ಮೇಲೆ ತಾರತಮ್ಯ ಸಾಧ್ಯವಿಲ್ಲ' ಎಂದು ಪ್ರತಿಕ್ರಿಯಿಸಿದ್ದರು.

ದೇಶಿ ಕ್ರಿಕೆಟ್ ಋತುವಿಗೆ ದುಲೀಪ್ ಟ್ರೋಫಿ ಮುನ್ನುಡಿ; ಪಂದ್ಯಗಳು ಇಂದಿನಿಂದ

ಯುವನಾಯಕರ ಹಣಾಹಣಿಗೆ ವೇದಿಕೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುಧವಾರದಿಂದ ದೇಶಿ ಕ್ರಿಕೆಟ್ ಋತುವಿನ ಆರಂಭವಾಗಲಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ದುಲೀಪ್ ಟ್ರೋಫಿಯನ್ನು ಆಯೋಜಿಸುವ ಮೂಲಕ ಋತುವಿಗೆ ಮುನ್ನುಡಿ ಬರೆಯಲಿದೆ.

ಬುಧವಾರದಿಂದ ಜುಲೈ 1ರವರೆಗೆ ಎರಡು ಕ್ವಾರ್ಟರ್‌ಫೈನಲ್‌ಗಳು ನಡೆಯಲಿವೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಎಂಟರ ಘಟ್ಟದ ಪಂದ್ಯದಲ್ಲಿ ಉತ್ತರ ವಲಯ ಮತ್ತು ಈಶಾನ್ಯ ವಲಯ ಮುಖಾಮುಖಿಯಾಗಲಿವೆ.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಕೇಂದ್ರ ವಲಯ ಹಾಗೂ ಪೂರ್ವ ವಲಯ ತಂಡಗಳು ಸೆಣಸಲಿವೆ.

ಪಂಜಾಬಿನ ಮನದೀಪ್ ಸಿಂಗ್ ಅವರು ಉತ್ತರ ವಲಯ ತಂಡವನ್ನು ಹಾಗೂ ಈಶಾನ್ಯ ವಲಯವನ್ನು ರಾಂಗಸೇನ್ ಜೊನಾಥನ್ ಮುನ್ನಡೆಸಲಿದ್ದಾರೆ. ಉತ್ತರ ವಲಯದಲ್ಲಿ ಅನುಭವಿಗಳಾದ ಸಿದ್ಧಾರ್ಥ್ ಕೌಲ್, ಜಯಂತ್ ಯಾದವ್, ಪ್ರಭಸಿಮ್ರನ್ ಸಿಂಗ್ ಅವರು ಇದ್ದಾರೆ. ಈಶಾನ್ಯ ತಂಡದಲ್ಲಿ ಜೊನಾಥನ್ ಬಿಟ್ಟರೆ ಉಳಿದವರಿಗೆ ಹೆಚ್ಚು ಅನುಭವ ಇಲ್ಲ. ಆದ್ದರಿಂದ ಉತ್ತರ ವಲಯ ತಂಡವು ಪ್ರಾಬಲ್ಯ ಮೆರೆಯುವ ಸಾಧ್ಯತೆ ಹೆಚ್ಚು.

ಆಲೂರಿನ ಪಂದ್ಯದಲ್ಲಿ ಆಡಲಿರುವ ಪೂರ್ವ ವಲಯ ತಂಡಕ್ಕೆ ಅಭಿಮನ್ಯು ಈಶ್ವರನ್ ನಾಯಕರಾಗಿದ್ದಾರೆ. ಶಾಬಾಜ್ ನದೀಂ, ಅಭಿಷೇಕ್ ಪೊರೆಲ್, ಮುಕೇಶ್ ಕುಮಾರ್, ಶಾಬಾಜ್ ಅಹಮದ್ ಅವರು ತಂಡದ ಪ್ರಮುಖ ಆಟಗಾರರಾಗಿದ್ದಾರೆ. ಮಧ್ಯಮವೇಗಿ ಶಿವಂ ಮಾವಿ ನಾಯಕತ್ವದ ಕೇಂದ್ರ ವಲಯವು ಪೂರ್ವ ವಲಯಕ್ಕೆ ಪೈಪೋಟಿಯೊಡ್ಡಲಿದೆ.

ರಿಂಕು ಸಿಂಗ್

ಇತ್ತೀಚೆಗೆ ಐಪಿಎಲ್‌ನಲ್ಲಿ ಮಿಂಚಿದ್ದ 'ಸಿಕ್ಸರ್ ಕಿಂಗ್' ರಿಂಕು ಸಿಂಗ್, ಬೌಲರ್ ಆವೇಶ್ ಖಾನ್ ಅವರು ಈ ತಂಡದಲ್ಲಿದ್ದಾರೆ. ಆದ್ದರಿಂದ ಈ ಪಂದ್ಯವು ಉತ್ತಮ ಸ್ಪರ್ಧೆ ಕಾಣುವ ನಿರೀಕ್ಷೆ ಇದೆ.

ಹೋದ ವರ್ಷದ ಚಾಂಪಿಯನ್ ಪಶ್ಚಿಮ ವಲಯ ಹಾಗೂ ರನ್ನರ್ಸ್ ಅಪ್ ದಕ್ಷಿಣ ವಲಯ ತಂಡಗಳು ಸೆಮಿಫೈನಲ್‌ಗೆ ನೇರ ಅರ್ಹತೆ ಪಡೆದಿವೆ. ಜುಲೈ 5ರಿಂದ 8ರವರೆಗೆ ಪಂದ್ಯಗಳು ಬೆಂಗಳೂರಿನಲ್ಲಿಯೇ ನಡೆಯಲಿವೆ. ಫೈನಲ್ ಪಂದ್ಯ ಕೂಡ ಜುಲೈ 12 ರಿಂದ 16ರವರೆಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವುದು.

ಪಂದ್ಯ ಆರಂಭ: ಬೆಳಿಗ್ಗೆ 9.30

ಪ್ರಶಸ್ತಿ ಜಯಿಸಿದ ವಲಯ ತಂಡಗಳು (ಕಳೆದ 10 ವರ್ಷಗಳಲ್ಲಿ)

ಋತು	ವಿಜೇತ	ರನ್ನರ್ಸ್ ಅಪ್
2012-13	ಪೂರ್ವ	ಕೇಂದ್ರ
2013-14	ಉತ್ತರ–ದಕ್ಷಿಣ ಜಂಟಿ	
2014-15	ಕೇಂದ್ರ–ದಕ್ಷಿಣ ಜಂಟಿ	
2016-17	ಇಂಡಿಯಾ ಬ್ಲ್ಯೂ	ಇಂಡಿಯಾ ರೆಡ್
2017-18	ಇಂಡಿಯಾ ರೆಡ್	ಇಂಡಿಯಾ ಬ್ಲ್ಯೂ
2018-19	ಇಂಡಿಯಾ ಬ್ಲ್ಯೂ	ಇಂಡಿಯಾ ರೆಡ್
2019-20	ಇಂಡಿಯಾ ರೆಡ್	ಇಂಡಿಯಾ ಗ್ರೀನ್
2022-23	ಪಶ್ಚಿಮ	ದಕ್ಷಿಣ

ಐಟಿಬಿಪಿ: ಗ್ರೂಪ್ 'ಸಿ' ಸಿಬ್ಬಂದಿಗೆ ಬಡ್ತಿ ಸೌಲಭ್ಯ

ನವದೆಹಲಿ (ಪಿಟಿಐ): ಭಾರತ–ಟಿಬೆಟ್ ಗಡಿ ಪೊಲೀಸ್‌ನ (ಐಟಿಬಿಪಿ) ಅಡುಗೆಯವರು, ನೀರು ಪೂರೈಕೆದಾರರು, ಕ್ಷೌರಿಕರು, ಕಸಗುಡಿಸುವ ಕೆಲಸದ ಸಿಬ್ಬಂದಿಗೆ ಸುದೀರ್ಘ ಅವಧಿಯ ನಂತರ ಇದೇ ಮೊದಲ ಬಾರಿಗೆ ಬಡ್ತಿಯು ಸಿಗಲಿದೆ.

ಅಧಿಕೃತ ಮೂಲಗಳ ಪ್ರಕಾರ, ಕೇಂದ್ರ ಸರ್ಕಾರ ಕಳೆದ ವಾರ ಈ ಪ್ರಸ್ತಾವಕ್ಕೆ ಅನುಮೋದನೆ ನೀಡಿದೆ. ಈ ಪ್ರಕಾರ, 984 ಹೆಡ್ ಕಾನ್‌ಸ್ಟೆಬಲ್ ಹುದ್ದೆಗಳು ಸೃಷ್ಟಿಯಾಗಲಿವೆ.

ಇಂಡೊ ಟಿಬೆಟ್ ಗಡಿ ಪೊಲೀಸ್‌ನ (ಐಟಿಬಿಪಿ) ಈ ವರ್ಗದಲ್ಲಿ ಎಂಟು ವಿವಿಧ ಕಾರ್ಯಗಳಲ್ಲಿ ನಿರತರಾದ ಸಿಬ್ಬಂದಿ ಇದ್ದಾರೆ. ಇವರ ಒಟ್ಟು ಸಂಖ್ಯೆ 7,097. ಹುದ್ದೆಗಳ ಪರಿಷ್ಕರಣೆಯ ನಂತರವೂ ಸಿಬ್ಬಂದಿಯ ಒಟ್ಟು ಸಂಖ್ಯೆಯಲ್ಲಿ ಬದಲಾವಣೆ ಆಗುವುದಿಲ್ಲ.

ಈ ವರ್ಗದಲ್ಲಿ ಕಾನ್‌ಸ್ಟೆಬಲ್ ಆಗಿ ಸೇವೆಗೆ ಸೇರಿದರೆ 35–40 ವರ್ಷಗಳ ಸೇವಾವಧಿ ಬಳಿಕವು ಅದೇ ಹುದ್ದೆಯಲ್ಲಿ ನಿವೃತ್ತರಾಗುತ್ತಿದ್ದರು. ಈ ವರ್ಗದ ಸಿಬ್ಬಂದಿ ಮಾನಸಿಕ ಸ್ಥೈರ್ಯ ಹೆಚ್ಚಿಸುವುದು ಈ ನಿರ್ಧಾರದ ಉದ್ದೇಶ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಭಾರತಕ್ಕೆ ಬೆದರಿಕೆ ಒಡ್ಡಲು ಶ್ರೀಲಂಕಾ ನೆಲೆ ಕೊಡದು'

ಕೊಲಂಬೊ (ಪಿಟಿಐ): ಭಾರತಕ್ಕೆ ಬೆದರಿಕೆ ಒಡ್ಡಲು ಶ್ರೀಲಂಕಾವನ್ನು ನೆಲೆಯಾಗಿ ಬಳಸಿಕೊಳ್ಳಲು ಅವಕಾಶ ನೀಡುವುದಿಲ್ಲ ಎಂದು ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಹೇಳಿದ್ದಾರೆ.

ಈ ವಿಷಯದಲ್ಲಿ ದ್ವೀಪ ರಾಷ್ಟ್ರವು 'ತಟಸ್ಥ'ವಾಗಿ ಉಳಿಯಲಿದೆ. ಚೀನಾದ ಜೊತೆಗೆ ಈ ಕುರಿತು ಯಾವುದೇ ಮಿಲಿಟರಿ ಒಪ್ಪಂದ ಆಗಿಲ್ಲ ಎಂದು ಅವರು ಹೇಳಿದ್ದಾರೆ.

ಬ್ರಿಟನ್ ಮತ್ತು ಫ್ರಾನ್ಸ್‌ನ ಅಧಿಕೃತ ಪ್ರವಾಸದಲ್ಲಿರುವ ರಾನಿಲ್ ವಿಕ್ರಮಸಿಂಘೆ ಅವರು, ಫ್ರಾನ್ಸ್‌ನ ಅಧಿಕೃತ ಮಾಧ್ಯಮಕ್ಕೆ ನೀಡಿರುವ ಸಂದರ್ಶನದಲ್ಲಿ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಬಂಡಾಯಗಾರರು ರಷ್ಯಾದ ಶತ್ರುಗಳ ಕೈಗೊಂಬೆ: ಪುಟಿನ್

ಪುಟಿನ್

ಮಾಸ್ಕೊ (ಎಪಿ): ತಮ್ಮ ದೇಶದ ವಿರುದ್ಧ ಬಂಡಾಯವೆದ್ದಿದ್ದ ಖಾಸಗಿ ಸೇನಾ ಗುಂಪು 'ವ್ಯಾಗ್ನರ್' ವಿರುದ್ಧ ಹರಿಹಾಯ್ದ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, 'ದೇಶದ್ರೋಹಿಗಳು ಉಕ್ರೇನ್ ಸರ್ಕಾರ ಮತ್ತು ಅದರ ಮಿತ್ರ ರಾಷ್ಟ್ರಗಳ ಕೈಗೊಂಬೆಯಾಗಿ ವರ್ತಿಸಿದ್ದಾರೆ' ಎಂದು ಹೇಳಿದ್ದಾರೆ.

ಟಿ.ವಿ. ವಾಹಿನಿಯಲ್ಲಿ ಸೋಮವಾರ ಮಧ್ಯರಾತ್ರಿ ಮಾತನಾಡಿದ ಅವರು, ಬಂಡಾಯಕ್ಕೆ ಕರೆ ನೀಡಿದ್ದವರು ರಷ್ಯಾ ಸೈನಿಕರ ಮೇಲೆ ಗುಂಡು ಹಾರಿಸಲು ಖಾಸಗಿ ಯೋಧರನ್ನು ಒತ್ತಾಯಿಸಿದ್ದರು ಎಂದು ವ್ಯಾಗ್ನರ್ ಗುಂಪಿನ ಮುಖ್ಯಸ್ಥ ಯೆವ್ಗೆನಿ ಪ್ರಿಗೋಷಿನ್ ಅವರ ಹೆಸರು ಉಲ್ಲೇಖಿಸದೆ ಆರೋಪಿಸಿದ್ದಾರೆ.

ಬಂಡಾಯದ ಬಳಿಕ ರಷ್ಯಾವು ವಿಭಜನೆಯಾಗಲಿದೆ ಮತ್ತು ದುರ್ಬಲವಾಗಲಿದೆ ಎಂದು ನಮ್ಮ ಶತ್ರುಗಳು ನಂಬಿದ್ದರು. ಅವರ ಲೆಕ್ಕಾಚಾರ ತಲೆಕೆಳಗಾಗಿದೆ. ಸಂಕಷ್ಟದ ವೇಳೆ ಇಡೀ ರಾಷ್ಟ್ರವು ಒಗ್ಗಟ್ಟಾಗಿ ನಿಂತಿತ್ತು ಎಂದೂ ಪುಟಿನ್ ಪ್ರತಿಪಾದಿಸಿದ್ದಾರೆ.

ಐದು ನಿಮಿಷ ವಾಹಿನಿಯಲ್ಲಿ ಮಾತನಾಡಿದ ಪುಟಿನ್ ಅವರು ರಷ್ಯಾದಲ್ಲಿ ಎಲ್ಲವೂ ಸ್ಥಿರವಾಗಿದೆ ಎಂಬುದನ್ನು ಬಿಂಬಿಸಲು ಪ್ರಯತ್ನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಬಂಡಾಯದ ಹಿಂದೆ ಅಮೆರಿಕ ಮತ್ತು ನ್ಯಾಟೊದ ಕೈವಾಡವಿಲ್ಲ' ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಸೋಮವಾರ ಸ್ಪಷ್ಟಪಡಿಸಿದ್ದರು.

ಬಂಡಾಯವನ್ನು ಶಮನಗೊಳಿಸಲು ಸಹಕರಿಸಿದ ಯೋಧರನ್ನು ಉದ್ದೇಶಿಸಿ ಪುಟಿನ್ ಅವರು ಮಂಗಳವಾರ ಮಾತನಾಡಿದ್ದಾರೆ.

ತನಿಖೆ ಕೈಬಿಟ್ಟ ಎಫ್‌ಎಸ್‌ಬಿ

ಪ್ರಿಗೋಷಿನ್ ವಿರುದ್ಧದ ತನಿಖೆಯನ್ನು ನಿಲ್ಲಿಸಿದ್ದೇವೆ ಎಂದು ರಷ್ಯಾದ ಫೆಡರಲ್ ಭದ್ರತಾ ಸೇವೆ (ಎಫ್‌ಎಸ್‌ಬಿ) ಮಂಗಳವಾರ ಘೋಷಿಸಿದೆ.

ಬಂಡಾಯದಲ್ಲಿ ಭಾಗಿಯಾಗಿದ್ದ ಇತರರ ವಿರುದ್ಧವೂ ಯಾವುದೇ ಪ್ರಕರಣಗಳನ್ನು ದಾಖಲಿಸಿಕೊಳ್ಳುವುದಿಲ್ಲ ಎಂದೂ ಹೇಳಿದೆ.

ಬಂಡಾಯಗಾರರ ವಿರುದ್ಧ ಯಾವುದೇ ವಿಚಾರಣೆ ನಡೆಸುವುದಿಲ್ಲ ಎಂದು ರಷ್ಯಾವು ಶನಿವಾರ ಭರವಸೆ ನೀಡಿತ್ತು.

ರಷ್ಯಾದಲ್ಲಿ ಸರ್ಕಾರದ ವಿರುದ್ಧ ಬಂಡಾಯವೆದ್ದರೆ 20 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.ಈ ಹಿಂದೆ ವಿರೋಧಪಕ್ಷಗಳ ಹಲವು ನಾಯಕರು ಇಂತಹ ಶಿಕ್ಷೆಗೆ ಗುರಿಯಾಗಿದ್ದರು ಎಂದಿವೆ.

ಬೆಲರೂಸ್ ತಲುಪಿದ ಪ್ರಿಗೋಷಿನ್: ಯೆವ್ಗೆನಿ ಪ್ರಿಗೋಷಿನ್ ಅವರು ಬೆಲರೂಸ್‌ಗೆ ತಲುಪಿದ್ದಾರೆ ಎಂದು ಅಲ್ಲಿನ ಅಧ್ಯಕ್ಷ ಅಲೆಕ್ಸಾಂಡರ್ ಲುಕಾಶೆಂಕೊ ಅವರು ಮಂಗಳವಾರ ಖಚಿತಪಡಿಸಿದ್ದಾರೆ.

ಪ್ರಿಗೋಷಿನ್ ಮತ್ತು ವ್ಯಾಗ್ನರ್ ಪಡೆಯ ಕೆಲವು ಸೈನಿಕರು ತಮ್ಮ ಖರ್ಚಿನಲ್ಲಿ ಕೆಲಕಾಲ ಬೆಲರೂಸ್‌ನಲ್ಲಿ ಉಳಿದುಕೊಳ್ಳಲಿದ್ದಾರೆ ಅವರಿಗೆ ಸ್ವಾಗತ ಎಂದಿದ್ದಾರೆ.

ಭಾರತ ಜೂನಿಯರ್ ಮಹಿಳಾ ಹಾಕಿ ತಂಡಕ್ಕೆ ಖಾಂಡೇಕರ್ ಮುಖ್ಯ ಕೋಚ್

ನವದೆಹಲಿ (ಪಿಟಿಐ): ಮಾಜಿ ನಾಯಕ ತುಷಾರ್ ಖಾಂಡೇಕರ್ ಅವರನ್ನು ಭಾರತ ಜೂನಿಯರ್ ಮಹಿಳಾ ಹಾಕಿ ತಂಡದ ಮುಖ್ಯ ಕೋಚ್ ಆಗಿ ಹಾಕಿ ಇಂಡಿಯಾ ಮಂಗಳವಾರ ನೇಮಕ ಮಾಡಿದೆ. ಸದ್ಯ ಭಾರತ ತಂಡ ನವೆಂಬರ್ 29 ರಿಂದ ಡಿಸೆಂಬರ್ 10ರ ವರೆಗೆ ಸ್ಯಾಂಟಿಯಾಗೊದಲ್ಲಿ ನಡೆಯಲಿರುವ ವಿಶ್ವಕಪ್‌ಗೆ ಸಿದ್ಧತೆ ನಡೆಸುತ್ತಿದೆ.

ಖಾಂಡೇಕರ್ ಅವರು ಹರ್ವಿಂದರ್ ಸಿಂಗ್ ಸ್ಥಾನದಲ್ಲಿ ನೇಮಕಗೊಂಡಿದ್ದಾರೆ. ಜನವರಿಯಲ್ಲಿ ಎರಿಕ್ ವೊನಿಂಕ್ ಅವರು ಕೋಚ್ ಹುದ್ದೆ ತ್ಯಜಿಸಿದ ನಂತರದಿಂದ ಇಲ್ಲಿಯವರೆಗೆ ಹರವಿಂದರ್ ಸಿಂಗ್ ಅವರು ತಾತ್ಕಾಲಿಕ ಅವಧಿಗೆ ಕೋಚ್ ಆಗಿ ನೇಮಕಗೊಂಡಿದ್ದರು.

ಭಾರತ ಮಹಿಳಾ ತಂಡದ ಚೀಫ್ ಕೋಚ್ ಜಾನೆಕ್ ಶೋಪ್ಮನ್ ಅವರು ಜೂನಿಯರ್ ತಂಡದ ಉಸ್ತುವಾರಿಯನ್ನೂ ವಹಿಸಿದ್ದಾರೆ. ಆದರೆ ಈಗ ಏಷ್ಯನ್ ಕ್ರೀಡಾಕೂಟಕ್ಕೆ ಸಿದ್ಧತೆಯಲ್ಲಿ ನಿರತರಾಗಿರುವುದರಿಂದ ಜೂನಿಯರ್ ತಂಡದ ಮುಖ್ಯ ಕೋಚ್ ಹೊಣೆಯನ್ನು ಖಾಂಡೇಕರ್ ಅವರಿಗೆ ವಹಿಸಲಾಗಿದೆ.

ಆಟಗಾರರಾಗಿ ಹೆಸರು ಮಾಡಿದ್ದ ಖಾಂಡೇಕರ್ ಅವರು ಕೋಚ್ ಆಗಿಯೂ ಸಾಕಷ್ಟು ಅನುಭವ ಹೊಂದಿದ್ದಾರೆ.

'ಆಟಗಾರನಾಗಿ ವೃತ್ತಿಬದುಕನ್ನು ಕಳೆದ ನಂತರ ಕೋಚಿಂಗ್ ಕಡೆ ನನ್ನ ಒಲವಿತ್ತು. ಇತ್ತೀಚಿನ ವರ್ಷಗಳಲ್ಲಿ ವಿಶ್ವ ಹಾಕಿಯ ಹೆಸರಾಂತ ಕೋಚ್‌ಗಳ ಜೊತೆ ಕೆಲಸ ಮಾಡಿದ್ದೇನೆ. ಅವರಿಂದ ಸಾಕಷ್ಟು ಕಲಿತಿದ್ದೇನೆ' ಎಂದು ಪ್ರಕಟಣೆಯಲ್ಲಿ ಅವರು ಹೇಳಿದ್ದಾರೆ.

2014 ರಿಂದ 2016ರ ವರೆಗೆ ಅವರು ಪುರುಷರ ತಂಡದ ಕೋಚ್ ಆಗಿದ್ದು, ಉತ್ತಮ ಸಾಧನೆಗೆ ನೆರವಾಗಿದ್ದರು. ಅವರ ಕೋಚ್ ಆಗಿದ್ದ ಅವಧಿಯಲ್ಲಿ ಭಾರತ ಲಂಡನ್‌ನಲ್ಲಿ (2016) ನಡೆದ ಚಾಂಪಿಯನ್ಸ್ ಟ್ರೋಫಿಯಲ್ಲಿ ಬೆಳ್ಳಿಯ ಪದಕ ಗೆದ್ದುಕೊಂಡಿತ್ತು. ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಚಿನ್ನದ ಪದಕ ಮತ್ತು 2015ರಲ್ಲಿ ರಾಯಪುರದಲ್ಲಿ ನಡೆದ ವಿಶ್ವ ಹಾಕಿ ಲೀಗ್‌ನಲ್ಲಿ ಕಂಚಿನ ಪದಕ ಗೆದ್ದಿತ್ತು.

2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಭಾರತ ತಂಡಕ್ಕೆ ಅವರು ನೆರವು ಸಿಬ್ಬಂದಿಯಾಗಿದ್ದರು.

'ತುಷಾರ್ ಅವರು ತಮ್ಮೊಂದಿಗೆ ದಶಕಗಳ ಕಾಲ ಆಟಗಾರ ಹಾಗೂ ಕೋಚ್ ಆಗಿ ಹೊಂದಿರುವ ಅನುಭವವನ್ನೂ ತರಲಿದ್ದಾರೆ. ಅವರು ಜೂನಿಯರ್ ಹಂತದ ಆಟಗಾರರಿಗೆ ಆದರ್ಶಪ್ರಾಯ ಆಗಲಿದ್ದಾರೆ' ಎಂದು ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕೆ ಹೇಳಿದ್ದಾರೆ.

ಬಿಜಿಸಿಗೆ ಕ್ಯಾಪ್ಟನ್ ಆಗಿ ವಸಂತ ಕುಮಾರ್

ಬೆಂಗಳೂರು: ಡಿ.ಎನ್.ವಸಂತ ಕುಮಾರ್ ಬೆಂಗಳೂರು ಗಾಲ್ಫ್ ಕ್ಲಬ್‌ನ ಕ್ಯಾಪ್ಟನ್ ಆಗಿ ಆಯ್ಕೆಯಾಗಿದ್ದಾರೆ. 2023– 24ನೇ ಸಾಲಿಗೆ ಪದಾಧಿಕಾರಿಗಳ ಆಯ್ಕೆ ಮಂಗಳವಾರ ನಡೆಯಿತು.

ಗೌರವ ಕಾರ್ಯದರ್ಶಿಯಾಗಿ ವಿಠ್ಠಲ್ ಬೆಳಂದೂರು ಮತ್ತು ಗೌರವ ಖಜಾಂಚಿಯಾಗಿ ಫಾರೂಕ್ ಅಹ್ಮದ್ ಆಯ್ಕೆಯಾಗಿದ್ದಾರೆ. ಶಶಾಂಕ್ ಆರ್. ಎನ್., ಶ್ರೀದೇವ್ ಬೈರಪ್ಪ, ರಘು ಶಿವರಾಮಯ್ಯ, ಎಲ್. ಬಾಲಕೃಷ್ಣ, ಉತ್ಪಲ್ ದೇಸಾಯಿ ಅವರು ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕ್ರಿಕೆಟ್: ಮಂಗಳೂರು ವಲಯಕ್ಕೆ ಜಯ

ಬೆಂಗಳೂರು: ಹರ್ಷಿತ್ ಪೂಜಾರಿ (65 ರನ್) ಅವರ ಅರ್ಧಶತಕದ ನೆರವಿನಿಂದ ಮಂಗಳೂರು ವಲಯ ತಂಡ ಕೆಎಸ್‌ಸಿಎ 23 ವರ್ಷದೊಳಗಿನವರ ಅಂತರ (ಗ್ರಾಮಾಂತರ) ವಲಯ ಕ್ರಿಕೆಟ್ ಟೂರ್ನಿಯಲ್ಲಿ ಮಂಗಳವಾರ 80 ರನ್‌ಗಳಿಂದ ತುಮಕೂರು ವಲಯದ ಮೇಲೆ ಗೆಲುವು ಸಾಧಿಸಿತು.

ಸಂಕ್ಷಿಪ್ತ ಸ್ಕೋರ್; (ಬಿಜಿಎಸ್ ಮೈದಾನ) ಮಂಗಳೂರು ವಲಯ: 47.4 ಓವರ್‌ಗಳಲ್ಲಿ 235 (ಹರ್ಷಿತ್ ಪೂಜಾರಿ 65, ರುಶಿ ಬಿ. ಶೆಟ್ಟಿ 29, ಶ್ರೀವತ್ಸ ಆರ್. ಆಚಾರ್ಯ 31, ನಾಥನ್ ಡಿಮೆಲ್ಲೊ 37; ಎಸ್. ತೌಫೀಕ್ 28ಕ್ಕೆ 3, ಟಿ. ಚಿರಂಜೀವಿ 36ಕ್ಕೆ 2, ಎಚ್. ಪಿ. ಅಭಿಷೇಕ್ 34ಕ್ಕೆ 2); ತುಮಕೂರು ವಲಯ: 34.2 ಓವರ್‌ಗಳಲ್ಲಿ 155 (ಹೇಮಂತ್ ಕುಮಾರ್ 35, ನಾಥನ್ ಡಿಮೆಲ್ಲೊ 29ಕ್ಕೆ 4, ವಿನಾಯಕ ಹೊಳ್ಳ 49ಕ್ಕೆ 3, ಬಿ.ಪಿ. ಮನೀಶ್ 21ಕ್ಕೆ 2). **(ಕಿಣಿ ಸ್ಪೋರ್ಟ್ಸ್ ಅರೇನಾ ಮೈದಾನ) ಮೈಸೂರು ವಲಯ:** 40.3 ಓವರ್‌ಗಳಲ್ಲಿ 136 (ಪ್ರಿಯರಂಜನ್ 30ಕ್ಕೆ 3, ಸಾಯಂ ಆರ್. ಅಪ್ಪಣ್ಣವರ 31ಕ್ಕೆ 3, ಮುದಸ್ಸರ್ ನಜರ್ 35ಕ್ಕೆ 2); ಧಾರವಾಡ ವಲಯ: 33.3 ಓವರ್‌ಗಳಲ್ಲಿ 8 ವಿಕೆಟ್‌ಗೆ 139 (ಆರ್.ಎನ್. ಚಿರಾಗ್ 33, ಕೃಷ್ಣಪ್ಪ ಬಗಾಡಿ 26, ಎಂ.ಆರ್. ಜಯಂತ್ 29ಕ್ಕೆ 4, ಜೆ. ಮಹೇಂದ್ರ ಕುಮಾರ್ 12ಕ್ಕೆ 2). ಫಲಿತಾಂಶ: ಧಾರವಾಡ ವಲಯಕ್ಕೆ 2 ವಿಕೆಟ್‌ಗಳ ಜಯ. **(ಐಎಎಫ್ ಮೈದಾನ) ಶಿವಮೊಗ್ಗ ವಲಯ:** 46.2 ಓವರ್‌ಗಳಲ್ಲಿ 164 (ಅಬು 34, ಶ್ರೇಯಾಂಕ್ ಸಾಗರ್ 28, ಪುನೀತ್ ಕುಮಾರ್ 40ಕ್ಕೆ 4, ಕೆ.ಶಶಿಕುಮಾರ್ 20ಕ್ಕೆ 2); ರಾಯಚೂರು ವಲಯ: 33.4 ಓವರ್‌ಗಳಲ್ಲಿ 3 ವಿಕೆಟ್‌ಗೆ 165 (ಬಿ. ವಿಜಯ ರಾಜ್ 50, ಅಮಯ್ ತೇಜಸ್ 34, ತಿಪ್ಪಾರೆಡ್ಡಿ 41, ಪ್ರಲ್ಹಾದ್ ಕುಲಕರ್ಣಿ 25) ಫಲಿತಾಂಶ: ರಾಯಚೂರು ವಲಯಕ್ಕೆ 7 ವಿಕೆಟ್‌ಗಳ ಜಯ.

ಏಕದಿನ ವಿಶ್ವಕಪ್ ವೇಳಾಪಟ್ಟಿ			
ದಿನಾಂಕ	ಪಂದ್ಯ	ಸ್ಥಳ	ಆರಂಭ
ಅ.5	ಇಂಗ್ಲೆಂಡ್–ನ್ಯೂಜಿಲೆಂಡ್	ಅಹಮದಾಬಾದ್	ಮಧ್ಯಾಹ್ನ 2
ಅ.6	ಪಾಕಿಸ್ತಾನ–ಕ್ವಾಲಿಫೈಯರ್1	ಹೈದರಾಬಾದ್	ಮ.2
ಅ.7	ಬಾಂಗ್ಲಾದೇಶ–ಅಫ್ಗಾನಿಸ್ತಾನ	ಧರ್ಮಶಾಲಾ	ಬೆಳಿಗ್ಗೆ 10.30
ಅ.7	ದಕ್ಷಿಣ ಆಫ್ರಿಕಾ–ಕ್ವಾಲಿಫೈಯರ್2	ನವದೆಹಲಿ	ಮ. 2
ಅ.8	ಭಾರತ–ಆಸ್ಟ್ರೇಲಿಯಾ	ಚೆನ್ನೈ	ಮ. 2
ಅ.9	ನ್ಯೂಜಿಲೆಂಡ್–ಕ್ವಾಲಿಫೈಯರ್1	ಹೈದರಾಬಾದ್	ಮ. 2
ಅ.10	ಇಂಗ್ಲೆಂಡ್–ಬಾಂಗ್ಲಾದೇಶ	ಧರ್ಮಶಾಲಾ	ಮ. 2
ಅ.11	ಭಾರತ–ಅಫ್ಗಾನಿಸ್ತಾನ	ನವದೆಹಲಿ	ಮ. 2
ಅ.12	ಪಾಕಿಸ್ತಾನ–ಕ್ವಾಲಿಫೈಯರ್2	ಹೈದರಾಬಾದ್	ಮ. 2
ಅ.13	ಆಸ್ಟ್ರೇಲಿಯಾ–ದಕ್ಷಿಣ ಆಫ್ರಿಕಾ	ಲಖನೌ	ಮ. 2
ಅ.14	ನ್ಯೂಜಿಲೆಂಡ್–ಬಾಂಗ್ಲಾದೇಶ	ಚೆನ್ನೈ	ಬೆ.10.30
ಅ.14	ಇಂಗ್ಲೆಂಡ್–ಅಫ್ಗಾನಿಸ್ತಾನ	ನವದೆಹಲಿ	ಮ. 2
ಅ.15	ಭಾರತ–ಪಾಕಿಸ್ತಾನ	ಅಹಮದಾಬಾದ್	ಮ. 2
ಅ.16	ಆಸ್ಟ್ರೇಲಿಯಾ–ಕ್ವಾಲಿಫೈಯರ್2	ಲಖನೌ	ಮ. 2
ಅ.17	ದಕ್ಷಿಣ ಆಫ್ರಿಕಾ–ಕ್ವಾಲಿಫೈಯರ್1	ಧರ್ಮಶಾಲಾ	ಮ. 2
ಅ.18	ನ್ಯೂಜಿಲೆಂಡ್–ಅಫ್ಗಾನಿಸ್ತಾನ	ಚೆನ್ನೈ	ಮ. 2
ಅ.19	ಭಾರತ–ಬಾಂಗ್ಲಾದೇಶ	ಪುಣೆ	ಮ. 2
ಅ.20	ಆಸ್ಟ್ರೇಲಿಯಾ–ಪಾಕಿಸ್ತಾನ	ಬೆಂಗಳೂರು	ಮ. 2
ಅ.21	ಕ್ವಾಲಿಫೈಯರ್1–ಕ್ವಾಲಿಫೈಯರ್2	ಲಖನೌ	ಬೆ. 10.30
ಅ.21	ಇಂಗ್ಲೆಂಡ್–ದಕ್ಷಿಣ ಆಫ್ರಿಕಾ	ಮುಂಬೈ	ಮ. 2
ಅ.22	ಭಾರತ–ನ್ಯೂಜಿಲೆಂಡ್	ಧರ್ಮಶಾಲಾ	ಮ. 2
ಅ.23	ಪಾಕಿಸ್ತಾನ–ಅಫ್ಗಾನಿಸ್ತಾನ	ಚೆನ್ನೈ	ಮ. 2
ಅ.24	ದಕ್ಷಿಣ ಆಫ್ರಿಕಾ–ಬಾಂಗ್ಲಾದೇಶ	ಮುಂಬೈ	ಮ. 2
ಅ.25	ಆಸ್ಟ್ರೇಲಿಯಾ–ಕ್ವಾಲಿಫೈಯರ್1	ನವದೆಹಲಿ	ಮ. 2
ಅ.26	ಇಂಗ್ಲೆಂಡ್–ಕ್ವಾಲಿಫೈಯರ್2	ಬೆಂಗಳೂರು	ಮ. 2
ಅ.27	ಪಾಕಿಸ್ತಾನ–ದಕ್ಷಿಣ ಆಫ್ರಿಕಾ	ಚೆನ್ನೈ	ಮ. 2
ಅ.28	ಆಸ್ಟ್ರೇಲಿಯಾ–ನ್ಯೂಜಿಲೆಂಡ್	ಧರ್ಮಶಾಲಾ	ಬೆ. 10.30
ಅ.28	ಕ್ವಾಲಿಫೈಯರ್1–ಬಾಂಗ್ಲಾದೇಶ	ಕೋಲ್ಕತ್ತ	ಮ. 2
ಅ.29	ಭಾರತ–ಇಂಗ್ಲೆಂಡ್	ಲಖನೌ	ಮ. 2
ಅ.30	ಅಫ್ಗಾನಿಸ್ತಾನ–ಕ್ವಾಲಿಫೈಯರ್2	ಪುಣೆ	ಮ. 2
ಅ.31	ಪಾಕಿಸ್ತಾನ–ಬಾಂಗ್ಲಾದೇಶ	ಕೋಲ್ಕತ್ತ	ಮ. 2
ನ.1	ನ್ಯೂಜಿಲೆಂಡ್–ದಕ್ಷಿಣ ಆಫ್ರಿಕಾ	ಪುಣೆ	ಮ. 2
ನ.2	ಭಾರತ–ಕ್ವಾಲಿಫೈಯರ್2	ಮುಂಬೈ	ಮ. 2
ನ.3	ಕ್ವಾಲಿಫೈಯರ್1–ಅಫ್ಗಾನಿಸ್ತಾನ	ಲಖನೌ	ಮ. 2
ನ.4	ನ್ಯೂಜಿಲೆಂಡ್–ಪಾಕಿಸ್ತಾನ	ಬೆಂಗಳೂರು	ಬೆ. 10.30
ನ.4	ಆಸ್ಟ್ರೇಲಿಯಾ-ಇಂಗ್ಲೆಂಡ್	ಅಹಮದಾಬಾದ್	ಮ. 2
ನ.5	ಭಾರತ–ದಕ್ಷಿಣ ಆಫ್ರಿಕಾ	ಕೋಲ್ಕತ್ತ	ಮ. 2
ನ.6	ಬಾಂಗ್ಲಾದೇಶ–ಕ್ವಾಲಿಫೈಯರ್2	ನವದೆಹಲಿ	ಮ. 2
ನ.7	ಆಸ್ಟ್ರೇಲಿಯಾ–ಅಫ್ಗಾನಿಸ್ತಾನ	ಮುಂಬೈ	ಮ. 2
ನ.8	ಇಂಗ್ಲೆಂಡ್–ಕ್ವಾಲಿಫೈಯರ್1	ಪುಣೆ	ಮ. 2
ನ.9	ನ್ಯೂಜಿಲೆಂಡ್–ಕ್ವಾಲಿಫೈಯರ್2	ಬೆಂಗಳೂರು	ಮ. 2
ನ.10	ದಕ್ಷಿಣ ಆಫ್ರಿಕಾ–ಅಫ್ಗಾನಿಸ್ತಾನ	ಅಹಮದಾಬಾದ್	ಮ. 2
ನ.11	ಭಾರತ–ಕ್ವಾಲಿಫೈಯರ್ 1	ಬೆಂಗಳೂರು	ಮ. 2
ನ.12	ಆಸ್ಟ್ರೇಲಿಯಾ–ಬಾಂಗ್ಲಾದೇಶ	ಪುಣೆ	ಬೆ. 10.30
ನ.12	ಇಂಗ್ಲೆಂಡ್–ಪಾಕಿಸ್ತಾನ	ಕೋಲ್ಕತ್ತ	ಮ. 2
ಸೆಮಿಫೈನಲ್			
ನ.15	ಲೀಗ್‌ನಲ್ಲಿ ಅಗ್ರಸ್ಥಾನ ಪಡೆದ ತಂಡ–4ನೇ ಸ್ಥಾನ ಪಡೆದ ತಂಡ	ಮುಂಬೈ	ಮ. 2
ನ.16	2ನೇ ಸ್ಥಾನ ಪಡೆದ ತಂಡ–3ನೇ ಸ್ಥಾನ ಪಡೆದ ತಂಡ	ಕೋಲ್ಕತ್ತ	ಮ. 2
ಫೈನಲ್			
ನ.19	ಸೆಮಿಫೈನಲ್ ಪಂದ್ಯಗಳ ವಿಜೇತರು	ಅಹಮದಾಬಾದ್	ಮ. 2
ಕ್ವಾಲಿಫೈಯರ್–1 ಮತ್ತು ಕ್ವಾಲಿಫೈಯರ್–2 ತಂಡಗಳು ಯಾವುವು ಎಂಬುದು ನಿರ್ಧಾರ ಆಗಿಲ್ಲ			

ಅ.5ರಿಂದ ನ.19ರವರೆಗೆ ಏಕದಿನ ವಿಶ್ವಕಪ್: ಮೋದಿ ಕ್ರೀಡಾಂಗಣದಲ್ಲಿ ಭಾರತ–ಪಾಕಿಸ್ತಾನ ಹಣಾಹಣಿ

ಫೈನಲ್‌ಗೆ ಅಹಮದಾಬಾದ್ ವೇದಿಕೆ ಸಿದ್ಧ

ಮುಂಬೈ (ಪಿಟಿಐ): ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣವು ಈ ಸಲದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಉದ್ಘಾಟನಾ ಮತ್ತು ಫೈನಲ್ ಪಂದ್ಯಕ್ಕೆ ಆತಿಥ್ಯ ವಹಿಸಲಿದೆ.

ವಿಶ್ವದ ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣವೆಂಬ ಹೆಗ್ಗಳಿಕೆಯ ಈ ಮೈದಾನದಲ್ಲಿ ನವೆಂಬರ್ 19ರಂದು ಫೈನಲ್ ಪಂದ್ಯ ನಡೆಯಲಿದೆ. ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ನಡುವಣ ಲೀಗ್ ಪಂದ್ಯವೂ ಅಕ್ಟೋಬರ್ 15ರಂದು ಇದೇ ಮೈದಾನದಲ್ಲಿ ಆಯೋಜನೆಗೊಂಡಿದೆ.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮಂಗಳವಾರ ವಿಶ್ವಕಪ್ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿತು. ಟೂರ್ನಿ ಆರಂಭಕ್ಕೆ ಬರೋಬ್ಬರಿ 100 ದಿನಗಳು ಬಾಕಿ ಉಳಿದಿವೆ. ಪಂದ್ಯಗಳಿಗೆ ಆತಿಥ್ಯ ವಹಿಸಲಿರುವ 12 ರಾಜ್ಯ ಸಂಸ್ಥೆಗಳ ಸಭೆಯು ಸೋಮವಾರ ನಡೆದಿತ್ತು.

ಅಕ್ಟೋಬರ್ 5ರಂದು ಉದ್ಘಾಟನೆ ಪಂದ್ಯವೂ ಅಹಮದಾಬಾದಿನಲ್ಲಿ ನಡೆಯಲಿದೆ. 2019ರ ವಿಶ್ವಕಪ್ ಚಾಂಪಿಯನ್ ಇಂಗ್ಲೆಂಡ್ ಮತ್ತು ರನ್ನರ್ಸ್ ಅಪ್ ನ್ಯೂಜಿಲೆಂಡ್ ತಂಡಗಳು ಮುಖಾಮುಖಿಯಾಗಲಿವೆ. 1 ಲಕ್ಷ, 32 ಸಾವಿರ ಪ್ರೇಕ್ಷಕರ ಆಸನ ಸಾಮರ್ಥ್ಯ ಈ ಕ್ರೀಡಾಂಗಣಕ್ಕೆ ಇದೆ. ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣ (ಎಂಸಿಜಿ) ಕ್ಕಿಂತಲೂ 32 ಸಾವಿರ ಆಸನ ಸಾಮರ್ಥ್ಯ ಇಲ್ಲಿ ಹೆಚ್ಚು ಇದೆ.

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ (ನ.15 ಮತ್ತು ಕೋಲ್ಕತ್ತ ಈಡನ್ ಗಾರ್ಡನ್‌ನಲ್ಲಿ (ನ.16) ಸೆಮಿಫೈನಲ್ ಪಂದ್ಯಗಳು ನಡೆಯಲಿವೆ. ಆತಿಥೇಯ ಭಾರತ ತಂಡವು ತನ್ನ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ಕಣಕ್ಕಿಳಿಯಲಿದೆ. ಅಕ್ಟೋಬರ್ 8ರಂದು ಚೆನ್ನೈನಲ್ಲಿ ಪಂದ್ಯ ನಡೆಯುವುದು.

ಗುವಾಹಟಿ ಸೇರಿದಂತೆ ಒಟ್ಟು 12 ಸ್ಥಳಗಳನ್ನು ನಿಗದಿ ಮಾಡಲಾಗಿದೆ. ಲೀಗ್ ಹಂತದ ಪಂದ್ಯಗಳು ಬೆಂಗಳೂರು, ಹೈದರಾಬಾದ್, ಅಹಮದಾಬಾದ್, ಧರ್ಮಶಾಲಾ, ನವದೆಹಲಿ, ಚೆನ್ನೈ, ಲಖನೌ, ಪುಣೆ, ಮುಂಬೈ ಹಾಗೂ ಕೋಲ್ಕತ್ತದಲ್ಲಿ ನಡೆಯಲಿವೆ. ಗುವಾಹಟಿ ಮತ್ತು ತಿರುವನಂತಪುರದಲ್ಲಿ ಸೆಪ್ಟೆಂಬರ್ 29ರಿಂದ ಅಕ್ಟೋಬರ್ 3ರವರೆಗೆ ಅಭ್ಯಾಸ ಪಂದ್ಯಗಳು ನಡೆಯಲಿವೆ.

ಆತಿಥೇಯ ಭಾರತ, ಆಸ್ಟ್ರೇಲಿಯಾ, ಇಂಗ್ಲೆಂಡ್, ಅಫ್ಗಾನಿಸ್ತಾನ, ನ್ಯೂಜಿಲೆಂಡ್, ಬಾಂಗ್ಲಾದೇಶ, ಪಾಕಿಸ್ತಾನ, ದಕ್ಷಿಣ ಆಫ್ರಿಕಾ ತಂಡಗಳು ಟೂರ್ನಿಗೆ ನೇರ ಅರ್ಹತೆ ಗಳಿಸಿವೆ. ಅರ್ಹತಾ ಸುತ್ತಿನ ಮೂಲಕ ಇನ್ನೆರಡು ತಂಡಗಳು ಪ್ರವೇಶ ಪಡೆಯಲಿವೆ. ಜಿಂಬಾಬ್ವೆಯಲ್ಲಿ ಕ್ವಾಲಿಫೈಯರ್ ಸುತ್ತಿನ ಪಂದ್ಯಗಳು ನಡೆಯಲಿವೆ.

ವಿಶ್ವಕಪ್ ಮಾಜಿ ವಿಜೇತರಾದ ವೆಸ್ಟ್ ಇಂಡೀಸ್, ಶ್ರೀಲಂಕಾ ಸೇರಿದಂತೆ ಐರ್ಲೆಂಡ್, ನೇಪಾಳ, ನೆದರ್ಲೆಂಡ್ಸ್, ಒಮನ್, ಸ್ಕಾಟ್ಲೆಂಡ್, ಯುಎಇ, ಅಮೆರಿಕ ಮತ್ತು ಜಿಂಬಾಬ್ವೆ ತಂಡಗಳು ಅರ್ಹತಾ ಸುತ್ತಿನಲ್ಲಿವೆ.

ನಾಲ್ಕನೇ ಬಾರಿ ಆಯೋಜನೆ: ಭಾರತವು ಇದು ನಾಲ್ಕನೇ ಬಾರಿ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯನ್ನು ಆಯೋಜಿಸಲಿದೆ.

1987ರಲ್ಲಿ ಭಾರತದಲ್ಲಿ ವಿಶ್ವಕಪ್ ಟೂರ್ನಿ ನಡೆದಿತ್ತು. ಅದಕ್ಕೂ ಮುನ್ನ ಮೂರು ವಿಶ್ವಕಪ್ ಟೂರ್ನಿಗಳು ಇಂಗ್ಲೆಂಡ್‌ನಲ್ಲಿ ಆಯೋಜನೆಯಾಗಿದ್ದವು. 1983ರಲ್ಲಿ ಭಾರತ ತಂಡವು ವಿಶ್ವಕಪ್ ಜಯಿಸಿತ್ತು. 1996ರಲ್ಲಿಯೂ ಭಾರತವು ಟೂರ್ನಿಯನ್ನು ಶ್ರೀಲಂಕಾ ಮತ್ತು ಪಾಕಿಸ್ತಾನದೊಂದಿಗೆ ಜಂಟಿಯಾಗಿ ಆಯೋಜಿಸಿತ್ತು. 2011ರಲ್ಲಿ ಭಾರತವು ಆತಿಥ್ಯ ವಹಿಸಿದ್ದ ಟೂರ್ನಿಯಲ್ಲಿ ಮಹೇಂದ್ರಸಿಂಗ್ ಧೋನಿ ನಾಯಕತ್ವದ ತಂಡವು ವಿಶ್ವಕಪ್ ಜಯಿಸಿತ್ತು. 28 ವರ್ಷಗಳ ನಂತರ ವಿಶ್ವ ಚಾಂಪಿಯನ್ ಆಗಿತ್ತು.

ಮುಂಬೈನಲ್ಲಿ ಮಂಗಳವಾರ ನಡೆದ 2023ರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ವೇಳಾಪಟ್ಟಿ ಬಿಡುಗಡೆ ಕಾರ್ಯಕ್ರಮದಲ್ಲಿ ಟ್ರೋಫಿಯನ್ನು ಪ್ರದರ್ಶಿಸಿದ ಮಾಜಿ ಕ್ರಿಕೆಟಿಗರಾದ ಭಾರತದ ವೀರೇಂದ್ರ ಸೆಹ್ವಾಗ್ ಮತ್ತು ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ –ಎಎಫ್‌ಪಿ ಚಿತ್ರ

ವಿರಾಟ್‌ಗಾಗಿ ವಿಶ್ವಕಪ್ ಜಯಿಸಿ: ವೀರೇಂದ್ರ ಸೆಹ್ವಾಗ್

ಮುಂಬೈ (ಪಿಟಿಐ): ಭಾರತ ತಂಡದ ಆಟಗಾರ ವಿರಾಟ್ ಕೊಹ್ಲಿ ಅವರಿಗಾಗಿ ತಂಡವು ವಿಶ್ವಕಪ್ ಜಯಿಸಬೇಕು ಎಂದು ಮಾಜಿ ಆಟಗಾರ ವೀರೇಂದ್ರ ಸೆಹ್ವಾಗ್ ಹೇಳಿದ್ದಾರೆ.

2011ರಲ್ಲಿ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರಿಗೆ ವಿಶ್ವಕಪ್ ಕಾಣಿಕೆ ನೀಡುವ ಗುರಿಯೇ ಸ್ಫೂರ್ತಿಯಾಗಿತ್ತು. ಈಗ ವಿರಾಟ್ ಅವರಿಗಾಗಿ ತಂಡವು ಆ ಕಾರ್ಯ ಮಾಡಬೇಕು ಎಂದು ಸಲಹೆ ನೀಡಿದ್ದಾರೆ.

ಮಂಗಳವಾರ ವಿಶ್ವಕಪ್ ಟೂರ್ನಿಯ ವೇಳಾಪಟ್ಟಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು. 'ವಿರಾಟ್ ಯಾವಾಗಲೂ ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಪಣಕ್ಕೊಡ್ಡುತ್ತಾರೆ. ಅವರು ಉಳಿದ ಆಟಗಾರರಿಗೂ ಸದಾ ಪ್ರೇರಣೆಯಾಗಿದ್ದಾರೆ. ಆದ್ದರಿಂದ ಈ ಬಾರಿಯ ವಿಶ್ವಕಪ್ ಅನ್ನು ಅವರಿಗೆ ಕಾಣಿಕೆಯಾಗಿ ನೀಡಲು ಉಳಿದವರು ಆಡಬೇಕು' ವೀರೂ ಹೇಳಿದ್ದಾರೆ.

2011ರ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡದ ಆರಂಭಿಕ ಬ್ಯಾಟರ್ ಆಗಿ ವೀರೂ ಆಡಿದ್ದರು.

ಕ್ರಿಕೆಟ್‌ಗೆ ಹೊಸ ರಾಜಧಾನಿ: ಶಶಿ ವ್ಯಂಗ್ಯ

ನವದೆಹಲಿ: ದೇಶದ ಕೆಲವು ಪ್ರಮುಖ ನಗರಗಳಿಗೆ ಈ ಬಾರಿ ವಿಶ್ವಕಪ್ ಕ್ರಿಕೆಟ್ ಪಂದ್ಯಗಳಿಗೆ ಆತಿಥ್ಯ ವಹಿಸುವ ಅವಕಾಶ ಕೈತಪ್ಪಿದೆ.

ಮಂಗಳವಾರ ಐಸಿಸಿಯು ವೇಳಾಪಟ್ಟಿ ಪ್ರಕಟಿಸಿದ ಬೆನ್ನಲ್ಲೇ ಅವಕಾಶ ಸಿಗದ ರಾಜ್ಯ ಸಂಸ್ಥೆಗಳು ಅಸಮಾಧಾನ ವ್ಯಕ್ತಪಡಿಸಿವೆ. ಇದಕ್ಕೆ ದನಿಗೂಡಿಸಿರುವ ಕೆಲವು ಧುರೀಣರೂ 'ವೇಳಾಪಟ್ಟಿಯಲ್ಲಿ ರಾಜಕೀಯ ದುರುದ್ದೇಶ ಇದೆ' ಎಂದು ಆರೋಪಿಸಿದ್ದಾರೆ.

'ತಿರುವನಂತಪುರದ ಕ್ರಿಕೆಟ್ ಮೈದಾನವು ಉತ್ತಮವಾಗಿದೆ ಎಂದು ಹಲವು ವರ್ಷಗಳಿಂದ ಮೆಚ್ಚುಗೆಗೆ ಪಾತ್ರವಾಗಿದೆ. ಆದರೆ, ಇಲ್ಲಿಗೆ ಒಂದೂ ಪಂದ್ಯ ಆಯೋಜನೆಗೆ ಲಭಿಸದಿರುವುದು ಆಘಾತ ಮೂಡಿಸಿದೆ' ಎಂದು ಕಾಂಗ್ರೆಸ್ ನಾಯಕ ಶಶಿ ತರೂರ್ ಟ್ವೀಟ್ ಮಾಡಿದ್ದಾರೆ.

'ಅಹಮದಾಬಾದ್ ಈಗ ಹೊಸ ಕ್ರಿಕೆಟ್ ರಾಜಧಾನಿಯಾಗುತ್ತಿದೆ. ಆದರೆ, ಕೇರಳಕ್ಕೆ ಒಂದು ಅಥವಾ ಎರಡು ಪಂದ್ಯಗಳನ್ನು ಮಂಜೂರು ಮಾಡಲು ಏಕೆ ಸಾಧ್ಯವಾಗಿಲ್ಲ' ಎಂದು ತರೂರ್ ಪ್ರಶ್ನಿಸಿದ್ದಾರೆ.

ಪ್ರಮುಖ ತಾಣಗಳಾದ ಮೊಹಾಲಿ, ಇಂದೋರ್, ರಾಜ್‌ಕೋಟ್ ಮತ್ತು ನಾಗ್ಪುರ ನಗರಗಳ ಕ್ರೀಡಾಂಗಣಗಳಿಗೆ ಈ ಬಾರಿ ವಿಶ್ವಕಪ್ ಪಂದ್ಯಗಳನ್ನು ನೀಡಿಲ್ಲ. ಇದು ಜಾಗತಿಕ ಮಟ್ಟದ ಟೂರ್ನಿಯಾಗಿರುವುದರಿಂದ ಬಿಸಿಸಿಐ ನೀಡುವ ತಾಣಗಳ ಪಟ್ಟಿಯಲ್ಲಿ ಐಸಿಸಿ ಸಮಿತಿಯು ನಗರಗಳನ್ನು ಅಂತಿಮಗೊಳಿಸುತ್ತದೆ. ಮಧ್ಯಪ್ರದೇಶದ ಇಂದೋರ್ ನಗರವು ಈ ಹಿಂದೆ ವಿಶ್ವಕಪ್ ಪಂದ್ಯಗಳನ್ನು ಆಯೋಜಿಸಿದೆ. ಆದರೆ, ಈ ಸಲ ಲಭಿಸಿಲ್ಲ.

'1987ರಲ್ಲಿ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಪಂದ್ಯವು ಇಂದೋರ್‌ನಲ್ಲಿ ನಡೆದಿತ್ತು. ಅಲ್ಲದೇ ನಮ್ಮ ನಗರಕ್ಕೆ ಕ್ರಿಕೆಟ್ ಆಟದ ಶ್ರೀಮಂತ ಇತಿಹಾಸವೂ ಇದೆ. ಆದ್ದರಿಂದ ಈ ಬಾರಿಯೂ ವಿಶ್ವಕಪ್ ಪಂದ್ಯ ಸಿಗುವ ನಿರೀಕ್ಷೆ ಇತ್ತು. ಆದರೆ, ಬಿಸಿಸಿಐ ಲೆಕ್ಕಾಚಾರ ಅರ್ಥವಾಗುತ್ತಿಲ್ಲ' ಎಂದು ಮಧ್ಯಪ್ರದೇಶ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಅಭಿಲಾಷ್ ಖಾಂಡೇಕರ್ ಬೇಸರ ವ್ಯಕ್ತಪಡಿಸಿದ್ದಾರೆ.

2019ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದಿದ್ದ ವಿಶ್ವಕಪ್ ಟೂರ್ನಿಯಲ್ಲಿ 11 ಹಾಗೂ 2015ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಟೂರ್ನಿಯಲ್ಲಿ 14 ತಾಣಗಳನ್ನು ಐಸಿಸಿ ಆಯ್ದುಕೊಂಡಿತ್ತು. ತಂಡಗಳ ಪ್ರಯಾಣ, ಸರಂಜಾಮು ಸಾಗಣೆಗೆ ಹೆಚ್ಚು ಹೊರೆಯಾಗದಂತೆ ತಾಣಗಳನ್ನು ಆಯ್ಕೆ ಮಾಡುವುದು ವಾಡಿಕೆ. ಆದರೆ, ಇಂತಿಷ್ಟೆ ಸಂಖ್ಯೆ ಸ್ಥಳಗಳನ್ನು ಆಯ್ಕೆ ಮಾಡಬೇಕೆಂಬ ನಿಯಮವೇನಿಲ್ಲ.

'ದೇಶಕ್ಕೆ ಮಹಾನ್ ಕ್ರಿಕೆಟಿಗರನ್ನು ಕೊಡುಗೆಯಾಗಿ ನೀಡಿದ ಪಂಜಾಬ್ ಕ್ರಿಕೆಟ್ ಸಂಸ್ಥೆಯ ಮೊಹಾಲಿ ಕ್ರೀಡಾಂಗಣಕ್ಕೆ ಈ ಬಾರಿ ಒಂದೂ ಪಂದ್ಯ ಕೊಟ್ಟಿಲ್ಲ. 1996 ಮತ್ತು 2011ರಲ್ಲಿ ಇಲ್ಲಿ ಪಂದ್ಯಗಳು ಯಶಸ್ವಿಯಾಗಿ ನಡೆದಿವೆ. ಇದರ ಹಿಂದೆ ರಾಜಕೀಯ ಕುತಂತ್ರವಿದೆ' ಎಂದು ಪಂಜಾಬ್ ಕ್ರೀಡಾ ಸಚಿವ ಗುರಮೀತ್ ಸಿಂಗ್ ಹೇಳಿದ್ದಾರೆ.

'ಅಹಮದಾಬಾದ್ ಕ್ರೀಡಾಂಗಣದಲ್ಲಿ ಉದ್ಘಾಟನೆ ಪಂದ್ಯ, ಭಾರತ–ಪಾಕ್ ಪಂದ್ಯ ಹಾಗೂ ಫೈನಲ್ ಪಂದ್ಯ ನಡೆಯಲಿವೆ. ಧರ್ಮಶಾಲಾ ಕ್ರೀಡಾಂಗಣದಲ್ಲಿ ಐದು ಪಂದ್ಯಗಳು ನಡೆಯಲಿವೆ. ಆದರೆ, ಮೊಹಾಲಿಗೆ ಒಂದೇ ಒಂದು ಪಂದ್ಯವೂ ಇಲ್ಲ. ಇದು ರಾಜಕೀಯ ಹುನ್ನಾರ' ಎಂದು ಅವರು ಕಿಡಿಕಾರಿದ್ದಾರೆ.

ಸ್ಥಳ ಬದಲಿಗೆ ಪಾಕ್ ಮನವಿ: ಐಸಿಸಿ ನಕಾರ

ಕರಾಚಿ: ವಿಶ್ವಕಪ್ ಟೂರ್ನಿಯಲ್ಲಿ ತಮ್ಮ ತಂಡದ ಪಂದ್ಯಗಳಿಗಾಗಿ ನಿಗದಿ ಮಾಡಲಾಗಿರುವ ತಾಣಗಳ ಬದಲಾವಣೆಗೆ ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ಮನವಿ ಸಲ್ಲಿಸಿತ್ತು. ಆದರೆ, ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಈ ಮನವಿಯನ್ನು ತಿರಸ್ಕರಿಸಿದೆ.

ಪಾಕಿಸ್ತಾನ ತಂಡವು ಅಫ್ಗಾನಿಸ್ತಾನದ ಎದುರು ಚೆನ್ನೈನಲ್ಲಿ ಹಾಗೂ ಆಸ್ಟ್ರೇಲಿಯಾ ವಿರುದ್ಧ ಬೆಂಗಳೂರಿನಲ್ಲಿ ಪಂದ್ಯ ಆಡಬೇಕಿದೆ. ಆದರೆ, ಅಫ್ಗಾನಿಸ್ತಾನ ಎದುರಿನ ಪಂದ್ಯವನ್ನು ಬೆಂಗಳೂರಿಗೆ ಹಾಗೂ ಆಸ್ಟ್ರೇಲಿಯಾದೆದುರಿನ ಹಣಾಹಣಿಯನ್ನು ಚೆನ್ನೈಗೆ ಸ್ಥಳಾಂತರಿಸುವಂತೆ ಪಾಕ್ ಮಂಡಳಿ ಮನವಿ ಮಾಡಿತ್ತು.

ಚೆನ್ನೈನ ಚೆಪಾಕ್ ಕ್ರೀಡಾಂಗಣದ ಪಿಚ್ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ನೀಡುವ ಇತಿಹಾಸವಿದೆ. ಅಫ್ಗಾನಿಸ್ತಾನ ತಂಡದಲ್ಲಿ ಪರಿಣಾಮಕಾರಿ ಸ್ಪಿನ್ನರ್‌ಗಳು ಇರುವುದರಿಂದ ಪಾಕ್ ತಂಡಕ್ಕೆ ಹಿನ್ನಡೆಯ ಸಾಧ್ಯತೆ ಇದೆ. ಆದ್ದರಿಂದ ಸ್ಥಳ ಬದಲಿಸಬೇಕು ಎಂದು ಕೇಳಿಕೊಂಡಿತ್ತು.

ಭಾರತಕ್ಕೆ ಪಾಕ್- ಐಸಿಸಿ ವಿಶ್ವಾಸ: ವಿಶ್ವಕಪ್ ಟೂರ್ನಿಯಲ್ಲಿ ಆಡಲು ಭಾರತಕ್ಕೆ ಪಾಕಿಸ್ತಾನ ತಂಡವನ್ನು ಕಳುಹಿಸಲು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಅನುಮತಿ ನೀಡಲಿದೆ ಎಂದು ಐಸಿಸಿ ವಿಶ್ವಾಸ ವ್ಯಕ್ತಪಡಿಸಿದೆ.

'ಪಾಕ್ ತಂಡವು ಭಾರತಕ್ಕೆ ಆಡಲು ಬರಲಿದೆ. ನೂರಕ್ಕೆ ನೂರರಷ್ಟು ವಿಶ್ವಾಸ ನಮಗಿದೆ' ಎಂದು ಐಸಿಸಿ ಮೂಲಗಳು ತಿಳಿಸಿವೆ. ಇದಕ್ಕೆ ಪ್ರತಿಕ್ರಿಯಿಸಿರುವ ಪಿಸಿಬಿ ಮೂಲಗಳು 'ನಾವು ಈಗಾಗಲೇ ವಿಶ್ವಕಪ್ ಟೂರ್ನಿಯಲ್ಲಿ ಸ್ಪರ್ಧಿಸುವುದನ್ನು ಖಚಿತ ಪಡಿಸಿದ್ದೇವೆ. ಸ್ಥಳ ಬದಲಾವಣೆ ಕುರಿತ ವಿಷಯ ಮತ್ತು ಭಾರತಕ್ಕೆ ಪ್ರಯಾಣಿಸಲು ಪಾಕ್ ಸರ್ಕಾರದಿಂದ ಅನುಮತಿ ಲಭಿಸುವ ಕುರಿತು ತಿಳಿಸಲಾಗುವುದು' ಎಂದು ಹೇಳಿವೆ.

ಭಾರತಕ್ಕೆ ಪ್ರಯಾಣಿಸಲು ಪಿಸಿಬಿಗೆ ಅಲ್ಲಿಯ ಸರ್ಕಾರವು ಇನ್ನೂ ನಿರಾಕ್ಷೇಪಣ ಪತ್ರ ಮಂಜೂರು ಮಾಡಿಲ್ಲವೆನ್ನಲಾಗಿದೆ.

ಬೆಂಗಳೂರಿನಲ್ಲಿ ಪಾಕ್, ಆಸ್ಟ್ರೇಲಿಯಾ ಮುಖಾಮುಖಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈ ಬಾರಿಯ ವಿಶ್ವಕಪ್ ಟೂರ್ನಿಯ ಐದು ಪಂದ್ಯಗಳು ನಡೆಯಲಿವೆ.

ನವೆಂಬರ್ 11ರಂದು ಭಾರತ ತಂಡದ ಪಂದ್ಯ ನಡೆಯಲಿದೆ. ಕ್ವಾಲಿಫೈಯರ್‌ನಲ್ಲಿ ಅರ್ಹತೆ ಪಡೆದ ತಂಡವನ್ನು ಇಲ್ಲಿ ಎದುರಿಸಲಿದೆ. ಇದನ್ನು ಬಿಟ್ಟರೆ ಇಲ್ಲಿ ಭಾರತ ಇನ್ನಾವುದೇ ಪಂದ್ಯಗಳು ಇಲ್ಲಿ ಇಲ್ಲ.

ಆಸ್ಟ್ರೇಲಿಯಾ–ಪಾಕಿಸ್ತಾನ (ಅ. 20), ಇಂಗ್ಲೆಂಡ್–ಕ್ವಾಲಿಫೈಯರ್ ಎರಡನೇ ಸ್ಥಾನ ಪಡೆದ ತಂಡ (ಅ.26), ನ್ಯೂಜಿಲೆಂಡ್ – ಪಾಕಿಸ್ತಾನ (ನ.4), ನ್ಯೂಜಿಲೆಂಡ್ –ಕ್ವಾಲಿಫೈಯರ್ ತಂಡ (ನ. 9) ಹಾಗೂ ಭಾರತ–ಕ್ವಾಲಿಫೈಯರ್ ಒಂದನೇ ತಂಡ (ನ.11) ಪಂದ್ಯಗಳು ನಡೆಯಲಿವೆ.

ಸುಧಾ, ಮಯೂರ ಓದಿರಿ

ಲೈಂಗಿಕ ಸಮಸ್ಯೆಗೆ ವಿಶ್ವದ ನಂಬರ್ 1 ಪರಿಹಾರ

ಶಿಶ್ನ ಚಿಕ್ಕದಾಗಿದೆಯೆ?, ವಕ್ರವಾಗಿದೆಯೆ? ಸೆಕ್ಸ್ ಸಮಯ ಹೆಚ್ಚಿಸಬೇಕೆ? ಚಿಂತಿಸಬೇಡಿ. ವಿಶ್ವದ ನಂಬರ 1 ಆಯುರ್ವೇದಿಕ ಔಷಧಿಯಿಂದ ಶಿಶ್ನದ ಗಾತ್ರ 7 ರಿಂದ 8 ಇಂಚು ಉದ್ದದಷ್ಟು ಹಾಗೂ ಲೈಂಗಿಕ ಸಮಯವನ್ನು ಹೆಚ್ಚಿಸಿಕೊಳ್ಳಿ. ಯಾವುದೇ ಅಡ್ಡಪರಿಣಾಮ ಇಲ್ಲ, ಲಕ್ಷಾಂತರ ಮಂದಿ ಸಂತುಷ್ಟರಾಗಿದ್ದಾರೆ.
ಸಂಪರ್ಕಿಸಿ
02262676816

ಸೂಪರ್‌ಸಿಕ್ಸ್ ಹಂತಕ್ಕೆ ಶ್ರೀಲಂಕಾ

ಬುಲಾವಯೊ (ಜಿಂಬಾಬ್ವೆ), (ಎಎಫ್‌ಪಿ): ಶ್ರೀಲಂಕಾ ತಂಡ 82 ರನ್‌ಗಳಿಂದ ಸ್ಕಾಟ್ಲೆಂಡ್ ತಂಡವನ್ನು ಸೋಲಿಸಿ ವಿಶ್ವ ಕಪ್ ಅರ್ಹತಾ ಟೂರ್ನಿಯ ಸೂಪರ್ ಸಿಕ್ಸ್ ಹಂತಕ್ಕೆ ಮುನ್ನಡೆಯಿತು. ಕ್ರಿಸ್ ಗ್ರೀವ್ಸ್ ಅವರ ಆಲ್‌ರೌಂಡ್ ಪ್ರದರ್ಶನ (32ಕ್ಕೆ 4 ಮತ್ತು ಔಟಾಗದೇ 56) ಅಮೋಘ ಪ್ರದರ್ಶನ ಗೆಲುವಿಗೆ ಸಾಕಾಗಲಿಲ್ಲ.

1996ರ ವಿಶ್ವಕಪ್ ಚಾಂಪಿಯನ್ ಶ್ರೀಲಂಕಾ 'ಬಿ' ಗುಂಪಿನಿಂದ ಅಗ್ರಸ್ಥಾನ ಗಳಿಸಿ ಸೂಪರ್ ಸಿಕ್ಸ್‌ಗೆ ಮುನ್ನಡೆಯಿತು. ನಾಲ್ಕು ಪಾಯಿಂಟ್ ಹೊಂದಿರುವ ಶ್ರೀಲಂಕಾ ಮುಂದಿನ ಪಂದ್ಯಗಳಲ್ಲಿ ನೆದರ್ಲೆಂಡ್ಸ್, ಜಿಂಬಾಬ್ವೆ ಮತ್ತು ವೆಸ್ಟ್ ಇಂಡೀಸ್ ವಿರುದ್ಧ ಆಡಲಿದೆ.

ಮೊದಲು ಬ್ಯಾಟ್ ಮಾಡಿದ ಶ್ರೀಲಂಕಾ ಪಥುನ್ ನಿಸ್ಸಾಂಕ (75) ಮತ್ತು ಚರಿತ್ ಅಸಳಂಕ (63) ಅವರ ಅರ್ಧ ಶತಕಗಳ ನೆರವಿನಿಂದ 245 ರನ್ ಗಳಿಸಿತು.

ಇದಕ್ಕೆ ಉತ್ತರವಾಗಿ ಸ್ಕಾಟ್ಲೆಂಡ್ ತಂಡ 163 ರನ್‌ಗಳಿಗೆ ಆಲೌಟ್ ಆಯಿತು. ಮಹೀಷ ತೀಕ್ಷಣ 41 ರನ್ನಿಗೆ 3 ವಿಕೆಟ್ ಪಡೆದರು.

ಸ್ಕಾಟ್ಲೆಂಡ್ ಗುಂಪಿನಲ್ಲಿ ಮೂರನೇ ತಂಡವಾಗಿ ಅರ್ಹತೆ ಪಡೆಯಿತು. ಟೂರ್ನಿಯ ಸೂಪರ್ ಸಿಕ್ಸ್ ಹಂತ ಗುರುವಾರ ಆರಂಭವಾಗಲಿದೆ. ಸೂಪರ್ ಸಿಕ್ಸ್ ಹಂತದಲ್ಲಿ ಮೊದಲ ಎರಡು ಸ್ಥಾನ ಗಳಿಸುವ ತಂಡಗಳು ಭಾರತದಲ್ಲಿ ಸೆಪ್ಟೆಂಬರ್– ಅಕ್ಟೋಬರ್ ತಿಂಗಳಲ್ಲಿ ನಡೆಯುವ ವಿಶ್ವಕಪ್‌ಗೆ ಅರ್ಹತೆ ಪಡೆಯಲಿವೆ.

ಎಲೋರ್ಡಾ ಕಪ್ ಬಾಕ್ಸಿಂಗ್: ಅಂಕಿತ್ ನರ್ವಾಲ್‌ಗೆ ಸೋಲು

ಅಸ್ತಾನಾ (ಕಜಕಸ್ತಾನ): ಭಾರತದ ಅಂಕಿತ್ ನರ್ವಾಲ್, ಎಲೋರ್ಡಾ ಕಪ್ ಬಾಕ್ಸಿಂಗ್ ಟೂರ್ನಿಯ ಮೊದಲ ಸುತ್ತಿನಲ್ಲಿ ಮಂಗಳವಾರ 63.5 ಕೆ.ಜಿ. ವಿಭಾಗದಲ್ಲಿ ಆತಿಥೇಯ ಕಜಕಸ್ತಾನದ ಸುಲ್ತಾನ್ ಮುಸ್ಸಿನೋವ್ ವಿರುದ್ಧ ಹೋರಾಟ ತೋರಿದರೂ, ಹೊರ ಬೀಳಬೇಕಾಯಿತು.

ಬುಧವಾರ ಭಾರತದ ಆರು ಮಂದಿ ವಿವಿಧ ತೂಕ ವಿಭಾಗಗಳಲ್ಲಿ ಕಣಕ್ಕಿಳಿಯಲಿದ್ದಾರೆ. 2016ರ ವಿಶ್ವ ಚಾಂಪಿಯನ್‌ಷಿಪ್ಸ್‌ನ ಬೆಳ್ಳಿ ವಿಜೇತೆ ಸೋನಿಯಾ ಲಾಠರ್ (57 ಕೆ.ಜಿ), ಶಿವಿಂದರ್ ಸಿಂಗ್ ಕೌರ್ (50 ಕೆ.ಜಿ), ಪೂನಮ್ (60 ಕೆ.ಜಿ) ಅವರು ಅಖಾಡಕ್ಕೆ ಇಳಿಯಲಿದ್ದಾರೆ. ಪುರುಷರ ವಿಭಾಗದಲ್ಲಿ ಝೊರಾಮ್ ಮುವಾನಾ (51 ಕೆ.ಜಿ), ಹೇಮಂತ್ ಯಾದವ್ (71 ಕೆ.ಜಿ) ಮತ್ತು ಸಂಜಯ್ (80 ಕೆ.ಜಿ) ತಮ್ಮ ಹೋರಾಟ ಆರಂಭಿಸಲಿದ್ದಾರೆ.

ಭಾರತ 16 ಮಂದಿಯ ತಂಡವನ್ನು ಈ ಟೂರ್ನಿಯಲ್ಲಿ ಕಣಕ್ಕಿಳಿಸಲಿದೆ. ಈ ಹಿಂದೆ ಇದೇ ಟೂರ್ನಿಯಲ್ಲಿ ಭಾರತ 14 ಪದಕಗಳನ್ನು ಗೆದ್ದುಕೊಂಡಿತ್ತು

ಸ್ಯಾಫ್ ಫುಟ್‌ಬಾಲ್: ಮಿಂಚಿದ ಚೆಟ್ರಿ, ಮುಳುವಾದ 'ಉಡುಗೊರೆ ಗೋಲು'

ಭಾರತ–ಕುವೈತ್ ಪಂದ್ಯ ಡ್ರಾ

• ಮಹಮ್ಮದ್ ನೂಮಾನ್

ಬೆಂಗಳೂರು: ಇಂಜುರಿ ಅವಧಿಯಲ್ಲಿ ಕುವೈತ್ ತಂಡಕ್ಕೆ 'ಉಡುಗೊರೆ' ಗೋಲು ಕೊಟ್ಟ ಭಾರತ ತಂಡ, ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಕೊನೆಯ ಲೀಗ್ ಪಂದ್ಯದಲ್ಲಿ ಡ್ರಾಕ್ಕೆ ತೃಪ್ತಿಪಟ್ಟುಕೊಂಡಿತು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯ 1–1 ಗೋಲಿನ ಸಮಬಲದಲ್ಲಿ ಕೊನೆಗೊಂಡಿತು. ಆಕ್ರಮಣ ಮತ್ತು ಪ್ರತ್ಯಾಕ್ರಮಣದಿಂದ ರೋಚಕತೆಯ ಉತ್ತುಂಗವನ್ನೇರಿದ್ದ ಪಂದ್ಯದಲ್ಲಿ ನಾಯಕ ಸುನಿಲ್ ಚೆಟ್ರಿ ಅವರು (45+2) ಭಾರತಕ್ಕೆ ಮುನ್ನಡೆ ತಂದಿತ್ತರು.

ಪಂದ್ಯ ಕೊನೆಗೊಳ್ಳಲು ಕೆಲವೇ ನಿಮಿಷಗಳು ಇದ್ದಾಗ (90+2) ಕುವೈತ್ ತಂಡದ ಅಬ್ದುಲ್ಲಾ ಅಲ್ ಬಲೂಶಿ ಅವರ ಗೋಲು ಶ್ರಮವನ್ನು ಭಾರತದ ಡಿಫೆಂಡರ್ ಅನ್ವರ್ ಅಲಿ ತಡೆಯಲು ಮುಂದಾದರು. ಅದರೆ ಚೆಂಡು ಅವರ ಕಾಲಿಗೆ ತಾಗಿ ಗುರಿ ಸೇರಿತು.

ಭಾರತ ಮತ್ತು ಕುವೈತ್, 'ಎ' ಗುಂಪಿನಲ್ಲಿ ತಲಾ ಏಳು ಪಾಯಿಂಟ್ಸ್ ಸಂಗ್ರಹಿಸಿದವು. ಉತ್ತಮ ಗೋಲು ವ್ಯತ್ಯಾಸದಲ್ಲಿ ಕುವೈತ್ ಅಗ್ರಸ್ಥಾನ ಪಡೆದರೆ, ಚೆಟ್ರಿ ಬಳಗ ಎರಡನೇ ಸ್ಥಾನ ಗಳಿಸಿತು.

ಪ್ರಬಲ ಪೈಪೋಟಿ: ಜಿದ್ದಾಜಿದ್ದಿನ ಸೆಣಸಾಟ ನಡೆದ ಪಂದ್ಯದ ಮೊದಲ 15 ನಿಮಿಷಗಳಲ್ಲಿ ಎರಡೂ ತಂಡಗಳಿಂದ ಗೋಲು ಗಳಿಸುವ ಉತ್ತಮ ಪ್ರಯತ್ನ ಕಂಡುಬರಲಿಲ್ಲ.

ಕುವೈತ್‌ಗೆ ಗೋಲು ಗಳಿಸುವ ಮೊದಲ ಅವಕಾಶ ಲಭಿಸಿದ್ದು 20ನೇ ನಿಮಿಷದಲ್ಲಿ. ಆದರೆ ಶಬೀಬ್ ಅಲ್ ಖಾಲಿದಿ ಒದ್ದ ಚೆಂಡು ಗೋಲ್ ಪೋಸ್ಟ್ ಮೇಲಿಂದ ಹೊರಕ್ಕೆ ಹೋಯಿತು.

25ನೇ ನಿಮಿಷದಲ್ಲಿ ಕುವೈತ್‌ನ ಮೊಹಮ್ಮದ್ ಅಬ್ದುಲ್ಲಾ ಚೆಂಡು ಗುರಿ ಸೇರಿಸಿದರೂ, ರೆಫರಿ ಗೋಲು ಮಾನ್ಯ ಮಾಡಲಿಲ್ಲ. ಆ ಗೋಲಿಗೂ ಮುನ್ನ ಕುವೈತ್ ಆಟಗಾರ ಫೌಲ್ ಮಾಡಿದ್ದು ಅದಕ್ಕೆ ಕಾರಣ.

35ನೇ ನಿಮಿಷದಲ್ಲಿ ಅನಿರುದ್ಧ್ ಥಾಪಾ ಅವರ ಪಾಸ್‌ನಿಂದ ಬಂದ ಚೆಂಡನ್ನು, ಅನ್ವರ್ ಅಲಿ ಹೆಡ್ ಮಾಡಿದರೂ ಅಲ್ಪ ದೂರದಿಂದ ಹೊರಕ್ಕೆ ಹೋಯಿತು.

ಮೊದಲ ಅವಧಿ ಗೋಲುರಹಿತವಾಗಿ ಕೊನೆಗೊಳ್ಳಲಿದೆ ಎನ್ನುವಷ್ಟರಲ್ಲಿ ಭಾರತ ಮುನ್ನಡೆ ಗಳಿಸಿತು. ಥಾಪಾ ಅವರ ಕಾರ್ನರ್ ಕಿಕ್‌ನಲ್ಲಿ ದೊರೆತ ಚೆಂಡನ್ನು ಚೆಟ್ರಿ, ಚಾಣಾಕ್ಷ ರೀತಿಯಲ್ಲಿ ಗುರಿ ತಲುಪಿಸಿದರು. ಈ ಟೂರ್ನಿಯಲ್ಲಿ ಅವರ ಐದನೇ ಗೋಲು ಇದು.

ಎರಡನೇ ಅವಧಿಯಲ್ಲೂ ತುರುಸಿನ ಹೋರಾಟ ಮುಂದುವರಿಯಿತು. 56ನೇ ನಿಮಿಷದಲ್ಲಿ ಕುವೈತ್‌ಗೆ ದೊರೆತ ಫ್ರೀಕಿಕ್ ಅವಕಾಶದಲ್ಲಿ ಶಬೈಬ್ ಅವರು ಬಿರುಸಿನಿಂದ ಒದ್ದ ಚೆಂಡನ್ನು ಭಾರತ ತಂಡದ ಗೋಲ್‌ಕೀಪರ್ ಅಮರಿಂದರ್ ಸಿಂಗ್ ಮೇಲಕ್ಕೆ ನೆಗೆದು ಹೊರಕ್ಕಟ್ಟಿ ಅಪಾಯ ದೂರ ಮಾಡಿದರು.

ಬದಲಿ ಆಟಗಾರನಾಗಿ ಕಣಕ್ಕಿಳಿದ ಸಹಲ್ ಅಬ್ದುಲ್ ಸಮದ್, 70ನೇ ನಿಮಿಷದಲ್ಲಿ ಗೋಲು ಗಳಿಸುವ ಅವಕಾಶವನ್ನು ಹಾಳುಮಾಡಿಕೊಂಡರು. ಅವರು ಗೋಲ್‌ಪೋಸ್ಟ್‌ನತ್ತ ಒದ್ದ ಚೆಂಡನ್ನು ಎದುರಾಳಿ ಡಿಫೆಂಡರ್ ತಡೆದರು. ಭಾರತ ತಂಡ ಕೊನೆಯ ನಿಮಿಷಗಳಲ್ಲಿ ಗೋಲು ಗಳಿಸುವ ಹಲವು ಅವಕಾಶಗಳನ್ನು ಸೃಷ್ಟಿಸಿದರೂ ಹೊಂದಾಣಿಕೆಯ ಕೊರತೆಯಿಂದ ಚೆಂಡನ್ನು ಗುರಿ ತಲುಪಿಸಲು ಆಗಲಿಲ್ಲ.

ಭಾರತದ ಗೆಲುವು ಖಚಿತವಾಯಿತು ಎನ್ನುವಷ್ಟರಲ್ಲಿ 'ಉಡುಗೊರೆ ಗೋಲಿ'ನ ಮೂಲಕ ಕುವೈತ್ ಡ್ರಾ ಸಾಧಿಸಿತು.

ಜಟಾಪಟಿ: ಪಂದ್ಯದುದ್ದಕ್ಕೂ ಕಾವೇರಿದ ವಾತಾವರಣ ಕಂಡುಬಂತು. ಹಲವು ಸಲ ಆಟಗಾರರು ಜಟಾಪಟಿ ನಡೆಸಿದರು. 88ನೇ ನಿಮಿಷದಲ್ಲಿ ನೂಕಾಟ, ತಳ್ಳಾಟ ನಡೆಯಿತು. ಭಾರತದ ರಹೀಂ ಅಲಿ ಮತ್ತು ಕುವೈತ್‌ನ ಹಮದ್ ಅಲ್ ಖಲಾಫ್ ಅವರಿಗೆ ರೆಡ್ ಕಾರ್ಡ್ ತೋರಿಸಲಾಯಿತು.

ನೇಪಾಳಕ್ಕೆ ಮಣಿದ ಪಾಕ್: ದಿನದ ಮೊದಲ ಪಂದ್ಯದಲ್ಲಿ ನೇಪಾಳ ತಂಡವು ಪಾಕಿಸ್ತಾನವನ್ನು 1–0ಯಿಂದ ಮಣಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದ ವೇಳೆ ಭಾರತ ಮತ್ತು ಕುವೈತ್ ತಂಡಗಳ ಆಟಗಾರರ ನಡುವೆ ಜಟಾಪಟಿ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಇಂದಿನ ಪಂದ್ಯಗಳು
- Vs ಲೆಬನಾನ್- ಮಾಲ್ಡೀವ್ಸ್ (ಮಧ್ಯಾಹ್ನ 3.30)
- Vs ಭೂತಾನ್- ಬಾಂಗ್ಲಾದೇಶ (ರಾತ್ರಿ 7.30)
- ಲೈವ್ ಫ್ಯಾನ್‌ಕೋಡ್ ಆ್ಯಪ್

ಸ್ಟಿಮ್ಯಾಚ್‌ಗೆ ಮತ್ತೆ ರೆಡ್ ಕಾರ್ಡ್

ಭಾರತ ತಂಡದ ಕೋಚ್ ಇಗೋರ್ ಸ್ಟಿಮ್ಯಾಚ್ ಮತ್ತೆ ರೆಡ್‌ಕಾರ್ಡ್ ಪಡೆದರು. ಚೆಂಡನ್ನು ಹಿಡಿದು ಆಟಕ್ಕೆ ಅಡ್ಡಿಪಡಿಸಿದ್ದಕ್ಕೆ, ಆರಂಭದಲ್ಲಿ ಹಳದಿ ಕಾರ್ಡ್ ಪಡೆದರು. ಆ ಬಳಿಕ ಸಹಾಯಕ ರೆಫರಿ ಜತೆ ಪದೇ ಪದೇ ವಾಗ್ವಾದ ನಡೆಸಿದ ಅವರನ್ನು ಹೊರಕ್ಕೆ ಕಳುಹಿಸಲಾಯಿತು. ಅನಂತರ ಅವರು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಪಂದ್ಯ ವೀಕ್ಷಿಸಿದರು. ಸ್ಟಿಮ್ಯಾಚ್, ಮೊದಲ ಪಂದ್ಯದಲ್ಲೂ ರೆಡ್ ಕಾರ್ಡ್ ಪಡೆದಿದ್ದರು.